ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

# ಸಾಧನೆ

ಸಂಪುಟ 3
ಸಂಚಿಕೆ 3
ಜುಲೈ - ಸೆಪ್ಟೆಂಬರ್ 1974

# ಸಾಧನೆ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**SADHANE :** Kannada Quarterly of the Bangalore University, Bangalore
Vol. 3  No. 3  July–September 1974

*Chief Editor :* Dr. G. S. Sivarudrappa



ವಾರ್ಷಿಕ ಚಂದಾ : ರೂ. 6–00
ರೂ. 4–00 [ವಿದ್ಯಾರ್ಥಿಗಳಿಗೆ]

ಪ್ರಕಾಶಕರು : ಕೆ. ಸಿ. ಶಿವಪ್ಪ
ಉಪ-ನಿರ್ದೇಶಕ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056

ಮುದ್ರಕರು :
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560056

## ಪರಿವಿಡಿ

# ನನ್ನ ಗುಲಾಬಿ, ಗುಲಾಬಿಯ ನಾನು

ಜಯಸುದರ್ಶನ

ಗುಲಾಬಿಗಲ್ಲದೆ ಮುಳ್ಳಿನ ಕೋಟೆ ಬೇರಾವ ಹೂವಿಗೆ ಬೇಕು ?
ಎಂದು ಗಿಡ ತನ್ನ ಬದುಕನ್ನು ಅನಗತ್ಯ
ಸಮರ್ಥಿಸಿಕೊಳ್ಳುವುದು ಅದಕ್ಕೆ ಸಹಜ.
ನನಗಂತು ಈ ಮುಳ್ಳಿನ ಗಿಡ ಕಲ್ಪತರು, ಚಿಂತಾಮಣಿ :
ನಾನು ಬಯಸಿದ್ದೆಲ್ಲ ಇದು ನೆನಸದೆಯೇ ಅಗತ್ಯ ಪಡೆದ ಗುಲಾಬಿ
ಮತ್ತು, ಅಹ, ನಗೆಯಾಗಿ ಅರಳಿದ ಈ ಹೃದಯ
ತುಂಬುವ ಅಂಗೈಯಗಲದ ಬದುಕು.

ನಾನು ಬಯಸಿದ್ದೆಲ್ಲ ಗುಲಾಬಿಯ ಮನಸ್ಸೊಂದೆ,
ಮುಳ್ಳಿನ ಹಾಸಿಗೆಯಲ್ಲಿ ನಿರಾಳ ಮಲಗಿದ,
ವಾಸ್ತವದಲ್ಲಿ ತಳವೂರಿ, ಅದರ ಗಡಿಯಾಚೆಗೂ
ಚಾಚಿದ ಈ ಕಣಸೊಂದೆ,
ನನ್ನ ನಿದ್ರೆಯಲ್ಲೂ ಮೂಡಿ, ಬೆಳ್ಳಂಬೆಳಗು
ಕಣ್ಣೊಳಗೆ ಹಚ್ಚೆ ಹಾಕಿದ ಮುಗುಳ್ನಗೆಯಾದ ಇದರ—
ನೋಡಿದರೆ ಕೈಗೆ ಕಂಪು ಬಿಟ್ಟು, ತಾನು ನನ್ನೊಳಗೆ
ನೆಲಸುವ—ದಿನಸೊಂದೆ,
ಹೆಚ್ಚಿನದು ಇದ್ದರೆ ಇದರೊಡನೆ ಇದ್ದೀತು ಕಾವಲಿಗೊಂದೆರಡು
ಮುಳ್ಳು, ಇರಲೇಳು ಎಂದೇನು—
ಅದರೊಳಗೇ ಇರಬಹುದು ನಾಳೆ ಗಾಳಿಯ ಕರೆಗೆ
ಒಡೆಯುವ ಮೊಗ್ಗಿನ ಕೊರಳು.
ನನ್ನ ಗುಲಾಬಿಯ ಎರಡು ಕಣ್ಣಲ್ಲು
ತುಂಬಿಕೊಂಡು ರೆಪ್ಪೆಗಳ ತೆರೆದೇನು.

ನಿಂತೇನು ಇದು ಗಾಳಿಯೊಡನೆ ಆಡುವ ತೆರೆದ ಮಾತಿನೊಡನೆ ;
ಇದರ ನೋಟ ಬೆಳಕಿನೊಡನೆ ಓಡಾಡಿ,

ಪಂಕ್ತಿ ಮೂಡದೆ ತೀಡುವ ಗೀತೆಯೊಡನೆ ತಿರುಗ ಹೊರಟೇನು,
ಆಮೇಲೆ ಇಲ್ಲಿಟ್ಟೇನು ನನ್ನ ಶಬ್ದಗಳ,
ಅಲ್ಲೆ ಮಾತು ಬಂದೀತು ಒಲಿದು,
ಅಲ್ಲಿ ಮನಸ್ಸು ಸೋತು, ಅದರ ದಣಿವೆ
ಮುತ್ತಾಗಿ ಹೂತು ಬಂದೀತು,
ಅಲ್ಲೆ ಬದುಕು ಆಸರೆಯನ್ನಾಂತು ನಿಂತೀತು,
ಶತಮಾನಕ್ಕು ಜೀವಕ್ಕೆ ಗುಲಾಬಿಯ ಕ್ಷಣ ಸ್ಪಂದಿಸೀತು.

ಗುಲಾಬಿಗೆ ಅದರ ಹೆಸರಲ್ಲ, ಅದು ಗುಲಾಬಿಯೆಂಬುದು ಮುಖ್ಯ, ನಿಜ.
ಆದರೂ ಗುಲಾಬಿಗೆ ಆ ಹೆಸರಷ್ಟೆ ಸರಿ,
ಉಳಿದದ್ದು ಕಲ್ಪತರುವಿನ ಮುಳ್ಳುಗಳ, ತುರುಸು ಎಲೆಗಳ ಪರಿ.
ಇಂಥ ಭೂತದ ಪರಿಸರದಲ್ಲಾರು ಮೂಡಿಸಿದರಯ್ಯ
ಅಭೂತದೀ ಇಂಥ ಈ ಪರಿಯ ?
ಪಥವೆ ಇಲ್ಲದ ಕಡೆ ತಂತಾನೆ ಮೂಡಿ ತನ್ನನ್ನೆ
ತಾನು ಕಂಡುಕೊಂಡಂತಿರುವ ಗುರಿಯ ?

ನಾನು ಮತ್ತು ಗುಲಾಬಿ
ನಮ್ಮ ಮಧ್ಯೆ ಜಗತ್ತು, ಅದರಗಲಕ್ಕೆ ಕಲ್ಪವೃಕ್ಷದ ರೂಕ್ಷ ಅಸ್ತಿತ್ವ ;
ಆದರೂ ಅಷ್ಟಗಲಕ್ಕೆ ಚಾಚಿರುವ ಮನಸ್ಸುಗಳು
ಕಮಾನುಗಳಾಗಿ ಎದ್ದಾವು,
ಬಾನಿನ ನಿಶ್ಚಿಂತೆಯಲಿ ಒಂದಾಗಿ ಬಣ್ಣಗಳ ಬೆಳಕಿನ ಸೆಟೆದ
ಬಿಳಿಯಿಂದ ಬಿಡುಗಡೆಗೆ ತೆರೆದಾವು,
ಕತ್ತಲನ್ನೇ ತಿಂದು ಹೊತ್ತುರಿದಾವು ;
ನಮ್ಮೊಂಟಿತನಗಳು ಒಂದಾಗಿ,
ಗೊತ್ತಿರದ ಹೊತ್ತಿರದ ಹತ್ತಿರದ ಹೊತ್ತಿನಲಿ
ಏಕಾಂತದಲಿ ನಮ್ಮನೊಳಗೊಂಡ ಏಕಾಂಗಿತನ
ಸೂರ್ಯ, ತಾರೆಗಳ ಕೂಡ ಸಂಗ ಮಾಡೀತು,
ಆಕಾಶದಲಿ ನೆಲದ ಶೃತಿಯಾಗಿ ಮಿಡಿದೀತು.
ಭೂಮಿಯೂಸರೆಯಲ್ಲಿ ನರುಗೆಂಪು
ಗಾಳಿಯೊಡನೆ ಕೇಳಿಯಾಡೀತು,
ಅದಕ್ಕಿಲ್ಲೆ ಅಕಾಲದಲ್ಲು ನೆಲೆಯು.

ಗುಲಾಬಿಯೊಡನೆ ನಾನು, ನನ್ನೊಡನೆ ಗುಲಾಬಿ
ಇದ್ದಾಗ ಹಾರೈಕೆಯೊಂದಿರಲಿಲ್ಲ
ಕನಸಿನಲ್ಲೂ, ಹಗಲುಗನಸಿನಲ್ಲೂ
ಎಚ್ಚರದ ಬೆಚ್ಚನೆ ಮನಸಿನಲ್ಲೂ ಸುಳಿದದ್ದು ನಿಜದ ರೂಹೆ
ಇದನ್ನು ಮೀರಿರಲಿಲ್ಲ ಯಾವ ಊಹೆ.
ಗತಿಯೆ ಸ್ಥಿತಿಯಾಗಿ, ಇದ್ದೀತು ಯಾವ ಹರಕೆ ?

ಇದ್ದಿಲ್ಲ ಬಯಕೆಗೂ ಮೂಡಿ ಮುಳುಗುವ
ಮುಳುಗಿ ತೇಲುವ ಸಮಯ
ವರ್ತಮಾನದವಸರದಲ್ಲೀಗ
ನೋಟವೇ ನಮ್ಮ ಕೂಟ.

# ಗ್ರಂಥ ಭಂಡಾರ ಮತ್ತು ಭಾಷಾ–ಸಾಹಿತ್ಯದ ವಿದ್ಯಾರ್ಥಿ*

ಮೂಲ : **ತೀ. ನಂ. ಶ್ರೀಕಂಠಯ್ಯ**
ಅನು : **ಹು. ಕಾ. ಜಯದೇವ್**

ಮಾನ್ಯ ಅಧ್ಯಕ್ಷರೆ, ಮಹಿಳೆಯರೆ ಮತ್ತು ಮಹನೀಯರೆ—ನಿಮಗೆ ಹಂಚಿರುವ ಕರಪತ್ರದಲ್ಲಿ, ಗ್ರಂಥಭಂಡಾರ ವಿಜ್ಞಾನದಲ್ಲಿ ಪರಿಣತರಾದವರಿಂದ ಭಾಷಣಗಳಿದೆ ಎಂದು ಹೇಳಿದೆ. ಆದರೆ ಈ ವಿಷಯದಲ್ಲಿ ನಾನು ಪರಿಣತನಲ್ಲವೆಂದು ಒಪ್ಪಿಕೊಳ್ಳುತ್ತೇನೆ. ನಾನು ಪ್ರೌಢಶಾಲೆಗೆ ಸೇರಿದಾಗಲಿಂದ ಗ್ರಂಥಭಂಡಾರದ ಬೆನ್ನು ಹತ್ತಿರುವೆನಾದರೂ ಅದನ್ನು ಸೂಕ್ತ ರೀತಿಯಲ್ಲಿ ಉಪಯೋಗಿಸಿಕೊಳ್ಳಬಲ್ಲೆನೆಂದು ಹೇಳಲಾರೆ. ಆದರೂ ಮಾನ್ಯ ಪಾಟೀಲ್ ಅವರು ಔದಾರ್ಯದಿಂದ ನನ್ನನ್ನು ಆಹ್ವಾನಿಸಿ ತಮ್ಮ ಸಮ್ಮುಖದಲ್ಲಿ 'ಗ್ರಂಥಭಂಡಾರ ಮತ್ತು ಭಾಷೆ—ಸಾಹಿತ್ಯದ ವಿದ್ಯಾರ್ಥಿ' ಎಂಬ ವಿಚಾರವಾಗಿ ಕೆಲವು ವಿಚಾರಗಳನ್ನು ವಿನಿಮಯ ಮಾಡಲು ಕೇಳಿದ್ದಾರೆ. ಸ್ವತಃ ನಾನೇ ಭಾಷೆಯ ಮತ್ತು ಸಾಹಿತ್ಯದ ವಿದ್ಯಾರ್ಥಿಯಾದುದರಿಂದ ಕೆಲವು ಆಲೋಚನೆಗಳನ್ನೂ, ಅನುಭವಗಳನ್ನೂ ನಿಮ್ಮೊಡನೆ ಹಂಚಿಕೊಳ್ಳಬಹುದೆಂದೂ ಕೆಲವು ಸಲಹೆಗಳನ್ನು ಮಾಡಬಹುದೆಂದೂ ಅನ್ನಿಸಿತು.

ಇಲ್ಲಿ ನಾನು 'ವಿದ್ಯಾರ್ಥಿ' ಎಂಬ ಪದವನ್ನು ವಿಶಾಲವಾದ ಅರ್ಥದಲ್ಲಿ ಉಪಯೋಗಿಸಿದ್ದೇನೆ. ಅದು ಕಾಲೇಜುಗಳಲ್ಲಿ ವಿದ್ಯಾರ್ಥಿಗಳೆಂದು ದಾಖಲಾಗಿರುವವರಲ್ಲದೆ ಅವರ ಅಧ್ಯಾಪಕರಿಗೂ ಅನ್ವಯಿಸುತ್ತದೆ. ಅಧ್ಯಾಪಕನಾದವನು ಮೊಟ್ಟ ಮೊದಲು ತಾನು ಜ್ಞಾನವನ್ನು ಸಂಪಾದಿಸಿದಲ್ಲದೆ ಬೇರೆಯವರಿಗೆ ಬೋಧಿಸಲಾರ. ಮತ್ತು ಅಧ್ಯಾಪಕನಾದವನು ಜೀವನ ಪರ್ಯಂತವೂ ವಿದ್ಯಾರ್ಥಿಯಾಗಿಯೆ ಉಳಿಯಬೇಕಾಗುತ್ತದೆ. ಇದು ಒಂದು ಹಳಸಲು ಮಾತಿನಂತೆ ತೋರಿದರೂ ಅದರ ಪುನರಾವರ್ತನೆಯ ಆವಶ್ಯಕತೆಯಿದೆ. ಯಾರಾದರೂ ಇದರಂತೆ ನಡೆಯದೆ ಹೋದರೆ ಆಗ ಈ ಕೆಳಗಿನ ಸಂಸ್ಕೃತ ಶ್ಲೋಕವು ಅಧ್ಯಾಪಕ ಮತ್ತು ಶಿಷ್ಯ ಇಬ್ಬರಿಗೂ ಅನ್ವಯವಾಗುತ್ತದೆ :

> ಉಭಾವಪ್ಯಶ್ರುತ ಗ್ರಂಥೌ ಉಭಾವಪಿ ಜಡಾತ್ಮಕೌ ।
> ಅಹೋ ಮೋಹಸ್ಯ ಮಾಹಾತ್ಮ್ಯಂ ತತ್ರೈಕಃ ಶಿಷ್ಯತಾಂ ಗತಃ ॥

* 7-6-1966ರಲ್ಲಿ ಮಾನಸ ಗಂಗೋತ್ರಿಯಲ್ಲಿ "ಗ್ರಂಥ ಭಂಡಾರವನ್ನು ಹೇಗೆ ಉತ್ತಮಗೊಳಿಸುವುದು ಅಥವಾ ಅಭಿವೃದ್ಧಿ ಪಡಿಸುವುದು" ಎಂಬುದರ ಬಗ್ಗೆ ನಡೆದ ವಿಚಾರಗೋಷ್ಠಿಯಲ್ಲಿ ಓದಿದ ಪ್ರಬಂಧ

"ಇಬ್ಬರೂ ಗ್ರಂಥಾವಲೋಕನ ಪರಿಶ್ರಮವಿಲ್ಲದವರು ಮತ್ತು ಮಂದ ಜ್ಞಾನಿಗಳು. ಆದರೂ ಅಜ್ಞಾನದ ಶಕ್ತಿ ಎಂತಹುದು: ಅವರಲ್ಲಿ ಒಬ್ಬ ಶಿಷ್ಯನಾಗಿದ್ದಾನೆ!"

ಭಾಷೆ ಮತ್ತು ಸಾಹಿತ್ಯ ಎಂದಾಗ ಸಾಮಾನ್ಯವಾಗಿ ಕಾಲೇಜುಗಳಲ್ಲಿ ಕಲಿಸುವ ಎಲ್ಲ ಭಾಷೆ ಮತ್ತು ಸಾಹಿತ್ಯ ಎಂದು ನನ್ನ ಅರ್ಥ. ನನಗೆ ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತಗಳ ಬಗ್ಗೆ ಸ್ವಲ್ಪ ಬಳಕೆಯಿದೆ; ಆದ್ದರಿಂದ ನನ್ನ ವ್ಯಾಖ್ಯಾನವನ್ನು ಈ ಮೂರಕ್ಕೆ ಮಾತ್ರ ಸೀಮಿತಗೊಳಿಸುತ್ತೇನೆ. ಹಿಂದಿ, ತಮಿಳು, ತೆಲುಗು, ಉರ್ದು ಮೊದಲಾದ ಇನ್ನೂ ಅನೇಕ ಭಾಷೆಗಳಿವೆ. ಮತ್ತು ನಾನು ಹೇಳುವ ಮಾತುಗಳನ್ನು ಈ ಭಾಷೆಗಳಿಗೂ ಹೊಂದಿಸಿಕೊಳ್ಳಬಹುದು ಮತ್ತು ಅನ್ವಯಿಸಬಹುದು. ಸಾಹಿತ್ಯದ ವಿದ್ಯಾರ್ಥಿ ತನಗೆ ಪ್ರಿಯವಾದ ಭಾಷೆಯ ಸಾಹಿತ್ಯದ ಕೃತಿಗಳಲ್ಲಿ ಮಾತ್ರ ಆಸಕ್ತನಾಗಿದ್ದಂತಹ ಕಾಲವೊಂದಿತ್ತು. ಇದು ತಪ್ಪಾದ ಮನೋಭಾವ ಎಂದು ನನಗನಿಸುತ್ತದೆ. ವಾಸ್ತವವಾಗಿಯೂ ಸಾಹಿತ್ಯದ ವ್ಯಾಪ್ತಿ ತುಂಬಾ ವಿಶಾಲವಾದುದು. ವಿದ್ವಾಂಸರಾದವರಿಗೆ ಭೂಮಿಯ ಮೇಲಾಗಲಿ, ಆಕಾಶದಲ್ಲಾಗಲಿ ತಿಳಿಯದುದು ಯಾವುದೂ ಇಲ್ಲ. ಅವನು "ಸ್ವರ್ಗದಿಂದ ಭೂಮಿಗೂ, ಭೂಮಿಯಿಂದ ಸ್ವರ್ಗಕ್ಕೂ" ಕಣ್ಣಾಡಿಸಬಲ್ಲ. ಅವನ ಕಲ್ಪನೆ ಒಳಗೊಳ್ಳದ್ದು ಭಾವನೆಗಳು ಭೇದಿಸಲಾರದ್ದು ಯಾವುದೂ ಇಲ್ಲ. ಇಲ್ಲಿಗೆ ಯುಕ್ತವಾದ ಹಳೆಯ ಸಂಸ್ಕೃತ ಶ್ಲೋಕವೊಂದನ್ನು ಉದ್ಧರಿಸಬಹುದು :

ನ ಸ ಶಬ್ದೋ ನ ತದ್ವಾಚ್ಯಂ ನ ಸನ್ಯಾಯೋ ನ ಸಾಕಲಾ।
ಜಾಯತೇ ಯನ್ನ ಕಾವ್ಯಾಂಗಂ ಅಹೋ ಭಾರೋ ಮಹಾನ್ ಕವೇಃ॥

"ಕಾವ್ಯದ ಅಂಗವಾಗಲಾರದ ಶಬ್ದ, ಭಾವ, ನ್ಯಾಯ, ಕಲೆ, ತಾರ್ಕಿಕವಾದ ಯಾವುದೂ ಇಲ್ಲ. ನಿಜವಾಗಿಯೂ ಕವಿಯ ಮೇಲಿನ ಭಾರ ಬಹು ದೊಡ್ಡದು!" ಈ ಭಾರ, ಈ ಹೊಣೆಗಾರಿಕೆ ಕವಿಗೆ ಮಾತ್ರವಲ್ಲ ಸಾಹಿತ್ಯದ ವಿದ್ಯಾರ್ಥಿ ಮತ್ತು ಅಧ್ಯಾಪಕರದೂ ಹೌದು. ಇದೇ ತಾನೆ ನನ್ನ ಮನಸ್ಸಿನಲ್ಲಿ ಕಾಣಿಸಿಕೊಂಡ ಒಂದು ಉದಾಹರಣೆಯನ್ನು ನಿಮ್ಮ ಮುಂದಿಡುತ್ತೇನೆ. ಕನ್ನಡದ ಕವಿಯಾದ ಹರಿಹರ 'ನಂಬಿಯಣ್ಣನ ರಗಳೆ' ಎಂಬ ಸೊಗಸಾದ ಕಾವ್ಯವನ್ನು ರಚಿಸಿದ್ದಾನೆ. ಅದರ ಎರಡನೆಯ ಅಧ್ಯಾಯದಲ್ಲಿ ಆನೆಯ ಸಪ್ತ ಮದಾವಸ್ಥೆಗಳನ್ನು ಹೇಳುತ್ತಾ ಅವುಗಳ ಹೆಸರನ್ನೂ ಹೇಳುತ್ತಾನೆ. ಆ ಎಲ್ಲ ಹೆಸರುಗಳನ್ನೂ ಮತ್ತೆ ಇಲ್ಲಿ ಹೇಳಿ ನಾನು ನಿಮಗೆ ತೊಂದರೆ ಕೊಡುವುದಿಲ್ಲ; ಆದರೆ ಅವುಗಳ ಅರ್ಥವನ್ನು ತಿಳಿಯಬೇಕಾದರೆ ನೀವು ಗಜಶಾಸ್ತ್ರವನ್ನು ಅವಲೋಕಿಸಬೇಕು ಎಂದು ಮಾತ್ರ ಹೇಳುತ್ತೇನೆ. ಇಂತಹ ಕೃತಿಗಳನ್ನು ಮತ್ತೆ ಮತ್ತೆ ಅವಲೋಕಿಸದೆ ಸಾಹಿತ್ಯದ ಅಧ್ಯಾಪಕನಾದವನು ತನ್ನ ವಿಷಯಕ್ಕೆ ನ್ಯಾಯವನ್ನು ದೊರಕಿಸುವುದು, ವಿದ್ಯಾರ್ಥಿಗಳ ಬಗ್ಗೆ ಕರ್ತವ್ಯವನ್ನು

ನಿರ್ವಹಿಸುವುದು ಸಾಧ್ಯವಾಗಲಾರದು. ಇಷ್ಟೇ ಅಲ್ಲದೆ ಅವನು ತನ್ನ ವಿದ್ಯಾರ್ಥಿಗಳೂ ಕೂಡ ಅಂತಹ ಕೃತಿಗಳಲ್ಲಿ ಜೀವಂತ ಆಸಕ್ತಿಯನ್ನು ತಳೆಯುವ ಹಾಗೆ ಪ್ರೋತ್ಸಾಹಿಸಬೇಕು. ಆಧುನಿಕ ಸಾಹಿತ್ಯವನ್ನು ಬೋಧಿಸಬೇಕಾದರೆ ಅಧ್ಯಾಪಕನಾದವನು ಆಧುನಿಕ ವಿಜ್ಞಾನಗಳಾದ ಭೌತಶಾಸ್ತ್ರ ಮತ್ತು ಸಮಾಜಶಾಸ್ತ್ರಗಳ ಇತ್ತೀಚಿನ ಪ್ರವೃತ್ತಿಗಳ ಬಗ್ಗೆ ವಿಶಾಲವಾದ ಆಸಕ್ತಿಯನ್ನು ಹೊಂದಿರಬೇಕು. ಇಲ್ಲಿ ಗ್ರಂಥ ಭಂಡಾರದ ಪಾತ್ರ ಬರುತ್ತದೆ. ಅದು ವಿದ್ಯಾರ್ಥಿ ಮತ್ತು ಅಧ್ಯಾಪಕರಿಗೆ ಅಗತ್ಯವಾದ ಎಲ್ಲ ಆಧಾರಗ್ರಂಥಗಳನ್ನೂ ಒದಗಿಸಿಕೊಡಬೇಕು.

ಈಗ ಸಾಹಿತ್ಯದ ಕಡೆ ತಿರುಗೋಣ. ಯಾವುದೇ ಸಾಹಿತ್ಯವನ್ನು ಅಭ್ಯಾಸ ಮಾಡುವಾಗ ಭಾಷೆಯ ಸಂಬಂಧವಾದ ಮಿತಿಯಿಂದ ಮುಕ್ತನಾಗಬೇಕು. ನನ್ನ ಮಾತಿನ ಅರ್ಥ ಏನೆಂದರೆ, ಉದಾಹರಣೆಗೆ, ಇಂಗ್ಲಿಷ್ ಸಾಹಿತ್ಯದ ವಿದ್ಯಾರ್ಥಿ ತನ್ನನ್ನು ಇಂಗ್ಲಿಷ್ ಸಾಹಿತ್ಯಕ್ಕೆ ಮಾತ್ರ ಸೀಮಿತಪಡಿಸಿಕೊಳ್ಳಲಾರ ಮತ್ತು ಪಡಿಸಿಕೊಳ್ಳಬಾರದು. ಇಂಗ್ಲಿಷ್ ಸಾಹಿತ್ಯವು ಇತರ ಅನೇಕ ಭಾಷೆಯ ಸಾಹಿತ್ಯಗಳಿಂದ ಬಹುವಾಗಿ ಸ್ವೀಕರಿಸಿದೆ ಮತ್ತು ಅದರಿಂದ ಹೆಚ್ಚಿನ ಪುಷ್ಟಿಯನ್ನು ಪಡೆದಿದೆ. ಅದು ಗ್ರೀಕ್ ಮತ್ತು ಲ್ಯಾಟಿನ್‌ಗಳಿಂದ ಮಾತ್ರವೆ ಅಲ್ಲದೆ ಫ್ರೆಂಚ್, ಜರ್ಮನ್, ರಷ್ಯನ್ ಮತ್ತು ಇತರ ಭಾಷೆಗಳಿಂದಲೂ, ಪರ್ಷಿಯನ್ ಭಾಷೆಯಿಂದಲೂ ಕೂಡ ಸ್ವೀಕರಿಸಿದೆ. ಈ ಭಾಷೆಗಳ ಸಾಹಿತ್ಯದ ಉತ್ತಮ ಕೃತಿಗಳ ಸಂಗ್ರಹ ಗ್ರಂಥ ಭಂಡಾರದಲ್ಲಿ ಇಲ್ಲದೆ ಇಂಗ್ಲಿಷ್ ಸಾಹಿತ್ಯದ ಅಧ್ಯಾಪಕನಿಗಾಗಲಿ ಅಥವಾ ವಿದ್ಯಾರ್ಥಿಗಾಗಲಿ ತನ್ನ ವಿಷಯವನ್ನು ಚೆನ್ನಾಗಿ ಅಭ್ಯಾಸಮಾಡಲು ಸಾಧ್ಯವಾಗುವುದಿಲ್ಲ. ಇಂಗ್ಲಿಷ್ ಸಾಹಿತ್ಯದ ಅಧ್ಯಾಪಕನಿಗೆ (ವಿದ್ಯಾರ್ಥಿಯ ಮಾತಿರಲಿ) ಗ್ರೀಕ್ ಅಥವಾ ಜರ್ಮನ್ ಅಥವಾ ರಷ್ಯನ್ ಗೊತ್ತಿಲ್ಲದಿರಬಹುದೆಂದು ನೀವು ಹೇಳಬಹುದು. ಇದಕ್ಕೆ ಇರುವ ಒಂದೇ ಒಂದು ಪರಿಹಾರವೆಂದರೆ ಗ್ರಂಥ ಭಂಡಾರವು ವಿದೇಶೀ ಭಾಷೆಗಳ ಮಹಾಕಾವ್ಯಗಳ ಉತ್ತಮ ಭಾಷಾಂತರಗಳನ್ನು ಹೊಂದಿರುವುದು. ಗ್ರಾಮಾಂತರ ಪ್ರದೇಶದ ಕಾಲೇಜುಗಳ ಗ್ರಂಥ ಭಂಡಾರದಲ್ಲಿ ಕೊನೆಯಪಕ್ಷ ಹೋಮರ್, ಗಯಟೆ ಮತ್ತು ಟಾಲ್‌ಸ್ಟಾಯರ ಕೃತಿಗಳ ಭಾಷಾಂತರಗಳು ಇವೆಯೆ ಎಂಬುದು ನನಗೆ ತಿಳಿಯದು.

ನಾವು ಈಗ ಕನ್ನಡ ಸಾಹಿತ್ಯದ ಕಡೆಗೆ ಗಮನ ಹರಿಸೋಣ. ನಮ್ಮ ಗ್ರಂಥ ಭಂಡಾರಗಳಲ್ಲಿನ ಕನ್ನಡ ವಿಭಾಗವು ಶೋಚನೀಯವಾದ ರೀತಿಯಲ್ಲಿ ಅಲಕ್ಷಿಸಲ್ಪಟ್ಟಿದೆಯೆಂಬುದನ್ನು ಪ್ರಾರಂಭದಲ್ಲಿಯೆ ಹೇಳಿಬಿಡುತ್ತೇನೆ. ಕನ್ನಡ ಸಾಹಿತ್ಯವು ಕನ್ನಡ ಅಧ್ಯಾಪಕರಿಗೆ ಮಾತ್ರವೇ ಸಂಬಂಧಿಸಿದುದಲ್ಲ. ಅದು ಇತರ ಭಾಷೆಯ ಸಾಹಿತ್ಯದ ಅಧ್ಯಾಪಕರಿಗೂ ಮತ್ತು ಇತರ ವಿಷಯದ ಅಧ್ಯಾಪಕರಿಗೂ ಸಂಬಂಧಿಸಿದುದು. ಏಕೆಂದರೆ ಅದು ಪಾಶ್ಚಿಮಾತ್ಯ ಸಾಹಿತ್ಯದಿಂದ ಪ್ರಭಾವಿತವಾಗಿ, ಕೆಲವು ಸಲ ಅದನ್ನೂ

ವಿಸ್ತರಿಸಿ ಬೆಳೆಯುತ್ತಿದೆ. ಮತ್ತೆ ಕನ್ನಡ ಅಧ್ಯಾಪಕನಾದವನಿಗೆ ಬೇರೆ ಭಾಷೆಯ ಕೃತಿಗಳ ಆವಶ್ಯಕತೆಯಿದೆ. ಆಧುನಿಕ ಕನ್ನಡ ಸಾಹಿತ್ಯದ ಕವಿಗಳು ಟಿ. ಎಸ್. ಎಲಿಯಟ್ (T. S. Eliot), ಆಡೆನ್ (Auden), ಡಿಲಾನ್ ಥಾಮಸ್ (Dylan Thomas) ಮೊದಲಾದವರ ಕೃತಿಗಳಿಂದ ಸ್ಫೂರ್ತಿಯನ್ನು ಪಡೆದಿದ್ದಾರೆ. ಅಧ್ಯಾಪಕ ನಾದವನು ಈ ಎಲ್ಲ ಕೃತಿಗಳನ್ನು ಅಭ್ಯಸಿಸುವುದರ ಜೊತೆಗೆ ಬೇರೆ ಪಾಶ್ಚಿಮಾತ್ಯ ಕವಿಗಳ ಕೃತಿಗಳನ್ನೂ ಅಭ್ಯಾಸಮಾಡಿ ಅವುಗಳನ್ನು ತನ್ನ ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಕೊಡಬೇಕು.

ಈಗ ಸಂಸ್ಕೃತದ ಬಗೆಗೆ ಪರ್ಯಾಲೋಚಿಸೋಣ. ಸಂಸ್ಕೃತವನ್ನು ದ್ವಿತೀಯ ಭಾಷೆಯನ್ನಾಗಿಯೂ ಅಭ್ಯಾಸಮಾಡಲು ಅವಕಾಶವಿಲ್ಲದ ಕೆಲವು ಕಾಲೇಜುಗಳಿವೆ. ಅಂದ ಮಾತ್ರಕ್ಕೆ ಅಂತಹ ಕಾಲೇಜುಗಳ ಗ್ರಂಥಭಂಡಾರಗಳಲ್ಲಿ ಸಂಸ್ಕೃತದ ಮತ್ತು ಸಂಸ್ಕೃತವನ್ನು ಕುರಿತ ಪುಸ್ತಕಗಳ ಆವಶ್ಯಕತೆಯಿಲ್ಲವೆಂದು ಅರ್ಥವಲ್ಲ. ಕನ್ನಡದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳಿಗೆ ಸಾಕಷ್ಟು ಸಂಸ್ಕೃತದ ಪರಿಚಯ ತೀರ ಅಗತ್ಯ. ಏಕೆಂದರೆ ಕನ್ನಡ ಸಾಹಿತ್ಯವು ತನ್ನ ಪ್ರಾರಂಭದ ದಿನಗಳಿಂದ ನಡುಗನ್ನಡ ಕಾಲದವರೆಗೂ ಮತ್ತು ಈಚೆಗೂ ಸಂಸ್ಕೃತ ಸಾಹಿತ್ಯದ ಸಂಪ್ರದಾಯದಲ್ಲಿ ಉದ್ದಕ್ಕೂ ಮುಳುಗಿ ತೇಲಿದೆ. ರಾಮಾಯಣ, ಮಹಾಭಾರತದಂತಹ ಕೃತಿಗಳೂ, ಕಾಳಿದಾಸ, ಭವಭೂತಿಯರ ಕಾವ್ಯಗಳು, ನಾಟಕಗಳು ಸಂಸ್ಕೃತದ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಕನ್ನಡದ ವಿದ್ಯಾರ್ಥಿಗಳಿಗೂ ಅತ್ಯಗತ್ಯವಾದುವು. ಮೂಲಕೃತಿಗಳ ಜೊತೆಜೊತೆಗೇ ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ ಅವುಗಳ ಉತ್ತಮ ಭಾಷಾಂತರಗಳ ಆವಶ್ಯಕತೆಯೂ ಇದೆ. ಏಕೆಂದರೆ ಸಂಸ್ಕೃತದ ಸಾಕಷ್ಟು ಪರಿಚಯವಿಲ್ಲದ ಅಧ್ಯಾಪಕ ಅಥವಾ ವಿದ್ಯಾರ್ಥಿ ಈ ಭಾಷಾಂತರಗಳ ಮೂಲಕ ಮೂಲದ ಸತ್ವವನ್ನಾದರೂ ಸವಿಹಾಸಿಸ ಬಹುದು. ಅದೂ ಅಲ್ಲದೆ ಹಳಗನ್ನಡ ಸಾಹಿತ್ಯವು ಜೈನಧರ್ಮದಿಂದ ಬಹು ಗಾಢವಾಗಿ ಪ್ರಭಾವಿತವಾಗಿದೆ. ಉದಾಹರಣೆಗೆ ಪಂಪನು ಸಂಸ್ಕೃತದಲ್ಲಿರುವ ಜಿನಸೇನನ ಮಹಾಪುರಾಣದ ಪೂರ್ಣ ಉಪಯೋಗವನ್ನು ಪಡೆದುಕೊಂಡಿದ್ದಾನೆ. ನಾವು ವಿದ್ಯಾರ್ಥಿಗಳಾಗಿದ್ದಾಗ ಇಂತಹ ಆಕರ ಗ್ರಂಥಗಳ ಅವಲೋಕನ ಎಷ್ಟೊಂದು ಕಷ್ಟವಾಗಿತ್ತು ಎಂದು ನೆನಪಾಗುತ್ತಿದೆ. ಮತ್ತು ಈಗಲೂ ಕೂಡ ಅಂತಹ ಅನೇಕ ಕೃತಿಗಳನ್ನು ಕೊಳ್ಳುವ ಚೈತನ್ಯ ಬಡ ಅಧ್ಯಾಪಕನಿಗಿಲ್ಲ. ಕಾಲೇಜುಗಳ ಗ್ರಂಥ ಭಂಡಾರಗಳಲ್ಲಿ ಇಂತಹ ಕೃತಿಗಳ ಉತ್ತಮವಾದ ಸಂಗ್ರಹವಿಲ್ಲದಿದ್ದರೆ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಅಭ್ಯಾಸಕ್ಕೆ ಬಹುವಾಗಿ ತೊಂದರೆಯಾಗುತ್ತದೆ.

ಈಗ ಇನ್ನೊಂದು ಪ್ರಮುಖವಾದ ವಿಷಯದ ಕಡೆಗೆ ಗಮನ ಹರಿಸ ಬಯಸುತ್ತೇನೆ. ಕೆಲವು ಆಡಳಿತಗಾರರು ಗ್ರಂಥಭಂಡಾರಗಳಲ್ಲಿ ಒಂದು ಕೃತಿಯ ಒಬ್ಬರಿಂದ ಪರಿಷ್ಕರಿಸಲ್ಪಟ್ಟ ಅಥವಾ ಸಂಪಾದಿತವಾದ ಪ್ರತಿಗಳು ಇದ್ದರೆ ಸಾಕೆಂದು

ನಂಬುತ್ತಾರೆ. ಇದು ತೀರ ತಪ್ಪು. ಯಾವುದೇ ಒಂದು ಸಂಪಾದಿತ ಅಥವಾ ಪರಿಷ್ಕರಿಸಲ್ಪಟ್ಟ ಮುದ್ರಣವು ಮೂಲಮಾತೃಕೆಯ ಪೂರ್ಣವಾದ ಸರಿಯಾದ ಚಿತ್ರವನ್ನು, ಅದರಲ್ಲಿಯೂ ಆ ಕೃತಿಯು ಹಳೆಯ ಕೃತಿ (ಕಾವ್ಯ) ಯಾಗಿದ್ದರೆ, ಕೊಡಲಾರದು. ಒಂದು ಕೃತಿಯು ಹಲವಾರು ಮುದ್ರಣಗಳನ್ನು ಕಂಡಾಗ ಲಿಪಿಕಾರರ ಮತ್ತು ಸಂಪಾದಕರ ದೆಸೆಯಿಂದಾಗಿ ಹಿಂದಿಲ್ಲದ ಅನೇಕ ತಪ್ಪುಗಳು ಹರಿದು ಬಂದು ಆಧುನಿಕ ಮುದ್ರಣವು ಮೊದಲ ಮುದ್ರಣದ ಜೊತೆ ಅಥವಾ ಕೃತಿಕಾರನ ಮೂಲಪ್ರತಿಯ ಜೊತೆ ಅನೇಕ ಅಂಶಗಳಲ್ಲಿ ಸ್ವಲ್ಪವೇ ಹೋಲಿಕೆಯನ್ನು ಹೊಂದಿರುತ್ತದೆ. ಗ್ರಂಥ ಸಂಪಾದನ ಶಾಸ್ತ್ರದ ಅನುಭವವಿರುವ ಜನಕ್ಕೆ ಇದು ಸಾಮಾನ್ಯ ಅನುಭವ. ಈ ಸಂಗತಿ ಹಸ್ತಪ್ರತಿಯ ರೂಪದಲ್ಲಿರುವ ಕೃತಿಗಳಿಗೆ ಮಾತ್ರವಲ್ಲದೆ ಮುದ್ರಿತ ಕೃತಿಗಳಿಗೂ ಅನ್ವಯಿಸುತ್ತದೆ. ಈ ಅಂಶವನ್ನು ಶೇಕ್ಸ್‌ಪಿಯರನ ಹ್ಯಾಮ್‌ಲೆಟ್ (Hamlet) ಅನ್ನು ನಿದರ್ಶನವಾಗಿಟ್ಟುಕೊಂಡು ವಿಶದಪಡಿಸಲು ಬಯಸುತ್ತೇನೆ. ನಾನು ಹೇಳಲು ಬಯಸುತ್ತಿರುವ ಆ ನಾಟಕದ ಸುಪ್ರಸಿದ್ಧ ಭಾಗವೊಂದು ಇತ್ತೀಚಿನ ಸಾಧಾರಣ ಮುದ್ರಣದಲ್ಲಿ ಹೀಗಿದೆ:

> ''Oh, that this too too *solid* flesh would melt
> Thaw and resolve itself into dew
> or that the Everlasting had not fix'd
> His cannon 'gainst self-slaughter.''

ವಿದ್ವಾಂಸರು ಗುರುತಿಸಿರುವ ಹಾಗೆ, ಹ್ಯಾಮ್‌ಲೆಟ್ (Hamlet) ನ ಈ ಭಾಗದಲ್ಲಿ ಬಂದಿರುವ 'solid' ಎಂಬ ಪದವು 'Quarto' ಮುದ್ರಣದಲ್ಲಿ 'sallied' ಎಂದು ಕಾಣಿಸಿಕೊಳ್ಳುತ್ತದೆ. ಮತ್ತು 'Quarto' ಮುದ್ರಣದ ''sallied'' ಎಂಬುದು ''sullied'' ಎಂಬುದಕ್ಕೆ ಬದಲಾಗಿ ಬಂದಿದೆ ಎಂದು ನಮಗೆ ತಿಳಿದುಬರುತ್ತದೆ. ಈ ಒಂದು ವ್ಯತ್ಯಾಸವು ಉದ್ಧೃತ ಭಾಗದ ಅರ್ಥದಲ್ಲಿ ಮಾಡಿರುವ ಅಗಾಧವಾದ ವ್ಯತ್ಯಾಸವನ್ನು ಸುಲಭವಾಗಿ ಕಾಣಬಹುದು. ಆದ್ದರಿಂದ ಕಠಿಣವಾದ ಕೃತಿಯೊಂದನ್ನು ಅರ್ಥಮಾಡಿಕೊಳ್ಳಲು ಬೇರೆ ಬೇರೆ ಸಂಪಾದಿತ ಮುದ್ರಣಗಳ ಆವಶ್ಯಕತೆ ಇದೆ. ಅಂತಹ ಎಲ್ಲ ಮುದ್ರಣಗಳು ಗ್ರಂಥಭಂಡಾರದಲ್ಲಿ ದೊರೆಯುವಂತಿರಬೇಕು. ಮತ್ತು ಇಲ್ಲಿ ಇನ್ನೊಂದು ಸಲಹೆ. ಒಂದು ಕೃತಿಯ ಹೊಸ ಮುದ್ರಣ ಬಂದಕೂಡಲೆ (ಕಂಡ ಕೂಡಲೆ) ಅದನ್ನು ಕೊಳ್ಳಲು ತ್ವರೆಮಾಡಿ. ಬಹು ಬೇಗ ಆ ಪ್ರತಿಗಳು ಮುಗಿದು ಹೋಗಬಹುದು ಮತ್ತು ಮತ್ತೊಂದು ಮುದ್ರಣ ಕಾಣಲು ವರ್ಷ ವರ್ಷಗಳೇ ಬೇಕಾಗಬಹುದು. ಉದಾಹರಣೆಗೆ ಪಂಪಭಾರತದ ಪ್ರಸಂಗವನ್ನೇ ತೆಗೆದುಕೊಳ್ಳಿ. ಪಂಪಭಾರತದ ಮೊದಲ ಎಂಟು ಆಶ್ವಾಸಗಳನ್ನು ಸೇರಿಸಿ ಮೊದಲ ಭಾಗವಾಗಿ ಪರಿಷ್ಕೃತ ಮುದ್ರಣವನ್ನು ಕನ್ನಡ

ಸಾಹಿತ್ಯ ಪರಿಷತ್ತು ತಂದಾಗ ಅದರ ಬೆಲೆ ಹದಿನೈದು ಆಣೆಗಳಿತ್ತು. ಈಗ ಹದಿನೈದು ರೂಪಾಯಿಗಳಿಗೂ ಆ ಮೊದಲ ಭಾಗವನ್ನು ಪಡೆಯಲಾರೆವು. ಅಂತಹ ಕೃತಿಗಳು ದೊರೆಯದೆ ಹೋದರೆ ವಿದ್ಯಾರ್ಥಿ ಮಾಡುವುದಾದರೂ ಏನು? ಪಂಪಭಾರತವು ಮಹತ್ವದ ಕೃತಿಯಾಗಿರುವುದರಿಂದ ಪಠ್ಯಪುಸ್ತಕ ಮಂಡಳಿಯು ಮತ್ತೆ ಮತ್ತೆ ಅದನ್ನು ಪಠ್ಯಭಾಗವಾಗಿ ನಿಯಮಿಸುತ್ತಾರೆ. ಅದಕ್ಕೆ ಇರುವ ಒಂದೇ ಒಂದು ಪರಿಹಾರವೆಂದರೆ ಗ್ರಂಥಭಂಡಾರವು ಆ ಕೃತಿಯ ಸಾಕಷ್ಟು ಪ್ರತಿಗಳನ್ನು ಹೇಗಾದರೂ ಸಂಪಾದಿಸಿಡುವುದು.

ಈಗ ನಿಘಂಟುಗಳ ಬಗ್ಗೆ ಒಂದು ಮಾತು. ಅನೇಕ ಗ್ರಂಥಭಂಡಾರಗಳಲ್ಲಿ ಕಿಟ್ಟೆಲ್ ಅವರ ಕನ್ನಡ-ಇಂಗ್ಲಿಷ್ ನಿಘಂಟು ದೊರೆಯುವುದಿಲ್ಲ. ಪ್ರಾಧ್ಯಾಪಕರೂ ಸೇರಿದಂತೆ ಯಾರೊಬ್ಬರೂ ಸರ್ವಜ್ಞರಲ್ಲದುದರಿಂದ ಪ್ರತಿಯೊಬ್ಬರೂ ಅದನ್ನು ಆಗಿಂದಾಗ್ಗೆ ನೋಡುತ್ತಿರಬೇಕಾಗುತ್ತದೆ. ಅದರ ಮೂಲಬೆಲೆ ಹತ್ತು ರೂಪಾಯಿ ಹತ್ತು ಆಣೆಗಳು; ಈಗ ಕಾಳಸಂತೆಯಲ್ಲಿ ಒಂದು ಪ್ರತಿಯನ್ನು ಪಡೆಯಲು ನೂರು ರೂಪಾಯಿ ಅಥವಾ ಇನ್ನೂ ಹೆಚ್ಚಾಗಿ ಕೊಡಬೇಕಾಗುತ್ತದೆ ಎಂದು ನನಗೆ ತಿಳಿದುಬಂದಿದೆ. ಮದರಾಸು ವಿಶ್ವವಿದ್ಯಾಲಯವು ಅದನ್ನು ಪರಿಷ್ಕರಿಸಿ ಪುನರ್‌ಮುದ್ರಿಸುವ ಯೋಜನೆಯನ್ನು ಹಾಕಿಕೊಂಡಿದೆ ಎಂಬುದು ಸಂತೋಷ ದಾಯಕವಾದ ವಿಷಯ.* ಮತ್ತೆ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟುವಿನ ಪ್ರತಿಗಳು ಮುಗಿದುಹೋಗಿ ಬಹಳ ಕಾಲವಾಯಿತು ಮತ್ತು ಕಾಳಸಂತೆಯಲ್ಲಿಯೂ ಅದರ ಪ್ರತಿಗಳು ದೊರೆಯುವುದು ದುರ್ಲಭವಾಗಿತ್ತು. ಹೋದವರ್ಷ ತಾನೆ ವಿಶ್ವವಿದ್ಯಾನಿಲಯವು ಅದನ್ನು ಪುನರ್‌ಮುದ್ರಿಸಿತು. ಆದ್ದರಿಂದ ನನ್ನ ಸಲಹೆ ಏನೆಂದರೆ ಯಾವಾಗ ಇಂತಹ ಕೃತಿಗಳು ಪ್ರಕಟವಾಗುತ್ತವೊ ಆಗ ದಯವಿಟ್ಟು ಗ್ರಂಥಭಂಡಾರಕ್ಕೆ ಸಾಕಷ್ಟು ಪ್ರತಿಗಳನ್ನು ಕೊಳ್ಳಲು ತ್ವರೆಮಾಡಿ. ಇಲ್ಲದಿದ್ದರೆ ಆ ಪ್ರತಿಗಳು ಬಹುಬೇಗ ಮಾರಾಟವಾಗುವ ಸಂಭವವುಂಟು.

ಈಗ ನಾನು ವೈಯುಕ್ತಿಕವಾಗಿ ಸಂಬಂಧ ಹೊಂದಿರುವ ಕನ್ನಡ-ಕನ್ನಡ ನಿಘಂಟುವಿನ ಯೋಜನೆಯ ಕಡೆಗೆ ನಿಮ್ಮ ಗಮನ ಸೆಳೆಯಬಯಸುತ್ತೇನೆ. ಈ ನಿಘಂಟುವಿನ ಸಿದ್ಧತೆ ಮತ್ತು ಪ್ರಕಟಣೆಯ ಹೊಣೆಗಾರಿಕೆಯನ್ನು ಕನ್ನಡ ಸಾಹಿತ್ಯ ಪರಿಷತ್ತು ಹೊತ್ತಿದೆ. ಚಾರಿತ್ರಿಕ ವಿಧಾನಗಳಮೇಲೆ ರೂಪುಗೊಳ್ಳುತ್ತಿರುವ ಸರ್ವಸಂಗ್ರಹವಾದ ಈ ನಿಘಂಟು ವಿದ್ಯಾರ್ಥಿ ಮತ್ತು ಅಧ್ಯಾಪಕರಿಬ್ಬರಿಗೂ ಒಂದೇ ರೀತಿಯಾಗಿ ಉಪಯೋಗವಾಗುತ್ತದೆಂಬ ನಂಬಿಕೆ ನನಗಿದೆ. ಅದು ತುಂಬ ನಿಧಾನವಾಗಿ ಸಂಚಿಕೆ ಸಂಚಿಕೆಯಾಗಿ ಬರುತ್ತಿದೆ, ಅಂತೂ ಬರುತ್ತಿದೆ. ಸುಮಾರು ಐದು ಸಾವಿರ ಪುಟಗಳಷ್ಟಾಗಬಹುದೆಂಬ ನಿರೀಕ್ಷೆಯಿರುವ ಇದರ ಮುಂಗಡ ಹಣ

* ಈಗ ಕಿಟ್ಟೆಲ್ ಪುನರ್‌ಮುದ್ರಣ ಕಾರ್ಯ ಮುಗಿದಿದೆ

ಕೇವಲ ನೂರು ರೂಪಾಯಿಗಳು. ಇಡಿಯ ಸಂಪುಟದ ಚಂದಾ ಹಣವನ್ನು ಕೊಟ್ಟು ಇದುವರೆಗೆ ಪ್ರಕಟವಾಗಿರುವ ಸಂಚಿಕೆಗಳನ್ನು ತೆಗೆದುಕೊಳ್ಳಿರೆಂದು ಕಾಲೇಜುಗಳ ಪ್ರಿನ್ಸಿಪಾಲರುಗಳಿಗೆ ಅತ್ಯಂತ ನಮ್ರತೆಯಿಂದ ಸಲಹೆ ಮಾಡುತ್ತೇನೆ. ಪೂರ್ಣ ರೂಪದಲ್ಲಿ ನಿಘಂಟು ಹೊರಬಂದ ಕೂಡಲೆ ಅದು ಬಹುಬೇಗ ಮಾರಾಟವಾಗುವ ಸಾಧ್ಯತೆಯಿದೆ ಮತ್ತು ಅನೇಕ ವರ್ಷಗಳವರೆಗೆ ಪರಿಷತ್ತಿಗೆ ಅದನ್ನು ಪುನರ್ಮುದ್ರಿಸಲು ಸಾಧ್ಯವಾಗದೆ ಹೋಗಬಹುದು.

ಇದೇ ಮಾತೇ ಬೇರೆ ಭಾಷೆಯ ನಿಘಂಟುಗಳಿಗೂ ಕೂಡ ಅನ್ವಯವಾಗುತ್ತದೆ. ಉದಾಹರಣೆಗೆ ಬೃಹತ್ತಾದ ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟನ್ನೇ ತೆಗೆದುಕೊಳ್ಳಿರಿ. ಪೂರ್ಣ ಸಂಪುಟದ ಬೆಲೆ ಕೊಂಡುಕೊಳ್ಳಲಾಗದಷ್ಟು ಇರಬಹುದು. ಆದರೆ ಎರಡು ಸಂಪುಟಗಳಲ್ಲಿ ಸಂಕ್ಷಿಪ್ತ ಆಕ್ಸ್‌ಫರ್ಡ್ ನಿಘಂಟು ಇದೆ. ಪದವಿ ಪೂರ್ವ ಕಾಲೇಜುಗಳ ಆವಶ್ಯಕತೆಯನ್ನು ಬಹುಶಃ ಇದು ಪೂರೈಸಬಲ್ಲದು. ಇದೇ ತಾನೆ ಮೂರು ಸಂಪುಟಗಳಲ್ಲಿ ಪ್ರಕಟವಾಗಿರುವ ಆಪ್ಟೆ ಅವರ ಸಂಸ್ಕೃತ-ಇಂಗ್ಲಿಷ್ ನಿಘಂಟಿನ ಹೊಸ ಮುದ್ರಣವನ್ನು ಕೊಂಡುಕೊಳ್ಳಿರೆಂದು ಸಲಹೆ ಮಾಡಲಿಚ್ಛಿಸುತ್ತೇನೆ.

ಈಗ ನಾನು ಇನ್ನೊಂದು ಪರಿಶೀಲನೆಯನ್ನು ಮಾಡಲೆ ? ಅನೇಕ ಉತ್ತಮ ಕೃತಿಗಳ ಸಂಗ್ರಹ ಮಾಡಿರುವ, ಆದರೆ ಅವುಗಳನ್ನು ಬೀರುಗಳಲ್ಲಿಟ್ಟು ಬೀಗಹಾಕಿರುವ ಕೆಲವು ಗ್ರಂಥ ಭಂಡಾರಗಳಿವೆ. ಇಂಗ್ಲೆಂಡಿನ ಕೆಲವು ಗ್ರಂಥ ಭಂಡಾರಗಳಲ್ಲಿ ನಿಘಂಟುಗಳನ್ನೂ ಮತ್ತು ಅಂತಹ ಇತರ ಕೃತಿಗಳನ್ನೂ ಮೇಜುಗಳಿಗೆ ಸರಪಳಿಯಿಂದ ಕಟ್ಟುವ ಪದ್ಧತಿ ಇತ್ತೆಂದು ನಾನು ಎಲ್ಲಿಯೊ ಓದಿದ್ದೇನೆ. ಇದು ನಿಜಕ್ಕೂ ಸರಸ್ವತಿಯನ್ನು ಬಂಧನದಲ್ಲಿಟ್ಟಂತೆ ('Muse in the chains'). ಗ್ರಂಥ ಭಂಡಾರಗಳಲ್ಲಿ ಆಧಾರಗ್ರಂಥಗಳಿರುವ ಬೀರುಗಳ ಬಳಿಗೆ ವಿದ್ಯಾರ್ಥಿಯಾದವನಿಗೆ ಅನಿರ್ಬಂಧಿತ ಪ್ರವೇಶವಿರಬೇಕೆಂಬುದರ ಬಗ್ಗೆ ಎರಡು ಅಭಿಪ್ರಾಯವಿರಲು ಸಾಧ್ಯವೇ ಇಲ್ಲ. ನಾನು ವಿದ್ಯಾರ್ಥಿಯಾಗಿದ್ದಾಗ ಮಹಾರಾಜ ಕಾಲೇಜಿನಲ್ಲಿ ತೆರೆದ ಬೀರುವಿನ ಪದ್ಧತಿ ಇತ್ತು. ಆದರೆ ಒಮ್ಮೆ ಬ್ರಿಟಾನಿಕಾ ವಿಶ್ವಕೋಶದ ಸಂಪುಟವೊಂದರಲ್ಲಿ ನಿರ್ದಿಷ್ಟ ವಿಷಯವೊಂದನ್ನು ನೋಡಬೇಕಾಗಿ ಬಂದ ಸಾಹಸಿಯಾದ ವಿದ್ಯಾರ್ಥಿಯೊಬ್ಬನು ಬಹಳ ಸುಲಭವಾಗಿ, ನಿರ್ಯೋಚನೆಯಿಂದ ತನಗೆ ಬೇಕಾದ ಪುಟಗಳನ್ನು ಹರಿದುಕೊಂಡು ಯಾರ ಗಮನಕ್ಕೂ ಬಾರದಂತೆ ಮನೆಯನ್ನು ಸೇರಿದನು. ಈ ಸಂಗತಿ ಕಾಲೇಜಿನ ಪ್ರಿನ್ಸಿಪಾಲರಿಗೆ ತಿಳಿದಾಗ ಅವರು ಆಧಾರ ಗ್ರಂಥಗಳಿದ್ದ ಬೀರುಗಳಿಗೆ ಬೀಗ ಹಾಕಿಸಿದರು. ತೆರೆದ ಬೀರುವಿನ ಬಳಿ ಹೋಗಿ ಅಲ್ಲೊಂದು ಇಲ್ಲೊಂದು ಗ್ರಂಥವನ್ನು ಎಳೆಯುತ್ತಾ ನಮಗೆ ಬೇಕಾದ ಪುಟಗಳ ಮೇಲೆ ಕಣ್ಣಾಡಿಸುವಂತಹ ಸುಖ ಮತ್ತೊಂದಿಲ್ಲ. ಆದರೆ ಈ ಸುಖವು ನಿಶ್ಚಿತವಾಗಿ ದೊರೆಯುವಂತೆ ಆಗಲು ವಿದ್ಯಾರ್ಥಿ ಗ್ರಂಥಭಂಡಾರದ ಅಧಿಕಾರಿಗಳ ಜೊತೆಯಲ್ಲಿ ಸಹಕರಿಸಬೇಕು.

ಅನೇಕ ಕಾಲೇಜುಗಳಲ್ಲಿ ಮಾರ್ಚ್ ತಿಂಗಳಿನಲ್ಲಿ ಗ್ರಂಥಭಂಡಾರಕ್ಕೆ ಮೀಸಲಾದ ನಿಧಿಯಿಂದ ಪುಸ್ತಕಗಳನ್ನು ಕೊಳ್ಳುವುದಕ್ಕೋಸ್ಕರ ಅತಿಯಾದ ಚಟುವಟಿಕೆಯಲ್ಲಿ ತೊಡಗುವುದನ್ನು ಯಾರಾದರೂ ಗಮನಿಸಿರಬಹುದು. ಅದರ ಫಲಿತಾಂಶವೆಂದರೆ ನಿಧಿ ಕೈತಪ್ಪಿ ಹೋಗುವುದನ್ನು ತಪ್ಪಿಸುವುದಕ್ಕಾಗಿ ಆತುರಾತುರವಾಗಿ ಎಲ್ಲ ತರಹದ ಪುಸ್ತಕಗಳನ್ನೂ ಗ್ರಂಥಭಂಡಾರಕ್ಕೆ ಸೇರಿಸಲಾಗುತ್ತದೆ. ಅದರ ಬದಲು ಕಾಲೇಜಿನ ಅಧಿಕಾರಿಗಳು ಸಂಬಂಧಿಸಿದ ಅಧ್ಯಾಪಕರ ಜೊತೆಯಲ್ಲಿ ಸಮಾಲೋಚಿಸಿ ವರ್ಷದ ಉದ್ದಕ್ಕೂ ಪುಸ್ತಕಗಳನ್ನು ಕೊಳ್ಳುವುದಾದರೆ ನಿಜವಾಗಿಯೂ ಗ್ರಂಥಭಂಡಾರಕ್ಕೆ ಬೆಲೆಯುಳ್ಳ ಪುಸ್ತಕಗಳನ್ನು ಸೇರಿಸಬಹುದು. ಒಂದು ಎಚ್ಚರಿಕೆ—ಪದವಿ ಪೂರ್ವ ಕಾಲೇಜಿನ ಗ್ರಂಥಭಂಡಾರಗಳಿಗೆ ಅತಿ ಹೆಚ್ಚಾಗಿ ಕಾದಂಬರಿಗಳನ್ನು ಸೇರಿಸಬೇಕು. ಒಳ್ಳೆಯ ಕಾದಂಬರಿಗಳಿರುವಂತೆ ಕೆಟ್ಟ ಕಾದಂಬರಿಗಳೂ ಇವೆ. ಬರೀ ಕಾದಂಬರಿಗಳನ್ನೇ ಓದುವುದು ಒಳ್ಳೆಯ ಮತ್ತು ಯುಕ್ತೋಚಿತ ವ್ಯಾಸಂಗದ ಲಕ್ಷಣವಲ್ಲ.

ಗ್ರಂಥಭಂಡಾರವು ವಿದ್ಯಾರ್ಥಿಗಳಿಗೆ ಒದಗಿಸಿಕೊಡಬಹುದಾದ ಇನ್ನೂ ಅನೇಕ ಸೇವೆಗಳಿವೆ. ಹಾರ್ವರ್ಡ್ (Harvard) ನ 'ಕಾವ್ಯ ಕುಟೀರ' (Poetry Room) ನಾನು ಭೇಟಿಕೊಟ್ಟಿದ್ದಾಗ ಆದ ಸಂತೋಷ ಇಂದಿಗೂ ನನ್ನ ನೆನಪಿನಲ್ಲಿದೆ. ಅಲ್ಲಿ ಬೇರೆಯವರಿಗೆ ತೊಂದರೆಯಾಗದಂತೆ ಕಿವಿಗೆ ಕರ್ಣವಾಣಿ (Ear phone) ಯನ್ನು ಹಾಕಿಕೊಂಡು ಆರಿಸಿದ ರೆಕಾರ್ಡ್ (Record) ನಿಂದ ಪ್ರಸಿದ್ಧವಾದ ಕಾವ್ಯದ ಭಾಗವನ್ನೋ ಅಥವಾ ನಾಟಕದ ಭಾಗವನ್ನೋ ಕವಿಯ ಅಥವಾ ನಾಟಕಕಾರನ ಅಥವಾ ಪ್ರಸಿದ್ಧ ನಟನೊಬ್ಬನ ಧ್ವನಿಯಲ್ಲಿ ಕೇಳಬಹುದು. ನಮ್ಮ ಕಾಲದ ಪ್ರಸಿದ್ಧ ಲೇಖಕರ ಕಾವ್ಯವಾಚನವನ್ನು ಗ್ರಾಮಫೋನ್ ರೆಕಾರ್ಡ್‌ಗಳಲ್ಲಿ ಹೊಂದುವುದು ನಮ್ಮಿಂದ ಸಾಧ್ಯವಿಲ್ಲದೇ ಇರಬಹುದು. ಆದರೆ ಅದನ್ನೇ ಕೊನೆಯ ಪಕ್ಷ ಧ್ವನಿ ಮುದ್ರಣ (Tape Record) ಮಾಡಿಕೊಳ್ಳುವುದೂ ನಮ್ಮಿಂದ ಸಾಧ್ಯವಿಲ್ಲವೆ? ಕನ್ನಡದಲ್ಲಿ ಕವಿಗಳಾದ ಕುವೆಂಪು, ಬೇಂದ್ರೆ, ಪು. ತಿ. ನರಸಿಂಹಾಚಾರ್ ಮತ್ತು ಇತರರ ಮತ್ತು ಇಂಗ್ಲಿಷ್‌ನ ಪ್ರಸಿದ್ಧ ಕವಿಗಳ ಚೈತನ್ಯ ಪೂರ್ಣವಾದ ಧ್ವನಿಗಳನ್ನು ಸೆರೆಹಿಡಿದು ಸಂಗ್ರಹಿಸಲು ನಾವು ಎಲ್ಲ ಪ್ರಯತ್ನಗಳನ್ನೂ ಮಾಡಬೇಕು. ಕೊನೆಯಪಕ್ಷ ಕೇಂದ್ರ ಗ್ರಂಥಭಂಡಾರ ಈ ಧ್ವನಿಮುದ್ರಿಕೆಗಳನ್ನು ಸಂಗ್ರಹಿಸಿಟ್ಟು ಗ್ರಾಮಾಂತರ ಗಳಲ್ಲಿರುವ ಗ್ರಂಥಭಂಡಾರಗಳು ಕೇಳಿದಾಗ ಕೊಡಬಹುದು.

ಈ ಒಂದು ಕೆಲಸ ಈಗಾಗಲೆ ನಮ್ಮಿಂದ ಅಗಲಿ ಹೋಗಿರುವ ಕವಿಗಳು ಮತ್ತು ಲೇಖಕರ ಬಗೆಗೆ ಸಾಧ್ಯವಿಲ್ಲ. ಕೊನೆಯಪಕ್ಷ ಅಂತಹ ಕವಿಗಳ ಮತ್ತು ಲೇಖಕರ ಹಸ್ತಪ್ರತಿಗಳ ಯಥಾವತ್ತಾದ ಛಾಯಾ ಚಿತ್ರ ಪ್ರತಿ (Photostat copy) ಗಳನ್ನಾದರೂ ನಮ್ಮ ಗ್ರಂಥ ಭಂಡಾರಗಳು ಸಂಗ್ರಹಿಸಬೇಕು. ತಾಳೆಗರಿಗಳಲ್ಲಿರುವ

ಪಂಪಭಾರತ,ಗದಾಯುದ್ಧ,ವಚನಗಳು, ಕುಮಾರವ್ಯಾಸ ಭಾರತ ಮೊದಲಾದ ಮಹಾ ಕೃತಿಗಳ ಹಸ್ತಪ್ರತಿಗಳ ಫೋಟೋಸ್ಟ್ಯಾಟ್ ಅಥವಾ ಮೈಕ್ರೋ ಫಿಲ್ಮ್ ಪ್ರತಿಗಳನ್ನು ಗ್ರಂಥಭಂಡಾರಗಳು ಸಂಪಾದಿಸಿ ಇಡಬಹುದು. ಅವುಗಳನ್ನು ನೋಡುವುದರಿಂದ, ಮುಟ್ಟುವುದರಿಂದ ವಿದ್ಯಾರ್ಥಿಯಾದವನಿಗೆ ಒಂದು ರೀತಿಯ ಆತ್ಮೀಯ ಭಾವನೆ ಉಂಟಾಗುತ್ತದೆ.

ಇವುಗಳ ಮುಖಾಂತರ ಮತ್ತು ಪ್ರಕೃತದಲ್ಲಿ ನಾನು ವಿವರಿಸಲಾಗದ ಮಾರ್ಗಗಳ ಮುಖಾಂತರ ನಾವು ನಮ್ಮ ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಸೌಲಭ್ಯವನ್ನು ಒದಗಿಸಿಕೊಡಬಹುದು. ಸಾಹಿತ್ಯದಲ್ಲಿನ ಅವರ ಆಸಕ್ತಿಯು ಹೆಚ್ಚು ಆಳವಾಗುವಂತೆ ಮಾಡಬಹುದು ಮತ್ತು ಅವರು ಉತ್ತಮ ವಿದ್ವಾಂಸರಾಗುವಂತೆಯೂ ಉತ್ತಮ ನಾಗರಿಕರಾಗುವಂತೆಯೂ ಮಾಡಬಹುದು. ಈಗ ಆಗಬೇಕಾಗಿರುವುದೇನೆಂದರೆ ನಮ್ಮ ಕಲ್ಪನೆಗಳನ್ನು ಉತ್ತಮ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದು ; ಮತ್ತು ಆಧುನಿಕ ತಾಂತ್ರಿಕ ವಿಜ್ಞಾನದ ಮುನ್ನಡೆಯ ಪ್ರಯೋಜನ ಪಡೆದುಕೊಳ್ಳುವುದರಲ್ಲಿ ಉತ್ಸುಕರಾಗಿರುವುದು.

# ಬಸವಣ್ಣನವರ ಸಸ್ಯಸಂಬಂಧವಾದ ಸೂಕ್ತಿಗಳು

**ಬಿ. ಜಿ. ಎಲ್. ಸ್ವಾಮಿ**

ಬಸವಣ್ಣನವರು ಶ್ರೇಷ್ಠರಾದ ಭಕ್ತರಾಗಿರುವಂತೆಯೇ ಪ್ರಖ್ಯಾತರಾದ ನೀತಿ ಬೋಧಕರೂ ಆಗಿದ್ದಾರೆ. ಸ್ವಾನುಭವದಿಂದ ವಿಕಾಸಗೊಂಡ ಅವರ ಉಕ್ತಿಗಳಲ್ಲಿ ಅನೇಕವು ಸೂತ್ರಗಳಂತೆ ರೂಪುಗೊಂಡಿವೆ. ಈ ಸೂತ್ರಗಳಲ್ಲಿ ಕೆಲವು ಕಡೆ ಸಸ್ಯ ಪ್ರಪಂಚದಿಂದ ಉದಾಹರಣೆಗಳನ್ನೋ ಉಪಮೆಗಳನ್ನೋ ಬಳಸಿಕೊಂಡಿದ್ದಾರೆ. ಅವುಗಳನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳುವ ಪ್ರಯತ್ನ ಈ ಸಣ್ಣ ಲೇಖನ.

ವಚನಗಳ ಪಾಠವನ್ನೂ ಅಂಕಿಗಳನ್ನೂ ಶ್ರೀ ಬಸವನಾಳ ಶಿವಲಿಂಗಪ್ಪನವರ "ಬಸವಣ್ಣ ವಚನಗಳು" ಸಂಪಾದನೆಯಿಂದ ಎತ್ತಿಕೊಂಡಿದ್ದೇನೆ. ಅದೇ ವರಿಸೆಯಲ್ಲಿ ಟಿಪ್ಪಣಿ ಬರೆದಿದ್ದೇನೆ.

1. ತಾಳಮರಕ್ಕೆ ಕೈಯನೀಡಿ
   ಮೇಲೆ ನೋಡಿ ಗೋಣು ನೊಂದಿದಯ್ಯಾ

[ವಚನ ಸಂಖ್ಯೆ 23]

ಇಲ್ಲಿ ತಾಳೆಮರ ಎಂದರೆ ತಾಳೆಹೂವನ್ನು ತಳೆಯುವ ಕೇದಿಗೆ ಅಲ್ಲ; ಬರಹ ಸಾಮಗ್ರಿಯಾದ ತಾಡೆಯೋಲೆಯನ್ನೀಯುವ ಮರ, ಕಾಕತಾಳೀಯ ನ್ಯಾಯದಲ್ಲಿ ರೂಢಿತವಾಗಿರುವ ಮರ. 30–40 ಅಡಿ ಎತ್ತರ ಬೆಳೆಯುತ್ತದೆ, ರೆಂಬೆಕೊಂಬೆಗಳಿಲ್ಲ, ತುದಿಯಲ್ಲಿ ಎಲೆಗೆವರಿ ನೆಟ್ಟಗೆ ನಿಂತಿರುತ್ತದೆ. ಪರ್ಣಕೋನಗಳಿಂದ ಹೂಗೊಂಚಲುಗಳು ಕೊನರುತ್ತವೆ. ಗಂಡು ಹೂ ಬಿಡುವ ಮರ ಬೇರೆ, ಹೆಣ್ಣು ಹೂ ಬಿಡುವ ಮರ ಬೇರೆ. ಗಂಡು ಹೂಗೊಂಚಲು ಉದ್ದವಾಗಿ ಮುಂಡುಕಳೆಗಳನ್ನು ಒಡೆದಿರುತ್ತದೆ; ಹೆಣ್ಣಿನದು ಗುಜ್ಜು, ಚೆಂಡುಚೆಂಡಾಗಿರುತ್ತದೆ.

ಹಣ್ಣು ಹೆಚ್ಚು ಕಡಿಮೆ ಚೆಂಡಿನಾಕಾರ, 4–5 ಅಂಗುಲ ವ್ಯಾಸ. ತೊಟ್ಟಿನ ಭಾಗ ಮಾತ್ರ ಹಸುರಾಗಿರಬಹುದಾದರೂ ಮಿಕ್ಕ ಭಾಗ ಊದಾ ಬಣ್ಣಕ್ಕೆ ತಿರುಗುತ್ತದೆ. ನುಂಗನ್ನು ಬೇರ್ಪಡಿಸುವುದಕ್ಕೆ ಹೊರಭಾಗದ ನಾರು ಸಿಪ್ಪೆಯನ್ನು ಸುಲಿಯಬೇಕು, ತೆಂಗಿನಕಾಯನ್ನು ಸುಲಿದಂತೆ. ಎಳೆನುಂಗು ತಿನ್ನಲು ಯೋಗ್ಯ. ಊರಜನದ ನಾಲಗೆ ಇದರ ರುಚಿಗೆ ಅಷ್ಟಾಗಿ ಒಗ್ಗಿಲ್ಲ. ಹೊಸನಾಗರಿಕತೆ ಹರಡದಿರುವ

ಪ್ರದೇಶಗಳಲ್ಲಿಯೂ ನುಂಗಿನ ಬಳಕೆ ಊರಿದೆ. ಒಣಗಿದ ಗಂಡು ಹೂಗೊಂಚಲಿಗೆ ಬೆಂಕಿ ಹೊತ್ತಿಸಿದಾಗ ಅದು ಚಟಪಟ ಸಿಡಿಯುತ್ತದೆ; ಹಳ್ಳಿಯ ಮಕ್ಕಳಿಗೆ ಇದೇ ದೀಪಾವಳಿಯ ಪಟಾಸು.

ತೆಂಗಿನಂತೆಯೇ ತಾಳೆಯ ಮೂಲಾಗ್ರ ಭಾಗಗಳು ಉಪಯೋಗದಲ್ಲಿವೆ. ಆಹಾರಸತ್ವವನ್ನೊಳಗೊಂಡ ತಾಯಿಬೇರನ್ನು ಬೇಯಿಸಿ ತಿನ್ನುತ್ತಾರೆ. ಕಾಂಡವು ಏತದ ದಂಡಿಯೋ ಲೂರೆಯೋ, ಮನೆಯ ಕಂಬವೋ ತೊಲೆಯೋ ಆಗುತ್ತದೆ. ಮನೆಯ ಚಾವಣಿಗೆಗೆ ತಾಳೆಯೆಲೆಯ ಹೊದಿಕೆ ಸಾಧಾರಣವಾಗಿ ಉಪಯೋಗವೇ. ಸೀಳಿದ ಎಲೆಯಿಂದ ಬೀಸಣಿಗೆ ಚಾಪೆ ಬುಟ್ಟಿಗಳು ಹವಣಾಗುತ್ತವೆ. ಹಣ್ಣಿನ ನುಂಗು ಹಸಿವು ಬಾಯಾರಿಕೆಗಳನ್ನು ನೀಗಿಸುತ್ತದೆ. ಹೊಂಬಾಳೆಯೂ ಕಾಂಡದ ತುದಿಯೂ ಹೆಂಡವನ್ನು ಸುರಿಸುತ್ತವೆ.

ಮಂತ್ರಕ್ಕೆ ಮಾವಿನಕಾಯಿ ಉದರದ ಹಾಗೆ ಕತ್ತೆತ್ತಿ ಕೈನೀಟುವ ಭಂಗಿಯಿಂದ ತಾಳೆಹಣ್ಣು ಕೈಗೆ ಎಟುಕದು. "ಲೇಸ ಕಂಡು ಮನ ಬಯಸಿ ಬಯಸಿ ಆಸೆಮಾಡಿದೊಡಿಲ್ಲ". ಹಣ್ಣು ಕೈಗೆ ಸಿಗಬೇಕಾದರೆ ಸಾಧನೆಯ ಮಾರ್ಗದಲ್ಲಿ ತೊಡಗಬೇಕು. ನೆಲದಮೇಲೆ ನಿಂತು ಫಲವನ್ನು ಈಕ್ಷಿಸುವುದರಿಂದ ದತ್ತವಾಗುವುದು ಕತ್ತುನೋವೊಂದೇ.

2. ಎನ್ನ ಚಿತ್ತವು ಅತ್ತಿಯಹಣ್ಣು ನೋಡಯ್ಯಾ
ವಿಚಾರಿಸಿದೊಡೇನೂ ಹುರುಳಿಲ್ಲವಯ್ಯಾ!

[ವಚನ ಸಂಖ್ಯೆ 29]

ಮೊದಲನೆಯದಾಗಿ, ಅತ್ತಿಯ 'ಹಣ್ಣು' ಹಣ್ಣಲ್ಲ; ಅದೊಂದು ಪುಷ್ಪಗುಚ್ಛ ಎಂಬುದನ್ನು ಅರಿಯಬೇಕು. ಎರಡನೆಯದಾಗಿ, ಹೂಗಳು ಹೊರನೋಟಕ್ಕೆ ಕಾಣಿಸವು; ಗುಚ್ಛವನ್ನು ಸೀಳಿದಾಗ ಮಾತ್ರ ಕಣ್ಣಿಗೆ ಬೀಳುತ್ತವೆ. ಹೂ ಕೊನರಿದ ಪಾಯವನ್ನು ಸಾಮಾನ್ಯ ನುಡಿಯಲ್ಲಿ 'ಸಿಪ್ಪೆ' ಎನ್ನುತ್ತೇವೆ, ಬೆಳವಣಿಗೆಯಿಂದ ಪಕ್ವಗೊಂಡಾದಬಳಿಕ ಮೆಲ್ಲುತ್ತೇವೆ. (ಅಂಜೂರವೂ ಹೀಗೆಯೇ).

ಬಸವಣ್ಣನವರ ಚಿತ್ರ ಹೊರನೋಟಕ್ಕೆ ಅತ್ತಿಯ ಹಣ್ಣಿನಂತಿತ್ತು; ಹಣ್ಣಿನ ರೂಪಬಣ್ಣಗಳಂತೆ ಬೆಡಗುವಡೆದಿತ್ತು. ಒಳಗೆ (ಹೂ ಭಾಗ) ಹುರುಳಿಲ್ಲದಿತ್ತು: ಅತ್ತಿ ಹೂವಿನ ಗಾತ್ರ ತೀರ ಸಣ್ಣದು, ಅಂದಚಂದವಾಗಲಿ ರೂಪಲಾವಣ್ಯವಾಗಲಿ ವರ್ಣಾಕರ್ಷಣೆಯಾಗಲೀ ಇಲ್ಲ. ಸಾಧಾರಣ ಹೂವಿನ ರಚನೆಯೂ ಇಲ್ಲ. ಒಂದೆರಡು ಬಿಳಿಯ ಪೊರುಕುಗಳು ಪರಾಗಕೋಶವನ್ನೋ ಅಂಡಾಶಯುವನ್ನೋ ಆವರಿಸಿರುತ್ತವೆ. ಇಷ್ಟರಿಂದ ಮಾತ್ರವೇ ಬಸವಣ್ಣನವರು 'ಹುರುಳಿಲ್ಲ' ಎಂಬ ತೀರ್ಮಾನಕ್ಕೆ ಬಂದಿರಲಾರರು.

ಈ ಸಂದರ್ಭದಲ್ಲಿ 'ಹಣ್ಣಿನ' ರಚನೆಯನ್ನು ಸ್ವಲ್ಪ ಸೂಕ್ಷ್ಮವಾಗಿ ಪರಿಶೀಲಿಸಬೇಕು. ತೊಟ್ಟಿಗೆ ನೇರವಾದ ಮುಂತುದಿಯಲ್ಲಿರುವ ಸಣ್ಣ ರಂಧ್ರವನ್ನು ಗಮನಿಸಿ. ಈ ರಂಧ್ರದ ಮೂಲಕ ಸಣ್ಣ ರೆಕ್ಕೆ ಹುಳುಗಳು ಒಳಗನ್ನು ಪ್ರವೇಶಿಸಿ ಗರ್ಭಾಶಯದಲ್ಲಿ ಮೊಟ್ಟೆಯಿಡುತ್ತವೆ. ತತ್ಕಾರಣ ಅಂಡಾಶಯ ಬೆಳೆಯುವುದಾದರೂ ಒಳಗೆ ಬಲಿಯುವುದು ಬೀಜವಲ್ಲ, ಹುಳುವಿನ ಮೊಟ್ಟೆ. ಮೊಟ್ಟೆ ಬೆಳೆದು ಒಡೆದು ಹಾರುಹುಳುವಾಗಿ ರಂಧ್ರದ ಮೂಲಕ ಹೊರಬರುತ್ತದೆ. ಕ್ರಿಮಿಯ ಈ ಚಲನವಲನಗಳಿಂದ ಕೆಲವು ಅಂಡಕೋಶಗಳು ಪರಾಗಸ್ಪರ್ಶಗೊಳ್ಳಬಹುದು; ಇಂಥದೊಂದು ಅಂಡಕೋಶ ಸಾಧಾರಣವಾಗಿ ಬೆಳೆದು ಬೀಜವನ್ನು ಉತ್ಪತ್ತಿ ಮಾಡುತ್ತದೆ, ಎಂದರೆ ನಿಜವಾದ ಹಣ್ಣಾಗಿ ಮಾರ್ಪಾಟುಹೊಂದುತ್ತದೆ.

ಈ ಪ್ರಕರಣದಲ್ಲಿ ಗೊಂಚಲೊಂದಕ್ಕೆ ನಿಜವಾದ ಹಣ್ಣು ತಳೆಯುವ ಹೂಗಳು ಸರಾಸರಿ ಐದೋ ಆರೋ! ಮಿಕ್ಕೆಲ್ಲವೂ ಕ್ರಿಮಿಯ ಮೊಟ್ಟೆಗೆ ಆಶ್ರಯಕೊಡುವ ಬಸಿರು!

ಹೀಗೆ ಒಂದು ಹೆಣ್ಣು ಹೂವಿನಿಂದ ಬೆಳೆದ, ಶಾಸ್ತ್ರೀಯ ದೃಷ್ಟಿಯಿಂದ ನಿಜವಾದ, ಹಣ್ಣನ್ನು ಉದಾಹರಣೆಯಾಗಿ ತೆಗೆದುಕೊಂಡರೂ 'ಹುರುಳಿಲ್ಲ', ಎಂದರೆ ಬೀಜವಿಲ್ಲ; ಆಡುನುಡಿಯ 'ಹಣ್ಣ'ನ್ನು ಮೊತ್ತವಾಗಿ ನೋಡಿದರೂ 'ಹುರುಳಿಲ್ಲ', ಎಂದರೆ ಒಳಗಿರುವುದು ಬಹುಪಾಲು ಕ್ರಿಮಿಯ ಮೊಟ್ಟೆಗಳು! ಲೋಕದ ಡಂಭಾಚಾರ ದೃಷ್ಟಿಯಿಂದ ಮಾತ್ರ ರೂಹು (ದೇಹಸ್ವರೂಪ) ಆಕರ್ಷಕವಾದ ಹಣ್ಣೆನಂತಿದೆ; ರೂಹಿನೊಳಗೆ ಅಡಗಿರುವ ಚಿತ್ತವು ಕಲ್ಮಷ, ಕ್ರಿಮಿಸಮೂಹ, ಬೀಜರಹಿತ, ಸತ್ವಹೀನ.

3. ಕಹಿಸೋರೆಯಕಾಯ ತಂದು ವಿಭೂತಿಯ ತುಂಬಿದೊಡೆ ಸಿಹಿಯಾಗದೆ ಮೂರು ದಿನಕ್ಕೆ?

[ವಚನ ಸಂಖ್ಯೆ 73]

ಪವಾಡ ಪ್ರೇರಿತವಾದ ಉಪಮೆ ಇದು. ಕಹಿಯನ್ನಳಿಸಿ ಸಿಹಿಯನ್ನಿಳಿಸಿ ಕೊಳ್ಳುವುದಕ್ಕೆ ಇದೊಂದು ವಿಧಿ ಎನ್ನುವುದಕ್ಕಿಂತಲೂ ವಿಭೂತಿಯ ಮಹಿಮೆಯನ್ನು ವರ್ಣಿಸುವುದಕ್ಕಾಗಿ ಬಳಸಲಾಗಿರುವ ಸಾಧನ ಎಂದು ಅರಿಯಬೇಕು. ಈ ಪ್ರಯೋಗವನ್ನು ವೈಜ್ಞಾನಿಕವಾಗಿ ಯಾರೂ ಮಾಡಿನೋಡಿಲ್ಲ, ನಿಜ. ಆದರೆ ಹೇಳಿಕೆಯಲ್ಲೂ ನಿಜವಿರುವುದಾದರೆ ವಿಧಾನವು ಜನಬಳಕೆಯಲ್ಲಿರಬೇಕಲ್ಲವೆ? ವಿಭೂತಿಧಾರಣೆಯಿಂದ ಸಕಲ ಪಾಪ ಪರಿಹಾರವಾಗಿ ಸಕಲ ಸಿದ್ಧಿಗಳೂ ಲಭಿಸುವುದೆಂಬ ನಂಬಿಕೆಯನ್ನು ದೃಷ್ಟಾಂತ ಪಡಿಸುವುದಕ್ಕಾಗಿ ಕಹಿಸೋರೆಯ ಪಾತ್ರವನ್ನು ಸೃಷ್ಟಿ ಮಾಡಿದಂತಿದೆ.

ಕಪಿ ಹಣ್ಣನ್ನು ಸಿಹಿ ಮಾಡುವ ಕನಸು ನಮ್ಮ ಪೂರ್ವಿಕರಿಗಿತ್ತು. ಉದಾಹರಣೆಗಾಗಿ 'ಲೋಕೋಪಕಾರಂ' ಕೋಶದಲ್ಲಿ ನಮೂದಾಗಿರುವ ಪ್ರಯೋಗವನ್ನು ನೋಡಿ :

ಮಧುಕಂ ಮಧೂಕಪುಷ್ಪಂ
ಮಧು ಶರ್ಕರೆ ಕೋಷ್ಠಮೆಂಬಿವಂ ಮೊದಲೊಳ್ ಪೂ ।
ಟ್ಕಧಿಕ ಫಲಮಾಗಿ ಪಡೆಗುಂ
.................... .... . ........................ (VIII 40)

ಇದೇ ಜಾಡನ್ನು ಹಿಡಿದ ವಿಧಿಗಳು ಸಂಸ್ಕೃತ ವೃಕ್ಷಾಯುರ್ವೇದಗಳಲ್ಲೂ ದೊರಕುತ್ತವೆ. ಅಚ್ಚಿನ ಬೆಳಕು ಕಾಣದೆ ತಾಳೆಯೋಲೆಯಲ್ಲೇ ಕುಳಿತಿರುವ ವೃಕ್ಷಾಯುರ್ವೇದ ಗ್ರಂಥದ ಪದ್ಯವೊಂದರ ಭಾಷಾಂತರ: "ಆನೆಯ ಸೊಂಡಿಲಿನ ಮಾಂಸ, ಆಗತಾನೆ ಕೊಂದ ಹಂದಿಯ ಬಿಸಿರಕ್ತ, ಹೆಬ್ಬಾವಿನ ಹಲ್ಲು—ಇವುಗಳನ್ನು ಕುದಿಸಿ ಕಷಾಯವನ್ನು ಬೇರಿಗೆ ಹಾಯಿಸಿದರೆ ಹುಳಿಮಾವು ಇಮ್ಮಾವಾಗುತ್ತದೆ" (ಸರಸ್ವತೀ ಮಹಲ್ ಪ್ರಾಚ್ಯ ಪುಸ್ತಕಾಲಯದಲ್ಲಿರುವ ವೃಕ್ಷಾಯುರ್ವೇದ ಗ್ರಂಥ).

ಈ ತೆರನಾದ ವಿಧಾನಗಳನ್ನು ಯಾವ ಉದ್ದೇಶದಿಂದ ನಮ್ಮ ಪೂರ್ವಿಕರು ಬರೆದಿಟ್ಟರೋ ತಿಳಿಯದು. ಅವರು ಬರೆದದ್ದರಲ್ಲಿ ಅವರಿಗೇ ನಂಬಿಕೆಯಿತ್ತೆ ಎಂಬ ಸಂದೇಹವೂ ಏಳುತ್ತದೆ. ಹುಳಿಮಾವನ್ನು ಇಮ್ಮಾವಾಗಿಸುವ ಹವಣು ಹಾಗಿರಲಿ. ಮೊದಲು ಪ್ರಯೋಗಕ್ಕೆ ಬೇಕಾದ ಮೂಲ ಸಾಮಗ್ರಿಗಳನ್ನು ಒಂದೇ ಸಲ ಒದಗಿಸಿಕೊಳ್ಳುವುದಾದರೂ ಹೇಗೆ? ಇದು ಎಷ್ಟು ದುಸ್ಸಾಧ್ಯವೋ ಹುಳಿಹಣ್ಣನ್ನು ಸಿಹಿಯಾಗಿಸುವುದೂ ಅಷ್ಟೇ ದುರ್ಲಭ ಎಂಬ ನೀತಿಯನ್ನು ಅರುಹುವುದಕ್ಕಾಗಿ ಇಂಥ ಪರಿಕರಗಳನ್ನು ಹೊಸೆದಿರಬಹುದೆ?

ಹಣ್ಣಿನ ರುಚಿಯನ್ನೋ ಬೇರಾವ ಹುಟ್ಟುಗುಣಗಳನ್ನೋ ಕೃತಕಸಾಧನಗಳಿಂದ ವ್ಯತ್ಯಾಸಗೊಳಿಸಲಾಗದೆಂಬ ಅರಿವು ಬಸವಣ್ಣನವರಿಗೂ ತಿಳಿದಿತ್ತು (627ನೇ ವಚನವನ್ನೂ ಟಿಪ್ಪಣಿಯನ್ನೂ ನೋಡಿ). 'ಹುಟ್ಟುಗುಣ ಸುಟ್ಟೊಡೆಯು ಹೋಗದು'. ಅದನ್ನು ಬದಲಾಯಿಸುವುದಕ್ಕೆ ಒದಗುವ ಆಧುನಿಕ ವೈಜ್ಞಾನಿಕ ಸಾಧನವೆಂದರೆ ಮಿಶ್ರತಳಿ ಪ್ರಯೋಗವೊಂದೇ. ಈ ವಿಧಾನದಿಂದ ಸಾಧ್ಯವಾಗುವುದೂ ಅಲ್ಪಪ್ರಮಾಣಮಾತ್ರದ ವ್ಯತ್ಯಾಸ.

4. ಕುಂಬಳಕಾಯಿಗೆ ಕಬ್ಬುನದ ಕಟ್ಟಕೊಟ್ಟರೆ
ಕೊಳೆಯುವುದಲ್ಲದೆ ಬಲುಹಾಗಬಲ್ಲುದೇ?

[ವಚನ ಸಂಖ್ಯೆ 92]

ಪೂರ್ತಿ ಬೆಳವಣಿಗೆ ಹೊಂದಿ ಗಿಡದಿಂದ ಬೇರ್ಪಡಿಸಿದ ಕುಂಬಳಕಾಯಿಗೆ ಈ ಹೇಳಿಕೆ ಅನ್ವಯಿಸದು. ಗಿಡದ ಮೇಲೆಯೇ ಬೆಳೆದು ಗಾತ್ರದಲ್ಲಿ ಇನ್ನೂ

ಹಿಗ್ಗುತ್ತಿರುವ ಕುಂಬಳಕಾಯಿ ಬಸವಣ್ಣನವರ ಮನಸ್ಸಿನಲ್ಲಿದ್ದಿರಬೇಕು. ಈ ಪರ್ವದಲ್ಲಿರುವ ಕಾಯಿಗೆ ಕಬ್ಬಿಣದ ಕಟ್ಟು ತೊಡಿಸಿದರೆ ಹಣ್ಣಿನ ಸಾಧಾರಣವಾದ ಬೆಳವಣಿಗೆಗೆ ಕುಂದುಂಟಾಗುತ್ತದೆ. ಕಾಯಿನ ಗಾತ್ರ ಹಿಗ್ಗಿ ಕಟ್ಟನ್ನು ಅಂಟಿಕೊಳ್ಳುತ್ತದೆ ಎಂದಿಟ್ಟುಕೊಳ್ಳಿ. ಬೆಳವಣಿಗೆಯು ಪರ್ವ ಅಷ್ಟಕ್ಕೇ ನಿಲ್ಲದೆ ಕಟ್ಟಿನ ಸ್ಪರ್ಶಕ್ಕೆ ಒಳಗಾಗದ ಭಾಗದಲ್ಲಿ ಮುಂದುವರೆಯುತ್ತದೆ. ಆಗ ಕಟ್ಟಿನೊಳಗೆ ಬಂಧಿತವಾದ ಭಾಗ ಕುಳಿ ಬೀಳುತ್ತದೆ, ಬಿರುಕೊಡೆಯುತ್ತದೆ. ಕಾಯಿನ ತೇವ ಕಬ್ಬಿಣವನ್ನು ಸಂಧಿಸುತ್ತದೆ, ಕಬ್ಬಿಣ ತುಕ್ಕು ಹಿಡಿಯುತ್ತದೆ, ತುಕ್ಕು ಹಸಿಕಾಯಿಗೆ ಅಂಟಿಕೊಂಡು ಕಾಯಿನ ತಿಸು (tissue) ಗಳನ್ನು ಕೊಳೆಯಿಸುತ್ತದೆ. ಮನೋಧೈರ್ಯವಿಲ್ಲದವನನ್ನು ಶಿವದೀಕ್ಷೆಯ ಕಟ್ಟುನಿಟ್ಟಿನೊಳಕ್ಕೆ ಹೊಗಿಸಿದರೆ ಆಗುವ ಫಲವೂ ಇದೇ: ಅವನ ಭಕ್ತಿ ತುಕ್ಕು ಹಿಡಿದು ಹೋಗುತ್ತದೆ.

ಬಸವಣ್ಣನವರ ನುಡಿಯಲ್ಲಿ ಅತಿಶಯೋಕ್ತಿಯೇನೂ ಇಲ್ಲ. ಆದರೆ ಅದನ್ನು ಎಲ್ಲ ಸಂದರ್ಭಗಳಿಗೂ ಅನ್ವಯಿಸಬೇಕಾಗಿಲ್ಲ. ಆಧುನಿಕ ಕಾಲದಲ್ಲಿ ತಿಸುಗಳನ್ನು ಕೊಳೆಯಬಿಡದೆ ಕಬ್ಬಿಣದ ಪಟ್ಟಿಗಳಿಂದಲೋ ತಂತಿಗಳಿಂದಲೋ ಅಂಗದ ರೂಪ ಮಾರ್ಪಾಟನ್ನು ಮಾಡಿಕೊಳ್ಳಬಹುದು; ಹಣ್ಣಿನ ರೂಪವನ್ನೂ ಸ್ವಲ್ಪಮಟ್ಟಿಗೆ ಬದಲಾಯಿಸಬಹುದು. ಜಪಾನ್ ದೇಶದಲ್ಲಿ ಈ ವಿಧಾನಗಳು ಬಳಕೆಯಲ್ಲಿವೆ. ಬೆಳೆಯುತ್ತಿರುವ ಮರಕ್ಕೆ ಕಬ್ಬಿಣದ ಪಟ್ಟಿಗಳಿಂದಲೂ ಮರದ ಹಲಗೆಗಳಿಂದಲೂ ನಿಯತ ಪ್ರಕಾರ ಕಟ್ಟುಪಂಜರ ಕಟ್ಟಿ, ಕಾಂಡದ ರೂಪವನ್ನು ಬದಲಾಯಿಸುತ್ತಾರೆ. ವರ್ತುಲ ಸ್ತಂಭಾಕೃತಿಯಲ್ಲಿರುವ ಕಾಂಡವನ್ನು ಚದುರಸ್ತಂಭಾಕೃತಿಗೆ ಮಾರ್ಪಡಿಸುತ್ತಾರೆ, ಇಲ್ಲವೆ ತ್ರಿಕೋನ ಸ್ತಂಭಾಕೃತಿಗೆ ಮಾರ್ಪಡಿಸುತ್ತಾರೆ. ಜಪಾನ್ ದೇಶದಲ್ಲಿ ಗೃಹ ನಿರ್ಮಾಣಕ್ಕೆ ಬಿದಿರಿನ ಬಳಕೆ ಹೆಚ್ಚು. ಗಳವನ್ನು ತೋಪಹಿಡಿದೋ ಸೀಳಿಯೋ ಚದುರ-ರಿಪೀಸುಗಳನ್ನು ಕುಯ್ಯುವುದು ಸಾಧ್ಯವಿಲ್ಲ. ಹೀಗಿರುವುದರಿಂದ ಚದುರ ಸ್ತಂಭಾಕೃತಿಯ ಗಳಗಳು ಈಗೀಗ ಬಳಕೆಗೆ ಬರುತ್ತಿವೆ. ಇವುಗಳ ಬಲವೂ ಹೆಚ್ಚು, ಬಾಳಿಕೆಯೂ ಹೆಚ್ಚು.

5. ಹಸಿದು ಎಕ್ಕೆಯ ಕಾಯ ಮೆಲಬಹುದೆ? [ವಚನ ಸಂಖ್ಯೆ 120]

ಎಕ್ಕ (ಸಂಸ್ಕೃತ—ಅರ್ಕ) ವೇದಕಾಲದಿಂದಲೂ ಪರಿಚಿತವಾಗಿದೆ. ಜನನೇಂದ್ರಿಯಗಳ ಕಾರ್ಯ ಸುಗಮವಾಗಿ ನೆರವೇರುವುದಕ್ಕೆ ಎಕ್ಕದ ತಾಯಿತಿಯೊಂದನ್ನು ಧರಿಸಬೇಕೆನ್ನುತ್ತದೆ, ಅಥರ್ವವೇದ. ಧರಿಸಿದವನಿಗೆ ಆನೆಯ, ಅಶ್ವದ ವೀರ್ಯ ಸಿದ್ಧಿಯಾಗುತ್ತದೆಯಂತೆ!

ಕಾಲಕ್ರಮದಲ್ಲಿ ಸೂರ್ಯನಿಗೂ ಎಕ್ಕಕ್ಕೂ ಹೇಗೋ ಸಂಬಂಧ ಬೆಳೆಯಿತು. ಎಕ್ಕದ ಹೂ ದೇವರ ಪೂಜಾವಸ್ತುಗಳಲ್ಲೊಂದಾಯಿತು. ಮಧ್ಯಕಾಲಯುಗದಲ್ಲಿ ಶಿವನಿಗೂ ಗಣಪತಿಗೂ ಪ್ರಿಯವಾದ ಪುಷ್ಪವಾಯಿತು.

ಇಷ್ಟಾದರೂ ಎಕ್ಕದಹಾಲು ವಿಷ, ಅನೇಕ ಅಲ್ಕಲಾಯ್ಡ್ (alkaloid) ಗಳನ್ನು ಒಳಗೊಂಡಿದೆ. ಇವುಗಳನ್ನು ಕುರಿತ ವೈಜ್ಞಾನಿಕ ಸಂಶೋಧನೆಯಾಗಲಿ ವೈದ್ಯಕೀಯ ಪ್ರಯೋಗವಾಗಲಿ ಅಷ್ಟಾಗಿ ನಡೆದಿಲ್ಲ. ಕಾಲಿಗೋ ಕೈಗೋ ಮುಳ್ಳು ಒತ್ತಿ, ಅದರ ತುದಿ ಚರ್ಮದಲ್ಲಿ ಮುರಿದಾಗ ಎಕ್ಕದ ಹಾಲನ್ನು ಆ ಜಾಗದಲ್ಲಿ ಸವರಿದರೆ ಹೊಕ್ಕು ಮುರಿದ ಮುಳ್ಳುಭಾಗ ಹೊರಬರುವುದೆಂಬ ನಂಬಿಕೆ ಜನಸಾಮಾನ್ಯರಲ್ಲಿದೆ. ಈ ಪ್ರಯೋಗದಲ್ಲಿ ಎಷ್ಟರಮಟ್ಟಿನ ನಿಜವಿದೆಯೆಂಬ ಚರ್ಚೆ ಇಲ್ಲಿ ಬೇಡ. ಆದರೆ ಒಂದು ಮುನ್ನೆಚ್ಚರಿಕೆಯನ್ನು ಗಮನದಲ್ಲಿರಿಸಿಕೊಳ್ಳುವುದು ಒಳಿತು : ಗಿಡದ ಹಾಲು ರಕ್ತವನ್ನು ಸೋಕಿದ್ದೇ ಆದರೆ ದುಷ್ಪರಿಣಾಮಗಳುಂಟಾಗುತ್ತವೆ: ಬಾಯಿಮೂಲಕ ದೇಹವನ್ನು ಹೊಕ್ಕರೂ ಅಷ್ಟೆ.

ಗಿಡದ ಎಲ್ಲ ಭಾಗಗಳಲ್ಲೂ ಹಾಲಿದೆ; ಕಾಯಲ್ಲೂ ಇದೆಯಾದದ್ದರಿಂದ ಭೋಜ್ಯಯೋಗ್ಯವಲ್ಲ ಮಾತ್ರವಲ್ಲ, ಹೊಟ್ಟೆಯೊಳಗೆ ಸೇರಿದರೆ ವಾಂತಿ ಭೇದಿಗಳು ಕಿತ್ತುಕೊಳ್ಳುತ್ತವೆ. ಹಸಿದಾಗ ಮೆಲಿದರೂ ಹಾಗೆಯೇ, ಹಸಿವಿಲ್ಲದಾಗ ಮೆಲಿದರೂ ಹಾಗೆಯೇ. ಪ್ರಾಣಕ್ಕೆ ಆಪತ್ತು ಬರುವ ಸಂಭವವೂ ಉಂಟು.

ಹಾಗಾದರೆ ಹಸಿವಾದಾಗ ನಮಗೆ ದೊರಕಿದ್ದು ಎಕ್ಕೆಯಕಾಯಿ ಒಂದೇ ಆಗಿದ್ದರೆ ? ಬೇರೇನೂ ಸಿಗದೇನೇ ಇದ್ದರೆ ? ಇದು ಮೊರಟುವಾದ. ಎಕ್ಕೆಯ ಕಾಯಿ ಸರ್ವಋತುಗಳಲ್ಲೂ ದೊರಕದು. ಹಸಿವೊಂದರಿಂದಲೇ ಪ್ರಾಣಹೋಗುವ ಸಂದರ್ಭ ತೀರ ಕಡಿಮೆ. ಭೋಜ್ಯಯೋಗ್ಯವಾದ ವಸ್ತು ಸಿಗುವವರೆಗೂ ಹಸಿವನ್ನು ತಡೆದುಕೊಂಡಿರಿ. ಪ್ರಾಣ ಹಾರಿಹೋಗುತ್ತಿದೆ ಎಂಬ ಶಂಕೆಯಾದರೆ ಎಲ್ಲೆಲ್ಲೂ ಸಿಗುವ ಹಸುರು ಹುಲ್ಲು ತಿನ್ನಿ. ಅದೂ ಸಿಗದೇ ಹೋದರೆ ? ದೈವೇಚ್ಛೆ ಎಂದುಕೊಳ್ಳಿ

6. ಎಲವದ ಮರ ಹೂತು ಫಲವಾದ ತೆಜನಂತೆ
.................................
ಫಲವಾದರೇನು ಹಾವು ಮೆಕ್ಕೆಯ ಕಾಯಿ ?

ಎಲವು (ತಮಿಳು–ಇಲವು) ಎಂದರೆ ಈಗಿನ ಕನ್ನಡದಲ್ಲಿ ಬೂರುಗ (ಸಂಸ್ಕೃತ–ಶಾಲ್ಮಲೀ).

ಬಸವಣ್ಣನವರಿಗೂ ಎಲವಕ್ಕೂ ನಂಟುತನ ಹುಳಿಯಾದಂತೆ ಕಾಣುತ್ತದೆ. ಅವರಿಗಿಂತಲೂ ಹಿಂದಿನ ಕವಿಗಳು ಈ ಮರವನ್ನು ಮಹಾಶಾಲ್ಮಲೀ ಎಂದರು. ಅವರ ಪ್ರಕಾರ ಇದೊಂದು ವೃಕ್ಷಮಾತ್ರವಲ್ಲ, ಅದೊಂದು ಸಂಸ್ಥೆಯೇ ಆಗಿತ್ತು. ಎಲೆ ತುಂಬಿದಾಗ ದಾರಿಗರಿಗೆ ತಣ್ಣೆರಳಿನ ಆಶ್ರಯವಿತ್ತಿತು ; ಹೂಬಿಟ್ಟಾಗ ಗಿಣಿಗಳಿಗೆ ಸಿಹಿ ನೀರನ್ನಿತ್ತಿತು,–ಹೂವಿನ ತಳಭಾಗವನ್ನು ಕೊಕ್ಕಿಕೊಕ್ಕಿ ಪುಷ್ಪಪಾತ್ರದಲ್ಲಿ ಶೇಖರಿತವಾಗಿರುವ ನೀರನ್ನು ಈಂಟುತ್ತಿದ್ದವು, ಗಿಳಿಗಳು ; ಕವಿಗೆ ಬೆತ್ತಲೆ ರೆಂಬೆ

ಕೊಂಬೆಗಳು ಬಾಹುಗಳನ್ನು ಎಲ್ಲದಿಕ್ಕುಗಳಿಗೂ ಚಾಚಿಕೊಂಡು ನರ್ತಿಸುವ ನರ್ತಕನ 'ಪ್ರತಿಮೆ'ಯನ್ನು ಹವಣಿಸಿತು. ನಮ್ಮ ಕಾಲದಲ್ಲಿ ಬೂರುಗದ ಚೌಬೀನೆ ಅನೇಕ ಬಗೆಯಲ್ಲಿ ಉಪಯೋಗ ಪಡೆದಿದೆ. ಕಾಯಿನಿಂದ ಜನ್ಮವಾದ ಹತ್ತಿಯು ಹಾಸುಗೆ ದಿಂಬುಗಳನ್ನು ತುಂಬಿ ಸುಪ್ಪತ್ತಿಗೆಯನ್ನೂ ಸುಖಾಸನವನ್ನೂ ಕೊಟ್ಟಿದೆ. ಹೀಗಿರುವುದರಿಂದ ಬಸವಣ್ಣನವರು ಈ ಸಂದರ್ಭದಲ್ಲಿ ಸ್ವಲ್ಪ ಎಡವಿದ್ದಾರೆಯೇ ಎಂಬ ಸಂದೇಹ ಬರುತ್ತದೆ.

"ಎಲವದ ಮರ ಹೂತು ಫಲವಾದ ತೆನಜಂತೆ ಸಿರಿಯಾದರೇನು ಶಿವಭಕ್ತಿಯಿಲ್ಲದನ್ನಕ್ಕ ?" ಎಂಬ ನುಡಿಗಟ್ಟಿನ ಒಟ್ಟು ತಾತ್ಪರ್ಯವನ್ನು ಗಣಿಸಿದರೆ, "ಸಿರಿ" ಎಂಬ ಮಾತಿಗೆ 'ಬಾಹುಳ್ಯ' ಎಂಬ ಅರ್ಥವನ್ನು ಸ್ವೀಕರಿಸಿದರೆ, ಸ್ವಲ್ಪ ನೇರವಾದ ಸಂಬಂಧವನ್ನು ಕಂಡುಕೊಳ್ಳಬಹುದು. ಮರವೊಂದಕ್ಕೆ ಸಹಸ್ರಾರು ಹೂಗಳು ಅರಳುತ್ತವೆ; ಸಹಸ್ರಾರು ಕಾಯಿಗಳು ಮೊಳೆಯುತ್ತವೆ. ಇದು "ಸಿರಿ". ಇಂಥ ಸಿರಿವಂತನು ಶಿವಭಕ್ತಿಶೂನ್ಯನಾದರೆ ಅವನ ಐಶ್ವರ್ಯವೆಲ್ಲ ವ್ಯರ್ಥ. ಈ ಸೂಕ್ತಿಯಲ್ಲಿ ಪ್ರಾಮುಖ್ಯತೆಯಿರುವುದು ಕಾಯಿಗಲ್ಲ, ಅದರ ಬಾಹುಳ್ಯಕ್ಕೆ.

'ಹಾವುಮೆಕ್ಕೆಯಕಾಯಿ' ನ ಅನನ್ಯತೆ ನನಗೆ ಖಚಿತವಾಗಿ ತಿಳಿಯದು. ನಮಗೆ ಪರಿಚಿತವಾಗಿರುವ ಪಡುವಲಕಾಯಿಗೆ ಕೆಲವು ಗ್ರಂಥಗಳಲ್ಲಿ 'ಮೆಕ್ಕೆ' ಎಂಬ ಪ್ರಯೋಗವಿದೆ; ಈಗಲೂ ಈ ಪದ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಬಳಕೆಯಲ್ಲಿದೆಯೆಂದು ಕೇಳಿದ್ದೇನೆ.

ಪಡುವಲಕಾಯಿ ಹಸುರಾಗಿರುವಾಗ ಅದರ ಪ್ರಯೋಜನ. ಹಣ್ಣಾದಾಗ ಯಾರಿಗೂ ಪ್ರಯೋಜನವಿಲ್ಲ. ಹಳದಿ ಬಣ್ಣಕ್ಕೆ ತಿರುಗಿ ಕೆಂಪು ತಿರುಳಿನಿಂದ ಆಕರ್ಷಕವಾದರೆ ಏನಾಯಿತು ? ಪಕ್ವವಾದರೆ ಪ್ರಯೋಜನವಿರಬೇಕು, ಗುಣವಿಲ್ಲದ ಪಕ್ವದಿಂದ ಲಭ್ಯವಾಗುವುದಾದರೂ ಏನು, ಎಂದು ಕೇಳುವಂತಿದೆ, ಬಸವಣ್ಣನವರ ವಾಣಿ.

7. ಚಂದನದ ಸನ್ನಿಧಿಯಲ್ಲಿ ಪರಿಮಳ ತಾಗಿ
ಬೇವು ಬೊಬ್ಬುಳಿ ತಜಿಯ ಗಂಧಂಗಳಾಗವೆ ?

[ವಚನ ಸಂಖ್ಯೆ 141]

ಗಿರಿಗಳಮೇಲೆ ಹಲವು ತರುಮರಾದಿಗಳಿದ್ದು
ಸಿರಿಗಂಧದ ಸನ್ನಿಧಿಯಲು ಪರಿಮಳವಾಗವೆ ?

[ವಚನ ಸಂಖ್ಯೆ 151]

ಖಂಡಿತ ಆಗವು, ನೈಜವಾಗಿಯೂ ಆಗವು. ಕೃತಕೋಪಾಯುಗಳಿಂದಲೂ ಆಗವು !

ಬಸವಣ್ಣನವರದು ಕವಿವಾಣಿ ಎಂಬುದನ್ನು ಮರೆಯಬೇಡಿ. ಅವರು ಪದ್ಯ ಛಂದಸ್ಸನ್ನು ತೊರೆದು ವಚನಮಾರ್ಗವನ್ನು ಹಿಡಿದಿರುವರಾದರೂ ಅವರ ಕವಿಹೃದಯ ಮಿಡಿಯುತ್ತಿದೆ. ಶಿವಶರಣರ ಸಂಗದಿಂದ ಭವಿಯೂ ಅವರಂತೆಯೇ ಮಾರ್ಪಡುತ್ತಾನೆ ಎಂಬುದು ಬಸವಣ್ಣನವರ ಬೋಧೆ. ಶ್ರೀಗಂಧಮರ ಇಲ್ಲಿ ಶಿವಶರಣನಿಗೂ ಬೇವು ಬೊಬ್ಬುಳಿಗಳು ಭವಿಗಳಿಗೂ ಉಪಮೆಯಾಗಿವೆ. ಶರಣಸಂಗದಿಂದ ಭವಿಯು ಶಿವಾನುಭವಿಯಾದ ನಿದರ್ಶನಗಳು ಬಸವಣ್ಣನವರಿಗೆ ತಿಳಿದಿದ್ದಿರಬೇಕು.

ಸಸ್ಯಶಾಸ್ತ್ರಜ್ಞರ ಅನುಭವ ಬೇರೆ ರೀತಿಯದು. ಶ್ರೀಗಂಧ ಒಂದು ಅಸಾಧಾರಣ ಜೀವಿ. ಮೇಲುನೋಟಕ್ಕೆ ಸಾಧಾರಣವಾಗಿ ಕಂಡರೂ–ತನ್ನ ಕಾಲಮೇಲೆಯೇ ನಿಂತಿರುವಂತೆ ಕಂಡರೂ–ಸುತ್ತುಮುತ್ತಲಿನ ಗಿಡಮರಗಳ ಆಧಾರದಿಂದ ಬೆಳೆಯುವ ಮರ, ಎಂದರೆ ಪರಸತ್ವೋಪಜೀವಿ (Parasite). ಶ್ರೀಗಂಧವು ತನ್ನ ಬೇರು ಎಳೆಗಳನ್ನು ಸುತ್ತುಮುತ್ತಲಿನ ತರುಮರಗಳ ಬೇರಿನೊಳಕ್ಕೆ ನುಗ್ಗಿಸಿ, ಹೀರು ಗುಂಡಿಗಳನ್ನು (Haustoria) ಬೆಳೆಸಿ, ತನ್ಮೂಲಕ ಪರ ಆಹಾರ ಸತ್ವಗಳನ್ನು ಸೆಳೆದುಕೊಂಡು ಬಾಳುವೆ ನಡೆಸುತ್ತದೆ. ಇದು ಹುಲ್ಲು, ಇದು ಪೊದರು, ಇದು ಮರ, ಇದು ಬಳ್ಳಿ, ಇದು ಮೇಲು, ಇದು ಕೀಳು ಎಂಬ ತಾರತಮ್ಯಜ್ಞಾನ ಶ್ರೀಗಂಧಕ್ಕಿಲ್ಲ. ಯಾವ ಸಸ್ಯ ಜಾತಿಯಾದರೂ ಸರಿಯೆ, ಹೀರುಗುಂಡಿಗಳನ್ನು ನುಗ್ಗಿಸಿ ಆಹಾರವನ್ನು ಸೆಳೆದುಕೊಳ್ಳುತ್ತದೆ.

ಈ ನೆಲೆಯಲ್ಲಿ ಶ್ರೀಗಂಧದ ಹೀರುಗುಂಡಿಗಳು ಬೇವನ್ನು ತಾಕಿದವೆನ್ನಿ. ಬೇವಿನ ಬೇರಿನಲ್ಲಿರುವ ಆಹಾರ ಸತ್ವವನ್ನು ಹೀರುವುದರ ಜೊತೆಗೆ ಅದರ ಕಹಿಯನ್ನೂ ಸೆಳೆದುಕೊಳ್ಳುತ್ತದೆ. ಈ ಸತ್ವ ಶ್ರೀಗಂಧದ ಮರವೆಲ್ಲವನ್ನೂ ವ್ಯಾಪಿಸುತ್ತದೆ. ಭವಿಗಳ ಸಂಗದಲ್ಲಿ ಶರಣನೂ ಭವಿಯೇ ಆಗಿಬಿಡುತ್ತಾನೆ!

### 8. ಮಸಿಯ ಹೂಸಿ ನೇಜಿಲ ಹಣ್ಣು ಮಾಱುವಂತೆ

[ವಚನ ಸಂಖ್ಯೆ 293]

ಬೆಂಗಳೂರು ಪಟ್ಟಣದ ಮಾರುಕಟ್ಟೆಯಲ್ಲಿ ಕಳೆದವರ್ಷ ಕಣ್ಣಾರಕಂಡ ದೃಶ್ಯದ ನೆನಪಾಗುತ್ತದೆ. ಹಳದಿ ಬಣ್ಣದ ದೋರಗಾಯಿ ಟೊಮೇಟೋ ರಾಶಿ ಒಂದು ಕೆಲದಲ್ಲಿ; ವರಿಸೆವರಿಸೆಯಾಗಿ ಗಾತ್ರ ಪ್ರಕಾರ ಒಪ್ಪವಾಗಿ ಪೇರಿಸಿಟ್ಟಿದ್ದ ಕೆಂಪು ಟೊಮೇಟೊ ಗೋಪುರಗಳು ಇನ್ನೊಂದು ಕೆಲದಲ್ಲಿ. ಈ ಗುಂಪುಗಳ ನಡುವೆ ಮಾಲೀಕ. ಹಳದಿ ದೋರಗಾಯೊಂದನ್ನು ಕೈಲಿ ಹಿಡಿದುಕೊಳ್ಳುತ್ತಾನೆ. ಬಟ್ಟೆಯ ಚಿಂದಿಯೊಂದನ್ನು ಯಾವುದೋ ಕೆಂಪುಬಣ್ಣದ ದ್ರಾವಕದಲ್ಲಿ ಅದ್ದಿ ಆದರಿಂದ ದೋರ ಕಾಯನ್ನು ಉಜ್ಜುತ್ತಾನೆ. ಒಂದೆರಡು ನಿಮಿಷಗಳಲ್ಲಿ ಅದರ ಹಳದಿಬಣ್ಣ ಮಾಯವಾಗಿ

ಹೊಳೆಹೊಳೆಯುವ ಕೆಂಬಣ್ಣ ಲಭಿಸುತ್ತದೆ. ಇನ್ನೊಂದು ಬಟ್ಟೆಯಿಂದ 'ಹಣ್ಣ'ನ್ನು ತಿಕ್ಕಿ ಒರಸಿ ಗೋಪುರದಲ್ಲಿ ಅಡಕುತ್ತಾನೆ.

ಇದು ಯಕ್ಷಿಣಿಯೇ ? ಇರಬಹುದೇ ? ಏನೋ ಎನ್ನುವಂತೆ ಹಣ್ಣನ್ನು ಕೊಳ್ಳಬಂದವರು ಕುತೂಹಲದಿಂದ ನೋಡುತ್ತಿದ್ದಾರೆ. ಅವರಲ್ಲೊಬ್ಬ "ಈ ರಾಶಿಯ ಹಣ್ಣು ಹಳದಿ, ಆ ರಾಶಿಯದು ಕೆಂಪು. ಅದು ಹೇಗೆ ಇಷ್ಟು ಬೇಗ ಹಣ್ಣಾಯಿತು ?" ಎಂದ. ಮಾಲೀಕನ ಖಚಿತವಾದ ಉತ್ತರ: "ಇಷ್ಟವಿದ್ದರೆ ಕೊಂಡುಕೊ, ಬೇಡವಾದರೆ ಬಿಡು ! ಪ್ರಶ್ನೆಗಿಶ್ನೆ ಬೇಡ !"

ಯಕ್ಷಿಣಿಯ ರಹಸ್ಯವಿಷ್ಟೆ : ಎರಿಕ್ರೋಸಿನ್ ಎಂಬ ಕೆಂಪುಬಣ್ಣವಿದೆ. ಬಯಾಲಜಿ ಲ್ಯಾಬೊರೆಟೊರಿಗಳಲ್ಲಿ ಸಾಧಾರಣವಾಗಿ ಉಪಯೋಗಿಸುತ್ತೇವೆ (ವೈದ್ಯದಲ್ಲೂ ಆಂಟಿ–ಬಯೋಟಿಕ್ ಆಗಿ ಉಪಯೋಗ ಪಡೆದಿದೆ). ಇದು ನೀರು, ಸೀಮೆ ಎಣ್ಣೆ, ಪೆಟ್ರೋಲ್, ಆಲ್ಕೊಹಾಲು ಮೊದಲಾದ ದ್ರಾವಕಗಳಲ್ಲೆಲ್ಲ ಕರಗುತ್ತದೆ. ಯಕ್ಷಿಣಿ–ಮಾಲೀಕನ ಎದುರು ಬಟ್ಟಲಿನಲ್ಲಿದ್ದದ್ದು ಎರಿಕ್ರೋಸಿನ್ ಲೀನವಾದ ಸೀಮೆ ಎಣ್ಣೆ. ಸಸ್ಯದ ತಿಸು (tissue) ಗಳು ಈ ಬಣ್ಣವನ್ನು ಅತಿಶೀಘ್ರವಾಗಿ ಹೀರಿಕೊಳ್ಳುತ್ತವೆ. ಹೀರಿದ ಬಣ್ಣ ಕೈಗೆ ಅಂಟದು, ನೀರಿನಲ್ಲಿ ತೊಳೆದರೂ ಹೋಗದು. ಕಾಯಿನ ಹೊರಸಿಪ್ಪೆ ಮಾತ್ರ ಕೆಂಪಾಗುತ್ತದೆ : ಸೀಮೆ ಎಣ್ಣೆಯಿಂದಾಗಿ ಹೊಳಪು ಪಡೆಯುತ್ತದೆ. ಬಸವಣ್ಣನವರ ಕಾಲದಲ್ಲಿ ನೇರಿಳೆಕಾಯಿಗೆ ಮಸಿಬಳಿದು ಹಣ್ಣು ಎಂದು ಮಾರುತ್ತಿದ್ದರು ; ನಮ್ಮ ಕಾಲದಲ್ಲಿ ಟೊಮೇಟೊ ಕಾಯಿಗೆ ಎರಿಕ್ರೋಸಿನ್ ಬಳಿದು ಹಣ್ಣು ಎಂದು ಮಾರುತ್ತಾರೆ. ಆವುದು ಹುಸಿ, ಆವುದು ಕಿಸುಬು ಎಂಬುದನ್ನು ತಿಳಿಯದ ಜನ ಕೊಂಡುಕೊಳ್ಳುತ್ತಾರೆ.

ಬಸವಣ್ಣನವರ ಈ ನುಡಿ ಇಂದಿಗೂ ಸತ್ಯವಾಗಿದೆ. ಅವರ ಕಾಲಕ್ಕೂ ನಮ್ಮ ಕಾಲಕ್ಕೂ ಇರುವ ಅಂತರಕ್ಕೆ ಇಂದಿನ ವ್ಯಾಪಾರಿ ಸೇತುವೆಯನ್ನು ಕಟ್ಟಿದ್ದಾನೆಯಲ್ಲವೆ ?

### 9. ಮಾವಿನಕಾಯಿಯೊಳಗೊಂದು ಎಕ್ಕೆಯಕಾಯಿ ನಾನಯ್ಯಾ

[ವಚನ ಸಂಖ್ಯೆ 332]

ಎಕ್ಕೆಯ ಕಾಯಿ ಭೋಜ್ಯವಸ್ತುವಲ್ಲವೆಂಬ ಸಂಗತಿಯನ್ನು ಬಸವಣ್ಣನವರು ಇನ್ನೊಂದು ವಚನದಲ್ಲಿ ತಿಳುಹಿಸಿದ್ದಾರೆ (ವಚನ ಸಂಖ್ಯೆ 120). ಪ್ರಸ್ತುತ ವಚನದಲ್ಲೂ ಅದೇ ಜಾಡನ್ನು ಹಿಡಿದು ಇನ್ನೊಂದು ಸಂದರ್ಭಕ್ಕೆ ಉಪಯೋಗಿಸಿದಂತಿದೆ. ಮಾವನ್ನು ಭಕ್ತರಿಗೂ ಎಕ್ಕದ ಕಾಯನ್ನು ತನಗೂ ಹೋಲಿಸಿಕೊಂಡು ಸಂಬಂಧ ತಂದಿದ್ದಾರೆ. ಮಾವು ಪಕ್ವಗೊಂಡಾದ ಬಳಿಕ ಶ್ರೇಷ್ಠತೆಯನ್ನು ಪಡೆಯುತ್ತದೆ, ಎಕ್ಕೆ ಪಕ್ವಗೊಂಡಾದ (ಹಣ್ಣಾದ) ಬಳಿಕವೂ

ಕೀಳಾಗಿಯೇ ಇರುತ್ತದೆ. ಅಂಥ ಮಾವಿನ ಹಣ್ಣಿಗೆ ನಾನು ಸಾಟಿಯೆ ಎಂದು ಬಿಸುಸುಯ್ಯುತ್ತಾರೆ, ಬಸವಣ್ಣನವರು.

ಇಲ್ಲಿ ಇನ್ನೂ ಒಂದು ಸ್ವಾರಸ್ಯವನ್ನು ಗಮನಿಸಬೇಕು. ಮಾವಿನಕಾಯಿಗೂ ಎಕ್ಕದಕಾಯಿಗೂ ಸ್ವಲ್ಪ ರೂಪಸಾದೃಶ್ಯವುಂಟು. ಎರಡರ ಬಣ್ಣವೂ ಹಸುರೇ; ಎಕ್ಕೆಕಾಯಿಗಾತ್ರದ ಕಾಯಿಗಳನ್ನು ತಳೆಯುವ ಮಾವಿನ ಜಾತಿಗಳೂ ಉಂಟು. ಇಂಥ ಮಾಗಾಯಿಗಳ ನಡುವೆ ಎಕ್ಕೆ ಕಾಯನ್ನು ತಂದಿರಿಸಿದರೆ ಸ್ಥೂಲನೋಟಕ್ಕೆ ಎರಡು ಜಾತಿಯ ಕಾಯಿಗಳನ್ನು ಬೇರ್ಪಡಿಸುವುದು ಕಷ್ಟ. ಹೀಗೆ ಹೊರನೋಟಕ್ಕೆ ಮಾತ್ರ ತಾನು ಭಕ್ತನಂತೆ ಕಾಣುತ್ತೇನೆಂಬ ಭಾವವನ್ನು ಬಸವಣ್ಣನವರು ನಿರೂಪಿಸಿದ್ದಾರೆ.

"ಪಕ್ವವನ್ನು ಪಡೆದ ಶರಣರನ್ನು ಅನುಯಾಯಿಸುವುದು ನ್ಯಾಯ. ಅಂಥವರ ಸಮಕ್ಕೆ ನಾಚಿಕೆಯಿಲ್ಲದೆ ನಾನು ನಿಲ್ಲಲಾರೆ" ಎಂಬ ದೈನ್ಯಭಾವದ ಧ್ವನಿಯನ್ನು ಈ ವಚನದಲ್ಲಿರಿಸಿದ್ದಾರೆ ಎಂದು ತೋರುತ್ತದೆ. ಬಹುಶಃ ಸಾಧನೆಯ ಮಾರ್ಗದಲ್ಲಿದ್ದಾಗ ನುಡಿದ ವಚನಗಳಲ್ಲಿ ಇದೊಂದಿರಬಹುದು.

10. ಸೂರ್ಯನುದಯ ತಾವರೆಗೆ ಜೀವಾಳ
ಚಂದ್ರಮನುದಯ ನೆಯ್ದಿಲೆಗೆ ಜೀವಾಳ

[ವಚನ ಸಂಖ್ಯೆ 366]

ಬಸವಣ್ಣನವರು ಇಲ್ಲಿ ಹಳೆಯ 'ಪ್ರತಿಮೆ'ಯೊಂದನ್ನು ಹೊಸಮಾರ್ಗದಲ್ಲಿ ಬಳಸಿಕೊಂಡಿದ್ದಾರೆ. ತಾವರೆ ನೆಯ್ದಿಲೆಗಳು ಅರಳಿ ಹೂವಾಗುವುದಕ್ಕೆ ಕ್ರಮವಾಗಿ ಸೂರ್ಯ ಚಂದ್ರರ ಸಾನ್ನಿಧ್ಯ ಅತ್ಯವಶ್ಯಕ. ನಮ್ಮಲ್ಲಿ ಅಡಗಿರುವ ಭಕ್ತಿ ವಿಕಾಸವಾಗಬೇಕಾದರೆ ಶರಣರ ಸಂಗ ಅತ್ಯವಶ್ಯಕ. ಹೀಗಿರುವುದರಿಂದ ಸೂರ್ಯ ಚಂದ್ರರಂತಿರುವ ಕೂಡಲಸಂಗನ ಶರಣರ ಕೂಟದಲ್ಲಿ ತನ್ನನ್ನಿರಿಸು ಎಂದು ಬಸವಣ್ಣನವರು ಹಾರೈಸುತ್ತಾರೆ.

11. ಮಾಡುವ ಭಕ್ತನ ಕಾಯ ಬಾಳೆಯ ಕಂಬದಂತಿರಬೇಕು

[ವಚನ ಸಂಖ್ಯೆ 523]

ಬಾಳೆಗೆ ಫಲವಾಯಿತ್ತೆ ಕಡೆ

[ವಚನ ಸಂಖ್ಯೆ 664

ತೊಡೆಯನ್ನೋ ತೋಳನ್ನೋ ಸುಕುಮಾರಶರೀರವನ್ನೋ ಬಾಳೆಯ ಕಂಬಕ್ಕೆ ಹೋಲಿಸುವ ಕವಿಸಮಯ ಬಸವಣ್ಣನವರ ನುಡಿಗಟ್ಟಿಗೆ ಹೊಂದಿದೆ. . ಭಕ್ತನ ನೆಲೆಯನ್ನು ಅರುಹುವುದಕ್ಕಾಗಿ ಅವರು ಬಾಳೆಯ ಕಂದನ್ನು ಉದಾಹರಣೆಯಾಗಿ ಉಪಯೋಗಿಸಿಕೊಂಡಿರುವಂತೆ ಕಾಣುತ್ತದೆ. ಭಕ್ತನಾದವನು ಧೈರ್ಯಗೆಡದೆ

ಬಾಳೆಯು ಕಂದಿನಂತೆ ನೆಟ್ಟಗಿರಬೇಕು, ಶಕ್ತಿಯುತನಾಗಿರಬೇಕು, ಬಾಳೆಕಂದಿನ ಹೊರಪಟ್ಟೆಗಳಂತೆ. ಪಟ್ಟೆಗಳನ್ನು ಒಂದೊಂದಾಗಿ ಕಳಚಿದರೆ ನಡುವೆ ನಿಂತಿರುವ ದಿಂಡು ಎಷ್ಟು ಮೃದುವೋ ಭಕ್ತನ ಒಳಗು ಹಾಗಿರಬೇಕು. ಎಂದರೆ, ಗಡಸಾಗಲಿ ಪೆಡಸಾಗಲಿ ಇರದೆ ಕೆಚ್ಚಿಲ್ಲದೆ (ಸೊಕ್ಕಿಲ್ಲದೆ) ಮೆತುವಾಗಿರಬೇಕು. 523ನೆ ವಚನದ ಒಟ್ಟು ತಾತ್ಪರ್ಯ ಹೀಗಿರಬಹುದೆಂದು ಗ್ರಹಿಸಿದ್ದೇನೆ.

"ಬಾಳೆಗೆ ಫಲವಾಯಿತ್ತೆ ಕಡೆ" ಎಂಬ 664ನೆ ವಚನಭಾಗ ಬಾಳೆಗಿಡದ ಜೀವಿತವನ್ನು ಕುರಿತದ್ದು. ನೆಲದೊಳಗೆ ಬೆಳೆಯುವ ಗಡ್ಡೆಯೇ ಬಾಳೆಯ ನಿಜವಾದ ಕಾಂಡ. ಇದರಿಂದ ಕೊನರಿದ ಎಲೆಮೊಗ್ಗು ಭೂಪದರವನ್ನು ಭೇದಿಸಿಕೊಂಡು ನೆಟ್ಟಗೆ ಕಂಬವಾಗಿ ಬೆಳೆಯುತ್ತದೆ. ಕಂಬದ ಮಧ್ಯದಿಂದ ಪುಷ್ಪಗುಚ್ಛದ ತೊಟ್ಟು (ಇದೇ ದಿಂಡು) ಪಟ್ಟೆಯ ಹೊದಿಕೆಯಿಂದ ಹೊರಕ್ಕೆ ಬಂದು ಕಾಣಿಸಿಕೊಳ್ಳುತ್ತದೆ. ಹೆಣ್ಣುಹೂಗಳು ಹಣ್ಣಾಗುತ್ತವೆ. ಗೊನೆಯನ್ನು ಕಿತ್ತಮೇಲೆ ಕಂಬಭಾಗ ಒಣಗುತ್ತದೆ. ನೆಲದೊಳಗಿನ ಗಡ್ಡೆಯಿಂದ ಹೊಸತೊಂದು ಕಂದು ಕೊನರುತ್ತದೆ.

ಹೀಗೆ ಬಾಳೆಗಿಡ ಫಲಧರಿಸಿದ ಮೇಲೆ ಸಾಯುತ್ತದೆ ಎಂಬ ನಂಬಿಕೆ ಹುಟ್ಟಿದೆ. ವಾಸ್ತವದಲ್ಲಿ ಈ ಜೀವನ ಚರಿತ್ರೆ ಬಾಳೆಗಿಡಕ್ಕೆ ಮಾತ್ರ ಅನ್ವಯವಾಗತಕ್ಕದ್ದಲ್ಲ; ಗಡ್ಡೆಯಿಂದ ಬೆಳೆಯುವ ಏಕದಳ ಸಸ್ಯಗಳಲ್ಲಿ (monocotyledous) ಸಾಮಾನ್ಯವಾಗಿ ಕಾಣುವಂಥದೇ. ಜನಸಾಮಾನ್ಯಕ್ಕೆ ಬಾಳೆ ಚಿರಪರಿಚಿತವಾದ ಗಿಡವಾದದ್ದರಿಂದ ಬಸವಣ್ಣನವರು ಇದನ್ನೇ ಉದಾಹರಣೆಯಾಗಿ ಆರಿಸಿಕೊಂಡಿದ್ದಾರೆ.

ಇನ್ನೊಂದು ಸಂಗತಿಯನ್ನೂ ಇಲ್ಲಿ ತಿಳಿಯಬೇಕು. ಬಾಳೆಗಿಡದ ಸಾವೆಲ್ಲ ನೆಲದಮೇಲೆ ಮಾತ್ರ, ನಮ್ಮ ಕಣ್ಣಿಗೆ ಗೋಚರವಾಗುವ ಗಿಡಭಾಗ ಮಾತ್ರ. ನೆಲದ ಗರ್ಭದೊಳಗೆ ಅಡಗಿರುವ ಭಾಗ ಚಿರಂಜೀವಿ. ಗಡ್ಡೆಯ 'ಕಣ್ಣು'ಗಳನ್ನೇ ಅಲ್ಲವೆ ಸಸ್ಯಾಭಿವೃದ್ಧಿಕ್ರಮದಲ್ಲಿ ಬಳಸುತ್ತೇವೆ!

[ಚೇಳು ಬಸುರಾಗಿ ಮರಿಗಳನ್ನು ಈಯ್ದಮೇಲೆ ಸಾಯುತ್ತದೆ ಎಂಬ ನಂಬಿಕೆಗೆ ಆಧಾರವಿಲ್ಲ. ಅದು ಹೇಗೋ ಈ ನಂಬಿಕೆಯು ಸುತ್ತ ಬೆಳೆದ ಆಕಾಶ ಪುರಾಣಗಳು ರೂಢಿಯಲ್ಲಿವೆ.]

### 12. ಬಿದಿರೆಲೆಯ ಮೇಲಿದರೆ ಮೆಲಿದಂತಲ್ಲದೆ ರಸವನ್ನು ಹಡೆಯಲು ಬಾರದು

[ವಚನ ಸಂಖ್ಯೆ 554]

ಮೊದಲನೆಯದಾಗಿ, ಬಿದಿರೆಲೆಯಲ್ಲಿ ಆಹಾರಸತ್ವಗಳಿಲ್ಲ. ಎರಡನೆಯದಾಗಿ, ರಸವಿಲ್ಲ. ಮೂರನೆಯದಾಗಿ ಎಲೆ ಒರಟುಮಾತ್ರವಲ್ಲ, ಹೊರಮೈಯಿಂದ ಎದ್ದಿರುವ ಮುಳ್ಳುರೋಮಗಳು ಬಾಯೊಳಗಿನ ಅಂಗಾಂಗಗಳನ್ನು ಕುತ್ತುತ್ತವೆ. ಎಲೆಯೊಳಗೆ

ಅಡಗಿರುವ ಸಿಲಿಕ (silica) ಹರಳುಗಳು ಮರಳಿನಂತೆ ಹಲ್ಲುಗಳಿಗೆ ಸಿಗುತ್ತವೆ. ಅಗೆದು ರಸವನ್ನು ಸವಿಯುವುದು ಹೋಗಲಿ, ಹಲ್ಲು ಮುರಿಯದಿದ್ದರೆ, ನಾಲಗೆ ಹರಿಯದಿದ್ದರೆ ಸಾಕು.

ವಿವೇಕವೂ ವಿವೇಚನಾಶಕ್ತಿಯೂ ಇರಬೇಕು ಎಂದು ಬೋಧಿಸುವ ಸಂದರ್ಭದಲ್ಲಿ ಬಿದಿರೆಲೆಯ ಪ್ರಕರಣವನ್ನು ಬಸವಣ್ಣನವರು ಎತ್ತಿದ್ದಾರೆ. ಯಾರು ಏನನ್ನು ಉಪದೇಶಿಸಿದರೂ ವಿವೇಚನಾಶೂನ್ಯವಾಗಿ ಅದನ್ನು ಮಾಡಲಾಗದು. ಕಂಡಕಂಡ ದೈವಕ್ಕೆಲ್ಲ ಕೈಮುಗಿಯುವುದು ಕೂಡದು. ಯಾವ ಎಲೆಯನ್ನು ಮೆಲಿದರೆ ರಸ ಜಿನುಗುತ್ತದೆ, ಯಾವ ಎಲೆಯನ್ನು ಅಗೆದರೆ ಬತ್ತಿರುತ್ತದೆ ಎಂಬ ಅರಿವಿಲ್ಲದ ನೆಲೆಯಲ್ಲಿರುವವನು ಪಾಮರನಾಗಿಯೇ ಉಳಿಯುತ್ತಾನೆ.

ಬಹುಶಃ "ಮಾರಯ್ಯ ಬೀರಯ್ಯ ಕೇಚರ ಗಾವಿಲ ಅಂತರ ಬೆಂತರ ಕಾಳಯ್ಯ ಮಾಳಯ್ಯ ದೂಳಯ್ಯ ಕೇತಯ್ಯ" ಮೊದಲಾದ ಗ್ರಾಮ ದೇವತೆಗಳ ಪೂಜೆ ಮಾಡುವವರನ್ನು ಪಳಿಯುವುದಕ್ಕಾಗಿ ಬಸವಣ್ಣನವರು ಬಿದಿರೆಲೆಯ ಉಪಮೆಯನ್ನು ಬಳಸಿದಂತೆ ಕಾಣುತ್ತದೆ. ಈ ದೈವಗಳನ್ನು ಪೂಜಿಸುವುದೂ ಒಂದೇ, ಬಿದಿರೆಲೆಯನ್ನು ಮೆಲುವುದೂ ಒಂದೇ.

ಬೇಂದ್ರೆಯವರು ಕೇಳಿದಂತೆ, ಕಬ್ಬಿನ ಗಣೆಯು ಡೊಂಕಿರಬಹುದು, ಅದರ ಹಾಲು ಡೊಂಕೆ ? ಎಂದು ಈ ಸಂದರ್ಭದಲ್ಲೂ ಕೇಳಬಹುದು. ಬಿದಿರೆಲೆ ರಸಹೀನವಾಗಿರಬಹುದು, ಅದರ ಕಳಿಲೆ ರಸವತ್ತಾಗಿರುವುದಲ್ಲವೆ ? ಬಿದಿರು ಮೆಳೆಯ ಸಂದಿನಿಂದ ಬಂದ ಮಲೆನಾಡಿಗರನ್ನೂ ಮಂಗಳೂರು - ದಕ್ಷಿಣ ಕನ್ನಡಿಗರನ್ನೂ ಕೇಳಿ ನೋಡಿ. ಕಳಿಲೆಗಿಂತ ರಸವತ್ತಾದ ಸೊಗಸಾದ ಕಾಯಿಪಲ್ಯ ಪ್ರಪಂಚದಲ್ಲೇ ಇಲ್ಲ ಎನ್ನುತ್ತಾರೆ.

### 13. ಇಟ್ಟೆಯ ಹಣ್ಣು ನರಿತಿಂದು ಸೃಷ್ಟಿ ತಿರುಗಿತ್ತೆಂಬಂತೆ

[ವಚನ ಸಂಖ್ಯೆ 578]

ಇಟ್ಟೆ (ಇಟ್ಟಿ Strychnos hux-vomica) ಹಣ್ಣು ವಿಷಪೂರಿತವಾದದ್ದು. ಸಾಧಾರಣ ಕಿತ್ತಳೆ ಹಣ್ಣಿನ ಗಾತ್ರ, ಗಟ್ಟಿಯಾದ ಪೆಡಸು ಸಿಪ್ಪೆ. ಸಿಪ್ಪೆಯೊಳಗೆ ಮೃದುವಾದ ಬಿಳಿತಿರುಳು. ತಿರುಳಿನಲ್ಲಿ ಹತ್ತಿಪ್ಪತ್ತು ಬೀಜಗಳು. ಬೀಜ ಗಟ್ಟಿ, ಚಪ್ಪಟೆ, ಪರ್ತುಲಾಕಾರದ ಗುಂಡಿಗಳಂತಿರುತ್ತವೆ.

ಇಟ್ಟಿ ಸಣ್ಣಮರ. ಮರದ ಒಂದೊಂದು ಭಾಗದಲ್ಲೂ ವಿಷ ಅಡಗಿದೆ. ಸುಮಾರು 20 ಬಗೆಯ ಅಲ್ಕಲಾಯ್ಡ್ (alkoloid) ಸತ್ವಗಳನ್ನು ರಸಾಯನಿಕ ಶಾಸ್ತ್ರ ವಿಶ್ಲೇಷಿಸಿದೇ ತಿಳಿಯದವು ಇನ್ನೂ ಎಷ್ಟೋ ಇವೆ! ಈ ವಿಷಸತ್ವಗಳ ಒಟ್ಟುಗುಣ ಪ್ರಾಣನಾಶನ. ದಕ್ಷಿಣ ಭಾರತದ ಕಾಡು ಜನಾಂಗ ಮರದ ಚಕ್ಕೆಯನ್ನು

ಜಜ್ಜಿ ಮೀನು ವಾಸಿಸುವ ಝರಿಯಲ್ಲಿ ಹಾಕುತ್ತಾರೆ; ಒಂದೆರಡು ನಿಮಿಷಗಳೊಳಗಾಗಿ ಮೀನು ನರದೌರ್ಬಲ್ಯತಾಳಿ ತಾನಾಗಿಯೇ ತೇಲಿ ಬರುತ್ತದೆ. ದಕ್ಷಿಣ ಅಮೆರಿಕದ ಕಾಡುಗಳಲ್ಲೂ ಸ್ಟ್ರಿಕ್‌ನಾಸ್‌ನ ಬೇರೆ ಬೇರೆ ಸ್ಪೀಷೀಸು (species) ಗಳು ಬೆಳೆಯುತ್ತವೆ. ಅಲ್ಲಿನ ಜನಾಂಗ ಅವುಗಳಿಂದ (ಇತರ ಗಿಡಮರಗಳ ತೊಗಟೆಗಳನ್ನೂ ಸೇರಿಸಿ) ಕುರೇರ್ (curare) ಎಂಬ ಪರಮವಿಷವನ್ನು ಕುದಿಸುತ್ತಾರೆ (ಇದಕ್ಕಿಂತಲೂ ಶಕ್ತಿಯುಳ್ಳ ವಿಷವಸ್ತು ಬೇರೊಂದಿಲ್ಲವೆಂದೇ ಇಂದಿನ ವಿಜ್ಞಾನಿಗಳ ಮತ). ಬಾಣದ ತುದಿಗೆ ಇದನ್ನು ಹಚ್ಚಿ ಬಲಿಯಮೇಲೆ ಪ್ರಯೋಗ ಮಾಡುತ್ತಾರೆ. ಬೇಟೆ ಪ್ರಾಣಿ ಒಂದೆರಡು ನಿಮಿಷಗಳೊಳಗಾಗಿ ಸತ್ತುಬೀಳುತ್ತದೆ.

ಆದರೆ ಇಟ್ಟಿಯ ಅಲ್ಕಲಾಯ್ಡುಗಳನ್ನು ಬೇರೆ ಬೇರೆಯಾಗಿ ಗಣಿಸಿದರೆ, ಒಂದೊಂದಕ್ಕೂ ವಿಷ ಶಕ್ತಿಯಿರುವುದಾದರೂ, ಅದರದರ ತೀವ್ರತೆಯೂ ಪರಿಣಾಮ ರೀತಿಯೂ ವ್ಯತ್ಯಾಸವೊಂದಿರುತ್ತದೆ. ಉದಾಹರಣೆಯಾಗಿ ಹಣ್ಣನ್ನೇ ಗಮನಿಸಿ ಬೀಜದಲ್ಲಿ ಅಡಗಿರುವ ಅಲ್ಕಲಾಯ್ಡುಗಳು ತೀವ್ರಪರಿಣಾಮ ತಂದು ಪ್ರಾಣಹಾನಿಯಲ್ಲಿ ಮುಕ್ತಾಯಗೊಳ್ಳುತ್ತದೆ; ಸಿಪ್ಪೆಯ ಅಲ್ಕಲಾಯ್ಡು ವಾಂತಿಭೇದಿಯುಂಟಾಗಿಸುತ್ತದೆ; ತಿರುಳು ಭೌತಿಕಗುಣದಲ್ಲಿ ಎಷ್ಟು ಮೃದುವೋ ಅಲ್ಕಲಾಯ್ಡು ವಿಭಜನೆಯಲ್ಲೂ ಹಾಗೆಯೇ, ಪರಿಣಾಮದಲ್ಲೂ ಹಾಗೆಯೇ. ಕೇಂದ್ರನರಮಂಡಲದ ಕೆಲವು ನಿರ್ದಿಷ್ಟ ಸ್ಥಾನಗಳ ಮೇಲೆ ತಿಳಿಯಾದ ಪರಿಣಾಮ ತರುತ್ತದೆ, ಅದೂ ತಾತ್ಕಾಲಿಕ ಪರಿಣಾಮ.

ಕಾಡುಪ್ರಾಣಿಗಳು ಸಾಧಾರಣವಾಗಿ ಇಟ್ಟಿ ಹಣ್ಣನ್ನು ಮುಟ್ಟವು, ಮೂಸವು. ಆದರೆ ಒಂದೊಂದು ಸಲ – ಬಹುಶಃ ಬೇರೇನೂ ದೊರಕದಿದ್ದ ಸಂದರ್ಭಗಳಲ್ಲೋ ಅಥವಾ ಅನುಭವ ಶೂನ್ಯತೆಯಿಂದಲೋ—ಮೆಲುತ್ತವೆ. ಮೆಲುವ ಭಾಗ ತಿರುಳು. ನಾಲಗೆಯನ್ನು ಸೋಕಿದೊಡನೆಯೆ ಸಿಹಿರುಚಿ ಅನುಭವವಾಗಿ, ಮಾಯವಾಗಿ, ಕಹಿರುಚಿ ನಿಲ್ಲುತ್ತದೆ. ನರಿಯ ನಾಲಗೆ ಹೇಗೋ? ಅಂತೂ ತಿಂದಿತು ಎಂದಿಟ್ಟುಕೊಳ್ಳಿ. ಕೆಲವು ಗಳಿಗೆಗಳೊಳಗಾಗಿ ಅಲ್ಕಲಾಯ್ಡು ಸತ್ವ ನರಮಂಡಲಕ್ಕೆ ಏರಿ ಒಂದು ದಿಗ್ಭ್ರಾಂತ ನೆಲೆಯನ್ನು ಸಿದ್ಧಿಸುತ್ತದೆ. ತಲೆ ತಿರುಗುತ್ತದೆ, ಕಣ್ಣು ಬಿರಿಯುತ್ತದೆ, ಜೊಲ್ಲು ಸುರಿತ ತೀವ್ರವಾಗುತ್ತದೆ. ಆಗ ನರಿ ಒಂದೆಡೆಯಲ್ಲಿ ಬಿದ್ದುಕೊಳ್ಳುತ್ತದೆ. ತನ್ನ ಸುತ್ತುಮುತ್ತು ತನ್ನ ಕೇಂದ್ರದ ಸುತ್ತಲೂ ತಿರುಗುತ್ತಿರುವಂತೆ ಭ್ರಾಂತಿಗೊಳ್ಳುತ್ತದೆ.

14. ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ,
ಆಕಳ ಹಾಲನೆರೆದು, ಜೇನು ತುಪ್ಪವ ಹೊಯ್ದರೆ,
ಸಿಹಿಯಾಗಬಲ್ಲುದೆ, ಕಹಿಯಹುದಲ್ಲದೆ ?

[ವಚನ ಸಂಖ್ಯೆ 627]

ನೀತಿಬೋಧಕರು ಕೆಲವು ಸಲ ಎಲ್ಲೆ ಮೀರಿದ ಭಾವೋದ್ರೇಕದಿಂದ ವ್ಯತಿರಿಕ್ತೋಕ್ತಿಗಳನ್ನಾಡುವುದುಂಟು (ವಚನ ಸಂಖ್ಯೆ 141, 151 ನೋಡಿ). ಇದು ಅವರ ತಪ್ಪಲ್ಲ, ಅವರು ಆರಿಸಿಕೊಂಡ ಉಪಮೆಯ ಜಾಯಮಾನ. ಹುಟ್ಟುಗುಣವನ್ನು ಅಳಿಸಲಾಗದೆಂಬ ಅನುಭವ ಬಸವಣ್ಣನವರಿಗೆ ಇತ್ತು, "ಬೇವು ಬೆಲ್ಲದೊಳಿಡಲೇನು ಫಲಾ?" ಎಂದು ನಿಟ್ಟುಸಿರುಬಿಟ್ಟ ಪುರಂದರದಾಸರಿಗೂ ಇತ್ತು. ಈ ಲೋಕೋಕ್ತಿಯ ರುಚಿಯನ್ನು ನಮ್ಮಲ್ಲನೇಕರು ಉಂಡಿದ್ದೇವೆ. ದುಷ್ಟರನ್ನು ಶಿಷ್ಟರನ್ನಾಗಿ ಮಾರ್ಪಡಿಸುವ ಹವ್ಯಾಸವೂ ಕರಿನಾಯನ್ನು ಬಿಳಿನಾಯನ್ನಾಗಿಸುವ ಹವ್ಯಾಸವೂ ತಕ್ಕಡಿಯಲ್ಲಿ ಸಮತೂಕಗೊಳ್ಳುತ್ತವೆ. ಹೀಗಾಗಿ ದುಷ್ಟರನ್ನು ತಿದ್ದುವುದಕ್ಕೆ ಹೋಗುವುದೂ ಬರಡು ಶ್ರಮ, "ದುಷ್ಟ ಜನ ಸಂಗವನು ತ್ಯಜಿಸು ಮನವೇ" ಎಂದೂ ಬುದ್ಧಿವಾದ ಹೇಳಿಬಿಟ್ಟು ನೀತಿಗಾರರು ಕೈತೊಳೆದುಕೊಂಡರು.

ದುಷ್ಟರನ್ನು ತಿದ್ದಬೇಕಾದರೆ ಅವರನ್ನು ಸೃಷ್ಟಿಸಿದ ದೈವವೇ ಮನಸು ಮಾಡಬೇಕು. ಮನುಷ್ಯ ಪ್ರಯತ್ನದಿಂದ ಸಾಧ್ಯವಲ್ಲ. ಬ್ರಹ್ಮನ ಸೃಷ್ಟಿ ಲೀಲೆಯಲ್ಲಿ ಇಂಥ ಪವಾಡಗಳು ನಡೆದಿವೆ. ಬೇವನ್ನೇ ತೆಗೆದುಕೊಳ್ಳಿ. ಸಾವಿರಕ್ಕೋ ಹತ್ತುಸಾವಿರಕ್ಕೋ ಒಂದು ಕಹಿಯಲ್ಲದ ಬೇವು ಕಾಣಿಸಿಕೊಳ್ಳುತ್ತದೆ. ಇದರ ಎಲೆಯಲ್ಲಿ ಕಹಿಯಿಲ್ಲ, ಹಣ್ಣಿನಲ್ಲಿ ಕಹಿಯಿಲ್ಲ; ಸಿಹಿಯಲ್ಲದಿದ್ದರೂ ಸಪ್ಪೆಯಾಗಿರುತ್ತದೆ. ಇನ್ನಾವ ಬಗೆಯಲ್ಲೂ ಈ ಮರಕ್ಕೂ ಕಹಿಬೇವಿಗೂ ವ್ಯತ್ಯಾಸ ಕಾಣದು.

ಕಹಿಬೇವು ಸಪ್ಪೆಬೇವಾಗುವುದಕ್ಕೆ ಮ್ಯುಟೇಷನ್ (mutation) ಎಂಬ ಕ್ರಿಯೆ ನಡೆದಿರಬಹುದೆಂಬ ಊಹೆ ವಿಜ್ಞಾನಿಗಳಲ್ಲಿದೆ. ಕೃತಕ ಸಾಧನಗಳಿಂದ ಸಂಶೋಧನಾಲಯದೊಳಗೆ ಈ ಕ್ರಿಯೆಯನ್ನು ಪ್ರಯೋಗಾರ್ಥವಾಗಿ ನಡೆಸುವುದು ಸಾಧ್ಯ. ಸಪ್ಪೆಬೇವು ಈ ಮೂಲಕ ಹುಟ್ಟಿದ್ದಂತೂ ಅಲ್ಲ. "ಸ್ವಾಭಾವಿಕತೆಯಲ್ಲಿ ಬೆಳೆಯುವ ಮರಕ್ಕೆ ಈ ಕ್ರಿಯೆಯನ್ನು ನಡೆಸಿದರಾರು ?"

"ಕಹಿ ಬೇವನ್ನು ಯಾರು ಸೃಷ್ಟಿಸಿದನೋ ಅವನೇ !"

"ಸಪ್ಪೆ ಬೇವನ್ನು ಏಕೆ ಹುಟ್ಟಿಸಿದ ?"

ನನಗೆ ಗೊತ್ತಿಲ್ಲ (ವಿಜ್ಞಾನಿಗಳಿಗೆ ಗೊತ್ತಿಲ್ಲದ ವಿಷಯಗಳೇ ಹೆಚ್ಚು. ತಾರ್ಕಿಕರೂ ವೇದಾಂತಿಗಳೂ 'ಅವನ ಲೀಲೆ' ಎನ್ನುತ್ತಾರೆ.)

"ಹೇಗೆ ಹುಟ್ಟಿತು ?"

ಸೂರ್ಯನ ಬೆಳಕಿನಲ್ಲಿ ಲೀನವಾಗಿರುವ X-ಕಿರಣಗಳು ಭ್ರೂಣದಮೇಲೆ ಬೆಳವಣಿಗೆಯ ಯಾವುದೋ ಒಂದು ಘಟ್ಟದಲ್ಲಿ ತಾಕಿರಬೇಕು. ಈ ಆಕಸ್ಮಿಕದ ಮೂಲಕ ಭ್ರೂಣಕಣಗಳಲ್ಲಿರುವ ವರ್ಣತಂತುಗಳು ತಮ್ಮ ಕಾರ್ಯವಿಧಾನವನ್ನು ಮಾರ್ಪಡಿಸಿಕೊಂಡಿರಬೇಕು. ವರ್ಣತಂತುವಿನಲ್ಲಿರುವ ಕಹಿ-ಜೀನ್ (gene) ಗಳು

ಕ್ರಿಯಾಧೀನತೆಯನ್ನು ಪಡೆದುಕೊಂಡಿರಬೇಕು. ಈ ಭ್ರೂಣ ಬೆಳೆದು ಬೀಜವಾಗಿ ಬೀಜದಿಂದ ಮೊಳೆತ ಗಿಡಕ್ಕೆ ಕಪಿತನ ದತ್ತವಾಗದು. ಅದರ ವ್ಯಕ್ತತೆಗೆ ಕಾರಣವಾದ ಜೀನೇ ನಾಶವಾಗಿರುವಾಗ ಕಪಿತನವೆಲ್ಲಿಂದ ಬಂದೀತು? ಈ ಕ್ರಿಯೆಗೆ ಜೀನ್-ಮ್ಯುಟೇಷನ್ ಎನ್ನುತ್ತಾರೆ.

15 ನಾರುಳಿಯ ಹಣಿದರನಾರಾದರೆಯೂ ಆದರೆ ?

[ವಚನ ಸಂಖ್ಯೆ 863]

ನಾರಿಕೇಳ, ನರೇಲ್, ನಾರೆಲ್ ಮೊದಲಾದ ಪದಗಳ ಬುಡಕಟ್ಟಿಗೆ ಸೇರಿದ್ದ ನಾರುಳಿ ಎಂದು ಭಾವಿಸಿದರೆ ಮರದ ಅನನ್ಯತೆ ತೆಂಗು. ಹೀಗೆ ಗ್ರಹಿಸಿದರೂ ಈ ವಚನದ ತಾತ್ಪರ್ಯವನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಂಡಿದ್ದೇನೆಂಬ ನಂಬಿಕೆ ನನಗಿಲ್ಲ.

ತೆಂಗಿನ ಪೂರ್ಣಫಲ ನಾರು ಕವಚದಿಂದ ಆವೃತವಾಗಿದೆಯಲ್ಲವೆ ? 'ಮುಂದೆ ಯಂಕುರಿತ' ಫಲವನ್ನು ಕಾಣಬೇಕಾದರೆ ನಾರುಸಿಪ್ಪೆಯನ್ನು ಕಳಚಬೇಕು. ಇದು ಸುಲಭದಲ್ಲಿ ಸಾಧ್ಯವಾಗದು. ತಕ್ಕ ಆಯುಧಗಳ ಸಹಾಯದಿಂದ ಕ್ರಮವನ್ನರಿತು ಸಿಪ್ಪೆ ಸುಲಿದರೆ ಮಾತ್ರ ಒಳಗೆ ಅಡಗಿರುವ 'ಕಾಯಿ' ಕಣ್ಣಿಗೆ ಬೀಳುತ್ತದೆ. ಈ ಕಾರ್ಯ ಕಷ್ಟವೆಂದು ಅರ್ಧದಲ್ಲೇ ನಿಲ್ಲಿಸಿಬಿಟ್ಟರೆ ಫಲ ದೊರಕದು. ಪೂರ್ತಿಯಾಗಿ ನಾರನ್ನು ಕಳಚಿದರೆ ಮಾತ್ರ "ಫಲತಪ್ಪದು," ಎಂದರೆ ಗುರಿಯನ್ನು ಮುಟ್ಟಿದಂತಾಗುತ್ತದೆ.

ಆದದ್ದರಿಂದ ಸಾಧಕನಾದವನು ಸಾಧನೆಯನ್ನು ಅರ್ಧದಾರಿಯಲ್ಲಿ ಬಿಟ್ಟುಬಿಡುವುದು ನಿಸ್ಸಾರ್ಥಕ. ಗುರಿಮುಟ್ಟಬೇಕಾದರೆ "ಮಾಟವಹೀತು" (ಸಾಧನಮಾರ್ಗದ ಮರ್ಮಗಳನ್ನು ತಿಳಿದುಕೊಂಡು) 'ಸ್ವಯ' ವಾಗಬೇಕು (ತಲ್ಲೀನನಾಗಬೇಕು). ಹೀಗೆ ಮಾಡಿ ಗುರಿಯನ್ನು ತಲುಪಿದವನೇ "ಅಚ್ಚ ಶರಣ."

# ರತಿ

**ಮೋಗರವಳ್ಳಿ ರಮೇಶ್**

ನಿಮ್ಮೆಲ್ಲರ ಭ್ರಮೆಯಂತೆ ನಾನು
ಪುರಾಣ ಕಥೆಗಳ ದೇವಕನ್ನಿಕೆಯಲ್ಲ,
ಸಮುದ್ರಗರ್ಭ ಜನ್ಯೆಯಲ್ಲ,
ನಕ್ಷತ್ರಗಳ ಜೊತೆಗೆ ಕುಲುಕುವ ಮುಗಿಲ ಮಲ್ಲಿಗೆಯ ಬಳ್ಳಿ ನಾನಲ್ಲ.
ಸಾಗರದ ಎದೆ ಬೆಳಗಲೆಂದು
ಹುಣ್ಣಿಮೆಯ ಚಂದಿರನ ಕಿರಣಗಳು
ನೆಲದ ತೊಡೆಗೆ ನನ್ನ ತರಲಿಲ್ಲ,
ನನ್ನ ಪೂರ್ವಜ ಚಂದ್ರನಲ್ಲ.

ನನ್ನ ಹುಟ್ಟು :
ಪ್ರಕ್ಷುಬ್ಧ ಗಾಳಿ ಬೀಸುವ ಅವಿಶ್ರಾಂತ ಮನದ ನೆಲದಿಂದ,
ಜಾಗೃತಿಯ ಜಲ ಹರಿವ ಸುಷುಪ್ತಿಯ ಬೆಳಗಿದ ಭಾಗಗಳಿಂದ
ನಾ ಬಂದೆ.
ಮಾನವನ ಎದೆಯೊಳಡಗಿರುವ
ನಿಷ್ಫಲಿತ ಬಯಕೆಗಳ ವಿಚಲಿತ ಸಮುದ್ರದಲ್ಲಿ
ನಾ ಜನ್ಮ ತಾಳಿದೆ.

ನನ್ನ ಕಾರ್ಯ :
ಒಳಗೊಳಗೇ ಬೆಳೆವ ಕಾಮದುಬ್ಬರಕೆ ಮನುಷ್ಯ ವಶನಾದಾಗ
ತನ್ನೊಳಗೆ ಭುಗಿಲೆದ್ದ ಜ್ವಾಲೆಯನು ಗಂಟಲಿಗೆ ತಂದು ಕರೆಯುತ್ತಾನೆ
ನನ್ನ.
ಅವನ ಕರೆಗೆ ಓ ಗೊಡುತ್ತೇನೆ,
ಹೊರಹೊಮ್ಮುವ ಯೌವನದಲ್ಲಿ ಪ್ರಕಾಶಿಸುತ್ತಾ ಹುಟ್ಟುತ್ತೇನೆ.
ನಗ್ನಳಾಗಿ ಹಿಮದಂತೆ ಬಿಳುಪಾಗಿ ಹುಟ್ಟುತ್ತೇನೆ
ಪುರುಷರ ಮನದ ತಳಾತಳದಲ್ಲಿ.

ಭ್ರಾಮಕ ಲೋಕದಿಂದ ಭೂಮಿಗಿಳಿಯುತ್ತೇನೆ,
ದಿಗ್ವಿಜಯ ಬಾರಿಸುತ್ತೇನೆ,
ದುಃಖಿತ ಮನುಜ ಕುಲವನ್ನೇ ಸಂತೈಸುತ್ತೇನೆ
ಈ ನನ್ನ ತುಂಬು ಮೊಲೆಗಳಿಗೊತ್ತಿ.

ನನ್ನ ಸ್ವರೂಪ :
ಪ್ರತಿ ಹೃದಯದೊಳಗುರಿವ ಜ್ವಾಲೆಯ
ಮೊನಚು ತುದಿ ನಾನು.
ಹೃದಯದೊಳಡಗಿರುವ ಬೆಳಕು ನಾನು.
ಪುರುಷರ ಮನದಲ್ಲಿ ಆವಾಸಗೊಂಡಿರುವ
ಸ್ತ್ರೀತ್ವದ ಸಾರ ನಾನು.
ನಾನು—ರತಿ.

(ಶ್ರೀ ರಾಮಧಾರಿ ದಿನಕರಸಿಂಗ್ ಅವರ 'ಊರ್ವಶಿ' ಕಾವ್ಯಭಾಗದಿಂದ ಆಧಾರಿತ)

# ನಮ್ಮ ಹಳ್ಳಿಗಳು: ಅಂದು - ಇಂದು
## (ಆಧುನೀಕರಣದಲ್ಲಿ ಒಂದು ಅಭ್ಯಾಸ)

**ಎಂ. ಚಿದಾನಂದಮೂರ್ತಿ**

ಭಾರತದಲ್ಲಿ ಐದೂವರೆ ಲಕ್ಷಕ್ಕೆ ಮೇಲ್ಪಟ್ಟು ಹಳ್ಳಿಗಳಿವೆಯೆಂದು ಲೆಕ್ಕ ಹಾಕಿದ್ದಾರೆ. ದೇಶದ ಸುಮಾರು 55 ಕೋಟಿ ಜನಸಂಖ್ಯೆಯಲ್ಲಿ ಸುಮಾರು 44 ಕೋಟಿಜನ ಗ್ರಾಮಾಂತರ ನಿವಾಸಿಗಳು. ಎಂದರೆ ದೇಶದ ಶೇಕಡ 80 ರಷ್ಟು ಜನ ಹಳ್ಳಿಯವರು ಎಂಬುದನ್ನು ನೆನೆದಾಗ ಇಂದಿಗೂ ಭಾರತವು ಹಳ್ಳಿಗಳ ದೇಶ ಎಂಬ ಉಕ್ತಿಯಲ್ಲಿ ಯಾವುದೇ ಉತ್ಪ್ರೇಕ್ಷೆಯೂ ಇಲ್ಲವೆಂಬುದು ಸ್ಪಷ್ಟವಾಗಿಯೇ ಇದೆ.

ದೇಶದ ಜನಸಂಖ್ಯೆ ಹೆಚ್ಚುತ್ತ, 'ನಾಗರೀಕತೆ' ಬೆಳೆದಂತೆ ಪಟ್ಟಣಗಳ ಸಂಖ್ಯೆಯೂ ಹೆಚ್ಚಿದೆ. ವಿದ್ಯಾವಂತರು, ಶ್ರೀಮಂತರು, ನಿರುದ್ಯೋಗಿಗಳು, ಇಂದು ಹೆಚ್ಚುಹೆಚ್ಚಾಗಿ, ನಾನಾ ಕಾರಣಗಳಿಂದ, ಪಟ್ಟಣಗಳಿಗೆ ಬಂದು ನೆಲೆಸುತ್ತಿದ್ದಾರೆ. ಕ್ರಿ. ಶ. 1881 ರಲ್ಲಿ ದೇಶದ ಜನಸಂಖ್ಯೆಯ ಒಟ್ಟು ಭಾಗದಲ್ಲಿ ಶೇಕಡ 8 ರಷ್ಟು ಮಾತ್ರ ಪಟ್ಟಣ ನಿವಾಸಿಗಳಾಗಿದ್ದು ಉಳಿದ ಶೇಕಡ 92ರಷ್ಟು ಜನ ಹಳ್ಳಿಗಳಲ್ಲಿದ್ದರು. ಪಟ್ಟಣಗಳ ಮತ್ತು ಪಟ್ಟಣಿಗರ ಸಂಖ್ಯೆ ಬೆಳೆದಿದೆ ಮತ್ತು ಬೆಳೆಯುತ್ತ ಹೋಗುತ್ತದೆ ಎಂಬುದನ್ನು ಮೇಲಿನ ಅಂಕಿ ಅಂಶಗಳು ಖಚಿತ ಪಡಿಸುತ್ತವೆ.

### ಹಳ್ಳಿ, ಗ್ರಾಮ, ಪಟ್ಟಣ

ಮಲೆನಾಡಿನ ಹಳ್ಳಿಗಳಲ್ಲಿ ಒಂದರಿಂದ ಮೂವತ್ತು ನಲವತ್ತು ಮನೆಗಳಿರಬಹುದು. ಬಯಲು ಸೀಮೆಯಲ್ಲಿ ಇಪ್ಪತ್ತು ಮೂವತ್ತರಿಂದ ಏಳುನೂರು ಎಂಟು ನೂರರವರೆಗೆ ಮನೆಗಳಿರಬಹುದು. 'ತಾಂಡ' ಎನ್ನುವುದು ಒಂದು ಹಳ್ಳಿಗೆ ಅದರ ಒಂದು ಭಾಗದಂತೆ,ಉಪಗ್ರಹದಂತೆ ಅಂಟಿಕೊಂಡಿರುವ ಸಣ್ಣ ಬೀಡನ್ನು ಸೂಚಿಸುತ್ತದೆ. ಕೆಲವು ಕಡೆ ಇದನ್ನೇ 'ಹಟ್ಟಿ' ಎಂದು ಕರೆಯುತ್ತಾರೆ. 'ಹಟ್ಟಿಗಳು' ಪ್ರತ್ಯೇಕ ಸಣ್ಣ ಹಳ್ಳಿಗಳೂ ಆಗಿರುವುದುಂಟು. 'ತಾಂಡ', 'ಹಟ್ಟಿ'ಗಳಲ್ಲಿ ಬಹುತೇಕ ಬಹಳ ಹಿಂದುಳಿದ ಜನ ವಾಸಿಸುತ್ತಾರೆ. 'ಹಳ್ಳಿ' ಸಣ್ಣ ಊರಾದರೆ, 'ಗ್ರಾಮ' ಅದಕ್ಕಿಂತ ದೊಡ್ಡ ಊರು. ಗ್ರಾಮಕ್ಕಿಂತ ದೊಡ್ಡದನ್ನು 'ದೊಡ್ಡಗ್ರಾಮ' ಎಂದು ಬಿಡುತ್ತಾರೆ. ದೊಡ್ಡಗ್ರಾಮ ಒಂದು ರೀತಿಯಲ್ಲಿ ಹಳ್ಳಿಗೂ ಪಟ್ಟಣಕ್ಕೂ ಮಧ್ಯಸ್ಥವಾಗಿರುವ ಊರು. 'ಗ್ರಾಮ'ದಲ್ಲಿ ಇನ್ನೂರರಿಂದ ನಾನೂರರವರೆಗೆ

ಮನೆಗಳಿದ್ದರೆ, ದೊಡ್ಡ ಗ್ರಾಮದಲ್ಲಿ ಐನೂರರಿಂದ ಸಾವಿರ ಮನೆಗಳಿರಬಹುದು. ಇದು ಬಹಳ ಸ್ಥೂಲವಾದ ಕ್ರಮ.

**ಹಳ್ಳಿ**

ದೂರಕ್ಕೆ ಹಳ್ಳಿ ಮರಗಳ ಗುಂಪಿನಂತೆ ತೋರಿರುತ್ತದೆ. ಹತ್ತಿರ ಹೋಗುತ್ತಿದ್ದಂತೆ ಮೊದಲು ಹೊಲ ಗದ್ದೆ ತೋಟಗಳು, ನಂತರಹಳ್ಳಿಯ ಹೊರ ವಲಯದಲ್ಲಿ 'ಕಣ'ಗಳು (ಧಾನ್ಯವನ್ನು ಒಕ್ಕುವ ಮತ್ತು ದನಗಳಿಗೆ ಮೇವನು ಒಟ್ಟಿರುವ ಜಾಗ), ಅಲ್ಲೇ ಗಮ್ಮೆನ್ನುವ ಗೊಬ್ಬರದ ಗುಂಡಿಗಳು, ತಿಪ್ಪೆಗಳು ಕಾಣಿಸುತ್ತವೆ. ಊರಿಗೆ ಅನೇಕ ಪ್ರವೇಶ ದ್ವಾರಗಳಿದ್ದರೂ, ಶಿಷ್ಟಾಚಾರದ (ಉದಾ: ಮದುವೆ) ಸಂದರ್ಭಗಳಲ್ಲಿ ಹೊರಗಿನ ಜನರ ಪ್ರವೇಶವಾಗುವುದು 'ಊರಬಾಗಿಲು' ಅಥವಾ ಅಗಸೇ ಬಾಗಿಲು ಮೂಲಕವಾಗಿಯೇ. ಇದು ಊರಿನ ಅಧಿಕೃತ ಪ್ರವೇಶ ದ್ವಾರ ಮತ್ತು ಅದರ ಸೂಚಕವಾಗಿ ಆ ದ್ವಾರದ ಅಕ್ಕಪಕ್ಕದಲ್ಲಿ ಎರಡು 'ಕರುಗಲ್ಲು' ಗಳನ್ನು ನೆಟ್ಟಿರುತ್ತಾರೆ. ಹಿಂದೆ ಊರಿನ ಬೇರೆ ಬೇರೆ ಜಾತಿಯ ಜನ ಬೇರೆ ಬೇರೆ 'ಕೇರಿ'ಗಳಲ್ಲಿ ವಾಸಿಸುತ್ತಿದ್ದರು. (ಈಗಲೂ ಆ ಪದ್ಧತಿ ಮಾಯವಾಗಿಲ್ಲ). ಊರಿನ ಹೊರಗೆ, ಸಣ್ಣ ಗುಡಿಸಲುಗಳಲ್ಲಿ ಇತರರಿಗೆ ಅಸ್ಪೃಶ್ಯರಾದ ಹರಿಜನರು ಪ್ರತ್ಯೇಕ ಕೇರಿಯಲ್ಲಿ ವಾಸಿಸುತ್ತಾರೆ. ಅಸ್ಪೃಶ್ಯತೆ ಸರ್ಕಾರದ ಕಾನೂನಿನಲ್ಲಿ ಒಂದು ಅಪರಾಧವಾದರೂ ಇಂದಿಗೂ ಹಳ್ಳಿಗಳಲ್ಲಿ ಅದು ಬಳಕೆಯಲ್ಲಿರುವುದು ಆ ಕಾನೂನು ಇನ್ನೂ ಹಳ್ಳಿಯವರೆಗೆ ತಲಪಿಲ್ಲವೆಂಬುದನ್ನು ಹೇಳುತ್ತದೆ.

**ಜಾತಿಗಳ ಶ್ರೇಣಿ**

ಭಾರತದ ಎಲ್ಲ ಹಳ್ಳಿಗಳಲ್ಲಿ ಎದ್ದು ಕಾಣುವ ಅಂಶವೆಂದರೆ ಅಲ್ಲಿರುವ ಜಾತಿವ್ಯವಸ್ಥೆ ಮತ್ತು ಸಾಮಾಜಿಕ ತರ ತಮಗಳ ಶ್ರೇಣಿ ಅಥವಾ ಅನುಕ್ರಮಣಿಕೆ. ಉದಾಹರಣೆಗೆ, ಎಲ್ಲ ಜಾತಿಗಳಿಗಿಂತ ಮೇಲಿರುವವನು ಬ್ರಾಹ್ಮಣ. ಅಲ್ಲಿಂದ ಕೆಳಗೆ ಬಂದರೆ ವೀರಶೈವ. ವೀರಶೈವರಲ್ಲೇ ಅನೇಕ ಉಪಜಾತಿಗಳು ಸಾಮಾಜಿಕ ಶ್ರೇಣಿಯಲ್ಲಿರುತ್ತವೆ. ಉದಾಹರಣೆಗೆ, ಪೌರೋಹಿತ್ಯವನ್ನು ಮಾಡುವ ಜಂಗಮರದು ('ಐನೋರು') ಆ ಉಪಜಾತಿಗಳಲ್ಲಿ ಮೊದಲನೆಯದು. ಉಳಿದ 'ಭಕ್ತ'ರಲ್ಲಿ ದೇವರ ಪೂಜೆ ಮಾಡುವ ಪೂಜಾರಿ ನಂತರ ಬರುತ್ತಾನೆ. ಬಣಜಿಗ, ಒಕ್ಕಲುತನದವ ಇವರಲ್ಲಿ ಯಾರು ಮೇಲು ಎಂಬ ಬಗ್ಗೆ ಎಲ್ಲಕಡೆಯಲ್ಲೂ ಏಕಾಭಿಪ್ರಾಯವಿರುವುದಿಲ್ಲ. ಊರಿನಲ್ಲಿ ಯಾರು ಪ್ರಬಲರೋ ಅವರೇ ಶ್ರೇಷ್ಠರಾಗಬಹುದು. ನೇಕಾರ, ಕ್ಷೌರಿಕ, ಕುಂಬಾರ (ಇವರೆಲ್ಲ ವೀರಶೈವರೇ) ಇವರು ಒಂದು ಕ್ರಮದಲ್ಲಿ ಬರುತ್ತಾರೆ. ಲಿಂಗಾಯತರನ್ನು ಬಿಟ್ಟರೆ ಊರಿನ ಅಕ್ಕಸಾಲಿ, ಬಡಗಿ, ಕಮ್ಮಾರ ಬರುತ್ತಾರೆ.

ಇವರೆಲ್ಲ ಒಂದೇ ಜಾತಿಯವರಾದರೂ, ತರತಮದಲ್ಲಿ ಆ ಅನುಕ್ರಮದಲ್ಲಿ ಬರುತ್ತಾರೆ. ಇವರು ಬ್ರಾಹ್ಮಣರಂತೆ ಜನಿವಾರವನ್ನು ಹಾಕುವುದರಿಂದ, ಅವರನ್ನೇ ಕೇಳಿದರೆ ತಾವು ಲಿಂಗಾಯತರಿಗಿಂತ ಶ್ರೇಷ್ಠವೆಂದು ಹೇಳಿಕೊಳ್ಳಬಹುದು. ಆದರೆ ಜನಸಂಖ್ಯೆ ಮತ್ತು ಐಶ್ವರ್ಯಗಳಲ್ಲಿ ಇವರು ಪ್ರಬಲರಲ್ಲ ; ಮತ್ತು ರೈತರಾದ ಲಿಂಗಾಯತರನ್ನು ಮತ್ತು ಇತರರನ್ನು ಅವಲಂಬಿಸಿಯೇ ಬದುಕಬೇಕಾದ್ದರಿಂದ, ತಮ್ಮ ಶ್ರೇಷ್ಠತ್ವವನ್ನು ಘೋಷಿಸಿಕೊಳ್ಳುವುದಿಲ್ಲ ; ಮತ್ತು ಒಟ್ಟಾರೆ ತಾವು ಲಿಂಗಾಯತರಿಗಿಂತ ಕೆಳಗಿನವರು ಎಂಬಂತೆ ವ್ಯವಹಾರದಲ್ಲಿ ನಡೆದುಕೊಳ್ಳುತ್ತಾರೆ. ಪಿಂಜಾರ (ಕನ್ನಡ ಮಾತನಾಡುವ ಮುಸಲ್ಮಾನ), ಕುರುಬ, ಬೇಡ, ಹೊಲೆಯ ಇತ್ಯಾದಿಗಳು ಕೊನೆಯಲ್ಲಿ ಬರುತ್ತವೆ.

**ಜಾತಿವ್ಯವಸ್ಥೆ ನಿಷ್ಠುರ**

ಈ ಜಾತಿ, ಉಪಜಾತಿಗಳ ವ್ಯವಸ್ಥೆ ಸಾಮಾನ್ಯವಾಗಿ ನಿಷ್ಠುರವಾಗಿರುತ್ತದೆ. ಒಂದು ಜಾತಿಗೂ ಇನ್ನೊಂದು ಜಾತಿಗೂ ಮದುವೆಯ ವ್ಯವಹಾರವಿರುವುದೇ ಇಲ್ಲ. ಹೆಣ್ಣು ಕೊಟ್ಟು ಹೆಣ್ಣು ತರುವಾಗ ತಮ್ಮ ಜಾತಿ, ಉಪಜಾತಿಯನ್ನೇ ನೋಡುತ್ತಾರೆ. ಉದಾಹರಣೆಗೆ ಬಣಜಿಗ, ಕ್ಷೌರಿಕನನ್ನೇ ತೆಗೆದುಕೊಳ್ಳೋಣ. ಇಬ್ಬರೂ ಲಿಂಗಾಯತರೇ ಆದರೂ, ಕ್ಷೌರಿಕನದು ಹಳ್ಳಿಯವರ ಕಣ್ಣಲ್ಲಿ 'ಕೊಳಕು' ಕೆಲಸ; ವ್ಯಾಪಾರಿ ಬಣಜಿಗನದು ಹೆಚ್ಚು 'ಶುದ್ಧ'. ಜೊತೆಗೆ ಬಣಜಿಗನ ಕೈಯಲ್ಲಿ ಹೆಚ್ಚು ದುಡ್ಡಿರುತ್ತದೆ. ಆದ್ದರಿಂದ ಬಣಜಿಗನು ಕ್ಷೌರಿಕನಿಗಿಂತ ಮೇಲಿನವನಾಗುತ್ತಾನೆ. ಅಕ್ಕಸಾಲಿಗ ಚಿನ್ನದ ಕೆಲಸ ಮಾಡುವುದರಿಂದ ಅವನು ಬಡಗಿ ಕಮ್ಮಾರರಿಗಿಂತ ಶ್ರೇಷ್ಠನಾಗುತ್ತಾನೆ. ಬಡಗಿಗಿಂತ ಕಮ್ಮಾರನದು ಕೈಮೈ ಕೊಳಕಾಗುವ ಕೆಲಸ. ಆದ್ದರಿಂದ ಕಮ್ಮಾರ ಬಡಗಿಗಿಂತ ಕೆಳಗೆ ಬರುತ್ತಾನೆ. ಕುರುಬ, ಬೇಡರು ಮಾಂಸಾಹಾರಿಗಳಾದ್ದರಿಂದ ಇನ್ನೂ ಕೆಳಗೆ ಬರುತ್ತಾರೆ. ಮಾಂಸಾಹಾರ ಮಾಡುವ ಜಾತಿಯಲ್ಲೇ ಯಾರಾದರೂ ಮಾಂಸ ಬಿಟ್ಟಿದ್ದರೆ ಆ ವ್ಯಕ್ತಿ ತಾನು ಶ್ರೇಷ್ಠನೆಂದು ಹೇಳಿಕೊಳ್ಳುವುದೂ ಉಂಟು. ಹೀಗಾಗಿ ಮೇಲು ಉಪಜಾತಿಯವರು ಹೆಣ್ಣನ್ನು ಮೇಲು ಉಪಜಾತಿಯಲ್ಲೇ ಹುಡುಕುತ್ತಾರೆ. ಕೆಳ ಉಪಜಾತಿಯವರೇನೋ ಮೇಲು ಉಪಜಾತಿಯವರಲ್ಲಿ ಮದುವೆ ಸಂಬಂಧ ಮಾಡಲು ಬಯಸಬಹುದು. ಆದರೆ ಅಂತಹ ಸಂಬಂಧ ಸಾಧ್ಯವಿಲ್ಲವಾದ್ದರಿಂದ ತಮ್ಮ ಉಪಜಾತಿಯವರಲ್ಲೇ ಮಾಡಿಕೊಳ್ಳಬೇಕಾಗುತ್ತದೆ.

ಅಕಸ್ಮಾತ್ ಬೇರೆ ಬೇರೆ ಉಪಜಾತಿಗಳಲ್ಲಿ ಮದುವೆ ನಡೆದರೂ ಅದೊಂದು ಸುದ್ದಿ ಆಗುತ್ತದೆ: ಜನ ಒಟ್ಟಾರೆ ಅದನ್ನು ಪ್ರಿಯವಾಗಿ ನೋಡುವುದಿಲ್ಲ. ಜಾತಿ ಜಾತಿಗಳ ಮಧ್ಯೆ ವಿವಾಹ ಹಳ್ಳಿಗಳಲ್ಲಿ ನಡೆಯುವುದು ಇನ್ನೂ ಅಪೂರ್ವ

ಸಂಗತಿಯೇ ಆಗಿದೆ. ಯಾವುದನ್ನಾದರೂ ಹಳ್ಳಿಯವರು ಕ್ಷಮಿಸಿಯಾರು : ಆದರೆ ಜಾತಿಗೆ ಸಂಬಂಧಿಸಿದ ವಿವಾಹ ನಿಯಮಗಳನ್ನು ಮೀರಿದವರನ್ನು ಅವರು ಕ್ಷಮಿಸಲಾರರು. ಇದಕ್ಕೆ ಒಂದು ಸಣ್ಣ ನಿದರ್ಶನವನ್ನು ತೆಗೆದುಕೊಳ್ಳಬಹುದು. ಒಬ್ಬ ಲಿಂಗಾಯತ ತನ್ನ ಮತದ ನಿಯಮಕ್ಕೆ ವಿರುದ್ಧವಾಗಿ ಮಾಂಸಾಹಾರ ಮದ್ಯಪಾನ ಮಾಡುತ್ತಿದ್ದಾನೆಂದು ತಿಳಿದೂ ಜನ ಅವನ ಮನೆಗೆ ಹೋಗಬಹುದು, ಅವನನ್ನು ತಮ್ಮ ಮನೆಯ ಒಳಕ್ಕೂ ಬಿಟ್ಟುಕೊಳ್ಳಬಹುದು. ಅವನಿಗೆ ಬಹಳ ಹೆಚ್ಚೆಂದರೆ, ಅವನ ಹೆಣ್ಣು ಮಕ್ಕಳು 'ಖರ್ಚಾಗುವುದು' ಕಷ್ಟವಾಗಬಹುದು. (ಅವನು ಶ್ರೀಮಂತನಾಗಿದ್ದರೆ ಅದೂ ಕಷ್ಟವಾಗಲಾರದು) ಆದರೆ ಅವನು ಲಿಂಗಾಯತೇತರಲ್ಲಿ ಅಥವಾ ಬೇರೊಂದು ಲಿಂಗಾಯತ ಉಪಜಾತಿಯಲ್ಲಿ ಮದುವೆ ಸಂಬಂಧ ಮಾಡಿದರೆ ಅದು ಹಳ್ಳಿಯವರಿಗೆ ಬಹಳ ಅಸಂತೋಷವನ್ನು ತರುತ್ತದೆ. ಆದ್ದರಿಂದಲೇ ಭಾರತದಲ್ಲಿ ಜಾತಿಯ ನಿಯಮಗಳು ಮತದ ನಿಯಮಗಳಿಗಿಂತ ಕಠಿಣವಾಗಿರುತ್ತವೆಯೆಂದು ಸಮಾಜಶಾಸ್ತ್ರಜ್ಞರು ಅಭಿಪ್ರಾಯಪಟ್ಟಿರುವುದು.

## ಹಳ್ಳಿಯಲ್ಲಿ ಸಾಮರಸ್ಯ

ಹೀಗೆ ಜಾತಿಗಳು ಹಳ್ಳಿಯನ್ನು ಒಡೆದು ಹೋಳುಮಾಡಿರುವಂತೆ ಕಂಡರೂ, ನಿಜವಾದ ಚಿತ್ರ ಅಂತಹ ಗಾಬರಿ ಹುಟ್ಟಿಸುವುದೇನೂ ಅಲ್ಲ: ಬೇರೆ ಬೇರೆ ಜಾತಿಯ ಜನ ಸೌಹಾರ್ದದಿಂದ ನಡೆದುಕೊಳ್ಳುವುದು ಸಾಮಾನ್ಯ ನಿಯಮ. (ಅಪವಾದವೆಂಬಂತೆ ಘರ್ಷಣೆಗಳೂ ಉಂಟು). ಕುರುಬ, ಬೇಡರ ದೇವರ ಉತ್ಸವಗಳಿಗೆ ಉಳಿದ ಜನ ಅಷ್ಟೇ ಸಂಭ್ರಮದಿಂದ ಬರುತ್ತಾರೆ. ಮುಸಲ್ಮಾನರ ಹಬ್ಬಗಳಲ್ಲಿ ಹಿಂದೂಗಳು ಪಾಲುಗಾರರಾಗುತ್ತಾರೆ. ಯಾರದೋ ಮನೆಯಲ್ಲಿ ಮದುವೆ ಆದರೆ, ಸಾವು ಘಟಿಸಿದರೆ ಅದು ಇಡೀ ಊರಿಗೆ ಸಂಬಂಧಿಸಿದ ಸಂಗತಿಯಾಗುತ್ತದೆ. ಬೇರೆ ಬೇರೆ ಜನರ ಸಹಕಾರ ಕೂಡಿಬಂದು ಕೆಲಸಗಳು ನಡೆದುಹೋಗುತ್ತವೆ.

## ಈಗಲೂ ಸ್ವಲ್ಪ ನಿಜ

ಮೂವತ್ತು ವರ್ಷಗಳ ಹಿಂದೆ ಬಹಳ ನಿಜವಾಗಿದ್ದ ಮೇಲಿನ ಮಾತುಗಳು ಈಗಲೂ ತಕ್ಕಮಟ್ಟಿಗೆ ನಿಜವಾಗಿಯೇ ಉಳಿದಿವೆ. ಆಧುನಿಕ ನಾಗರಿಕತೆಯ ಪ್ರವೇಶವಾಗಿ ಹಳ್ಳಿಯವರ ಬಾಳಿನಲ್ಲಿ ಅನೇಕ ಮಾರ್ಪಾಟುಗಳಾಗಿವೆ. ಈ ಮಾರ್ಪಾಟುಗಳು ಒಳ್ಳೆಯದಕ್ಕೋ ಕೆಟ್ಟದಕ್ಕೋ ಎಂಬುದನ್ನು ನಿರ್ಣಯಿಸುವುದು ಕಷ್ಟ. ಆದರೆ ಮಾರ್ಪಾಟುಗಳು ಕಾಣುತ್ತಿವೆ. ಹಿಂದೆ ಹಳ್ಳಿಗಳಲ್ಲಿ ವ್ಯಕ್ತಿ ಗುಂಪಿನ ಭಾಗವಾಗಿ ಬದುಕುತ್ತಿದ್ದ. ಈ ದಿನ ಅವನು ತನ್ನ ವ್ಯಕ್ತಿತ್ವದ ಅರಿವನ್ನು ಪಡೆಯಲು ಯತ್ನಿಸುತ್ತಿದ್ದಾನೆ. ಹಣ ಯಥೇಷ್ಟವಾಗಿ ಬಳಕೆಯಲ್ಲಿದ್ದು ಅದು ನಿಜ ಜೀವನದಲ್ಲಿ

ಪ್ರಮುಖಪಾತ್ರವನ್ನು ವಹಿಸುತ್ತಿರುವ, ಮೌಲ್ಯಗಳನ್ನು ನಿರ್ಧರಿಸುತ್ತಿರುವ ಈ ಕಾಲದಲ್ಲಿ ಸಹಜವಾಗಿಯೇ ಹಳ್ಳಿಯುವನೂ ಹಣದ ಬಗ್ಗೆ ಜಾಗ್ರುತನಾಗುತ್ತಿದ್ದಾನೆ. ಹಳ್ಳಿಗಳಲ್ಲಿ ಹಿಂದಿನಂತೆ ಜನರ ಸಹಕಾರ ದೊರಕುತ್ತಿಲ್ಲವೆಂದು ಹಿರಿಯರು ಗೊಣಗುತ್ತಾರೆ. ಆಯಾ ಜಾತಿಗಳ ಜನ–ರಾಜಕೀಯದಲ್ಲಿ ನಡೆಯುವುದನ್ನು ಅನುಕರಿಸಿ–ತಾವು ಒಗ್ಗಟ್ಟಾಗಿಲ್ಲದಿದ್ದರೆ ಉಳಿಗಾಲವಿಲ್ಲವೆಂದು ಆಡಿಕೊಳ್ಳುತ್ತಾರೆ. ಚುನಾವಣೆಗಳು ಜನರ ಜಾತಿಪ್ರಜ್ಞೆಯನ್ನು ಹೊರತಂದಿವೆ. ಒಮ್ಮೊಮ್ಮೆ ಅದು ವ್ಯವಹಾರಕ್ಕೂ ಬಳಕೆಯಾಗಿ ಅನೇಕ ಅಹಿತ ಪ್ರಸಂಗಗಳನ್ನು ಸೃಷ್ಟಿಸಿರುವುದೂ ಉಂಟು. ಮೇಲು ಜಾತಿಯವರಿಗೆ ಕೆಳಜಾತಿಯವರು ಎಚ್ಚರಗೊಳ್ಳುವುದು, ಒಟ್ಟಾಗುವುದು ಇಷ್ಟವಾಗುವುದಿಲ್ಲ. ಆ ಕಾರಣದಿಂದ ಅಂತಹ ಸಂಘಟನೆಗಳಿಗೆ ಇತರ ಜನರ ಸಹಕಾರ ದೊರೆಯುವುದು ಕಷ್ಟ. ವಿದ್ಯಾವಂತರು ತಾವು ಸೇರಿರುವ ಕೆಳವರ್ಗಗಳ ಜಾತಿಗಳ ಅನುಕ್ರಮಣಿಕೆಯನ್ನು ಪ್ರಶ್ನಿಸಿದಾಗ, ಆ ಜಾತಿಯ ಹಿರಿಯರು ಬೆರಗಿನಿಂದ ಕೇಳುತ್ತಾರೆ. ತಾವಲ್ಲದಿದ್ದರೂ ತಮ್ಮ ಮಕ್ಕಳಾದರೂ ಸಮಾನ ವಾತಾವರಣದಲ್ಲಿ ಬದುಕಿಯಾರೇನೋ ಎಂಬ ಆಸೆಯನ್ನು ಬೆಳೆಸಿಕೊಳ್ಳುತ್ತಾರೆ. ಆಧುನಿಕತೆ ಹಳ್ಳಿಯ ಬಾಳಿನಲ್ಲಿ ಏನು ಪಾತ್ರವನ್ನು ವಹಿಸಿದೆ ಎಂಬುದನ್ನು ಮುಂದೆ ವಿಸ್ತಾರವಾಗಿ ನೋಡುವುದರಿಂದ ಅದನ್ನು ಇಲ್ಲಿ ಬೆಳಸುವುದಿಲ್ಲ.

**ಹಳ್ಳಿಯ ದೇವಾಲಯ**

ಹಳ್ಳಿಯಲ್ಲಿ ಬಹು ಮುಖ್ಯವಾದ ಭಾಗವೆಂದರೆ ಊರಿನ ದೇವಾಲಯ. ಹಳ್ಳಿಯಲ್ಲಿ ಕರಿಯವ್ವ, ಮಾರೆವ್ವ, ಮುಂತಾದ 'ಸಣ್ಣ' ದೇವರಿಗೆ ದೇವಾಲಯಗಳಿದ್ದರೂ ಎಲ್ಲಕ್ಕಿಂತ ಮುಖ್ಯವಾಗಿರುವ ಒಂದು ದೇವಾಲಯವಿರುತ್ತದೆ. ಆ ದೇವಾಲಯದ ಸುತ್ತ ಊರಿನ ಎಲ್ಲ ಚಟುವಟಿಕೆಗಳು ಹರಡಿಕೊಂಡಿರುತ್ತವೆ. ಆ ದೇವರು ತಮ್ಮನ್ನು ಕಷ್ಟದ ಸಮಯದಲ್ಲಿ, ಸುಖದ ದಿನಗಳಲ್ಲಿ ನೋಡಿಕೊಳ್ಳುತ್ತಾನೆ ಎಂದು ಜನ ನಂಬುತ್ತಾರೆ. ಮನೆಯಲ್ಲಿ ತೀವ್ರ ಕಾಯಿಲೆಯಾದರೆ, ದನಕ್ಕೆ ಜ್ವರ ಬಂದರೆ, ಮೇಯಲು ಹೋಗಿದ್ದ ದನ ಕಳೆದುಹೋದರೆ, ಊರಲ್ಲಿ ಬಾವಿ ತೋಡಿಸಲು, ಮದುವೆ ನಿಶ್ಚಯವಾಗಲು ದೇವರ 'ಅಪ್ಪಣೆ' ಕೇಳುತ್ತಾರೆ. ಊರಲ್ಲಿ ಜಗಳವಾಗಿ 'ಪಂಚಾಯ್ತಿ' ನಡೆಯುವುದು ದೇವಾಲಯದಲ್ಲಿ. ದೀಪಾವಳಿ, ದಸರೆ, ಯುಗಾದಿಗಳಂತಹ ಹಬ್ಬಗಳಲ್ಲಿ ಜನ ತಂಡತಂಡವಾಗಿ ಬಂದು ದೇವರ ದೀಪಕ್ಕೆ ಎಣ್ಣೆ ಬಿಟ್ಟು, ಕಾಯಿ ಒಡೆಸಿ 'ಎಡೆಹಿಡಿದು' ಹೋಗುತ್ತಾರೆ. ದೇವರ ರಥೋತ್ಸವ ಹಳ್ಳಿಗರ ಬಾಳಿನಲ್ಲಿ ಬಹುಮುಖ್ಯ ಘಟನೆ. ಆ ದಿನ ನೂರಾರು ನಂಟರಿಷ್ಟರು ಹಳ್ಳಿಗೆ ಬಂದು ಸೇರುತ್ತಾರೆ. ದೇವಾಲಯದ ಮುಂಭಾಗ ಒಂದು ಸಣ್ಣ ಅಂಗಡಿಬೀದಿಯಾಗುತ್ತದೆ. ದೇವರನ್ನು ಉತ್ಸವದಲ್ಲಿ ಕರೆದೊಯ್ದು, ಕೊಂಡ ತುಳಿದು, ಓಕುಳಿಯಾಡುತ್ತಾರೆ. ದೇವರಿಗೆ ಶಾಸ್ತ್ರೋಕ್ತವಾಗಿ ಮದುವೆಮಾಡುತ್ತಾರೆ. ಹಳ್ಳಿಯ ಜನಕ್ಕೆ ಇದು

ಭಕ್ತಿಯೂ ಹೌದು, ಮನರಂಜನೆಯೂ ಹೌದು. ಯುಗಾದಿ ಹಬ್ಬದ ದಿನ ಸಂಜೆ ಎಲ್ಲರೂ ದೇವಾಲಯದ ಸುತ್ತ ನೆರೆದು ಚಂದ್ರ ದರ್ಶನವನ್ನು ಮಾಡುತ್ತಾರೆ. ಚಂದ್ರನ ದರ್ಶನವಾದ ಮರುಗಳಿಗೆಯಲ್ಲಿ ದೇವರಿಗೆ ನಮಸ್ಕರಿಸಿ ಅಲ್ಲಿಂದ ಹಿರಿಯರಿಗೆ, ಅಲ್ಲಿಗೆ ಬರಲಾಗದೆ ಮನೆಗಳಲ್ಲಿ ಉಳಿದಿರುವ ಇತರ ಹಿರಿಯರಿಗೆ ನಮಸ್ಕಾರ ಮಾಡುತ್ತಾರೆ. ಸಾಮಾನ್ಯವಾಗಿ ಒಂದೇ ಬಗೆಯಾಗಿರುವ ಹಳ್ಳಿಗರ ಬಾಳಿನ ಬೇಸರವನ್ನು ಇಂತಹ ಪಬ್ಬಗಳು ಹೋಗಲಾಡಿಸುತ್ತವೆ. ಅಂದು ಹೊಸ ಬಟ್ಟೆ ತೊಡುತ್ತಾರೆ. ಎಲ್ಲರ ಮನೆಗಳಲ್ಲೂ 'ಸೀಪರು', ಅನ್ನಗಳ ಊಟವಾಗುತ್ತದೆ. ಪಟ್ಟಣಗಳಲ್ಲಿ ಇವು-ಹೊಸ ಬಟ್ಟೆ ಉಡುವುದು, ಸಿಹಿ ಊಟಮಾಡುವುದು-ಯಾವಾಗ ಬೇಕಾದರೂ ನಡೆಯಬಹುದು. ಆದ್ದರಿಂದ ಅಲ್ಲಿ ಹಬ್ಬದ ದಿನಗಳಿಗೂ ಇತರ ದಿನಗಳಿಗೂ ವ್ಯತ್ಯಾಸ ಎದ್ದು ಕಾಣುವುದಿಲ್ಲ. ಹೆಚ್ಚೆಂದರೆ ಆ ದಿನ ಸಿನಿಮಾ ಕ್ಯೂಗಳು ಬೆಳೆದಿರುತ್ತವೆ. ಹಳ್ಳಿಗಳಲ್ಲಿ ಹಬ್ಬದ ದಿನಗಳು ಉಳಿದ ದಿನಗಳಿಂದ ಪ್ರತ್ಯೇಕವಾಗಿ ಎದ್ದು ನಿಲ್ಲುತ್ತವೆ.

**ಮದುವೆ**

ದೇವರ ಉತ್ಸವ, ಹಬ್ಬ ಇವುಗಳನ್ನು ತಮ್ಮ ಮನರಂಜನೆಗಾಗಿಯೂ ಬಳಸಿಕೊಳ್ಳುವಂತೆ ಮದುವೆಗಳನ್ನೂ ಬಳಸಿಕೊಳ್ಳುತ್ತಾರೆ. ಸಮೃದ್ಧಿಯಿದ್ದ ಹಿಂದಿನ ದಿನಗಳಲ್ಲಿ ವಾರಗಟ್ಟಲೆ ಮದುವೆ ನಡೆಯುತ್ತಿದ್ದುವು. ಹೆಣ್ಣನ್ನು ಹುಡುಕಿಕೊಂಡು ಗಂಡಿನ ಕಡೆಯವರು ಅಲೆದು 'ಅಟ್ಟೆಯ ಕೆರ' ಗಳು ಸವೆಯಬೇಕಿತ್ತಂತೆ. ಈಗ ಗಂಡನ್ನು ಹುಡುಕಿಕೊಂಡು ಹೆಣ್ಣಿನವರು ಅಲೆಯಬೇಕಾಗಿದೆ. ವರನ ಬೇಡಿಕೆಗಳು ಧಾರಣೆವಾಸಿಗಳಂತೆಯೇ ಮೇಲೇರುತ್ತಿರುವ ಈ ದಿನಗಳಲ್ಲಿ ಮದುವೆಮಾಡಿ ಶ್ರೀಮಂತರು ಸುಸ್ತಾಗುತ್ತಾರೆ, ಬಡವರು ಹಾಳಾಗುತ್ತಾರೆ. ಆದರೂ ಮದುವೆ ಯೆಂಬುದು ವಿಶೇಷವಾಗಿ ಹೆಂಗಸರಿಗೆ ಸಂಬಂಧಪಟ್ಟದ್ದು. ಅಲ್ಲಿ ಅವರದೇ ಕಾರಬಾರು. ಹೊರಗಡೆ ಜನ ತಮಾಷೆ ಮಾಡುತ್ತ ಚಪ್ಪರದಲ್ಲಿ ಕಾಲ ಕಳೆಯುತ್ತಿದ್ದರೆ ಹೆಂಗಸರು ಒಳಗೆ ನೂರಾರು 'ಶಾಸ್ತ್ರ'ಗಳಲ್ಲಿ ತೊಡಗಿ, ಹಾಡಿ, ಹಾಡಲು ಪ್ರಚೋದಿಸಿ ನಲಿಯುತ್ತಾರೆ. ಈ 'ನಾಜೂಕಿನ ಕಾಲ'ದಲ್ಲಿ ಮದುವೆಗಳು ಎರಡು ದಿನಗಳಲ್ಲಿ ಮುಗಿದುಹೋಗುತ್ತವೆಯಾದರೂ, ಹಿಂದಿನ ವೈಭವ ಮರೆಯಾಗಿಲ್ಲ. ಹಳ್ಳಿಯ ಗುಡಿಸಲಾದರೂ, ಏನಾದರೂ ಮಾಡಿ ಲೈಟ್ ತರಿಸಿ, ಸಮೀಪದ ಪಟ್ಟಣದಿಂದ ಬಂದ ಲೌಡ್ ಸ್ಪೀಕರ್‌ಗಳಲ್ಲಿ ಸಿನಿಮಾ ಹಾಡುಗಳನ್ನು ಕಿರಿಚಿಸದಿದ್ದರೆ ಅವರಿಗೆ ತೃಪ್ತಿ ಇಲ್ಲ. 'ಸೊನಾಯಿ' ಹೋಗಿ, ಬ್ಯಾಂಡ್ ಸೆಟ್ ಬಂದಿದೆ. ಬ್ಯಾಂಡಿನವರು ತೀರ ಈಚಿನ ಸಿನಿಮಾ ಹಾಡುಗಳನ್ನು ನುಡಿಸುವುದು ತೀರಾ ಸಾಮಾನ್ಯ. ಈ ಎಲ್ಲ ಆಧುನಿಕತೆಯ ಮಧ್ಯೆ ಬಡ ಪುರೋಹಿತನ ಬಾಯಲ್ಲಿ ಬರುವ ಮಂತ್ರ ಪ್ರಾಚೀನತೆಯ ಸಂಕೇತವಾಗಿ ಉಳಿಯುತ್ತದೆ. ಮದುವೆ ಮುಗಿದ ನಂತರ, ಆ ಸಂಭ್ರಮಕ್ಕೆ ತೀರ ವಿರುದ್ಧವಾಗಿರುತ್ತದೆ, ಹೆಣ್ಣು ಹೆತ್ತ ಬಡ ತಂದೆಯ ಮುಖ.

**ಇಟ್ಟುಕೊಳ್ಳುವ ಪದ್ಧತಿ**

ಹಳ್ಳಿಯಲ್ಲಿ ಪ್ರಬಲರಾದವರು, ಶ್ರೀಮಂತರಾದವರು ಬೇರೆ ಒಬ್ಬ ಹೆಂಗಸಿನೊಡನೆ ಸಂಬಂಧ ಇಟ್ಟುಕೊಂಡಿರುವುದು ಹಳ್ಳಿಯ ಜನರಿಗೆ ಪಾಪವೆಂದು ಅನ್ನಿಸುತ್ತಿರಲಿಲ್ಲ. ಅಂತಹ ಹೆಂಗಸರು 'ಬಸವಿ'ಯರಾಗಿರಬಹುದು ಅಥವಾ ವಿರಳವಾಗಿ ಗಂಡ ಇದ್ದವರೂ ಆಗಿರಬಹುದು. (ಇವರೆಲ್ಲ ಸಾಮಾನ್ಯವಾಗಿ ತೀರ ಕೆಳವರ್ಗಕ್ಕೆ ಸೇರಿದವರು). ಹಾಗೆ 'ಇಟ್ಟುಕೊಳ್ಳುವುದು' ವ್ಯಕ್ತಿಯ ಪ್ರತಿಷ್ಠೆಯ ಕುರುಹೂ ಆಗುತ್ತಿದ್ದಿತು. ಆ ಹೆಂಗಸರು ತಮ್ಮ ಪ್ರಿಯರ ಮನೆಗಳಿಗೆ ಬಂದು ಕೆಲಸ ಮಾಡಿ ಕೊಡುತ್ತಿದ್ದರು, ಮತ್ತು ಆ ಸಂಬಂಧದಲ್ಲಿ ಮುಚ್ಚು ಮರೆ ಇರುತ್ತಿರಲಿಲ್ಲ. ದಕ್ಷಿಣ ಕರ್ನಾಟಕದಲ್ಲಿದ್ದ ದೇವದಾಸಿ ಪದ್ಧತಿಯೂ ಇಂತಹುದೇ ಆಗಿದ್ದಿತು. ದೇವಾಲಯದಲ್ಲಿ ಹಾಡಿ ನರ್ತಿಸುತ್ತಿದ್ದ ಹೆಣ್ಣುಮಕ್ಕಳು ಅರ್ಚಕ ಬ್ರಾಹ್ಮಣನಿಗೋ ಊರಿನ ಪಟೇಲನಿಗೋ ತಮ್ಮ ಹಾಸುಗೆಯಲ್ಲಿ ಜಾಗ ಕೊಡುತ್ತಿದ್ದರು. ಹಾಗೆ ಹುಟ್ಟಿದ ಮಕ್ಕಳನ್ನು ಊರಿನ ಜನ ಅಗೌರವಿಸುತ್ತಿರಲಿಲ್ಲ. ಈ ಪದ್ಧತಿ ಸೂಳೆಗಾರಿಕೆಯಿಂದ ಸಂಪೂರ್ಣವಾಗಿ ಬೇರೆಯೆಂದು ಭಾವಿಸಿದ್ದರು. ಈಗ ಬಸವಿ ಪದ್ಧತಿ ಕಡಿಮೆಯಾಗುತ್ತಿದೆ; ದೇವದಾಸಿ ಪದ್ಧತಿ ಸಂಪೂರ್ಣ ನಿಂತುಹೋಗಿದೆ. ಬಸವಿಯರಿಗೆ ಹುಟ್ಟಿದ ಮಕ್ಕಳನ್ನು ಆಕೆಯ ಜಾತಿಯವರು ತಂದುಕೊಳ್ಳುತ್ತಾರೆ. ದೇವದಾಸಿ ಜಾತಿಯ ಗಂಡುಮಕ್ಕಳು ಹೆಣ್ಣುಮಕ್ಕಳು ಈಗ ಉಳಿದ ಜಾತಿಯ ಜನರಂತೆ ಮದುವೆ ಮಾಡಿಕೊಂಡು ಸಂಸಾರ ನಡೆಸುತ್ತಿದ್ದಾರೆ. ದೇವದಾಸಿಯರ ಬಗ್ಗೆ ನಾನು ನಡೆಸಿದ ಪರಿವೀಕ್ಷಣೆಯಲ್ಲಿ ಅವರನ್ನು ಕಂಡಿದ್ದ ಜನ ಅವರ ಬಗ್ಗೆ ತುಂಬು ಗೌರವದಿಂದ ಮಾತನಾಡಿದ್ದು ನನಗೆ ಆಶ್ಚರ್ಯವನ್ನು ಉಂಟುಮಾಡಲಿಲ್ಲ.

**ಮನರಂಜನೆ**

ಬಾಲಕರ ಮನರಂಜನೆಗಳಲ್ಲಿ ಮರಕೋತಿಯಾಟ, ಚಿಣ್ಣಿ-ದಾಂಡು, ಚೆಂಡು, ಬುಗುರಿ, ಕುಸ್ತಿ, ಈಜು ಮುಖ್ಯವಾದುವು. ದೊಡ್ಡವರಿಗೆ ಕೋಲಾಟ, ಕುಸ್ತಿ, ತೆಂಗಿನಕಾಯಿ ಒಡೆಯುವುದರಂತಹ ಸಾಹಸಗಳು ಮುಖ್ಯ: ಬಾಲಕರು, ದೊಡ್ಡವರು, ಗಂಡಸರು, ಹೆಂಗಸರು 'ಒಗಟು'ಗಳನ್ನು ಹೇಳುವುದರಲ್ಲಿ ಬಿಡಿಸುವುದರಲ್ಲಿ ಸಂತೋಷವನ್ನು ಅನುಭವಿಸುತ್ತಾರೆ. ಹಿಂದೆ ರಾತ್ರಿಯೆಲ್ಲಾ ಬಯಲಾಟಗಳು ನಡೆಯುತ್ತಿದ್ದುವು. ಈಗ ಅವು ಮಾಯವಾಗುತ್ತಿವೆ. ಎಂದೋ ಒಮ್ಮೆ ಸಣ್ಣ ನಾಟಕದ 'ಕಂಪನಿ'ಗಳು ಬಂದು ಹೋಗುವುದುಂಟು. ಇವು ಪೇಟೆಯಲ್ಲಿ ಅವರು ನೋಡಿದ ಪೌರಾಣಿಕ ನಾಟಕಗಳ ಅನುಕರಣವಾಗಿರುತ್ತವೆ. ಪಟ್ಟಣಗಳಲ್ಲಿ ಕೆಲಸ ಮತ್ತು ಮನರಂಜನೆಗಳು ಪ್ರತ್ಯೇಕವಾಗಿ ನಿಲ್ಲುತ್ತವೆ. ಹಳ್ಳಿಗ ಬಯಸಿದಾಗಲೆಲ್ಲ ಅವನಿಗೆ ಮನರಂಜನೆ ಸಿಗುವ ಅವಕಾಶಗಳಿರುವುದಿಲ್ಲ. ಆದ್ದರಿಂದ ಅವನು

ಎರಡನ್ನೂ ಸಮ್ಮಿಳನಗೊಳಿಸಿಕೊಳ್ಳುವುದು ಅನಿವಾರ್ಯ. ಹೆಂಗಸರು ಬೀಸುವುದರ ಜೊತೆ ಜೊತೆಯಲ್ಲೇ ಹಾಡಿದರೆ ರೈತರು ಉಳುವಾಗ, ಸುಗ್ಗಿ ಮಾಡುವಾಗ ಕೆಲಸದ ಶ್ರಮವನ್ನು ಹಾಡುಗಳ ಮೂಲಕ ಕಡಿಮೆಮಾಡಿಕೊಳ್ಳುತ್ತಾರೆ.

**'ಆಯ' ಪದ್ಧತಿ**

ಭಾರತದ ಹಳ್ಳಿಗರ ಪೈಕಿ ಶೇಕಡ 51ರಷ್ಟು ಜನ ವ್ಯವಸಾಯಗಾರರು, ಶೇಕಡ 30ರಷ್ಟು ಜನ ವ್ಯವಸಾಯದ ಕಾರ್ಮಿಕರು. ಎಂದರೆ ಹಳ್ಳಿಗಳ ಜನಸಂಖ್ಯೆಯ ಪೈಕಿ ಶೇಕಡ 19 ಮಾತ್ರ ಉಳಿದ ವೃತ್ತಿಕಾರರು. ಭಾರತ ಪ್ರಮುಖವಾಗಿ ವ್ಯವಸಾಯ ಪ್ರಧಾನ ದೇಶವಾದ್ದರಿಂದ ರೈತನನ್ನು ಕೇಂದ್ರವಾಗಿಟ್ಟುಕೊಂಡು ಉಳಿದ ವೃತ್ತಿಗಳು ರೂಪಿತವಾಗಿರುತ್ತವೆ. ಉದಾಹರಣೆಗೆ, ಬಡಗಿ ರೈತನ ಮರ ಮುಟ್ಟುಗಳನ್ನು ಮಾಡಿಕೊಟ್ಟರೆ ಕಮ್ಮಾರ ಲೋಹದ ಸಾಮಾನುಗಳನ್ನು ಮಾಡಿಕೊಡುತ್ತಾನೆ. ಹರಿಜನ ವ್ಯಕ್ತಿ ಅವನಿಗೆ ಚರ್ಮದ ಸಾಮಾನುಗಳನ್ನು ಒದಗಿಸುತ್ತಾನೆ. ಕ್ಷೌರದವನು ತಲೆಗೂದಲು ತೆಗೆದರೆ ಅಗಸ ಬಟ್ಟೆಗಳನ್ನು ಮಡಿ ಮಾಡಿಕೊಟ್ಟು ಮದುವೆಯಲ್ಲಿ ಚಪ್ಪರಕ್ಕೆ ಬಟ್ಟೆ ಕಟ್ಟುತ್ತಾನೆ. ಜಂಗಮ ಮದುವೆ, ಹಬ್ಬ, ನಾಮಕರಣ ಇತ್ಯಾದಿ ವಿಶೇಷದಿನಗಳಲ್ಲಿ ಬಹಳ ಬೇಡಿಕೆಯಿರುವ ವ್ಯಕ್ತಿ. ಇವರಿಗೆಲ್ಲ ರೈತ ಸುಗ್ಗಿಯ ಸಮಯದಲ್ಲಿ ಧಾನ್ಯದ ರಾಶಿಯಿಂದ 'ಆಯ'ವನ್ನು ಅಳೆದು ಕೊಡುತ್ತಾನೆ.

**ಆಧುನೀಕರಣ**

ಇದೆಲ್ಲ ಒಂದು ಬಗೆಯ ಗತಇತಿಹಾಸವೂ ಹೌದು : ಇಂದಿಗೂ ಸ್ವಲ್ಪ ಮಟ್ಟಿಗೆ ಸತ್ಯವಾಗಿರುವ ಸಂಗತಿಯೂ ಹೌದು. ಹಿಂದೆ ಹಳ್ಳಿಗಳು ತಮ್ಮಷ್ಟಕ್ಕೆ ತಾವು ಸ್ವತಂತ್ರ ಘಟಕಗಳೆಂಬಂತೆ ಬದುಕುತ್ತಿದ್ದುವು. ಹಳ್ಳಿಯಲ್ಲೇ ಸಾಧ್ಯವಾದರೆ ತಮ್ಮ ತಮ್ಮ 'ಕೊಲ' ( =ಕುಲ)ದವರಲ್ಲೇ ಸಂಬಂಧ ಬೆಳಸುವುದರಲ್ಲಿ, ಹೆಚ್ಚೆಂದರೆ ಸುತ್ತಮುತ್ತಣ ಆರೆಂಟು ಹಳ್ಳಿಗಳ ಜೊತೆ ಸಂಬಂಧ ಇಟ್ಟುಕೊಳ್ಳುವುದರಲ್ಲಿ ಮುಗಿದುಹೋಗುತ್ತಿತ್ತು. ವರ್ಷಕ್ಕೊಂದು ಸಾರಿ ಗಾಡಿಯಲ್ಲಿ ತಾವು ಬೆಳೆದದ್ದನ್ನು ಹಾಕಿಕೊಂಡು ರಾತ್ರಿಯೆಲ್ಲ ಪ್ರಯಾಣಮಾಡಿ ಸಮೀಪದ ಪೇಟೆಗೆ ಹೋಗಿ ಮಾರಾಟಮಾಡಿ ಬಂದ ದುಡ್ಡಿನಲ್ಲಿ 'ದ್ರಾಪೆ' ತಿಂದು, ನಾಟಕ ನೋಡಿ, ಮನೆಗೆ ಬಟ್ಟೆ ಇತ್ಯಾದಿಗಳನ್ನು ಕೊಂಡುಕೊಂಡು ಬಂದರೆ ಅಲ್ಲಿಗೆ ಅವರಿಗೆ ಪಟ್ಟಣಕ್ಕೆ ಇದ್ದ ಸಂಪರ್ಕ ಮುಗಿಯಿತು. ಬಸ್ ಹಿಡಿಯಲು ಆರೆಂಟು ಮೈಲಿ ನಡೆಯಬೇಕಿತ್ತು. ಬಸ್ಸು, ಕಾರು, ರೈಲು, ವಿದ್ಯುಚ್ಛಕ್ತಿ, ರೇಡಿಯೋಗಳನ್ನು ಒಂದು ಬಾರಿಯೂ ನೋಡದಿದ್ದ ಜನರಿದ್ದರು. ಆದರೆ ಈ ದಿನ ಕಾಲ ವ್ಯತ್ಯಾಸವಾಗುತ್ತಿದೆ.

ಊರೂರಿಗೆ ಬಸ್ಸುಗಳು ತಿರುಗುತ್ತಿವೆ, ಪಟ್ಟಣಗಳನ್ನು ಹಳ್ಳಿಯ ಹತ್ತಿರ ತಂದಿವೆ. ಬಸ್ಸು, ಲಾರಿ, ಟ್ರಾಕ್ಟರುಗಳು ರೈತನ ಸಾಮಾನನ್ನು ಶೀಘ್ರವಾಗಿ ಪೇಟೆಗೆ ಕೊಂಡೊಯ್ಯುತ್ತವೆ. ಪಟ್ಟಣದ ಸಂಪರ್ಕದಿಂದ ಅವನು ಹೆಚ್ಚು ಹೆಚ್ಚು ಹೊರ ಪ್ರಪಂಚದ ಅರಿವನ್ನು ಪಡೆಯುತ್ತಿದ್ದಾನೆ. ಗಡಿಯಾರದಲ್ಲಿ 'ಟೇಮ್' ಎಷ್ಟು ಎಂದು ಹೇಳಲು ಬಾರದಿದ್ದರೂ ಅವನು ಗಡಿಯಾರ ಕಟ್ಟಿಕೊಳ್ಳಲು ಬಯಸುತ್ತಾನೆ. ಯಾರಾದರೂ 'ಟೈಂ' ಕೇಳಿದರೆ ಗಡಿಯಾರವನ್ನೇ ತೋರಿಸಿದವರನ್ನು ನಾನು ಬಲ್ಲೆ. ಜೊತೆಗೆ ಹಳ್ಳಿಯವರಿಗೆ ಮನೆಯಲ್ಲಿಡುವ ಅಲಾರಂ ಗಡಿಯಾರ, ಗೋಡೆ ಗಡಿಯಾರಗಳ ಬಗ್ಗೆ ಸ್ವಲ್ಪವೂ ಆಸಕ್ತಿಯಿಲ್ಲವೆಂಬುದು ಗಮನಿಸಬೇಕಾದ ಸಂಗತಿ. ಅವನ ಮನೆಗೆ ವಿದ್ಯುಚ್ಛಕ್ತಿಯ ಜೊತೆ ರೇಡಿಯೋ ಬಂದಿದೆ. ಹಿಂದೆ ರೇಡಿಯೋ ಊರಿಗೆ ಬಂದ ಹೊಸದರಲ್ಲಿ ಜನ ಅದನ್ನು ಒಂದು ಹಬ್ಬವಾಗಿ ಆಚರಿಸಿದರೆ, ಈ ದಿನ ಹಳ್ಳಿಯವನ ಕೈಗೆ ಟ್ರಾನ್ಸಿಸ್ಟರ್ ಬಂದಿದೆ. ರಾತ್ರಿ ಹೊಲ ಕಾಯುವಾಗ ಅದನ್ನು ಕೇಳುತ್ತ ಕಾಲ ಕಳೆಯಲು ಅನುಕೂಲವಾಗಿದೆ. ಸಿನಿಮಾಗಳು, ಧ್ವನಿವರ್ಧಕ ಮತ್ತು ರೇಡಿಯೋಗಳಲ್ಲಿ ಬರುವ ಸಿನಿಮಾ ಹಾಡುಗಳು ಎಷ್ಟು ಜನಪ್ರಿಯವಾಗಿವೆಯೆಂದರೆ ದನ ಕಾಯುವ ಹುಡುಗ ಸಿನಿಮಾ ಹಾಡುಗಳನ್ನು ಗೊಣಗುತ್ತ ದನಗಳನ್ನು ಅಟ್ಟಿಕೊಂಡು ಹೋಗುತ್ತಾನೆ. ಅವನಿಗೂ 'ಟೇಂ' ಕೇಳಿ ತಿಳಿದುಕೊಳ್ಳುವ ಕುತೂಹಲ, ಕೇವಲ ಕುತೂಹಲ ಇರುತ್ತದೆ. ವಿದ್ಯಾವಂತರ ಸಂಖ್ಯೆ ಕ್ರಮೇಣ ಬೆಳೆಯುತ್ತಿದೆ. ಹಿಂದೆ ಲೋಯರ್ ಸೆಕೆಂಡರಿ (8ನೇ ತರಗತಿ) ಪಾಸ್ ಮಾಡಿದ ಹುಡುಗನನ್ನು ಜನ ಬೆರಳಿಟ್ಟು ತೋರಿಸುತ್ತಿದ್ದರು. ಬಿ.ಎ. ಪಾಸ್ ಮಾಡಿದವರನ್ನು ಗಾಡಿ ಕಟ್ಟಿಕೊಂಡು ಹೋಗಿ ನೋಡಿ ಬರುತ್ತಿದ್ದರು. ಈ ದಿನ ಪರದೇಶಕ್ಕೆ ಹೋಗಿಬಂದ ವ್ಯಕ್ತಿಯೂ ಸುದ್ದಿಯಾಗುವುದಿಲ್ಲ. ರೈತರಿಗೆ ತಮ್ಮ ಮಕ್ಕಳು ಓದಿ ಮುಂದಕ್ಕೆ ಬರಬೇಕೆಂಬ ಆಸೆ ಮೂಡಿದೆ. ಹಳ್ಳಿಹಳ್ಳಿಗೆ ಪ್ರೌಢಶಾಲೆಗಳಿವೆ; ದೊಡ್ಡ ದೊಡ್ಡ ಗ್ರಾಮಗಳಿಗೆ ಜೂನಿಯರ್ ಕಾಲೇಜುಗಳು ಬಂದಿವೆ. ಹೀಗಾಗಿ ರೇಡಿಯೋದಂತೆ ವೃತ್ತಪತ್ರಿಕೆಗಳೂ ಮೂಲೆ ಮೂಲೆಯ ಹಳ್ಳಿಗಳನ್ನು ಸೇರಿವೆ. ಇವೆಲ್ಲ ಹಳ್ಳಿಯ ಚಹರೆಯನ್ನೇ ಬದಲಾಯಿಸಿವೆ. ಹಳ್ಳಿಯ ಜನರ ದೃಷ್ಟಿಯನ್ನೂ ಬದಲಾಯಿಸಿವೆ.

**ಉಳುವವನಿಗೇ ಹೊಲ**

ಜಮೀನುದಾರ ಮತ್ತು ಗೇಣಿದಾರರ ಮಧ್ಯೆ ಸಂಬಂಧ ಮೊದಲಿನಷ್ಟು ಮಧುರವಾಗಿಲ್ಲವೆಂದು ಗೊಣಗುವ, ಚಡಪಡಿಸುವ ಕಾಲ ಬಂದಿದೆ. ಉಳುವವನಿಗೇ ಹೊಲ ಎಂಬ ಘೋಷಣೆ ಶ್ರೀಮಂತ ರೈತರ ಮನಸ್ಸಿನಲ್ಲಿ ಭಯವನ್ನು ಹುಟ್ಟಿಸಿದೆ. ಶ್ರೀಮಂತರ ಹೊಲಗಳನ್ನು ಉಳುತ್ತಿದ್ದ ರೈತ ಸರಿಯಾಗಿ ಗೇಣಿ ಕೊಡುತ್ತಿಲ್ಲ

ವಾದ್ದರಿಂದ ಅವನು ಕೊಟ್ಟದ್ದರಲ್ಲೇ ತೃಪ್ತಿ ಹೊಂದುತ್ತಿದ್ದಾರೆ ಗೈರು ಹಾಜರಿ ಭೂಮಾಲೀಕರು. ಅನೇಕರು ಭೂಮಿಯನ್ನು ಮಾರಿದ್ದಾರೆ. ಒಡರೈತನಿಗೆ ಹಿಂದಿಗಿಂತ ಹುಮ್ಮಸ್ಸು ಇದೆ: ಇಂದಲ್ಲ ನಾಳೆ ಆ ಭೂಮಿ ತನಗೇ ದಕ್ಕಬಹುದೆಂಬ ಆಸೆ ಅವನದು. ಆದರೆ ಶ್ರೀಮಂತ ರೈತ ಶಾನುಭೋಗನನ್ನು ಬುಟ್ಟಿಗೆ ಹಾಕಿಕೊಂಡು ಹೊಲ ತನ್ನ ಸ್ವಂತ ಸಾಗುವಳಿಯದೆಂದು ದಾಖಲು ಮಾಡಿಸಿಕೊಳ್ಳುವ ಮೂಲಕ ಭೂಕಾನೂನು ತನ್ನನ್ನು ಮುಟ್ಟದಂತೆ ಎಚ್ಚರಿಕೆ ವಹಿಸುತ್ತಿದ್ದಾನೆ. ಜಾಣನಾದ ಶಾನುಭೋಗ ಹಿಂದಿನಂತೆಯೇ ಇಂದೂ ಪ್ರಮುಖ ವ್ಯಕ್ತಿಯಾಗಿದ್ದಾನೆ: ಉಳುವವನು ಶ್ರೀಮಂತನ ಕೈಲಿ; ಇಬ್ಬರೂ ಈ ಶಾನುಭೋಗನ ಕೈಲಿ— ಶಾನುಭೋಗ ಇಬ್ಬರಿಂದಲೂ ಲಾಭ ಪಡೆಯುತ್ತಾನೆ. ಭೂಕಾನೂನು ವಾಸ್ತವವಾಗಿ ಉಳುವವನಿಗೇ ಭೂಮಿ ಬರುವುದರಲ್ಲಿ ಎಷ್ಟರ ಮಟ್ಟಿಗೆ ಸಹಾಯಕವಾಗಿದೆ ಎಂಬ ಪ್ರಶ್ನೆ ಬೇರೆ. ಆದರೆ ಅದು ಒಟ್ಟು ಹಳ್ಳಿಯ ಮನಸ್ಸಿನ ಮೇಲೆ ಮೂಡಿಸಿರುವ ಪ್ರಭಾವ ಮುದ್ರೆ ಅಪಾರ. ಅದು ಮಾಲೀಕ ಮತ್ತು ಜೀತದಾಳುಗಳ ಮಧ್ಯದ ಸಂಬಂಧದ ಮೇಲೆ ತೀವ್ರ ಪರಿಣಾಮವನ್ನುಂಟುಮಾಡಿದೆಯೆಂಬುದರಲ್ಲಿ ಸಂದೇಹವಿಲ್ಲ.

**ಹೆಚ್ಚು ಹಣ**

ಒಂದು ಕಾಲಕ್ಕೆ ಟ್ರಾಕ್ಟರ್ ನೋಡಿರಲಿ, ಟ್ರಾಕ್ಟರ್ ಎಂಬ ಹೆಸರನ್ನೂ ಹಳ್ಳಿಯವರು ಕೇಳಿರಲಿಲ್ಲ. 1965ರಲ್ಲಿ ಭಾರತದಲ್ಲಿ 50 ಸಾವಿರ ಟ್ರಾಕ್ಟರುಗಳಿದ್ದು, 1970ರ ಹೊತ್ತಿಗೆ ಆ ಸಂಖ್ಯೆ ಒಂದು ಲಕ್ಷವನ್ನು ಮೀರಿತು. ನನಗೆ ಗೊತ್ತಿರುವ 250 ಮನೆಗಳಿರುವ ಹಳ್ಳಿಯೊಂದರಲ್ಲಿ ನಾಲ್ಕು ಟ್ರಾಕ್ಟರುಗಳಿವೆ. ದೇಶದಲ್ಲಿ ಇಂದು 60ಕ್ಕೆ ಮೇಲ್ಪಟ್ಟು ಗೊಬ್ಬರದ ಕಾರ್ಖಾನೆಗಳಿದ್ದರೂ, ರೈತರು ಕೃತಕ ಗೊಬ್ಬರವನ್ನು ಹೆಚ್ಚು ಪ್ರಮಾಣದಲ್ಲಿ ಬಳಸಲಾರಂಭಿಸಿರುವುದರಿಂದ ಆ ಕಾರ್ಖಾನೆಗಳ ಕೈಲಿ ದೇಶದ ಅಗತ್ಯವನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ. ಹೆಚ್ಚಿದ ನೀರಾವರಿ, ಸುಧಾರಿಸಿದ ಬೇಸಾಯಗಳಿಂದ ಇಂದು ಆಹಾರ ಉತ್ಪಾದನೆ ಹೆಚ್ಚಿದೆ. ಬೆಳೆದದ್ದಕ್ಕೆ ಹೆಚ್ಚಿನ ಬೆಲೆಯೂ ರೈತರಿಗೆ ದೊರಕುತ್ತಿದೆ. ಇದರಿಂದ ಇಂದಿನ ರೈತರ ಕೈಲಿ ಹೆಚ್ಚು ಹಣ ಓಡಾಡುತ್ತಿದೆ. ಹಿಂದೆ ಹಾಲು, ಮೊಸರು, ಬೆಣ್ಣೆ ಮಾರಲು ಜುಗುಪ್ಸೆ ಪಡುತ್ತಿದ್ದ ಹಳ್ಳಿಯವರು ಈ ದಿನ ಮಜ್ಜಿಗೆಯನ್ನೂ ಮಾರುತ್ತಿದ್ದಾರೆ ಎಂದು ಅನೇಕರು–ವಯಸ್ಸಾದವರು–ಆಕ್ಷೇಪಿಸುತ್ತಿದ್ದಾರೆ. ಹಳ್ಳಿಗಳಲ್ಲೇ ದುಡ್ಡು ಕೊಟ್ಟರೆ ಹಾಲು, ಮೊಸರು ಸಿಗುವುದು ಕಷ್ಟವಾಗಿದೆ. ಹಿಟ್ಟಿನ ಗಿರಣಿಗಳು ಬಂದು ಬೀಸುವ ಕಲ್ಲುಗಳು, ಹಾಡುಗಳು ಮೂಲೆ ಗುಂಪಾಗಿವೆ. ದೊಡ್ಡ ಗ್ರಾಮಗಳಲ್ಲಿ ಉನ್ನತ ಶಿಕ್ಷಣ ಪಡೆದ ವೈದ್ಯರಿಂದ ವೈದ್ಯಕೀಯ ಸಹಾಯ ದೊರಕುತ್ತಿದೆ. ಮನೆಯಲ್ಲಿ

ಯಾರಿಗಾದರೂ ಕಾಯಿಲೆಯಾದರೆ ದೇವರಿಗೆ ಮುಡಿಪು ಕಟ್ಟಿ ಆಸ್ಪತ್ರೆಗೆ ಧಾವಿಸುತ್ತಾರೆ.

**ಚುನಾಯಿತ ಪಂಚಾಯಿತಿ**

ಹಿಂದೆ ಹಳ್ಳಿಯ ಸ್ಥಳೀಯ ವಿದ್ಯಮಾನ, ಆಗುಹೋಗುಗಳು ಊರಿನ ಹಿರಿಯರ ಹಿಡಿತದಲ್ಲಿರುತ್ತಿದ್ದುವು ; ಅವರ ಮಾರ್ಗದರ್ಶನದಲ್ಲಿ ಎಲ್ಲವೂ ನಡೆದು ಹೋಗುತ್ತಿತ್ತು. ಎಷ್ಟೋ ಹಳ್ಳಿಗಳಲ್ಲಿ ಊರಿನಗೌಡ ಸಣ್ಣ ಪಾಳೇಗಾರನಂತೆ ವರ್ತಿಸುತ್ತಿದ್ದ. ಜಗಳಗಳಾದರೆ ಕೋರ್ಟಿಗೆ ಹೋಗುವುದು ವಿರಳವಾಗಿತ್ತು. ಆಯಾ ಜಾತಿಯ ಜನರೋ ಊರಿನ ಹಿರಿಯರೋ ಸೇರಿ ತಾವೇ ತೀರ್ಮಾನ ಹೇಳಿಬಿಡುತ್ತಿದ್ದರು. ಈಗ ಚುನಾವಣೆಯ ಮೂಲಕ ಪ್ರತಿನಿಧಿಗಳು ಗ್ರಾಮ ಪಂಚಾಯಿತಿಗೆ ಆರಿಸಿ ಬರುತ್ತಾರೆ. ಹೀಗೆ ಬರುವವರಲ್ಲಿ ಯುವಕರೇ ಮುಂದು. ಆದರೆ ಒಟ್ಟು ಹಳ್ಳಿಯ ಮೇಲೆ ಇವರ ಹಣೋಟಿ ಕಡಿಮೆ : ಇವರಲ್ಲಿ ಹಳ್ಳಿಯ ಜನಕ್ಕೆ ವಿಶ್ವಾಸ ಸಾಲದು. ಅಧಿಕೃತವಾಗಿ ಪಂಚಾಯಿತಿ ಸದಸ್ಯರಲ್ಲದಿದ್ದರೂ ಊರಿನ ಹಿರಿಯರ ಮಾತಿಗೆ ಇನ್ನೂ ಗೌರವವಿದೆ. ಆದರೆ ಈ ಪರಿಸ್ಥಿತಿ ಬಹಳ ಕಾಲ ಮುಂದುವರಿಯುವಂತೆ ಕಾಣುವುದಿಲ್ಲ.

**ರಾಜಕೀಯ-ಜಾತಿ**

ಸಾರ್ವತ್ರಿಕ ಚುನಾವಣೆಗಳ ಮೂಲಕ ದೇಶದ ರಾಜಕೀಯ ಪಕ್ಷಗಳು ಹಳ್ಳಿಯ ಜೀವನರಂಗವನ್ನು ಪ್ರವೇಶಿಸಿವೆ. ಕಾಂಗ್ರೆಸ್, ಪಿ.ಎಸ್.ಪಿ., ಸಂಸ್ಥಾ ಕಾಂಗ್ರೆಸ್, ಸೋಷಿಯಲಿಸ್ಟ ಇತ್ಯಾದಿ ಪಕ್ಷಗಳ ಹೆಸರು ಜನಕ್ಕೆ ಗೊತ್ತಿದೆ. ಒಂದು ವೇಳೆ ಅವುಗಳ ಹೆಸರು, ಚುನಾವಣಾ ಪ್ರಣಾಲಿಕೆ (ಇದಂತೂ ಬಹುತೇಕ ಜನಕ್ಕೆ ಗೊತ್ತೇ ಇರುವುದಿಲ್ಲ, ನಗರ ವಾಸಿಗಳಿಗೂ ಗೊತ್ತಿರುವುದಿಲ್ಲ) ಗೊತ್ತಿರದಿದ್ದರೂ ಆಯಾ ಪಕ್ಷದ ಮುದ್ರೆಗಳಾದರೂ ತಿಳಿದಿರುತ್ತವೆ. ಎಷ್ಟೋ ಹಳ್ಳಿಗಳು ಒಗ್ಗಟ್ಟಾಗಿ ಒಂದು ಪಕ್ಷಕ್ಕೆ ಮತ ಕೊಡಬಹುದು. ಅಥವಾ ಹಳ್ಳಿಯು ಚುನಾವಣೆಯಲ್ಲಿ ಇಬ್ಭಾಗವಾಗಿ ಒಡೆದಿರಬಹುದು, ಇಲ್ಲಿಯೂ ರಾಜಕೀಯದ ಜನರು ಜಾತಿ, ಮತ, (ಹಣ, ಹೆಂಡ) ಗಳನ್ನು ಯಥೇಷ್ಟವಾಗಿ ಬಳಸಿಕೊಳ್ಳುತ್ತಾರೆ. ಹಳ್ಳಿಯ ಚುನಾವಣೆಗಳಲ್ಲಿ ಪ್ರಧಾನ ಪಾತ್ರ ವಹಿಸತಕ್ಕುವೆಂದರೆ ಪ್ರಾಯಶಃ ಇವೇ. ಇದರಿಂದ ರಾಜಕೀಯ ಜನ ಸಹಜವಾಗಿಯೇ ಮಠಗಳನ್ನು ಆಶ್ರಯಿಸುತ್ತಾರೆ. ಮಠಾಧಿಪತಿಗಳಿಗೂ ಬೇಕಾಗಿರುವುದರಿಂದ ಅವರೂ ಚುನಾವಣೆಯ ಕಣಕ್ಕೆ ಇಳಿಯುತ್ತಾರೆ. ಇದರಿಂದ, ಈ ದಿನ ಹಳ್ಳಿಗಳಲ್ಲಿ ಹಿಂದಿಗಿಂತ ಜನ ಜಾತಿ, ರಾಜಕೀಯಗಳ ಬಗ್ಗೆ ಹೆಚ್ಚಿನ ಅರಿವುಳ್ಳವರಾಗಿದ್ದಾರೆ.

**ಆಧುನೀಕರಣ ಸ್ವಾಗತಾರ್ಹವೇ ?**

ಹಳ್ಳಿಗಳಲ್ಲಿ ನಡೆಯುತ್ತಿರುವ ಈ ಎಲ್ಲ ವ್ಯತ್ಯಾಸಗಳು ಅಥವಾ 'ಆಧುನೀಕರಣ' ಸ್ವಾಗತಾರ್ಹವೇ ಅಲ್ಲವೇ ಎಂಬ ಪ್ರಶ್ನೆಯ ಚರ್ಚೆಯೇ ಅನಗತ್ಯ. ಏಕೆಂದರೆ ನಾವು ಏನು ಹೇಳಿದರೂ ಹಳ್ಳಿಗಳಲ್ಲಿ ನಡೆಯುವುದು ನಡೆದೇ ತೀರುತ್ತದೆ. 20-30 ವರ್ಷಗಳ ಹಿಂದೆ ಹಳ್ಳಿ ನೋಡಿದವರು ಇಂದು ಮತ್ತೆ ಹೋದಾಗ "ಅಯ್ಯೋ, ಹಳ್ಳಿಗಳು ಹಾಳಾದುವು; ಆ ಮುಗ್ಧತೆ, ಗ್ರಾಮೀಣ ಸೌಂದರ್ಯ ನಾಶವಾದುವು. ಜನಪದ ಕಲೆಗಳು ಹೋಗುತ್ತಿವೆ. ಆಧುನಿಕತೆಗೆ ಹಳ್ಳಿಯ ಸಂಸ್ಕೃತಿಯು ಬಲಿ" ಇತ್ಯಾದಿ ಉದ್ಗಾರ ತೆಗೆಯುವುದು ಸುಲಭ. ಹಳ್ಳಿಗ ಹಿಂದಿನಂತೆಯೇ ಇರಬೇಕೆಂದು ನಿರೀಕ್ಷಿಸುವುದು ಮೊದಲ ತಪ್ಪು. ಅವನೂ ನಾಗರಿಕರಂತೆ ಗಡಿಯಾರ ಕಟ್ಟಿ, ಕ್ರಾಪ್ ಬಿಟ್ಟು, ಪೇಟೆಯಲ್ಲಿ ಜಾಮೂನ್ ಮಸಾಲೆ ದೋಸೆ ತಿಂದು, ಸಿನಿಮಾ ಏಕೆ ನೋಡಬಾರದು ? ಆತನ ಮಕ್ಕಳೂ ವಿದ್ಯಾವಂತರಾಗಬಾರದೇಕೆ ? ದೇಶ ಆಧುನಿಕತೆಯತ್ತ ಮುಖ ತಿರುಗಿಸಿ ನಿಂತಿರುವಾಗ ಹಳ್ಳಿಯವನೊಬ್ಬ ಮಾತ್ರ ಹಾಗೇ ಉಳಿಯಬೇಕೆಂದು ವಾದಿಸುವುದು ತಪ್ಪಾಗುತ್ತದೆ. ಯಾವುದು ಅಳಿಯಬೇಕೋ ಅದು ಅಳಿಯುತ್ತದೆ, ಉಳಿಯಬೇಕೋ ಉಳಿಯುತ್ತದೆ. ಇಂದು ನಡೆಯುತ್ತಿರುವ ವ್ಯತ್ಯಾಸ ಒಟ್ಟು ದೇಶಕ್ಕೇ ಸಂಬಂಧಿಸಿದ್ದು–ಅದು ಹಳ್ಳಿಗಳ ಮೇಲೆ ನಗರಗಳ ಮೇಲೆ ಏಕಪ್ರಕಾರವಾಗಿ ತನ್ನ ಪ್ರಭಾವವನ್ನು ಬೀರುತ್ತಿದೆ. (ಇದರಲ್ಲಿ ತರತಮದ ಪ್ರಶ್ನೆ ಇದೆ, ಅಷ್ಟೇ.) ಆ ವ್ಯತ್ಯಾಸ ತ್ಯಾಜ್ಯವಾದರೆ ಆ ಮಾತು ಹಳ್ಳಿಗಳಿಗೆ ಹೇಗೋ ನಗರಗಳಿಗೂ ಅಷ್ಟೇ ಅನ್ವಯವಾಗಬೇಕಾಗುತ್ತದೆ. ಸದ್ಯದ ಪರಿಸ್ಥಿತಿ ನೋಡಿದರೆ ಈ ಆಧುನೀಕರಣ ಅನಿವಾರ್ಯವೆಂದು ತೋರುತ್ತದೆ. ಹಣ, ಅಧಿಕಾರಿಗಳು ಮೌಲ್ಯಗಳನ್ನು ನಿರ್ಧರಿಸುವ ಕಾಲಬಂದಿದೆ ; ಈ ಪರಿಸ್ಥಿತಿ ಸದ್ಯದಲ್ಲಿ ಬೇರೆಯಾಗುವ ಸೂಚನೆಗಳೇನೂ ಇಲ್ಲ.

**ಆಧುನೀಕರಣದ ಒಳಗೆ ?**

ಆಧುನೀಕರಣ ಹಳ್ಳಿಗಳನ್ನು ಪ್ರವೇಶಿಸಿರುವುದು ಮೇಲ್ನೋಟಕ್ಕೇ ಕಾಣುವಂತಹುದು. ಆದರೂ ಅಲ್ಲಿ ಗುಪ್ತವಾಗಿ ಗಟ್ಟಿಯಾಗಿ ಪ್ರಾಚೀನ ಪರಂಪರೆ ಹುದುಗಿದೆ. ಪಟ್ಟಣದಷ್ಟು ಬೇಗ ಹಳ್ಳಿ ತನ್ನ ಪ್ರಾಚೀನ ಪರಂಪರೆಯನ್ನು ಬಿಟ್ಟು ಕೊಡಲಾರದು. ಹಳ್ಳಿಗಳ ದೃಷ್ಟಿ ಎಷ್ಟೇ ಲೌಕಿಕವಾಗಿದ್ದರೂ ಅದು ಸಂಪೂರ್ಣವಾಗಿ ತನ್ನ ಹಿಂದಿನ ಸ್ವರೂಪವನ್ನು ಕಳೆದುಕೊಂಡಿದೆಯೆಂದು ಹೇಳುವುದು ಕಷ್ಟ. ಹಳೆಯ ಆಚಾರವ್ಯವಹಾರಗಳು, ಮೂಢನಂಬಿಕೆಗಳು, ಶ್ರದ್ಧೆಗಳು, ಸ್ನೇಹ ವಿಶ್ವಾಸ ಬಾಂಧವ್ಯಗಳು, ಕಂದಾಚಾರಗಳು ಅಳಿದು ಹೋಗಿಲ್ಲ. ಇದರ ಜೊತೆಗೆ ಹಿಂದೆ ಒಂದೂ ಮಂಗಳೂರು ಹೆಂಚಿನ ಮನೆಯಿಲ್ಲದಿದ್ದ ಹಳ್ಳಿಗಳಲ್ಲಿ ಅಂಥವು ಆರೆಂಟು

ಮನೆಗಳು, ಒಂದೆರಡು ತಾರಸಿ ಮನೆಗಳು ಎದ್ದಿರಬಹುದು. ಆದರೂ ಅದೇ ಕಡುಬಡತನ, ಅಜ್ಞಾನ, ರೋಗರುಜಿನಗಳು ಅಲ್ಲಿ ತಾಂಡವವಾಡುತ್ತಿವೆ. ಜಮೀನುದಾರರ, ಶ್ರೀಮಂತರ ಒಡಿತದಿಂದ ಬಡರೈತ ಇನ್ನೂ ಪಾರಾಗಿಲ್ಲ, ನಾವು ಸ್ವತಂತ್ರರಾಗಿ ಇಷ್ಟು ವರ್ಷಗಳಾದರೂ ಆ ಸ್ವಾತಂತ್ರ್ಯ ಏನೂ ಪರಿಣಾಮ ಮಾಡದಿರುವ ಹಳ್ಳಿಗಳು, ಸಾಮಾಜಿಕ ವರ್ಗಗಳು ಇನ್ನೂ ಇವೆ.

**ಯಾವುದು ಸಂಕೀರ್ಣ ?**

ನಾವು ಪಟ್ಟಣದ ಜೀವನವನ್ನು 'ಸಂಕೀರ್ಣ' ಎಂದು ವಿವರಿಸುತ್ತೇವೆ (–'ಸಂಕೀರ್ಣ' ಪದದ ಅರ್ಥ ಏನೇ ಆಗಿರಲಿ). ವಾಸ್ತವ ಸಂಗತಿಯೆಂದರೆ ಪಟ್ಟಣಿಗನನ್ನು ಅರ್ಥ ಮಾಡಿಕೊಳ್ಳುವುದು ಹೆಚ್ಚು ಸುಲಭ. ಅವನ ಹೋರಾಟ ವೇನಿದ್ದರೂ ತಾನು ಬದುಕುವುದಕ್ಕೆ ಸಂಬಂಧಿಸಿದ್ದು. ಆದರೆ ಇಂದಿನ ಹಳ್ಳಿಗನ ಜೀವನ ಒಂದು ಬಗೆಯ ಇತ್ತಂಡದಲ್ಲಿ ಸಿಕ್ಕಿಕೊಂಡಿದೆ. ಇದಕ್ಕೆ ಕಾರಣ–ಎರಡು ಬಗೆಯ ಮೌಲ್ಯಗಳ ಮಧ್ಯೆ ಅವನು ಸಿಕ್ಕಿಕೊಂಡಿರುವುದು. ಹಳೆಯ ಪರಂಪರೆ, ಮತ ಮತ್ತು ಅದು ನೀಡಿದ ಮೌಲ್ಯಗಳು, ನಾಗರಿಕತೆ, ಬದಲಾಗುತ್ತಿರುವ ಸಾಮಾಜಿಕ ವ್ಯವಸ್ಥೆಗಳ ಮಧ್ಯೆ ಅವನು ಕಂಗಾಲಾಗಿದ್ದಾನೆ. ಅವನಲ್ಲಿ ಬದುಕಿನ ಹೋರಾಟವೂ ಇದೆ, ಆಂತರಂಗಿಕವಾದ ಮೌಲ್ಯ ಘರ್ಷಣೆಯೂ ಇದೆ. ಇದಕ್ಕೆ ಒಂದು ಸಣ್ಣ ನಿದರ್ಶನ ವನ್ನು ತೆಗೆದುಕೊಳ್ಳುತ್ತೇನೆ. ಪೇಟೆಯಲ್ಲಿ ಬಿಟ್ಟಿಯಾಗಿ ಏನೂ ಸಿಗುವುದಿಲ್ಲ. ಆದ್ದರಿಂದ ಪಟ್ಟಣಿಗನನ್ನು ಏನಾದರೂ ಕೇಳಿದಾಗ, ಅವನು ತನಗೆ ಇಷ್ಟವಿದ್ದರೆ ಕೊಡಬಹುದು ; ಅಥವಾ ಸ್ಪಷ್ಟವಾಗಿ ನಿರಾಕರಿಸಬಹುದು. ಆದರೆ ಅಲ್ಲಿ ತಾಕಲಾಟದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನಾವು ಹಳ್ಳಿಯ ಆಲೆಮನೆಯೊಂದಕ್ಕೆ ಹೋದೆವೆಂದಿಟ್ಟುಕೊಳ್ಳೋಣ. ಬಂದವರಿಗೆಲ್ಲ ಬಿಟ್ಟಿ ಕಬ್ಬಿನಹಾಲು ಕೊಡುವುದು ಹಿಂದಿನಿಂದ ಬಂದಿರುವ ಪದ್ಧತಿ. ಹಾಗೆ ಕೊಟ್ಟರೆ ತನಗೆ ನಷ್ಟವೆಂದು, ನಾಲ್ಕು ಕಬ್ಬಿಗೆ ಪೇಟೆಯಲ್ಲಿ ಒಂದು ರೂಪಾಯಿ ಸಿಗುತ್ತದೆಂದು ರೈತನಿಗೆ ಗೊತ್ತಿದೆ.ಹಾಗೆಂದು, ದುಡ್ಡು ತೆಗೆದುಕೊಂಡು ಹಾಲುಕೊಡಲು ಅವನ ಮನಸ್ಸು ಒಪ್ಪುವುದಿಲ್ಲ. ಇಂಥ ಸಂದರ್ಭದಲ್ಲಿ ಮನಸ್ಸಿನಲ್ಲೇ ಗೊಣಗಿಕೊಂಡು, ಅಥವಾ ಗಟ್ಟಿಯಾಗಿ ಅಸಮ್ಮತಿ ಸೂಚಿಸಿ ಬಿಟ್ಟಿಯಾಗಿ ಕಬ್ಬಿನಹಾಲು ಕೊಡಬಹುದು. ದುಡ್ಡು ತೆಗೆದುಕೊಳ್ಳುವ ಆಸೆಯಿದ್ದರೂ ಹಿಂದಿನ ಪದ್ಧತಿಯ ಒತ್ತಡದಿಂದಾಗಿ ತೆಗೆದುಕೊಳ್ಳುವ ಧೈರ್ಯವಿಲ್ಲದೆ, ಹಾಲುಕೊಡದೆ, ಬಂದವರನ್ನು ಹಿಂದಕ್ಕೆ ಕಳುಹಿಸಬಹುದು. ಇದು ಬಹಳ ಒಳ್ಳೆಯ ನಿದರ್ಶನವೇನೂ ಅಲ್ಲ ಮತ್ತು ಸ್ಥಳಾಭಾವದಿಂದ ನಾನು ಈ ಸಂದರ್ಭವನ್ನು ವಿಸ್ತರಿಸಿ ವ್ಯಾಖ್ಯಾನಿಸುತ್ತಲೂ ಇಲ್ಲ. ಇದಕ್ಕಿಂತ ಒಳ್ಳೆಯ ಸಂದರ್ಭಗಳನ್ನು ಓದುಗರು ಕಲ್ಪಿಸಿಕೊಳ್ಳಬಹುದು. ಇದನ್ನು ಮುಖ್ಯವಾಗಿ ತೆಗೆದುಕೊಳ್ಳಲು ಕಾರಣ—

ಹಳ್ಳಿಗನಲ್ಲಿ ಮೌಲ್ಯಘರ್ಷಣೆ (Conflict of values) ಹೇಗೆ ನಡೆಯುತ್ತದೆಯೆಂಬುದನ್ನು ತೋರಿಸಲಿಕ್ಕೆ ಮಾತ್ರ. ಪಟ್ಟಣಿಗನಲ್ಲಿ ಈ ಘರ್ಷಣೆ ಇಲ್ಲವೆಂದು, ಅವನ ಜೀವನ ಸರಳವೆಂದು ನಾನು ಖಂಡಿತವಾಗಿಯೂ ಸೂಚಿಸುತ್ತಿಲ್ಲ. ನನ್ನ ಒಟ್ಟು ಅಭಿಪ್ರಾಯ--ಇಂದಿನ ಪಟ್ಟಣಿಗನಿಗಿಂತ ಹಳ್ಳಿಗನನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗಿದೆ, ಏಕೆಂದರೆ ಅವನು ದಡ್ಡನೂ ಅಲ್ಲ, ಪ್ರಬುದ್ಧನೂ ಅಲ್ಲ. ಅವನ ಜೀವನ ಪಟ್ಟಣಿಗನ ಜೀವನಕ್ಕಿಂತ ಅಥವಾ ಜೀವನದಷ್ಟೇ ಅಥವಾ ಜೀವನಕ್ಕಿಂತ ಸಂಕೀರ್ಣವಾಗಿದೆ.

[ಬಾಲಂಗೋಚಿ : (i) ಇಂತಹ ವಿವೇಚನೆಗಳಲ್ಲಿ ಅನಿವಾರ್ಯವಾಗಿ ಸಂಗತಿಗಳನ್ನು ಸಾಮಾನ್ಯೀಕರಿಸಬೇಕಾಗುತ್ತದೆ. ಸಾಮಾನ್ಯೀಕರಣದ ಜೊತೆಗೆ ಸರಳೀಕರಣವೂ ಬರುತ್ತದೆ. ಎಷ್ಟೋ ಕಡೆ ಹೇಳಬೇಕಾದ್ದನ್ನು ಸರಿಯಾಗಿ ನಿರೂಪಿಸಲಾರದೆ ಲೇಖಕ ಚಡಪಡಿಸಬೇಕಾಗುತ್ತದೆ. ಇದನ್ನು ಓದುಗರು ಗಮನಿಸುತ್ತಾರೆಂದು ಆಶಿಸುತ್ತೇನೆ. ಈ ಪ್ರಬಂಧವನ್ನು ಬರೆಯುವಾಗ ನನ್ನ ಮನಸ್ಸಿನಲ್ಲಿ ನನಗೆ ಚೆನ್ನಾಗಿ ಪರಿಚಿತವಿರುವ ಕರ್ನಾಟಕದ ಒಂದು ಪ್ರದೇಶದ ಹಳ್ಳಿಗಳನ್ನು ವಿಶೇಷವಾಗಿ ಗಮನದಲ್ಲಿರಿಸಿಕೊಂಡಿದ್ದೇನೆ. ಒಂದೆರಡು ಕಡೆ ಡಾ॥ ಹಿರೇಮಲ್ಲೂರ್ ಈಶ್ವರನ್ ಅವರ ಗ್ರಂಥಗಳ ಪ್ರಭಾವದಿಂದ ತಪ್ಪಿಸಿಕೊಳ್ಳಲಾಗಲಿಲ್ಲ. (ii) ಆಧುನೀಕರಣವೆಂದರೇನು? ಎಂದು ಈ ಪ್ರಬಂಧ ಓದಿದವರು ಪ್ರಶ್ನಿಸಿದ್ದಾರೆ. ನಾನು ಇದನ್ನು ಬಹಳ ಸಡಿಲವಾದ ಅರ್ಥದಲ್ಲಿ ಬಳಸಿದ್ದೇನೆ. ಹಳ್ಳಿಯವರ ವೇಷ, ಭೂಷಣ, ಮನೆ,ಉಪಕರಣ ಇತ್ಯಾದಿಗಳಲ್ಲಿ ಕಾಣುವ ವ್ಯತ್ಯಾಸ; ಎರಡು ಅವರ ಅಂತರಂಗದಲ್ಲಿ, ಆಲೋಚನೆಯಲ್ಲಿ, ನೀತಿ ಪ್ರಜ್ಞೆಯಲ್ಲಿ, ಜೀವನ ವಿಧಾನದಲ್ಲಿ ಆಗಿರುವ ವ್ಯತ್ಯಾಸ-ಎರಡರಲ್ಲೂ ಆಧುನಿಕತೆಯನ್ನು ಗುರುತಿಸಬಹುದು. ಈಗಿನ ಜಗತ್ತು, ಹಳ್ಳಿಗಿಂತ ವಿಶಾಲವಾಗಿರುವ ದೇಶ,ದೇಶದ ಆಚೆ ಇರುವ ಪ್ರಪಂಚ ಇವುಗಳ ಬಗ್ಗೆ ಅರಿವು, ತನ್ನ ಬಗ್ಗೆ ಆತ್ಮವಿಶ್ವಾಸ ಪ್ರಜಾಪ್ರಭುತ್ವದ ಬಗ್ಗೆ ಕಲ್ಪನೆ - ಇವುಗಳ ಬಗ್ಗೆ ಹಳ್ಳಿಯವರು ಜಾಗೃತನಾಗಿರುವಲ್ಲಿಯೂ ಆಧುನಿಕತೆಯನ್ನು ಗುರುತಿಸಬಹುದು.]

# ಅಸ್ಪೃಶ್ಯತಾ (ಅಪರಾಧಗಳ) ಅಧಿನಿಯಮ, 1955
(1955ರ ಕ್ರಮಾಂಕ 22)

---

ಅನು : **ಎಸ್. ನಾರಾಯಣಮೂರ್ತಿ**

**ಪಾಠ :**

"ಅಸ್ಪೃಶ್ಯತೆ"ಯ ಆಚರಣೆಯನ್ನು ಮಾಡುವುದಕ್ಕೆ, ಅದರಿಂದ ಏಳುವ ಯಾವುದಾದರೂ ಅನರ್ಹತೆಯ ಪ್ರವರ್ತನಕ್ಕೆ ಮತ್ತು ತತ್ಸಂಬಂಧದ ವಿಷಯಗಳಿಗೆ ದಂಡವನ್ನು ವಿಧಿಸುವ ಬಗ್ಗೆ ಈ ಅಧಿನಿಯಮವಿದೆ.

ಭಾರತದ ಪ್ರಜಾರಾಜ್ಯದ ಆರನೇ ಸಾಲಿನಲ್ಲಿ ಪಾರ್ಲಿಮೆಂಟಿನಲ್ಲಿ ಈ ಕೆಳಗಿನಂತೆ ಅಧಿನಿಯಮವಾಯಿತು.

**1. ಸಂಕ್ಷಿಪ್ತನಾಮ, ವ್ಯಾಪ್ತಿ ಮತ್ತು ಪ್ರಾರಂಭ :**

1. ಈ ಅಧಿನಿಯಮವನ್ನು, 1955ನೇ ಇಸವಿಯ ಅಸ್ಪೃಶ್ಯತಾ (ಅಪರಾಧಗಳ) ಅಧಿನಿಯಮವೆಂದು ಕರೆಯಬಹುದು.

2. ಇದು ಸಮಗ್ರ ಭಾರತಕ್ಕೆ ಅನ್ವಯಿಸುತ್ತದೆ.

3. ಕೇಂದ್ರ ಸರಕಾರವು, ಸರಕಾರೀ ಗೆಜೆಟ್ಟಿನಲ್ಲಿ ಅಧಿಸೂಚನೆಯ ದ್ವಾರಾ, ಯಾವ ದಿನಾಂಕದಂದು ಅಮಲಿನಲ್ಲಿ ಬರತಕ್ಕದ್ದೆಂದು ನಿರ್ಣಯಿಸುತ್ತದೆಯೋ ಆ ದಿನಾಂಕದಂದು ಇದು ಅಮಲಿನಲ್ಲಿ ಬರತಕ್ಕದ್ದು.

**2. ವಿವರಣೆಗಳು :**

ಈ ಅಧಿನಿಯಮದಲ್ಲಿ, ಸಂದರ್ಭವು ಬೇರೊಂದರ್ಥವನ್ನು ಅಪೇಕ್ಷಿಸದಿದ್ದರೆ,

(ಅ) "ಹೋಟೆಲ್" ಎಂಬುದು ಉಪಾಹಾರ ಗೃಹ, ಭೋಜನಾಲಯ, ವಸತಿಗೃಹ, ಕಾಫೀಭವನ, ಕೆಫೆಗಳನ್ನು ಒಳಗೊಳ್ಳುತ್ತದೆ.

(ಬ) "ಸ್ಥಾನ" ಎಂಬುದು ಗೃಹ, ಭವನ, ತಂಬು ಮತ್ತು ಹಡಗಗಳನ್ನೊಳಗೊಳ್ಳುತ್ತದೆ.

(ಕ) ''ಸಾರ್ವಜನಿಕ ಮನರಂಜನೆಯ ಸ್ಥಾನ'' ಎಂಬುದು ಸಾರ್ವಜನಿಕರನ್ನು ಪ್ರವೇಶನಗೊಳಿಸುವ ಮತ್ತು ಮನರಂಜನೆಯನ್ನು ಒದಗಿಸುವ ಮತ್ತು ಮನರಂಜನೆ ಜರಗುವ ಸ್ಥಳಗಳನ್ನು ಒಳಗೊಳ್ಳುತ್ತದೆ.

**ಸ್ಪಷ್ಟೀಕರಣ :**

''ಮನರಂಜನೆ'' ಎಂಬುದು ಯಾವುದೇ ಪ್ರದರ್ಶನ, ಅಭಿನಯ, ಕ್ರೀಡೆ, ಪಂದ್ಯಾಟ ಮತ್ತು ಯಾವುದೇ ಇತರ ವಿನೋದಾವಳಿಯ ರೂಪವನ್ನು ಒಳಗೊಳ್ಳುತ್ತದೆ.

(ಡ) ''ಸಾರ್ವಜನಿಕ ಪೂಜಾಸ್ಥಳ'' ಎಂದರೆ ಯಾವುದೇ ಹೆಸರಿನಿಂದಾಗಲೀ ಪ್ರಸಿದ್ಧವಾದ ಸಾರ್ವಜನಿಕ, ಧಾರ್ಮಿಕ ಉಪಾಸನಾ ಸ್ಥಳವಾಗಿ ಉಪಯೋಗಿಸಲ್ಪಡುವ ಅಥವಾ ಧಾರ್ಮಿಕ ಕೆಲಸಕ್ಕಾಗಿ ಸಾಮಾನ್ಯವಾಗಿ ಮೀಸಲಾಗಿಡುವ ಅಥವಾ ಯಾವುದೇ ಧರ್ಮವನ್ನು ಸ್ವೀಕರಿಸಿದ ಅಥವಾ ಧಾರ್ಮಿಕ ಸಂಪ್ರದಾಯಕ್ಕೆ, ಇಲ್ಲವೇ ಅದರ ಯಾವುದಾದರೂ ಶಾಖೆಗೆ ಸೇರಿದ ಜನರು ಧಾರ್ಮಿಕ ಅರ್ಚನಾದಿ ಕಾರ್ಯಗಳನ್ನು ನಡೆಸುವುದಕ್ಕೆ ಅಥವಾ ಪ್ರಾರ್ಥನೆಯನ್ನು ಸಲ್ಲಿಸುವುದಕ್ಕೆ ಸಾಮಾನ್ಯವಾಗಿ ಉಪಯೋಗಿಸುವ ಸ್ಥಳ; ಮತ್ತು ಅಂಥಾ ಸ್ಥಳದ ಉಪಭಾಗ ಅಥವಾ ಹೊಂದಿಕೊಂಡಿರುವ ಎಲ್ಲಾ ಸ್ಥಳ ಮತ್ತು ಸಣ್ಣಗುಡಿಗಳೂ ಸಹ ಒಳಗೊಳ್ಳುತ್ತವೆ.

(ಇ) ''ಅಂಗಡಿ'' ಎಂದರೆ ರಖಮಿನಲ್ಲಾಗಲೀ, ಬಿಡಿಯಲ್ಲಾಗಲೀ ಸಾಮಾನುಗಳನ್ನು ಮಾರಾಟ ಮಾಡುವ ವಟಾರ ಹಾಗೂ ಬಟ್ಟೆ ಮಡಿ ಮಾಡುವ ಸ್ಥಳ, ಆಯುಷ್ಕರ್ಮಶಾಲೆ ಮತ್ತು ಗ್ರಾಹಕರಿಗೆ ಸೇವೆ ಸಲ್ಲಿಸುವ ಬೇರೆ ಯಾವುದೇ ಸ್ಥಳಗಳೂ ಸೇರುತ್ತವೆ.

**3. ಧಾರ್ಮಿಕ ಅನರ್ಹತೆಯನ್ನು ಪ್ರವರ್ತಿಸುವುದಕ್ಕೆ ದಂಡನೆ :**

ಯಾವಾತನು "ಅಸ್ಪೃಶ್ಯತೆ"ಯ ಕಾರಣದಿಂದಾಗಿ ಮತ್ತೊಬ್ಬನನ್ನು

(ಅ) ಅವನ ಮತೀಯರಿಗೆ ಇಲ್ಲವೇ ಅದೇ ಧಾರ್ಮಿಕ ಸಂಪ್ರದಾಯಕ್ಕೆ ಅಥವಾ ಶಾಖೆಗೆ ಸೇರಿದ ಜನರಿಗೆ ಪ್ರವೇಶಸಾಧ್ಯವಾಗಿರುವ ಯಾವುದೇ ಪೂಜಾಸ್ಥಳಕ್ಕೆ ; ಅಥವಾ

(ಬ) ಪೂಜಿಸುವುದಕ್ಕೆ ಇಲ್ಲವೆ ಪ್ರಾರ್ಥನೆಯನ್ನು ಸಲ್ಲಿಸಲಿಕ್ಕೆ ಇಲ್ಲವೆ ಯಾವುದೇ ಸಾರ್ವಜನಿಕ ಪೂಜಾಸ್ಥಳದಲ್ಲಿ ಯಾವುದೇ ಧಾರ್ಮಿಕ ಅರ್ಚನಾದಿಗಳನ್ನು ಕೈಗೊಳ್ಳಲಿಕ್ಕೆ ಇಲ್ಲವೆ ಯಾವುದೇ ಪವಿತ್ರಕೊಳ, ಬಾವಿ, ಊಟೆ, ಇಲ್ಲವೇ ಕಾಲುವೆಗಳಲ್ಲಿ ಇತರ ಅದೇ ಪಂಥದವರು ಇಲ್ಲವೆ ಸಂಪ್ರದಾಯ ಇಲ್ಲವೆ

ಶಾಖೆಯುವರಿಗೆ ಸಾಧ್ಯವಾದಷ್ಟು ಮತ್ತು ಅದೇ ರೀತಿಯಲ್ಲಿ ಮತ್ತು ಅದೇ ಮಟ್ಟದ ವರೆಗೆ ಸ್ನಾನಮಾಡಲಿಕ್ಕೆ ಇಲ್ಲವೆ ನೀರನ್ನು ಉಪಯೋಗಿಸಲಿಕ್ಕೆ—

ಆತಂಕವನ್ನು ಒಡ್ಡಿದರೆ ಆರು ತಿಂಗಳ ಪರ್ಯಂತದ ಕಾರಾವಾಸ ಇಲ್ಲವೆ ರೂ. ಐದುನೂರರವರೆಗೆ ವ್ಯಾಪಿಸಬಹುದಾದ ದಂಡ ಇಲ್ಲವೆ ಇವೆರಡೂ ದಂಡನೆಗಳಿಂದ ದಂಡಿಸಲ್ಪಡತಕ್ಕದ್ದು.

**ಸ್ಪಷ್ಟೀಕರಣ :**

ಈ ನಿಯಮ ಮತ್ತು ನಿಯಮ ನಾಲ್ಕಕ್ಕೆ ಬುದ್ಧ, ಶೀಖ, ಜೈನ ಮತೀಯರು ಇಲ್ಲವೆ ವೀರಶೈವ, ಲಿಂಗಾಯಿತ, ಆದಿವಾಸಿಗಳು, ಬ್ರಾಹ್ಮೊ, ಪ್ರಾರ್ಥನಾ, ಆರ್ಯಸಮಾಜ ಮತ್ತು ಸ್ವಾಮಿನಾರಾಯಣ ಸಂಪ್ರದಾಯಗಳ ಅನುಯಾಯಿಗಳು ಇಲ್ಲವೆ ಯಾವುದೇ ರೀತಿಯಲ್ಲಾಗಲೀ ಹಿಂದೂ ಧರ್ಮವನ್ನು ಪಾಲನೆ ಮಾಡುವವರು ಹಿಂದೂಗಳೆಂದು ಪರಿಗಣಿಸಲ್ಪಡುವರು.

**4. ಸಾಮಾಜಿಕ ಅನರ್ಹತೆಯನ್ನು ಪ್ರವರ್ತಿಸುವುದಕ್ಕೆ ದಂಡನೆ :**

ಯಾವಾತನು "ಅಸ್ಪೃಶ್ಯತೆ"ಯ ಕಾರಣದಿಂದಾಗಿ ಮತ್ತೊಬ್ಬನ ವಿರುದ್ಧ-

(i) ಯಾವುದೇ ಅಂಗಡಿ, ಸಾರ್ವಜನಿಕ ಉಪಾಹಾರಗೃಹ, ಹೋಟೇಲು ಇಲ್ಲವೇ ಮನರಂಜನೆಯ ಸ್ಥಳಗಳ ಪ್ರವೇಶಕ್ಕೆ ; ಅಥವಾ

(ii) ಉಪಾಹಾರಗೃಹ, ಹೋಟೇಲು, ಧರ್ಮಶಾಲೆ, ಸರಯೀ ಇಲ್ಲವೆ ಪ್ರವಾಸಿಮಂದಿರಗಳಲ್ಲಿ ಸಾಮಾನ್ಯ ಜನರ ಅಥವಾ ಅದೇ ಮತಕ್ಕೆ ಇಲ್ಲವೆ ಧಾರ್ಮಿಕ ಸಂಪ್ರದಾಯಕ್ಕೆ ಇಲ್ಲವೆ ಅದರ ಯಾವುದೇ ಶಾಖೆಗೆ ಸೇರಿದ ವ್ಯಕ್ತಿಗಳ ಬಳಸುವಿಕೆಗೆಂದು ಇಟ್ಟು ಪಾತ್ರೆಗಳನ್ನು ಹಾಗೂ ಇತರ ಸಾಮಗ್ರಿಗಳನ್ನು, ಉಪಯೋಗಿಸುವುದಕ್ಕೆ; ಅಥವಾ

(iii) ಯಾವುದಾದರೂ ಉದ್ಯೋಗವನ್ನು ಮಾಡುವುದಕ್ಕೆ ಅಥವಾ ಯಾವುದಾದರೂ ಜೀವನಪರವೃತ್ತಿ, ವ್ಯಾಪಾರ ಇಲ್ಲವೆ ವ್ಯವಹಾರವನ್ನು ಕೈಗೊಳ್ಳುವುದಕ್ಕೆ ; ಅಥವಾ

(iv) ಸಾರ್ವಜನಿಕರು ಅಥವಾ ಅದೇ ಮತೀಯರು ಇಲ್ಲವೆ ಧಾರ್ಮಿಕ ಪಂಥಕ್ಕೆ ಇಲ್ಲವೆ ಯಾವುದೇ ಶಾಖೆಗೆ ಒಳಪಟ್ಟ ಜನರಿಗೆ ಉಪಯೋಗಿಸಲಿಕ್ಕೆ ಅಥವಾ ಪ್ರವೇಶಿಸಲಿಕ್ಕೆ ಅಧಿಕಾರವಿರುವ ಯಾವುದಾದರೂ ನದಿ, ನದ, ಊಟೆ, ಬಾವಿ, ಕೆರೆ, ಹೌದ, ನೀರಿನ ನಲ್ಲಿ ಇಲ್ಲವೆ ನೀರಿನ ಆಸರೆ, ಇಲ್ಲವೇ ಸ್ನಾನಘಟ್ಟ ಸ್ಮಶಾನಭೂಮಿ ಇಲ್ಲವೆ ದಹನಗೃಹ ಯಾವುದಾದರೂ ಸ್ವಚ್ಛತಾ ಸವಲತ್ತುಗಳು, ಯಾವುದೇ ರಸ್ತೆ

ಇಲ್ಲವೆ ದಾರಿ, ಯಾವುದೇ ಸಾರ್ವಜನಿಕರು ಸುಳಿದಾಡುವ ಸ್ಥಳ, ಇವುಗಳ ಉಪಯೋಗಕ್ಕೆ ಇಲ್ಲವೇ ಪ್ರವೇಶಕ್ಕೆ ;

(v) ರಾಜ್ಯನಿಧಿಯಿಂದ ಪೂರ್ಣವಾಗಿ ಇಲ್ಲವೆ ಅಂಶತಃ ಪೋಷಿತವಾದ ಧರ್ಮಾರ್ಥಕ್ಕಾಗಿ ಅಥವಾ ಸಾರ್ವಜನಿಕರ ಉಪಯೋಗಕ್ಕಾಗಿರುವ ಸ್ಥಳ, ಇಲ್ಲವೆ ಸಾಮಾನ್ಯ ಜನರ ಅಥವಾ ಅದೇ ಮತೀಯರ ಅಥವಾ ಅದೇ ಧಾರ್ಮಿಕ ಸಂಪ್ರದಾಯಕ್ಕೆ ಇಲ್ಲವೆ ಯಾವುದೇ ಶಾಖೆಗೆ ಸೇರಿದ ವ್ಯಕ್ತಿಗಳಿಗೆಂದೇ ಮೀಸಲಾಗಿಟ್ಟ ಸ್ಥಳಗಳ ಉಪಯೋಗಕ್ಕೆ ಮತ್ತು ಪ್ರವೇಶಕ್ಕೆ ಅಥವಾ

(vi) ಸಾಮಾನ್ಯಜನರ ಅಥವಾ ಅದೇ ಮತೀಯರ ಇಲ್ಲವೆ ಅದೇ ಧಾರ್ಮಿಕ ಸಂಪ್ರದಾಯಕ್ಕೆ ಇಲ್ಲವೆ ಅದರ ಯಾವುದೇ ಶಾಖೆಗೆ ಸೇರಿದ ವ್ಯಕ್ತಿಗಳ ಉಪಯೋಗಕ್ಕೆಂದು ರಚಿತವಾದ ಧರ್ಮನಿಧಿಯ ಪ್ರಯೋಜನವನ್ನು ಭೋಗಿಸುವುದಕ್ಕೆ ; ಅಥವಾ

(vii) ಯಾವುದೇ ಸಾರ್ವಜನಿಕ ವಾಹನಗಳ ಉಪಯೋಗಕ್ಕೆ ಇಲ್ಲವೆ ಅವುಗಳ ಪ್ರವೇಶಕ್ಕೆ ; ಅಥವಾ

(viii) ಯಾವುದೇ ಪ್ರದೇಶದಲ್ಲಿ ನಿವಾಸಯೋಗ್ಯವಾದ ಮಠಾರದ ನಿರ್ಮಾಣಕ್ಕೆ, ಅರ್ಜನೆಗೆ ಇಲ್ಲವೆ ಅದನ್ನು ವಹಿವಾಟುಮಾಡುವುದಕ್ಕೆ ; ಅಥವಾ

(ix) ಸಾಮಾನ್ಯ ಜನರಿಗೆ ಅಥವಾ ಅದೇ ಮತೀಯರಿಗೆ ಇಲ್ಲವೆ ಅದೇ ಧಾರ್ಮಿಕ ಸಂಪ್ರದಾಯ ಇಲ್ಲವೆ ಅದರ ಯಾವುದೇ ಶಾಖೆಗೆ ಸೇರಿದ ವ್ಯಕ್ತಿಗಳಿಗೆ ಪ್ರವೇಶಸಾಧ್ಯವಾಗಿರುವ ಧರ್ಮಶಾಲೆ, ಸರಯೀ, ಅಥವಾ ಪ್ರವಾಸಿಮಂದಿರ ಇವುಗಳ ಉಪಯೋಗಕ್ಕೆ ; ಅಥವಾ

(x) ಯಾವುದೇ ಸಾಮಾಜಿಕ ಅಥವಾ ಧಾರ್ಮಿಕ ಸಂಪ್ರದಾಯ, ಪದ್ಧತಿ, ಇಲ್ಲವೆ ಉತ್ಸವಗಳ ಅನುಷ್ಠಾನಕ್ಕೆ ಅಥವಾ ಯಾವುದಾದರೂ ಧಾರ್ಮಿಕ ಸಂಬಂಧದ ಮೆರವಣಿಗೆಯಲ್ಲಿ ಭಾಗವಹಿಸುವುದಕ್ಕೆ ; ಅಥವಾ

(xi) ಆಭರಣಗಳ ಮತ್ತು ಅಲಂಕಾರಗಳ ಉಪಯೋಗಕ್ಕೆ—

ಯಾವುದಾದರೂ ಅನರ್ಹತೆಯನ್ನು ಯಾವನು ಹೇರುತ್ತಾನೋ ಅಂಥವನನ್ನು ಆರು ತಿಂಗಳ ಪರ್ಯಂತರ ಕಾರವಾಸ ಇಲ್ಲವೇ ರೂ. ಐದುನೂರರವರೆಗಿನ ದಂಡ ಇಲ್ಲವೆ ಇವೆರಡೂ ದಂಡನೆಗಳಿಂದಲೂ ದಂಡಿಸಲ್ಪಡತಕ್ಕದ್ದು.

5. **ಆಸ್ಪತ್ರೆ ಇತ್ಯಾದಿ ಸ್ಥಳಾದಿಗಳಿಗೆ ಜನರನ್ನು ಸೇರಿಸಲು ನಿರಾಕರಿಸುವುದಕ್ಕೆ ದಂಡನೆ ;**

ಯಾವಾತನು "ಅಸ್ಪೃಶ್ಯತೆ"ಯ ಕಾರಣದಿಂದಾಗಿ—

(ಅ) ಯಾವುದಾದರೂ ವ್ಯಕ್ತಿಗೆ ಚಿಕಿತ್ಸಾಲಯ, ಔಷಧಾಲಯ, ವಿದ್ಯಾಸಂಸ್ಥೆ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ವಸತಿಗೃಹಗಳಿಗೆ, ಅಂಥ ಚಿಕಿತ್ಸಾಲಯ, ವಿದ್ಯಾಸಂಸ್ಥೆ ಇಲ್ಲವೆ ವಸತಿಗೃಹವು ಸಾಮಾನ್ಯ ಜನತೆಯ ಇಲ್ಲವೆ ಅದರ ವಿಭಾಗದ ಜನರ ಕಲ್ಯಾಣಕ್ಕಾಗಿ ಸ್ಥಾಪಿತವಾಗಿದ್ದಲ್ಲಿ ಅಥವಾ ನಡೆಯುತ್ತಿದ್ದಲ್ಲಿ ಅಂಥವುಗಳ ಪ್ರವೇಶಕ್ಕೆ ನಿರೋಧಿಸಿದರೆ; ಅಥವಾ

(ಬ) ಮೇಲೆ ಹೇಳಿದ ಸಂಸ್ಥೆಗಳಿಗೆ ಪ್ರವೇಶಕೊಟ್ಟನಂತರ ಅಂಥ ವ್ಯಕ್ತಿಯ ವಿರುದ್ಧ ವಿಭೇದಪೂರ್ಣ ಕಾರ್ಯವನ್ನೇನಾದರೂ ಕೈ ಗೊಂಡಲ್ಲಿ ;

ಅಂತಹವನು ಆರುತಿಂಗಳ ಪರ್ಯಂತದ ಕಾರಾವಾಸ ಇಲ್ಲವೆ ರೂ. 500 ರವರೆಗಿನ ದಂಡ ಅಥವಾ ಇವೆರಡೂ ದಂಡನೆಗಳಿಂದ ದಂಡಿತನಾಗತಕ್ಕದ್ದು.

**6. ಸಾಮಾನುಗಳನ್ನು ಮಾರಾಟಮಾಡಲು ಇಲ್ಲವೆ ಸೇವೆಸಲ್ಲಿಸಲು ನಿರಾಕರಿಸುವುದಕ್ಕೆ ದಂಡ :**

ಯಾವಾತನು "ಅಸ್ಪೃಶ್ಯತೆ"ಯ ಕಾರಣದಿಂದಾಗಿ ವ್ಯವಹಾರದ ಸಾಮಾನ್ಯ ಅನುಕ್ರಮದಂತೆ ಇತರರಿಗೆ ಸಾಮಗ್ರಿಗಳನ್ನು ಮಾರಾಟಮಾಡುವ ಮತ್ತು ಸೇವೆ ಸಲ್ಲಿಸುವ ತೆರದಲ್ಲಿ ಯಾವನಿಗಾದರೂ ಅದೇ ಹೊತ್ತಿಗೆ ಮತ್ತು ಅದೇ ಸ್ಥಳದಲ್ಲಿ ಮತ್ತು ಅದೇ ಶರತ್ತು ಮತ್ತು ನಿಬಂಧನೆಗಳ ಮೇರೆ ಸಾಮಗ್ರಿಗಳನ್ನು ವಿಕ್ರಯಿಸಲು ಮತ್ತು ಸೇವೆಯನ್ನು ಕೈಗೊಳ್ಳಲು ನಿರಾಕರಿಸಿದರೆ ಅಂಥವನು ಆರುತಿಂಗಳ ಪರ್ಯಂತರ ಕಾರವಾಸ ಇಲ್ಲವೆ ರೂ. ಐನೂರರವರೆಗಿನ ದಂಡ ಅಥವಾ ಇವೆರಡೂ ದಂಡನೆಗಳಿಂದ ದಂಡಿಸಲ್ಪಡತಕ್ಕದ್ದು.

**7. ಅಸ್ಪೃಶ್ಯತೆಯಿಂದ ಉದ್ಭೂತವಾಗುವ ಇತರ ಅಪರಾಧಗಳಿಗೆ ದಂಡನೆ :**

(ಅ) ಯಾವಾತನು ರಾಜ್ಯಾಘಟನೆಯ ಹದಿನೇಳನೇ ನಿಂಬಂಧನೆಯನ್ವಯ "ಅಸ್ಪೃಶ್ಯತೆ"ಯನ್ನು ತೊಡೆದು ಹಾಕಿದ್ದರ ಪ್ರಯುಕ್ತ ಜನಿತವಾಗುವ ಹಕ್ಕುಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಆತಂಕಿಸುತ್ತಾನೋ ; ಅಥವಾ

(ಬ) ಅಂಥ ಹಕ್ಕನ್ನು ಅನುಷ್ಠಾನಕ್ಕೆ ತರುವಲ್ಲಿ ಯಾರಾದರೊಬ್ಬನಿಗೆ ಪೀಡಿಸುತ್ತಾನೋ, ಅನ್ಯಾಯವೆಸಗುತ್ತಾನೋ, ಕಿರುಕುಳ ಕೊಡುತ್ತಾನೋ, ಆತಂಕಿಸುತ್ತಾನೋ ಅಥವಾ ತಡೆಯನ್ನು ಮಾಡುತ್ತಾನೋಇಲ್ಲವೆ ತಡೆಮಾಡಲು ಯತ್ನಿಸುತ್ತಾನೋ ಅಥವಾ ಅಂಥ ಹಕ್ಕನ್ನು ಪ್ರಯೋಗಿಸಿಕೊಂಡ ಬಗ್ಗೆ ಯಾರಾದರೊಬ್ಬನಿಗೆ ಪೀಡನೆ, ಅನ್ಯಾಯ, ಕ್ಲೇಶಪಡಿಸುತ್ತಾನೋ ಅಥವಾ ಬಹಿಷ್ಕರಿಸುತ್ತಾನೋ ; ಅಥವಾ

(ಕ) ಯಾವುದಾದರೂ ವ್ಯಕ್ತಿಗೆ ಇಲ್ಲವೆ ವ್ಯಕ್ತಿವರ್ಗಕ್ಕೆ ಇಲ್ಲವೆ ಸಾಧಾರಣ ಜನತೆಗೆ, ಉಕ್ತ ಇಲ್ಲವೆ ಲಿಖಿತ ಶಬ್ದಗಳಿಂದ, ಇಲ್ಲವೆ ಸಂಜ್ಞೆ ಇಲ್ಲವೆ ದೃಶ್ಯ ಪ್ರದರ್ಶನಗಳಿಂದ ಇಲ್ಲವೆ ಅನ್ಯರೀತಿಯಲ್ಲಿ ಅಸ್ಪೃಶ್ಯತೆಯನ್ನು ಯಾವುದಾದರೂ ರೀತಿಯಿಂದ ಆಚರಿಸುವ ಬಗ್ಗೆ ಉದ್ರೇಕಿಸುತ್ತಾನೋ ಅಥವಾ ಪ್ರೋತ್ಸಾಹ ನೀಡುತ್ತಾನೋ—

ಅಂಥವನು ಆರು ತಿಂಗಳ ಪರ್ಯಂತದ ಕಾರಾವಾಸ ರೂ.ಐದುನೂರರವರೆಗಿನ ದಂಡ ಅಥವಾ ಇವೆರಡೂ ದಂಡನೆಗಳಿಂದ ಶಿಕ್ಷಾರ್ಹನಾಗತಕ್ಕದ್ದು.

**ಸ್ಪಷ್ಟೀಕರಣ :**—ಒಬ್ಬಾತನು

(ಅ) ಅಂಥ ಮತ್ತೊಬ್ಬ ವ್ಯಕ್ತಿಗೆ ಬಾಡಿಗೆಗೆ ಕೊಡಲು ಮತ್ತು ಮನೆ ಅಥವಾ ಭೂಮಿಯನ್ನು ಉಪಯೋಗಿಸಲು ಇಲ್ಲವೆ ಸ್ವಾಧೀನಪಡಿಸಿಕೊಳ್ಳಲು ಪರವಾನಗಿಯನ್ನು ನಿರಾಕರಿಸಿದರೆ, ಅಥವಾ ಅಂಥಾ ಮತ್ತೊಬ್ಬ ವ್ಯಕ್ತಿಯೊಡನೆ ವ್ಯವಹರಿಸಲು, ಅವನಿಗಾಗಿ ವೇತನಕ್ಕೆ ಕೆಲಸಮಾಡಲು ಇಲ್ಲವೆ ಕಾರ್ಯಭಾರ ಮಾಡಲು ಅಥವಾ ಸಾಂಪ್ರದಾಯಿಕ ಸೇವೆಯನ್ನು ಸಲ್ಲಿಸಲು ಇಲ್ಲವೆ ಹೊಂದಿಕೊಳ್ಳಲು ನಿರಾಕರಿಸಿದರೆ, ಅಥವಾ ಹಾಗೆ ಹೇಳಿದ ವಿಷಯಗಳನ್ನು ಸಾಮಾನ್ಯ ವ್ಯಾವಹರಿಕ ರೀತಿಯ ಶರತ್ತುಗಳಲ್ಲಿಯೇ ನಡೆಸಿಕೊಂಡು ಹೋಗುವುದಕ್ಕೆ ನಿರಾಕರಿಸಿದರೆ; ಅಥವಾ

(ಬ) ಇತರ ಅಂಥವರೊಡನೆ ಸಾಮಾನ್ಯವಾಗಿ ನಡೆಕೊಳ್ಳುವಂತೆ ನಡೆಕೊಳ್ಳದೆ ವೃತ್ತ್ಯಾತ್ಮಕ ಅಥವಾ ವ್ಯಾವಹಾರಿಕ ಸಂಬಂಧಗಳನ್ನು ವರ್ಜಿಸಿದರೆ—

ಮತ್ತೊಬ್ಬನನ್ನು ಬಹಿಷ್ಕಾರ ಮಾಡಿದನೆಂದು ಪರಿಗಣಿಸಲ್ಪಡುವುದು.

ಯಾವಾತನು—

ಒಬ್ಬ ವ್ಯಕ್ತಿಯು "ಅಸ್ಪೃಶ್ಯತೆ"ಯನ್ನು ಆಚರಿಸಲು ನಿರಾಕರಿಸಿದನೆಂಬ ಅಥವಾ ಅಂಥ ವ್ಯಕ್ತಿಯು ಈ ಅಧಿನಿಯಮದ ಉದ್ದೇಶಗಳನ್ನು ಮುಂತರುವುದಕ್ಕೆ ಏನಾದರೂ ಕಾರ್ಯವನ್ನು ಕೈಗೊಂಡನೆಂಬ ಕಾರಣದ ಮೇಲಿಂದ,

(i) ತನ್ನ ಸಮಾಜಕ್ಕೆ ಅಥವಾ ಯಾವುದಾದರೂ ವಿಭಾಗಕ್ಕೆ ಸೇರಿದ ಯಾವುದಾದರೂ ವ್ಯಕ್ತಿಗೆ ಅವನು ಆ ಸಮಾಜ ಇಲ್ಲವೆ ಆ ವಿಭಾಗಕ್ಕೆ ಸೇರಿದವನಾಗಿ ಪ್ರಾಪ್ತವಾಗುವ ಹಕ್ಕು ಇಲ್ಲವೆ ವಿಶೇಷಾಧಿಕಾರಿಗಳನ್ನು ನಿರಾಕರಿಸಿದರೆ; ಅಥವಾ

(ii) ಅಂಥ ವ್ಯಕ್ತಿಯನ್ನು ಬಹಿಷ್ಕಾರವಿಡುವುದರಲ್ಲಿ ಏನಾದರೂ ಭಾಗ ತೆಗೆದುಕೊಂಡರೆ,

ಅಂಥವನು ಆರುತಿಂಗಳ ಪರ್ಯಂತದ ಕಾರಾವಾಸ ಇಲ್ಲವೆ ರೂ. ಐದು ನೂರರವರೆಗಿನ ದಂಡ ಇಲ್ಲವೆ ಇವೆರಡೂ ದಂಡನೆಗಳಿಂದ ದಂಡಿಸಲ್ಪಡತಕ್ಕದ್ದು.

**8. ಕೆಲವು ವಿದ್ಯಮಾನಗಳಲ್ಲಿ ಲೈಸೆನ್ಸುಗಳ ರದ್ದತಿ ಇಲ್ಲವೆ ಅಮಾನತು :**

ಆರನೇ ನಿಯಮದಲ್ಲಿ ನಮೂದಿಸಿದ ಅಪರಾಧಕ್ಕೆ ಒಬ್ಬಾತನು ದೋಷಿ ಎಂದು ನಿರ್ಣಯಿಸಲ್ಪಟ್ಟಿದ್ದು, ಅವನು ಹಾಗೆ ತಪ್ಪುಮಾಡಿದ ವೃತ್ತಿ, ವ್ಯಾಪಾರ, ಉದ್ಯೋಗ ಇಲ್ಲವೇ ಕಸಬಿನ ಸಂಬಂಧವಾಗಿ ಆಗ ಪ್ರಚಲಿತವಿರುವ ಕಾನೂನಿನ ಮೇರೆ ಯಾವುದಾದರೂ ಲೈಸನ್ಸನ್ನು ಪಡಕೊಂಡಿದ್ದರೆ, ಅಂಥ ಅಪರಾಧದ ಬಗ್ಗೆ ವಿಚಾರಣೆಯನ್ನು ನಡೆಸಲು ನ್ಯಾಯಾಲಯವು, ಅಂಥ ವ್ಯಕ್ತಿಗೆ ಅದೇ ನಿಯಮದನ್ವಯ ವಿಧಿಸಲರ್ಹವಾದ ಇತರ ಯಾವುದೇ ಶಿಕ್ಷೆಗೆ ಬಾಧೆಯಾಗದಂತೆ, ತನ್ನ ವಿವೇಚನೆಯಲ್ಲಿ ಯುಕ್ತವೆಂದು ಕಂಡುಬಂದ ಕಾಲಾವಧಿವರೆಗೆ ಅಂಥಾ ಲೈಸೆನ್ಸು ರದ್ದಾಗಲೆಂದು ಇಲ್ಲವೆ ಅಮಾನತು ಇರಲೆಂದು ಆದೇಶವನ್ನೀಯಬಹುದು ; ಮತ್ತು ಹಾಗೆ ಲೈಸೆನ್ಸನ್ನು ರದ್ದು ಅಥವಾ ಅಮಾನತು ಪಡಿಸುವ ನ್ಯಾಯಾಲಯದ ಪ್ರತಿಯೊಂದು ಆದೇಶವು ಯಾವುದಾದರೂ ಅಂಥದ್ದೇ ಕಾನೂನಿಗನುಸಾರ ಪ್ರಾಧಿಕಾರಿಯಿಂದ ಲೈಸೆನ್ಸನ್ನು ರದ್ದು ಇಲ್ಲವೆ ಅಮಾನತು ಪಡಿಸಲು ಹೊರಡಿಸಿದ ಆಜ್ಞೆಯಂತೆಯೇ ಪ್ರಭಾವಯುಕ್ತವಾಗಿರತಕ್ಕದ್ದು,

**ಸ್ಪಷ್ಟೀಕರಣ :** ಈ ನಿಯಮದಲ್ಲಿ "ಲೈಸೆನ್ಸು" ಎಂಬುದಕ್ಕೆ ಪರವಾನಗಿ ಇಲ್ಲವೆ ಅನುಮತಿ ಸಹಾ ಸೇರುತ್ತದೆ.

**9. ಸರಕಾರದಿಂದ ಕೊಡಲ್ಪಟ್ಟ ದೇಣಿಗೆಯ ಪುನರಾರಂಭ ಇಲ್ಲವೆ ಅಮಾನತು :**

ಸರಕಾರದಿಂದ ಭೂಮಿ ಅಥವಾ ಹಣದ ಮೇಲೆ ಸಿಕ್ಕುತ್ತಿರುವ ಸಾರ್ವಜನಿಕ ಪೂಜಾಸ್ಥಳದ ಪಾರುಪತ್ಯೇಗಾರನು ಅಥವಾ ಮೊಕ್ತೇಸ್ತರನು ಈ ಅಧಿನಿಯಮದನ್ವಯ ಯಾವುದಾದರೂ ಅಪರಾಧಕ್ಕೆ ದೋಷಿ ಎಂದು ನಿರ್ಣಯಿಸಲ್ಪಟ್ಟಿದ್ದರೆ ಮತ್ತು ಅಂಥಾ ದೋಷನಿರ್ಣಯವು ಯಾವುದಾದರೂ ಪುನರ್ವಿಚಾರ ಅಥವಾ ಪುನರೀಕ್ಷಣೆಯಲ್ಲಿ ಹಿಂತಿರುಗಿಸಲ್ಪಡದಿದ್ದರೆ ಇಲ್ಲವೆ ರದ್ದಾಗದಿದ್ದರೆ ಸರ್ಕಾರವು, ತನ್ನ ಅಭಿಪ್ರಾಯದಲ್ಲಿ ಆ ವಿದ್ಯಮಾನದ ಸಂದರ್ಭಗಳು ಅಂಥಾ ಮಾರ್ಗವನ್ನೇ ಸೂಚಿಸುತ್ತವೆ ಎಂದಾದರೆ, ಅಂಥ ದೇಣಿಗೆಯ ಪೂರ್ಣವಾದ ಇಲ್ಲವೆ ಅದರ ಯಾವುದಾದರೂ ಭಾಗವನ್ನು ಅಮಾನತು ಮಾಡಬಹುದು ಅಥವಾ ಪುನರಾರಂಭಿಸಬಹುದು.

**10. ಅಪರಾಧಕ್ಕೆ ಪ್ರೋತ್ಸಾಹ :**

ಯಾರಾದರೂ ಈ ಅಧಿನಿಯಮದನ್ವಯ ಅಪರಾಧಗಳನ್ನು ಎಸಗಲು ಪ್ರೋತ್ಸಾಹವನ್ನು ನೀಡಿದರೆ ಆಯಾಯ ಅಪರಾಧಕ್ಕೆ ವಿಧಿಸಲ್ಪಟ್ಟಿರುವ ಶಿಕ್ಷೆಗಳಿಂದ ದಂಡಿಸಲ್ಪಡತಕ್ಕದ್ದು.

**11. ತದನಂತರದ ದೋಷನಿರ್ಣಯಕ್ಕೆ ಹೆಚ್ಚಿನ ಶಾಸ್ತಿ :**

ಯಾರಾದರೂ ಈ ಅಧಿನಿಯಮದ ಮೇರೆಗೆ ಅಪರಾಧಕ್ಕೆ ಅಥವಾ ಅಂಥ ಅಪರಾಧದ ಪ್ರೇರೇಪಣೆಗೆ ದೋಷಿಯೆಂದು ಪೂರ್ವದಲ್ಲಿ ಸಿದ್ಧವಾಗಿದ್ದೂ ಪುನಃ ಯಾವುದಾದರೂ ಅಂಥ ಅಪರಾಧಕ್ಕೆ ಇಲ್ಲವೆ ಅದರ ಪ್ರೇರೇಪಣೆಗೆ ದೋಷಿಯೆಂದು ಸಿದ್ಧವಾದರೆ, ಅಂಥ ಪ್ರತಿಯೊಂದು ತದನಂತರದ ದೋಷನಿರ್ಣಯಕ್ಕೆ ಕಾರಾವಾಸ ಮತ್ತು ದಂಡ ಇವುಗಳೆರಡರಿಂದಲೂ ದಂಡಿಸಲ್ಪಡತಕ್ಕದ್ದು.

**12. ಕೆಲವು ವಿದ್ಯಮಾನಗಳಲ್ಲಿ ನ್ಯಾಯಾಲಯಗಳಿಂದ ಭಾವನೆ :**

ಎಲ್ಲಿ ಈ ಅಧಿನಿಯಮದ ಮೇರೆ ಅಪರಾಧಕ್ಕೆ ಎಡೆ ಮಾಡಿಕೊಡುವ ಯಾವುದಾದರೂ ಕಾರ್ಯವು ರಾಜ್ಯಘಟನೆಯ 366 ನೇ ನಿಬಂಧನೆಯ (24) ನೇ ಒಳ-ನಿಬಂಧನೆಯಲ್ಲಿ ವಿಶದೀಕರಿಸಿರುವ ಪರಿಶಿಷ್ಟ ಜಾತಿಗೆ ಸೇರಿದ ಒಬ್ಬ ವ್ಯಕ್ತಿಯ ಕುರಿತಾಗಿ ಎಸಗಲ್ಪಟ್ಟಿರುತ್ತದೋ, ಆಗ, ತದ್ವಿರುದ್ಧವಾಗಿ ಸಿದ್ಧಮಾಡದ ವಿನಾ, ಅಂಥ ಕಾರ್ಯವು "ಅಸ್ಪೃಶ್ಯತೆ" ಯ ಕಾರಣದಿಂದಾಯಿತೆಂದು ನ್ಯಾಯಾಲಯವು ಗೃಹೀತ ಹಿಡಿಯತಕ್ಕದ್ದು.

**13. ದಿವಾಣೀ ನ್ಯಾಯಾಲಯಗಳ ಕ್ಷೇತ್ರಾಧಿಕಾರದ ಪರಿಮಿತಿ :**

(1) ಯಾವುದಾದರೂ ವ್ಯಾಜ್ಯ, ಅಥವಾ ಪ್ರಕರಣದಲ್ಲಿ ಒಳಗೊಂಡ ಹಕ್ಕು ಅಥವಾ ಯಾವುದಾದರೂ ನ್ಯಾಯತೀರ್ಪು ಇಲ್ಲವೆ ಆದೇಶವನ್ನು ಹೊರಡಿಸುವುದೇ ಅಥವಾ ಯಾವುದಾದರು ಅಮಲು ಜಾರಿಯು ಈ ಅಧಿನಿಯಮದ ಉಪಬಂಧಗಳಿಗೆ ಯಾವುದಾದರೂ ಬಾಬಿನಲ್ಲಿ ವಿರೋಧವಾಗಿದ್ದಲ್ಲಿ ಯಾವ ದಿವಾಣೀ ನ್ಯಾಯಾಲಯವೂ ಅಂಥಾ ವ್ಯಾಜ್ಯ ಅಥವಾ ಪ್ರಕರಣವನ್ನು ಅಂಗೀಕರಿಸತಕ್ಕದ್ದಲ್ಲ. ಅಥವಾ ಅಂಥಾ ನ್ಯಾಯ ತೀರ್ಪು ಇಲ್ಲವೆ ಆದೇಶವನ್ನು ಪೂರ್ಣವಾಗಿ ಇಲ್ಲವೆ ಅಂಶತಃ ಅಮಲಜಾರಿ ನಡೆಸತಕ್ಕದ್ದಲ್ಲ.

(2) ಯಾವುದಾದರೂ ವಿಷಯದ ನ್ಯಾಯನಿರ್ಣಯದಲ್ಲಿ ಅಥವಾ ಯಾವುದೇ ಅಪ್ಪಣೆ ಇಲ್ಲವೆ ಆದೇಶವನ್ನು ಅಮಲಜಾರಿ ಮಾಡುವಲ್ಲಿ ಅಸ್ಪೃಶ್ಯತೆಯ ಆಧಾರದ

ಮೇರೆ ಯಾವುದಾದರೂ ವ್ಯಕ್ತಿಗೆ ಅನರ್ಹತೆಯನ್ನು ಹೊರಿಸುವ ಯಾವುದಾದರೂ ಸಂಪ್ರದಾಯ ಇಲ್ಲವೆ ಪದ್ಧತಿಯನ್ನು ಯಾವುದೇ ನ್ಯಾಯಾಲಯವು ಮಾನ್ಯ ಮಾಡತಕ್ಕದ್ದಲ್ಲ.

14. **ಕಂಪನಿಗಳಿಂದ ಅಪರಾಧ :**

(1) ಈ ಅಧಿನಿಯಮದ ಮೇರೆ ಅಪರಾಧವನ್ನೆಸಗುವ ವ್ಯಕ್ತಿಯು ಒಂದು ಕಂಪನಿಯಾಗಿದ್ದಲ್ಲಿ ಆ ಅಪರಾಧವನ್ನೆಸಗುವ ಸಮಯದಲ್ಲಿ ಆ ಕಂಪನಿಯು ವ್ಯವಹಾರವನ್ನು ಕೈಗೊಳ್ಳುವ ಕೆಲಸದಲ್ಲಿ ಆ ಕಂಪನಿಯು ಹೊರೆಯನ್ನು ಹೊತ್ತ ಹಾಗೂ ಆ ಕಂಪನಿಗೆ ಹೊಣೆಗಾರನಾದ ಪ್ರತಿಯೊಬ್ಬ ವ್ಯಕ್ತಿಯು ಆ ತಪ್ಪಿತದ ಅಪರಾಧಿಯೆಂದು ಪರಿಗಣಿಸಲ್ಪಡತಕ್ಕದ್ದು ; ಮತ್ತು ಅವನ ವಿರುದ್ಧ ವ್ಯವಹಾರವು ಹೂಡಲ್ಪಟ್ಟು ಅದಕ್ಕನುಗುಣವಾಗಿ ಶಿಕ್ಷೆಗೆ ಅವನು ಗುರಿಯಾಗಿರತಕ್ಕದ್ದು

ಆದರೆ, ಯಾವ ವ್ಯಕ್ತಿಯು ಆ ಅಪರಾಧವು ತನ್ನ ತಿಳುವಳಿಕೆಯಿಲ್ಲದೆ ಸಂಭವಿಸಿತೆಂದು ಅಥವಾ ಅಂಥಾ ಅಪರಾಧವಾಗುವುದನ್ನು ತಡೆಯಲು ಎಲ್ಲಾ ಸೂಕ್ತವಾದ ದಕ್ಷತೆಯನ್ನು ತಾನು ವಹಿಸಿದ್ದೆನೆಂದು ಸಿದ್ಧಪಡಿಸಿಕೊಡುವುದಾದರೆ, ಒಳನಿಯಮದಲ್ಲಿ ನಮೂದಾದ ಯಾವುವೂ ಅಂಥಾ ವ್ಯಕ್ತಿಯನ್ನು ಶಿಕ್ಷಾರ್ಹನನ್ನಾಗಿ ಮಾಡಲಾರವು.

(2) ಒಳನಿಯಮ (I) ರಲ್ಲಿ ನಮೂದಾದುದು ಏನಿದ್ದರೂ ಸರಿಯೇ ಈ ಅಧಿನಿಯಮದ ಮೇರೆ ಒಂದು ಅಪರಾಧವನ್ನು ಒಂದು ಕಂಪನಿಯ ಆಡಳಿತಗಾರ ಇಲ್ಲವೆ ಪಾರುಪತ್ಯೆಗಾರ, ಕಾರ್ಯದರ್ಶಿ ಇಲ್ಲವೆ ಇತರ ಅಧಿಕಾರಿಯ ಒಪ್ಪಿಗೆಯ ಮೇರೆ ಮಾಡಿದ್ದಲ್ಲಿ, ಅಂಥ ಆಡಳಿತಗಾರ ಪಾರುಪತ್ಯೆಗಾರ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯು ಸಹ ಅಂಥಾ ಅಪರಾಧವನ್ನು ಮಾಡಿರುವನೆಂದು ಪರಿಗಣಿಸಲ್ಪಡ ತಕ್ಕದ್ದು. ಮತ್ತು ಅಂಥವನ ವಿರುದ್ಧವಾಗಿ ವ್ಯವಹಾರವು ಕೈಗೊಳ್ಳಲ್ಪಟ್ಟು ಅದಕ್ಕನುಸಾರವಾಗಿ ಶಿಕ್ಷೆಗೆ ಗುರಿಯಾಗಿರತಕ್ಕದ್ದು.

**ಸ್ಪಷ್ಟೀಕರಣ :**

ಈ ನಿಯಮದ ತಾತ್ಪರ್ಯಕ್ಕೆ– (ಅ) "ಕಂಪನಿ" ಎಂದರೆ ಯಾವುದಾದರೂ ಸಾಂಘಿಕಸಂಸ್ಥೆ ಎಂದರ್ಥ : ಮತ್ತು ಅದು ವ್ಯಾಪಾರಿ ಸಂಸ್ಥೆ ಇಲ್ಲವೆ ಇತರ ವ್ಯಕ್ತಿಗಳ ಕೂಟವನ್ನು ಒಳಗೊಳ್ಳುತ್ತದೆ; ಮತ್ತು (ಬ) ಒಂದು ವ್ಯಾಪಾರಿ ಸಂಸ್ಥೆಯ ಸಂಬಂಧದ "ಆಡಳಿತಗಾರ" ಎಂದರೆ ಆ ಸಂಸ್ಥೆಯ ಭಾಗೀದಾರ ಎಂದರ್ಥವಾಗುತ್ತದೆ.

15. **ಈ ಅಧಿನಿಯಮದ ಮೇರೆಗೆ ಅಪರಾಧಗಳು ಅನುಜ್ಞಾಪತ್ರವಿಲ್ಲದೆ ಕೈದುಮಾಡಲ್ಪಡತಕ್ಕಂತವುಗಳು ಮತ್ತು ರಾಜಿಯಾಗಲರ್ಹವಾದವುಗಳಾಗಿರತಕ್ಕದ್ದು:**

1898ರ ಪಾತಕೀಯ ವ್ಯವಹಾರ ವಿಧಾನ ಸಂಹಿತೆ (1898 ರ ಕ್ರಮಾಂಕ 5) ಯಲ್ಲಿ ಒಳಗೊಂಡಿರುವುದು ಏನಿದ್ದರೂ ಸರಿಯೇ.

(ಅ) ಈ ಅಧಿನಿಯಮದಲ್ಲಿ ಹೇಳಿದ ಪ್ರತಿಯೊಂದು ಅಪರಾಧವು ಅನುಜ್ಞಾಪತ್ರ ವಿಲ್ಲದೆ ಕೈದು ಮಾಡಲ್ಪಡತಕ್ಕಂಥವುಗಳಾಗಿರತಕ್ಕದ್ದು.

(ಬ) ಅಂಥ ಪ್ರತಿಯೊಂದು ಅಪರಾಧವು ನ್ಯಾಯಾಲಯದ ಅನುಜ್ಞೆಯ ಮೇರೆ, ರಾಜಿಯಿಂದ ತೀರ್ಮಾನಿಸಲ್ಪಡಬಹುದು.

**16. ಈ ಅಧಿನಿಯಮವು ಅನ್ಯ ಅಧಿನಿಯಮಗಳಿಗಿಂತ ಬಲಯುತವಾಗಿರತಕ್ಕದ್ದು :**

ಅನ್ಯತ್ರ ಸ್ಪಷ್ಟೀಕರಿಸಿ ಈ ಅಧಿನಿಯಮದಲ್ಲಿ ನಮೂದು ಮಾಡಿಲ್ಲದ ಪಕ್ಷದಲ್ಲಿ, ಪ್ರಸ್ತುತ ಪ್ರಚಲಿತವಿರುವ ಇನ್ನಿತರ ಅಧಿನಿಯಮಗಳಲ್ಲಿ ಯಾವುದೇ ಸಂಪ್ರದಾಯ ಅಥವಾ ಪದ್ಧತಿ ಇಲ್ಲವೆ ಯಾವುದೇ ಅಂಥ ಕಾನೂನಿನ ಇಲ್ಲವೆ ಯಾವುದೇ ನ್ಯಾಯಾಲಯದ ಇಲ್ಲವೆ ಇತರ ಅಧಿಕಾರಿಯ ತೀರ್ಪು ಅಥವಾ ಆದೇಶದಿಂದ ಪ್ರಭಾವಾನ್ವಿತವಾದ ಯಾವುದೇ ಲಿಖಿತವು ಅಸಂಗತವಾಗಿದ್ದರೂ ಈ ಅಧಿನಿಯಮದ ಅನುಬಂಧಗಳು ಪ್ರಭಾವಯುಕ್ತವಾಗಿರತಕ್ಕದ್ದು.

**17. ರದ್ದತಿ :**

ಪರಿಶಿಷ್ಟದಲ್ಲಿ ಉಲ್ಲೇಖಿಸಿದ ಅಧಿನಿಯಮಗಳು, ಅವುಗಳಾಗಲೀ ಇಲ್ಲವೆ ಅವುಗಳಲ್ಲಿ ಕಾಣುವ ಯಾವುದೇ ಉಪಬಂಧಗಳಾಗಲೀ ಈ ಅಧಿನಿಯಮಕ್ಕೆ ಇಲ್ಲವೆ ಇವರಲ್ಲಿ ಕಾಣುವ ಉಪಬಂಧಗಳಿಗೆ ಹೋಲಿಕೆಯಿರುವಷ್ಟು ಅಥವಾ ವ್ಯತಿರಿಕ್ತವಾಗಿ ರವಷ್ಟು ಮಟ್ಟಿಗೆ ಈ ಮೂಲಕ ರದ್ದಾಗಿರುತ್ತದೆ.

## ಪರಿಶಿಷ್ಟ

(17ನೆಯ ನಿಯಮವನ್ನು ನೋಡಿ)

1. ಬಿಹಾರ ಹರಿಜನ (ಪೌರೇಯ ಅಯೋಗ್ಯತಾ ನಿವಾರಣಾ)ಅಧಿನಿಯಮ, 1949. (1949ರ ಬಿಹಾರ್ ಅಧಿಯಮ x.x)
2. ಬೊಂಬಾಯಿ ಹರಿಜನ (ಪೌರೇಯ ಅಯೋಗ್ಯತಾ ನಿವಾರಣಾ) ಅಧಿನಿಯಮ, 1946 (1947ರ ಬೊಂಬ್ಯಾ ಅಧಿನಿಯಮ x)
3. ಬೊಂಬಾಯಿ ಹರಿಜನ ದೇವಾಲಯ ಪ್ರವೇಶ ಅಧಿನಿಯಮ, 1947 (1947ರ ಬೊಂಬ್ಯಾ ಅಧಿನಿಯಮ xxxv)

4. ಮಧ್ಯಪ್ರದೇಶ ಮತ್ತು ಬೇರಾರ್ ಪರಿಶಿಷ್ಟ ಜಾತಿಯ (ಪೌರೇಯ ಅಯೋಗ್ಯತಾ ನಿವಾರಣಾ) ಅಧಿನಿಯಮ, 1947 (1947ರ ಸೆಂಟ್ರಲ್ ಪ್ರಾವಿನ್ಸಸ್ ಮತ್ತು ಬೇರಾರ್ ಅಧಿನಿಯಮ ಕ್ರಮಾಂಕ xxiv)

5. ಮಧ್ಯಪ್ರದೇಶ ಮತ್ತು ಬೇರಾರ್ ದೇವಾಲಯದ ಪ್ರವೇಶಾಧಿಕಾರ ಅಧಿನಿಯಮ, 1947. (1947ರ ಸೆಂಟ್ರಲ್ ಪ್ರಾವಿನ್ಸಸ್ ಮತ್ತು ಮತ್ತು ಬೇರಾರ್ ಅಧಿನಿಯಮ—ಕ್ರಮಾಂಕ xli)

6. ಪೂರ್ವ ಪಂಜಾಬ (ಧಾರ್ಮಿಕ ಮತ್ತು ಸಾಮಾಜಿಕ ಅಯೋಗ್ಯತಾ ನಿವಾರಣಾ) ಅಧಿನಿಯಮ, 1948 (1948ರ ಪೂರ್ವ ಪಂಜಾಬ್ ಅಧಿನಿಯಮ, ಕ್ರಮಾಂಕ xvi)

7. ಮದ್ರಾಸು ಪೌರೇಯ ಅಯೋಗ್ಯತಾ ನಿವಾರಣಾ ಅಧಿನಿಯಮ, 1938, (1938ರ ಮದ್ರಾಸು ಅಧಿನಿಯಮ ಕ್ರಮಾಂಕ xxi)

8. ಒರಿಸ್ಸಾ ಪೌರೇಯ ಅಯೋಗ್ಯತಾ ನಿವಾರಣಾ ಅಧಿನಿಯಮ, 1946 (1946ರ ಒರಿಸ್ಸಾ ಅಧಿನಿಯಮ, ಕ್ರಮಾಂಕ xi)

9. ಒರಿಸ್ಸಾ ದೇವಾಲಯ ಪ್ರವೇಶಾಧಿಕಾರ ಅಧಿನಿಯಮ, 1948 (1948ರ ಒರಿಸ್ಸಾ ಅಧಿನಿಯಮ, ಕ್ರಮಾಂಕ xi)

10. ಸಂಯುಕ್ತ ಪ್ರದೇಶದ ಸಾಮಾಜಿಕ ಅಯೋಗ್ಯತಾ ನಿವಾರಣಾ, ಅಧಿನಿಯಮ 1947, (1947ರ ಯು. ಪಿ. ಅಧಿನಿಯಮ, ಕ್ರಮಾಂಕ xiv)

11. ಪಶ್ಚಿಮ ಬಂಗಾಳ ಹಿಂದೂ ಸಾಮಾಜಿಕ ಅಯೋಗ್ಯತಾ ನಿವಾರಣಾ ಅಧಿನಿಯಮ, 1948 (1948ರ ಪಶ್ಚಿಮ ಬಂಗಾಳ ಅಧಿನಿಯಮ xxxvii)

12. ಹೈದರಾಬಾದು ಹರಿಜನ ದೇವಾಲಯ ಪ್ರವೇಶ ನಿಯಮ, 1358 F (ಫಸಲಿ 1358ರ ನಂ. LV)

13. ಹೈದರಾಬಾದು ಹರಿಜನ ಸಾಮಾಜಿಕ ಅಯೋಗ್ಯತಾ ನಿವಾರಣಾ ಕಾನೂನು, 1358 (ಫಸಲಿ 1358ರ ನಂ. LVI)

14. ಮಧ್ಯಭಾರತ ಹರಿಜನ ಅಯೋಗ್ಯತಾ ನಿವಾರಣಾ ವಿಧಾನ, 2005 ನೇ ಸಂವತ್ಸರ (1949ರ ಮಧ್ಯಭಾರತ ಅಧಿನಿಯಮ ಕ್ರಮಾಂಕ 15)

15. ಪೌರೇಯ ಅಯೋಗ್ಯತಾ ನಿವಾರಣಾ ಅಧಿನಿಯಮ 1943 (1943ರ ಮೈಸೂರು ಅಧಿನಿಯಮ ಕ್ರಮಾಂಕ xlii)
16. ಮೈಸೂರು ದೇವಾಲಯ ಪ್ರವೇಶಾಧಿಕಾರ ಅಧಿನಿಯಮ, 1948 (1948ರ ಮೈಸೂರು ಅಧಿನಿಯಮ xiv)
17. ಸೌರಾಷ್ಟ್ರ ಹರಿಜನ (ಸಾಮಾಜಿಕ ಅಯೋಗ್ಯತಾ ನಿವಾರಣಾ) ಕಾನೂನು (1948ರ ನಂ. xl)
18. ತಿರುವಾಂಕೂರ್–ಕೊಚ್ಚಿನ್–ಸಾಮಾಜಿಕ ಅಯೋಗ್ಯತಾ ನಿವಾರಣಾ ಅಧಿನಿಯಮ, 1125 (1125ರ ತಿರುವಾಂಕೂರ್ ಕೊಚ್ಚಿನ್ ಅಧಿನಿಯಮ ಕ್ರಮಾಂಕ viii)
19. ತಿರುವಾಂಕೂರ್–ಕೊಚ್ಚಿನ್ ದೇವಾಲಯ ಪ್ರವೇಶ (ಅಯೋಗ್ಯತಾ ನಿವಾರಣಾ) ಅಧಿನಿಯಮ, 1950. (1950ರ ತಿರುವಾಂಕೂರ್–ಕೊಚ್ಚಿನ್ ಅಧಿನಿಯಮ, ಕ್ರಮಾಂಕ xxvii)
20. ಕೊಡಗು ಪರಿಶಿಷ್ಟ ಜಾತಿಯ (ಪೌರೇಯ ಮತ್ತು ಸಾಮಾಜಿಕ ಅಯೋಗ್ಯತಾ ನಿವಾರಣಾ) ಅಧಿನಿಯಮ, 1949 (1949ರ ಕೊಡಗು ಅಧಿನಿಯಮ, ಕ್ರಮಾಂಕ i)
21. ಕೊಡಗು ದೇವಾಲಯ ಪ್ರವೇಶಾಧಿಕಾರ ಅಧಿನಿಯಮ 1949 (1949ರ ಕೊಡಗು ಅಧಿನಿಯಮ, ಕ್ರಮಾಂಕ ii)

# ಎಸ್. ಎಲ್. ಭೈರಪ್ಪನವರ 'ದಾಟು': ಒಂದು ಸಮೀಕ್ಷೆ

**ಎಸ್. ವಿದ್ಯಾಶಂಕರ**

ಇಂದಿನ ದಿನಗಳಲ್ಲಿ ಜಾತೀಯ ಸಮಸ್ಯೆ ಸಿಡಿಮದ್ದಿನಷ್ಟೇ ಆಸ್ಫೋಟಕ ವಿಷಯಕವಾಗಿದೆ; ಗಾಳಿಯ ಬಿರುಬೀಸಿನಷ್ಟೇ ವ್ಯಾಪಕ ಚರ್ಚೆಯಾಗಿದೆ; ವಿಚಾರ ವೇದಿಕೆಗಳಲ್ಲಿ ಕ್ರಾಂತಿಯ ಕೂಗಾಗಿದೆ. ಈ ವಿಷಯ ಚಿಂತನಶೀಲ ಲೇಖಕರೆನ್ನಿಸಿಕೊಂಡ ಡಾ. ಎಸ್. ಎಲ್. ಭೈರಪ್ಪನವರ ಬೃಹತ್ ಕಾದಬಂರಿಯೊಂದರ ವಸ್ತುವಾಗಿರುವುದು ತೀರಾ ಗಮನಿಸಬೇಕಾದ ಅಂಶವಾಗಿದೆ.

ನಮ್ಮ ವಿಚಾರವಂತ ಕಾದಂಬರಿಕಾರರು ಬಹಳವಾಗಿ ವರ್ತಮಾನದಿಂದ ಭೂತಕ್ಕೆ ಲಗ್ಗೆ ಹಾಕಿರುವುದೇ ಹೆಚ್ಚು. ಇದಕ್ಕೆ ಕಾರಣ ಬಹುಶಃ ಅನುಕೂಲಾಕಾಂಕ್ಷೆಯಿರಬಹುದು. ತಲೆಮಾರುಗಳ ಬದಲಿಯಲ್ಲಾದ ಮಾರ್ಪಾಟುಗಳು, ಬದಲಾದ ಮೌಲ್ಯಗಳು ಕಾದಂಬರಿಕಾರನ ವೈಚಾರಿಕತೆಯ ಚೌಕಟ್ಟಿಗೆ ನಿಲುಕುತ್ತವೆ. ಒಂದು ಗಟ್ಟಿಯಾದ ವಸ್ತುವಿಗೆ ಅಲ್ಲಿ ಸೊಗಸಾದ ಅವಕಾಶವಿರುತ್ತದೆ. ಏನೇನು ಮಾರ್ಪಾಟುಗಳಿಗೆ ಜೀವನ ಎಡೆಗೊಟ್ಟಿತು, ಈ ಮಾರ್ಪಾಟು, ಅಥವಾ ಸ್ಥಿತ್ಯಂತರಗಳಿಂದಾದ ಪರಿಣಾಮುಗಳೇನು ? ಎಂಬುದರ ಸಾಕ್ಷಿಕ ಪ್ರಜ್ಞೆ ಅವನಿಗಿರುತ್ತದೆ. ಇಲ್ಲವೇ ಆ ಪರಿಸರದಲ್ಲಿ ಉಸಿರಾಡಿ ಹಣ್ಣಾದ ಚೈತನ್ಯ ಮೂರ್ತಿಗಳಿರುತ್ತಾರೆ. ಪರೋಕ್ಷವಾಗಿ ಇಲ್ಲವೇ ಅಪರೋಕ್ಷವಾಗಿ ಕಾಲಮಾನಗಳಲ್ಲಾದ ಸ್ಥಿತ್ಯಂತರಗಳ ತಿಳುವಳಿಕೆ ಕಾದಂಬರಿಕಾರನಿಗೆ ಪುಷ್ಕಳವಾಗಿ ಆಗುವ ಸಾಧ್ಯತೆ ಇರುತ್ತದೆ. ಈ ಎಲ್ಲ ಸಾಧ್ಯತೆಗಳ ವರ್ತುಲದಲ್ಲಿ ಕಾದಂಬರಿಕಾರನ ವೈಚಾರಿಕ ಚಿಂತನೆ ಕೆಲಸಮಾಡಿ ಉತ್ಕೃಷ್ಟ ಕೃತಿಯೊಂದರ ಆವಿರ್ಭಾವಕ್ಕೆ ಎಡೆಮಾಡಿಕೊಡುತ್ತದೆ. ಇಲ್ಲೂ ಒಮ್ಮೊಮ್ಮೆ ಅನಿವಾರ್ಯವೋ ಎಂಬಂತೆ ಕಾದಂಬರಿಕಾರನಲ್ಲಿ ಕೊರತೆ ಕಣ್ಣಿಗೆ ಬೀಳುವಷ್ಟು ಗಾಢವಾಗಿ ಕಾಣಬಹುದು. ಅಂದರೆ, ಕಾದಂಬರಿಕಾರನಲ್ಲಿ ವಿಚಾರವಂತಿಕೆ ಏಕಮುಖವಾದಲ್ಲಿ, ಸಮದೃಷ್ಟಿಯ ಕೊರತೆಯಾದಲ್ಲಿ ಅವನು ತನ್ನ ವೈಯಕ್ತಿಕವಾದ ಒಲವು - ನಿಲವುಗಳ ಸಮರ್ಥನೆಯ ಅಪಾಯದತ್ತ ಧಾವಿಸುವ ಸಾಧ್ಯತೆಯೂ ಉಂಟು. ಈ ವೈಯುಕ್ತಿಕವಾದ ಒಲವು–ನಿಲವುಗಳನ್ನು ಮೀರಿನಿಂತು ಸಮದೃಷ್ಟಿಯಿಂದ ಸಮಕಾಲೀನ ಸಮಸ್ಯೆಗಳನ್ನು ಪರಿಶೀಲಿಸುವುದು ಕಷ್ಟಸಾಧ್ಯವಾದ ಕೆಲಸವಾದ್ದರಿಂದ ಮತ್ತು ಆ ಸಮಸ್ಯೆಗಳ ಆಳವಾದ ಅಧ್ಯಯನ, ಸಿಕ್ಕುಬಿಡಿಸುವಲ್ಲಿ ವಹಿಸಬೇಕಾದ ಎಚ್ಚರ, ಸಮಸ್ಯೆಯ ಬೆನ್ನು ಹಿಡಿದು ಹೋಗಿ ಅದರ ತಲಪರಿಗೆಯನ್ನು ಶೋಧಿಸುವಲ್ಲಿ ತೋರಬೇಕಾದ ಶ್ರದ್ಧೆ ತಾಳ್ಮೆ

ಇಂದಿನ ಅವಸರದ ಕಾಲನಿಯಂತ್ರಿತ ಬದುಕಿನಲ್ಲಿ ಕೊರತೆಯಿರುವುದರಿಂದ, ಬಹುಶಃ ಕಾದಂಬರಿಕಾರರು ಭೂತಪತ್ತ ದಾಪುಗಾಲು ಹಾಕಿ ನಡೆದಿರಬಹುದು.

ಜಾತಿ ಸಮಸ್ಯೆಯಂತಹ ಜ್ವಲಂತ ಸಮಸ್ಯೆಯನ್ನು ಇಂದಿನ ದಿನಗಳಲ್ಲಿ ಕಾದಂಬರಿಯೊಂದಕ್ಕೆ ವಸ್ತುವಾಗಿ ತೆಗೆದುಕೊಳ್ಳುವುದು, ಅದನ್ನು ಪ್ರಾಂಜಲಮನ ದಿಂದ–ಪೂರ್ವ ನಿರ್ಧರಿತ ವಿಚಾರಗಳಿಂದ ಮುಕ್ತಮನಸರಾಗಿ–ವಿಶ್ಲೇಷಿಸುವುದು, ಆ ಸಮಸ್ಯೆಯ ಸಿಕ್ಕು ಬಿಡಿಸುತ್ತಾ ಅವುಗಳಿಗೆ ತಮ್ಮದೇ ಆದ ಪರಿಹಾರ ಸೂಚಿಸದೆ ಮುನ್ನಡೆಯುವುದು ನಿಜಕ್ಕೂ ಸಾಹಸದ ವಿಷಯ. ಡಾ. ಎಸ್.ಎಲ್. ಭೈರಪ್ಪನವರು ಪೂರ್ವಭಾವೀ ಧೋರಣೆಗಳಿಂದ ಮುಕ್ತರಾಗಿ ವಸ್ತುವನ್ನು ವಿವೇಚಿಸುವ ಪ್ರಾಮಾಣಿಕ ಪ್ರಯತ್ನವನ್ನು ನಡೆಸಿರುವರು. ಅಷ್ಟೇ ಅಲ್ಲ ತಾವು ಆರಿಸಿಕೊಂಡಿರುವ ಸಮಸ್ಯೆಯ ಗಾಢತೆಯ ಬಗೆಗೆ ನಮ್ಮನ್ನು ಆಲೋಚಿಸುವಂತೆ ಮಾಡಿರುವರು.

ನನ್ನ ಸಮೀಕ್ಷೆಯ ಮೊದಲಿಗೇ ನನ್ನ ಆಲೋಚನೆಯ ಸೀಮಿತ ವಲಯವನ್ನು ಗೊತ್ತು–ಗುರಿಗಳನ್ನು ಸ್ಪಷ್ಟಪಡಿಸಬಯಸುತ್ತೇನೆ. 'ದಾಟು' ಕಾದಂಬರಿಯಲ್ಲಿ ನನ್ನ ಮನಸೆಳೆದ ಪಾತ್ರಗಳು ಮೂರು : ವೆಂಕಟರಮಣಯ್ಯ, ಮೋಹನದಾಸ, ಸತ್ಯ. ಈ ಪಾತ್ರಗಳು ಕಾದಂಬರಿಯಲ್ಲಿ ತಮ್ಮ ತಮ್ಮ ವಿಚಾರಗಳ ಘರ್ಷಣೆಯಲ್ಲಿಯೇ ತಮ್ಮನ್ನು ಶೋಧಿಸಿಕೊಳ್ಳುವ, ನಿಶ್ಚಿತ ಮಾರ್ಗವೊಂದನ್ನು ಕಂಡುಕೊಳ್ಳುವ, ಸ್ಥಾಯಿಯಾದ ಕ್ರಿಯೆಯೊಂದಕ್ಕೆ ಎಡೆಮಾಡಿಕೊಡುವ ಪ್ರಯತ್ನದಲ್ಲಿ ನಿರತವಾಗಿವೆ. ಈ ಮೂರು ಪಾತ್ರಗಳು ತಮ್ಮ ತಮ್ಮ ವರ್ತುಲಗಳಿಂದ ತಮ್ಮನ್ನು ತಾವೇ ಬಿಡಿಸಿ ಕೊಳ್ಳಲು ಹೇಗೆ ಹೆಣಗಿದರು ? ಪರಂಪರೆಯನ್ನು ದಾಟಿ ನಡೆವ ಯತ್ನ ನಡೆಸಿದರು ಎಂಬೆಲ್ಲ ವಿಚಾರಗಳ ಸುತ್ತ–ಮುತ್ತ ನನ್ನ ಆಲೋಚನೆ ವಿಶಿಷ್ಟವಾಗಿ ಹರಿದಿದೆ.

ಕಾದಂಬರಿಯಲ್ಲಿ ಬರುವ ಕಥೆಯ ಅಂಶ ತುಂಬಾ ಕಡಿಮೆ. ಈ ಪುಟ್ಟ ಕಥೆಗೆ ಪೂರಕವಾಗಿ ಬರುವ ಸಂದರ್ಭಗಳ ವಿವರ ಹಾಗೂ ವೈಚಾರಿಕತೆಯ ವಿವರಗಳು ಹೆಚ್ಚು. ಕಾದಂಬರಿಯಲ್ಲಿ ಬರುವ ಕಥೆಯನ್ನು ಸಂಕ್ಷೇಪಿಸಿ ಹೀಗೆ ಹೇಳಬಹುದು: ತಿರುಮಲಾಪುರದ ಸ್ಮಾರ್ತ ಬ್ರಾಹ್ಮಣರೂ ದೇವಸ್ಥಾನದ ಅರ್ಚಕರೂ ಆದ ವೆಂಕಟರಮಣಯ್ಯನವರ ಮಗಳು ಸತ್ಯಭಾಮಾ. ಬುದ್ಧಿವಂತೆಯಾದ ಅವಳು ಚರಿತ್ರೆ ಯನ್ನು ಮುಖ್ಯ ವಿಷಯವನ್ನಾಗಿ ಆರಿಸಿಕೊಂಡು ಎಂ. ಎ. ಪರೀಕ್ಷೆಯಲ್ಲಿ ಮೊದಲ ಸ್ಥಾನದಲ್ಲಿ ಮೊದಲನೆಯವಳಾಗಿ ತೇರ್ಗಡೆಯಾದಳು. ಅವಳ ಊರಿನವರೂ ಅವಳ ತಂದೆಯ ಬಾಲ್ಯ ಸ್ನೇಹಿತರೂ ಆದ ಮಂತ್ರಿ ಮೇಲುಗಿರಿ ಗೌಡರ ಏಕಮಾತ್ರ ಪುತ್ರ ಶ್ರೀನಿವಾಸನನ್ನು ಪ್ರೀತಿಸಿ ಅವನನ್ನು ಮದುವೆಯಾಗುವ ತನ್ನ ನಿರ್ಧಾರವನ್ನು ತಂದೆಗೆ ಪತ್ರಮುಖೇನ ತಿಳಿಸುವಳು. ಈ ಮದುವೆ ಎರಡೂ ಕಡೆಯ ಹಿರಿಯರಿಗೆ ಇಷ್ಟವಿರಲಿಲ್ಲ. ಅಂತರ್ಜಾತೀಯ ವಿವಾಹಕ್ಕೆ ತಮ್ಮ ಹಿರಿಯರು ಒಪ್ಪಿಗೆ ನೀಡ

ದಿದ್ದಾಗ ಶ್ರೀನಿವಾಸ–ಸತ್ಯರು ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ಸಹಿಮಾಡಿ ದಂಪತಿಗಳಾಗುವ ತೀರ್ಮಾನಕ್ಕೆ ಬಂದರು. ಇದರ ಸುಳಿವು ತಿಳಿದ ಮೇಲುಗಿರಿಗೌಡರು ತಮ್ಮ ಅಧಿಕಾರ ಪ್ರಭಾವದಿಂದ ಮದುವೆ ನಡೆಯದಂತೆ ತಡೆದರು. ಮಗ ಸತ್ಯಭಾಮಾಳನ್ನು ಮದುವೆಯಾದಲ್ಲಿ ಪ್ರಾಣ ಕಳೆದುಕೊಳ್ಳುವುದಾಗಿ ಶ್ರೀನಿವಾಸನ ತಾಯಿ ಹಟ ಹಿಡಿದರು. ತಾಯಿಯ ಬೆದರಿಕೆ, ತಮ್ಮ ಮದುವೆಯಿಂದ ಉದ್ಭವವಾಗಬಹುದಾದ ಸಮಸ್ಯೆ–ಇವುಗಳನ್ನು ಎದುರಿಸುವ ಧೈರ್ಯವಿಲ್ಲದ ಶ್ರೀನಿವಾಸ ತನ್ನನ್ನು ಮರೆತುಬಿಡುವಂತೆ ಸತ್ಯಳಿಗೆ ಕಾಗದ ಬರೆದ. ಅನ್ಯ ಜಾತಿಯವನನ್ನು ಸತ್ಯ ಮದುವೆಯಾಗುವಳೆಂಬ ಸುದ್ದಿ ತಿಳಿದ ದೇಶೀಯ ಕಾಲೇಜಿನ ಆಡಳಿತ ಮಂಡಳಿಯವರು ಸತ್ಯಳನ್ನು ಕೆಲಸದಿಂದ ತೆಗೆದುಹಾಕಿದರು. ಊರಿಗೆ ಹಿಂತಿರುಗಲು ಮನಸ್ಸಾಗದೆ ಸತ್ಯ ಬಟ್ಟೆ ಅಂಗಡಿಯೊಂದರಲ್ಲಿ ಸೇಲ್ಸ್‌ಗರ್ಲ್ ಆಗಿ ಕೆಲಸಕ್ಕೆ ಸೇರಿದಳು. ಶ್ರೀನಿವಾಸ ತಾಯಿ ಹಾಗೂ ಅಜ್ಜರ ಒತ್ತಾಯಕ್ಕೆ ಮಣಿದು ಮಂಡ್ಯದ ಆಗರ್ಭ ಶ್ರೀಮಂತರೂ ವಿಧಾನಸಭಾ ಸದಸ್ಯರೂ ಆದ ಕೆಂಪಣ್ಣನವರ ಮಗಳು ಕುಮುದಿನಿಯನ್ನು ಮದುವೆಯಾದ. ಇತ್ತ ವೆಂಕಟರಮಣಯ್ಯನವರಿಗೆ ಹುಚ್ಚು ಹಿಡಿದಿದೆಯೆಂದು ತಿಳಿದ ಸತ್ಯ ತಿರುಮಲಾಪುರಕ್ಕೆ ಮರಳಿದಳು. ಮಾದಿಗಿತ್ತಿ ಮಾತಂಗಿಯೊಂದಿಗೆ ಸಂಬಂಧ ಹೊಂದಿದ್ದ ವೆಂಕಟರಮಣಯ್ಯನವರು ಆ ಸಂಬಂಧದ ರಹಸ್ಯ ಬಯಲಾಗುವುದೆಂಬ ಹೆದರಿಕೆಗೆ ಒಳಗಾಗಿ ಕೆರೆಗೆ ಬಿದ್ದು ಪ್ರಾಣ ಕಳೆದುಕೊಂಡರು. ಶ್ರೀನಿವಾಸನ ಹೆಂಡತಿ ಕುಮುದಿನಿಗೆ ಗರ್ಭಸ್ರಾವವಾಗಿ ಪ್ರಾಣಹೋಯಿತು. ಸತ್ಯಳು ತನ್ನನ್ನು ಮದುವೆಯಾಗುವುದು ಸಾಧ್ಯವಿಲ್ಲವೆಂಬುದು ಖಚಿತವಾದಾಗ ಶ್ರೀನಿವಾಸ ಬೆಟ್ಟಯ್ಯನವರ ಮಗಳು ಮೀರಳನ್ನು ಪ್ರೀತಿಸತೊಡಗಿದ. ಶ್ರೀನಿವಾಸ ಮೀರಳನ್ನು ಮದುವೆಯಾಗದಂತೆ ತಡೆಯಲು ಮೇಲುಗಿರಿಗೌಡರು ಸತ್ಯಳ ಅಣ್ಣ ವೆಂಕಟೇಶನನ್ನು ಆಶ್ರಯಿಸಿದರು. ವೆಂಕಟೇಶ ಶ್ರೀನಿವಾಸನಲ್ಲಿಗೆ ಬಂದು ಸತ್ಯ ಬೆಟ್ಟಯ್ಯನವರ ಮಗ ಮೋಹನದಾಸನನ್ನು ಮದುವೆಯಾಗಲಿರುವಳೆಂಬ ವಿಷದ ಬೀಜ ಬಿತ್ತಿ ಹೋದನು. ಅದರ ಪರಿಣಾಮವಾಗಿ ಶ್ರೀನಿವಾಸ ಮತಿವಿಕಲನಾದ. ಶ್ರೀನಿವಾಸ ತನ್ನನ್ನು ಮದುವೆಯಾಗಲು ಒಪ್ಪದಿದ್ದಾಗ ಜೀವನದಲ್ಲಿ ನಿರಾಶೆಗೊಂಡ ಮೀರ ಕೆರೆಗೆ ಬಿದ್ದು ಪ್ರಾಣ ಕಳೆದುಕೊಂಡಳು. ಸಮಾಜದಲ್ಲಿ ಹರಿಜನರ ಸಮಾನತೆಯ ಹಕ್ಕು ಪಡೆಯಲು ಕ್ರಾಂತಿಯೊಂದೇ ಮಾರ್ಗವೆಂದು ನಂಬಿದ ಮೋಹನದಾಸ, ತನ್ನ ಆಸೆ ಈಡೇರದಾಗಲು ಹಳ್ಳಿಯನ್ನೇ ನಾಶಮಾಡುವ ವಿಧ್ವಂಸನ ಕಾರ್ಯಕ್ಕಿಳಿದು ಅದನ್ನು ನೆರವೇರಿಸಹೊರಟು ತುಂಬಿ ಬಂದ ಪ್ರವಾಹಕ್ಕೆ ಬಲಿಯಾಗಿ ಮೃತ್ಯುವನ್ನಪ್ಪಿದನು.

‘ದಾಟು’ ಪ್ರಧಾನವಾಗಿ ಜಾತೀಯ ಸಮಸ್ಯೆಯನ್ನು ಹಲವು ಸ್ತರಗಳಲ್ಲಿ ವಿಶ್ಲೇಷಿಸುವ ಕೃತಿಯಾಗಿದೆ. ಅನ್ಯಾಯ, ವಂಚನೆ, ದಬ್ಬಾಳಿಕೆ, ಹಿಂಸೆ–ಇವೇ ಮೊದಲಾದ ಕ್ರಿಯೆಗಳು ಸಮಸ್ಯೆ ವಿಕೋಪಕ್ಕೆ ಮುಟ್ಟುವಂತೆ, ಕರಾಳವಾಗುವಂತೆ

ಮಾಡುತ್ತಲಿವೆ ಎಂಬುದಕ್ಕೆ ಈ ಕಾದಂಬರಿಯಲ್ಲಿ ಸಾಕಷ್ಟು ನಿದರ್ಶನಗಳಿವೆ. ರಿಟೈರಾಗಲು ಇನ್ನು ಎರಡು ವರ್ಷಗಳಿರುವಾಗ ಆಕ್ಟಿಂಗ್ ಪ್ರೊಫೆಸರ್ ಆಗಿ ನೇಮಕಗೊಂಡ ರಾಜಾರಾಯರನ್ನು ಅವರ ದತ್ತ ಶಿಷ್ಯನೊಬ್ಬ ತಾನು ನಿಮ್ನವರ್ಗಕ್ಕೆ ಸೇರಿದವನೆಂಬ ‘ಯೋಗ್ಯತೆ’ಯ ಆಧಾರದ ಮೇಲೆ ಮುಂದೆ ಬಂದು ಪದೈಕಲಿಸಿದ ಗುರುಗಳನ್ನೇ ರಿವರ್ಟ್ ಮಾಡಿಸಿ ತಾನು ಇಲಾಖೆಯ ಮುಖ್ಯಸ್ಥನಾದುದು; ಫಸ್ಟ್‌ಕ್ಲಾಸ್ ಫಸ್ಟ್‌ನಲ್ಲಿ ಪಾಸಾದ ಸತ್ಯಳನ್ನು ಮೆರಿಟ್ ಆಧಾರದ ಮೇಲೆ ನೇಮಕ ಮಾಡದೆ ಇಂಟರ್‌ವ್ಯೂ ಕಮಿಟಿಯವರು ಜಾತೀಯ ಆಧಾರದ ಮೇಲೆ ನೇಮಕ ಮಾಡಿದುದು; ಪರಮೇಶ್ವರಯ್ಯನನ್ನು ಸತ್ಯ ಮದುವೆಯಾಗಲಿರುವಳೆಂಬ ಒಂದೇ ಒಂದು ಕಾರಣಕ್ಕಾಗಿ ಶಿಸ್ತಿನ ನೆಪದಲ್ಲಿ ದಕ್ಷ ಅಧ್ಯಾಪಕಿಯಾಗಿದ್ದ ಅವಳನ್ನು ಕಾಲೇಜಿನಿಂದ ಟರ್ಮಿನೇಟ್ ಮಾಡಿದುದು; ದೊಡ್ಡ ಮೀಸೆ ಬಿಟ್ಟ ಮಾದಿಗ ಬೆಟ್ಟನನ್ನು ಪಟೇಲ ತಿರುಮಲೇಗೌಡರು ಹೊಲೆಯರ ಮೂಲಕ ಬಾರುಕೋಲಿನಿಂದ ಹೊಡೆಸಿದುದು; ವೆಂಕಟೇಶನ ಹೋಟೆಲನ್ನು ಪ್ರವೇಶಿಸಿ ಧೈರ್ಯವಾಗಿ ಕಾಫಿ ಕೇಳಿದ ಮೋಹನ ದಾಸನನ್ನು ತುಟಿ ಹರಿಯುವಂತೆ ಗ್ಲಾಸಿನಲ್ಲಿ ಹೊಡೆದು ದಬ್ಬಿದುದು; ಮೇಲುಗಿರಿ ಗೌಡರ ಮಗನ ಮದುವೆಯ ಸಂದರ್ಭದಲ್ಲಿ ತಿರುಮಲಾಪುರದಲ್ಲಿ ಹರಿಜನರಿಗೆ ಮಂತ್ರಿಗಳ ಪರವಾಗಿ ಬೆಟ್ಟಯ್ಯ ಊಟದ ವ್ಯವಸ್ಥೆ ಮಾಡಿದಾಗ ತಾವು ಮಾದಿಗರಿಗಿಂತ ಉಂತಸ್ತಿನಲ್ಲಿ ಮೇಲು ಎಂದು ತಿಳಿದು ಜಗಳ ತೆಗೆದು ಬೆಟ್ಟಯ್ಯನ ಎದುರಿಗೇ ಬಲಗೈ ಪಂಗಡದ ಮುಖಂಡ ಕೋಣಿಗಯ್ಯ ಬಂದು “ಬಲಗೈ ಉಣ್ಣಾಕೆ, ಎಡಗೈ ತಿಕ ತೊಳ್ಕಣಾಕ ದೇವ್ರು ಮಾಡವ್ನೆ. ಎಡಗೈ ಮುಟ್ಟಿದ್ದ ಬಲಗೈ ತಿಂತತೇನ್ಲೆ?” ಎಂದು ಮುಖಕ್ಕೆ ಹೊಡೆಯುವಂತೆ ನುಡಿದು ಹೋದುದು – ಇವೆಲ್ಲಾ ನಿದರ್ಶನಗಳು ಸಮಕಾಲೀನ ಜೀವನದ ನಿತ್ಯ ಘಟನೆಗಳಾಗಿ ಕಂಡು ಬಂದರೂ ಸ್ವಾತಂತ್ರ್ಯನಂತರ– ಇಷ್ಟು ವರುಷಗಳಾದರೂ – ಜಾತ್ಯತೀತ ರಾಷ್ಟ್ರದ ಪ್ರಜೆಗಳಾದ ನಾವು ನಮ್ಮ ಹಳೆಯ ಧೋರಣೆಗಳನ್ನೇ ಮುಂದುವರಿಸಿಕೊಂಡು ಬಂದಿರುವುದು ಪತ್ರಿಕ್ಕಿದ ಬಹುಕಾಲದಿಂದ ಅಂತರ್ಗತವಾಗಿದ್ದ ಕೆರಳುರುಬು ಪ್ರಕಟವಾಗಲು ನಾವೇ ಕಾರಣರಾಗಿರುವುದು ದುರ್ದೈವದ ಸಂಗತಿಯಾಗಿದೆ. ತುಳಿತ, ದಬ್ಬಾಳಿಕೆ, ಕ್ರೌರ್ಯಗಳಿಗೆ ಸಹಸ್ರಾರು ವರ್ಷಗಳಿಂದ ಒಳಗಾಗಿರುವವರು ಇಂದು ಸಿಡಿದೆದ್ದಿದ್ದಾರೆ. ತಾವು ಶೋಷಣೆಗೆ ಒಳಗಾದವರೆಂಬ ಸತ್ಯದ ಅರಿವಾಗಿ ಕೆರಳಿದ ಕಾಳಿಂಗವಾಗಿದ್ದಾರೆ. ಆದರೆ, ಸರಿಯಾದ ಮಾರ್ಗದರ್ಶನವಿಲ್ಲದ, ತಿಳುವಳಿಕೆಯಿಲ್ಲದ ಇವರ ಸಕಾಲಿಕ ಎಚ್ಚರ ಹಾದಿ ತಪ್ಪಿರುವುದು ಇಂದಿನ ದೊಡ್ಡ ದುರಂತವಾಗಿದೆ. ಶೋಷಿತ ಹರಿಜನ ಸಮಾಜವನ್ನು ಮೇಲೆತ್ತಲು ಹಿಂಸಾಯುಕ್ತ ಕ್ರಾಂತಿಯೊಂದರಿಂದಲೇ ಸಾಧ್ಯವೆಂದು ನಂಬಿ, ಕ್ರಾಂತಿಯ ಕಹಳೆಯೂದಹೊರಟ ಮೋಹನದಾಸ, ಇಂದು ಸಾಮಾಜಿಕ ಅನ್ಯಾಯಗಳಿಗೆ ಒಳಗಾದ ಒಂದು ವರ್ಗದ ‘ತಪ್ತಜನರ’ ಪ್ರತಿನಿಧಿಯಾಗಿರುವನು.

ಮೇಲು ವರ್ಗದವರಂತೆ ತಾವೂ ಆಗಬೇಕೆಂದು ಬಯಸುವ – ತನ್ನ ಈ ಸಮಾನತೆಯ ಅರ್ಥ ಇತಿಹಾಸದ ಪುನರಾವರ್ತನೆ ಎಂದು ತಿಳಿಯದ – ದುಡುಕು ಸ್ವಭಾವದ ಮೋಹನದಾಸ; ಹರಿಜನರ ಪರವಾಗಿ ಎಂ.ಎಲ್.ಎ. ಆಗಿ ಸರ್ಕಾರದಿಂದ ವಾಸಿಸಲು ಮಂಗಳೂರು ಹಂಚು ಹೊದಿಸಿದ ಮನೆ, ಉಳಲು ದರಖಾಸ್ತು ಜಮೀನು, ಆಬಾದಿಗೆ ಹಣದ ನೆರವು – ಇವೆಲ್ಲವನ್ನು ಕೊಡಿಸಿ ತಮ್ಮವರ ಬದುಕನ್ನು ಹಸನು ಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ ಬೆಟ್ಟಯ್ಯ ಎಡಗೈ ಪಂಗಡಕ್ಕೆ ಸೇರಿದವನೆಂದೂ ತಾವು ಅವನಿಗಿಂತ ಜಾತಿಯೂ ಮೇಲೆಂದೂ ಭಾವಿಸಿ ಸರಕಾರದಲ್ಲಿ ತಮ್ಮ ಪ್ರತಿನಿಧಿಯಾದ ಬೆಟ್ಟಯ್ಯನನ್ನೇ ಅವಮಾನಿಸುವ, ಏಕತೆಯ ಬಲವಿದೆ ಎಂಬುದನ್ನು ಮರೆತ ಹರಿಜನರು ( ಬಲಗೈ ಪಂಗಡದವರು ); ಅಂತರಂಗದಲ್ಲಿ ತಾವು ಬ್ರಾಹ್ಮಣರಾಗಬೇಕೆಂಬ ಗುಪ್ತ ಆಸೆ ಹೊತ್ತಿರುವ, 'ಶಾಸ್ತ್ರದಲ್ಲಿ ಹಿಂಗಿದೆ ಎಂದರೆ ಜನ ನಂಬುತ್ತಾರೆ. ಶಾಸ್ತ್ರದ ಆಧಾರ ಕೊಟ್ಟು ನಮ್ಮನ್ನು ಬ್ರಾಹ್ಮಣರಲ್ಲಿ ಒಂದು ಪಂಗಡಕ್ಕೆ ಸೇರಿದವರು ಅಂತ ಹೇಳು' ಎಂದು ವೆಂಕಟೇಶನನ್ನು ಪುಸಲಾಯಿಸುವ– ಗಾಂಧೀಜಿಯವರ ಜೊತೆ ಆಶ್ರಮದಲ್ಲಿ ಕೆಲವು ವರ್ಷ ಇದ್ದು ಬಂದ — ಬೆಟ್ಟಯ್ಯನವರು; ಸತ್ಯಳ ಪಡಿನೆಳಲಾದ ಮೀರಾಳ ಮನದಲ್ಲೂ ಶ್ರೀನಿವಾಸನನ್ನು ಮದುವೆಯಾಗಲು ಪ್ರೇರಣೆ ನೀಡಿದ್ದು ಆತ ಮೇಲುಜಾತಿಯವನು ಎನ್ನುವ ಆಕರ್ಷಣೆ, ಕೀಳು ಜಾತಿಯವಳಾದ ತಾನು ವಿವಾಹದ ಸಂಸ್ಕಾರದ ಮೂಲಕ ಮೇಲುಜಾತಿಯವಳಾಗುತ್ತೇನೆ ಎಂದು ಸುಪ್ತಬಯಕೆಯ ಮೀರಾ — ಈ ಬಗೆಯ ವಿರೋದಾಭಾಸಗಳನ್ನು ಕಾದಂಬರಿಕಾರರು ಸೂಕ್ಷ್ಮವಾಗಿ ಚಿತ್ರಿಸಿರುವರು. ಈ ದೌರ್ಬಲ್ಯಗಳು ಸಮಾನತೆಯ ಅನುಸಂಧಾನಕ್ಕೆ ಹೇಗೆ ಮಾರಕವಾಗಬಲ್ಲವು ಎಂಬುದನ್ನು ಸೂಚ್ಯವಾಗಿ ಹೇಳಿರುವರು.

ವ್ಯಕ್ತಿಯ ನಂಬುಗೆ ಹಾಗೂ ಆಚಾರಗಳ ಒಮ್ಮುಖ ಸಾಂಗತ್ಯವಿಲ್ಲದಿದ್ದಲ್ಲಿ ಹೇಗೆ ಅಸ್ವಾಸ್ಥ್ಯಕ್ಕೆ ಎಡೆಗೊಡುತ್ತದೆಂಬುದಕ್ಕೆ ವೆಂಕಟರಮಣಯ್ಯನವರು ಸೊಗಸಾದ ನಿದರ್ಶನವಾಗಿದ್ದಾರೆ. ಸಂಪ್ರದಾಯ ಹಾಗೂ ಧರ್ಮವಿರುದ್ಧ ಪ್ರಣಯದಿಂದಾದ ಮುಟ್ಟುಕಟ್ಟುಗಳ ಘರ್ಷಣೆಯಲ್ಲಿ ಮಾನಸಿಕವಾಗಿ ನರಳುವ ಅವರ 'ಪಾಪಭೀರು ಪ್ರಜ್ಞೆ'ಯ ಸೊಗಸಾದ ಚಿತ್ರವನ್ನು ಕಾದಂಬರಿಯಲ್ಲಿ ನಾವು ಕಾಣುತ್ತೇವೆ. ಪರ ಜಾತಿಯವನನ್ನು ಮದುವೆಯಾಗುವೆನೆನ್ನುವ ಮಗಳಿಗೆ ಹಿಂದು ಮುಂದು ನೋಡದೆ ಸಿಟ್ಟಿನ ಭರದಲ್ಲಿ ಎಕ್ಕಡದಿಂದ ರಕ್ತಹನಿಯುವಷ್ಟು ಹೊಡೆದ ಕಟ್ಟಾಸಂಪ್ರದಾಯವಾದಿ ಅದಮ್ಯವಾದ ನೈಸರ್ಗಿಕ ಬಯಕೆಯ ಕಿಚ್ಚು ಹತ್ತಿದಾಗ ಧರ್ಮಾಧರ್ಮಗಳ ತೊಳಲಾಟಕ್ಕೆ ಒಳಗಾಗಿ, ಕಾಮ ವಿವೇಕವನ್ನು ಬದಿಗೆ ಸರಿಸುವಂತೆ ಕಾಮುವಿವಶರಾಗಿ ಮಾತಂಗಿಯನ್ನು ಗುಪ್ತವಾಗಿ ಕೂಡುವುದರ ಮೂಲಕ ವಿರಕ್ತಿಯ ಮುಸುಕನ್ನು ಸರಿಸಿದುದು ಆಶ್ಚರ್ಯವೆನಿಸಿದರೂ ಆಚಾರ-ಅನಾಚಾರಗಳ ತೂಗುತಕ್ಕಡಿಯಲ್ಲಿ 'ಪಾಪಭೀರು'ಗಳಾದ ವೆಂಕಟರಮಣಯ್ಯನವರು ಮನವನ್ನು ತೂಗಿನೋಡಿದುದು

ಅತ್ಯಂತ ಮಹತ್ವದ್ದಾಗಿ ಕಾಣಬರುತ್ತದೆ. ಮಾದಿಗಳಾದ ಮಾತಂಗಿಯ ಸ್ಪರ್ಶಸುಖದಲ್ಲಿ — ಹೆಂಡತಿ ಬದುಕಿದ್ದಾಗ ಅವಳಲ್ಲಿ ಕಾಣದ್ದನ್ನು – ಮಾತಿಗೆ ಅತೀತವಾದ ಸುಖವನ್ನು ಕಂಡ ವೆಂಕಟರಮಣಯ್ಯನವರು ಸತ್ಯದ ಹುಡುಕಾಟ ನಡೆಸಿ, ಮನ ಮಂಥಿಸಿ ಕೊನೆಗೆ ದೇವರು ಅನ್ನೋದೊಂದು ಕಲ್ಲು ಅದನ್ನು ಪೂಜೆ ಮಾಡಬಾರದು ಎಂಬ ತೀರ್ಮಾನಕ್ಕೆ ಬಂದು ಮಗನಿಗೆ ದೇವಸ್ಥಾನದ ಬೀಗದ ಎಸಳನ್ನೂ ಕೊಟ್ಟು ಬಿಡುವರು. ಒಮ್ಮೆ ಕುಡಿದು ಮತ್ತೇರಿದ ಮಾತಂಗಿ ಮಾತಿನ ನಡುವೆ "ನಮ್ ತಾವ ಮನೀಕತ್ತೀರಿ. ನಾವು ಮಾಡಿದ್ದು ಯಾಕ ಉಣ್ಣಾಕಿಲ್ರಯ್ಯ" ಎಂದು ಮರ್ಮಕ್ಕೆ ತಾಗುವಂತೆ ನುಡಿದಳು. ಒಂದು ಕ್ಷಣ ಸಂಪ್ರದಾಯಸ್ಥ ಮನಸ್ಸು 'ಕಾಮತೃಪ್ತಿಗೆ ಯಾರಾದರೂ ಯಾವ ಹೆಂಗಸನ್ನಾದರೂ ಭೋಗಿಸಬಹುದು. ಆದರೆ ಭೋಜನ, ಸಂಸ್ಕಾರ ಮತ್ತು ಸಹಭಾಗಿತ್ವಕ್ಕೆ ಕುಲಪ್ರಸೂತೆಯೇ ಬೇಕು' ಎಂದಿತು. ಮಾತಂಗಿಯ ಆ ಮಾತು ಅವಳ ಹಾಗೂ ಅವರ ಪ್ರೀತಿಯ ನಿರ್ಧಾರದ ಸವಾಲೇ ಆಯಿತು. ಮಾತಂಗಿಯನ್ನು ಬ್ರಾಹ್ಮಣಿಯನ್ನಾಗಿ ಮಾಡಲು ಸಾಧ್ಯವಿಲ್ಲವೇ ಎಂಬ ಯೋಚನೆ ಧಿಡೀರನೆ ಅವರ ಮನದಾಳದಲ್ಲಿ ಮೂಡಿತು. 'ಜಾತಬ್ರಹ್ಮ ವಸಿಷ್ಠರು ಮಾದಿಗಿತ್ತಿ ಅರುಂಧತಿಯನ್ನೇ ಮದುವೆಯಾಗಿ ಪರಮ ಬ್ರಾಹ್ಮಣಿಯನ್ನಾಗಿ ಮಾಡಿದರಲ್ಲ. ನಾನು ಈ ಮಾತಂಗಿಯನ್ನು ಮದುವೆಯಾಗಿ ಅವಳಿಗೂ ಯಜ್ಞೋಪವೀತಧಾರಣೆ ಮಾಡಿಸಿ ಗಾಯತ್ರಿಯನ್ನು ಉಪದೇಶಿಸಬೇಕು. ನಾನು ಊರಿನಲ್ಲಿಲ್ಲದ ದಿನ ಹವಿಸ್ಸನ್ನು ಅರ್ಪಿಸುವ ಅಧಿಕಾರ ಅವಳಿಗೆ ಪ್ರಾಪ್ತವಾಗಬೇಕು. ಈ ಗುಡಿಸಲೇ ಪರ್ಣಶಾಲೆಯಾಗಬೇಕು. ಇದು ನನ್ನ ವಾನಪ್ರಸ್ಥ ಜೀವನ' ಎಂದು ಮನದಾಳದಲ್ಲಿ ಬಗೆದು 'ಜಾತಿ ಹೆದರಿಕೆ ಬೇಡ. ನಿನ್ನ ಬ್ರಾಹ್ಮಣಿ ಮಾಡ್ತೀನಿ ಬಾ' ಎಂದು ತಮ್ಮ ನಿರ್ಧಾರವನ್ನು ಧೈರ್ಯವಾಗಿ ಮಾತಂಗಿಗೆ ತಿಳಿಸುತ್ತಾರೆ. ಇವರ ಈ ನಿಲವು ಬುದ್ಧಿ ವಿಕಲ್ಪ ಮನೋಸ್ಥಿತಿಯ ನಿಲವು ಖಂಡಿತಾ ಅಲ್ಲವೆಂಬುದನ್ನು ಮಗಳು ಸತ್ಯಳೊಡನೆ ನಡೆಸುವ ಅವರ ಮಾತುಕತೆಗಳಲ್ಲೇ ಖಚಿತಪಡಿಸುತ್ತವೆ. ಅಜ್ಞಾನಮಯವಾದ ಪಾಪಭೀರು ಬದುಕಿನಿಂದ ಜ್ಞಾನಮಯವಾದ ನಿರ್ಭೀತ ಬದುಕಿಗೆ ವೆಂಕಟರಮಣಯ್ಯನವರು ದಾಟುತ್ತಾರೆ.

ಸ್ವಂತದ್ದಲ್ಲದ ಧರ್ಮ–ವೇದಾಂತಗಳ ತಿಳುವಳಿಕೆಯುಳ್ಳ, ತಮ್ಮದು ಪಾಳೆಗಾರರ ರಕ್ತ–ರಾಜದರ್ಪದಿಂದ ಆಳಿದ ಕ್ಷಾತ್ರರಕ್ತ ಎಂಬ ಭಾವನೆಯಿಂದ ಪ್ರೇರಿತರಾಗಿ ತಮ್ಮನ್ನು ತಾವೇ ಬ್ರಾಹ್ಮಣರಿಗಿಂತ ಮೇಲೆಂದು ಜಪ–ತಪ–ಮಡಿಹುಡಿಗಳಿಂದ ಆರೋಪಿಸಿಕೊಂಡ, ದಂಗುಬಡಿಸುವ ಪೂಜಾಗೃಹ; ದೇವತಾರ್ಚನೆ, ಕೃಷ್ಣಾಜಿನ. ಜಪಸರಗಳಿಂದ ರಾಜರ್ಷಿ ಎನ್ನಿಸಿಕೊಂಡ ವೃದ್ಧ ತಿರುಮಲೇಗೌಡರ ಪಾತ್ರದಲ್ಲಿ ಕಾದಂಬರಿಕಾರರು ತೋರುವ ವಿಡಂಬನೆ ಹೆಚ್ಚು ಅರ್ಥವತ್ತಾಗಿದೆ. ಜಾತೀಯ

ಅಸಮತೆಯ ನಿವಾರಣೆಗೆ, ಸ್ಪೃಶ್ಯ ಅಸ್ಪೃಶ್ಯ–ಈ ಭೇದಭಾವವನ್ನು ಹೊಡೆದೋಡಿಸಲಿಕ್ಕೆ ಹರಿಜನರು ದೇವಾಲಯ ಪ್ರವೇಶಮಾಡುವುದು ಸಮರ್ಥ ಹಾಗೂ ಪರಿಣಾಮಕಾರೀ ಕ್ರಿಯೆಯಾಗಬೇಕಾಗಿದ್ದಿತು. ಆದರೆ ಅದು ಸುಧಾರಣೆಯ ಹಾಗೂ ಕ್ರಾಂತಿಯ ಹೆಸರಿನಲ್ಲಿ ಪುಢಾರಿಯೊಬ್ಬನ ರಾಜಕೀಯ ಪ್ರಸಿದ್ಧಿಗೆ ರಂಗಸ್ಥಳವಾದುದು ; ಕೇವಲ ಪ್ರವೇಶ ನಿರ್ಗಮನಗಳಲ್ಲೇ ಕ್ರಾಂತಿಯ ಕಿಡಿ ಆರಿ ನಾಟಕೀಯ ಪ್ರದರ್ಶನವಾಗುವಲ್ಲೇ ಪರ್ಯವಸಾನಗೊಂಡು ತಣ್ಣಗಾದುದು ; ಕಾದಂಬರಿಕಾರರ ತೀವ್ರತರವಾದ ವಿಡಂಬನೆಗೆ ಗುರಿಯಾಗಿದೆ. ಸೆನ್ಸಸ್ ವೇಳೆಯಲ್ಲಿ ಗ್ರಾಮದ ಮತಸ್ಥರೆಲ್ಲರೂ ತಮ್ಮ ತಮ್ಮ ಮತದ ಮೂಲಪುರುಷನ ಹೆಸರಿನಲ್ಲಿ ತಮ್ಮನ್ನು ತಾವೇ ಮೇಲೆಂದು ಕರೆದುಕೊಳ್ಳುವ ಇಲ್ಲವೇ ಬ್ರಾಹ್ಮಣ ಮತದ ಕಟ್ಟಿಗೆ ತಮ್ಮನ್ನು ಒಳಪಡಿಸಿಕೊಳ್ಳುವ ಕಾರ್ಯಪ್ರವೃತ್ತರಾಗುವುದು ; ಜಾತಿಯ ಅಂತಸ್ತು ನಿರ್ಣಯಿಸುವ ಸಭೆಯಲ್ಲಿ ತಮ್ಮ ಪರ ಬೆಂಬಲಿಸುವಂತೆ ಎಲ್ಲ ಮತಸ್ಥರೂ ವೆಂಕಟೇಶನನ್ನು ಪುಸಲಾಯಿಸಿ ಲಂಚವೀಯುವುದು. ಹಾಸ್ಯಾಸ್ಪದವಾಗಿ ತೋರುತ್ತದೆ. ಇಲ್ಲೆಲ್ಲಾ ಕಾದಂಬರಿಕಾರರ ವ್ಯಂಗ್ಯ ಹರಿತವಾಗಿದೆ.

'ದಾಟು' ಜಾತಿಯ ವಿರುದ್ಧ, ಶೋಷಣೆಯ ವಿರುದ್ಧ, ಅಸಮಾನತೆಯ ವಿರುದ್ಧ ಕ್ರಾಂತಿ ಸಾರುವ ಕೃತಿಯಾದರೂ ಕ್ರಾಂತಿಯೊಂದೇ ಕಾದಂಬರಿಯ ಉದ್ದೇಶವಲ್ಲ. ನುಂಗಿ ನೊಣೆಯುವ ಹಿಂಸೆಯ ಕ್ರಾಂತಿಯಿಂದಲೇ ಜಾತೀಯತೆ, ಶೋಷಣೆ, ಅಸಮಾನತೆ ತಪ್ಪಿಸಲು ಸಾಧ್ಯವೆಂದು ಕುದಿಯುವ ಲಾವಾರಸದಂತಿರುವ ಮೋಹನದಾಸ ವೈಚಾರಿಕ ಹಿನ್ನೆಲೆಯಲ್ಲಿ ಸಮಸ್ಯೆಗಳಿಗೆ ಪರಿಹಾರ ಹುಡುಕುವ, ಅಹಿಂಸೆಯ ಮೂಲಕ ಕ್ರಾಂತಿಯ ಫಲ ನಿರೀಕ್ಷಿಸುವ ಸತ್ಯಭಾಮಾ–ಇವರೀರ್ವರ ಕ್ರಿಯೆಗಳಲ್ಲಿ, ಆಲೋಚನೆಗಳಲ್ಲಿ ಕಾದಂಬರಿಕಾರರು ತಮ್ಮ ವಿಚಾರಗಳನ್ನು ಹರಿಯಬಿಟ್ಟಿರುವರು.

ಸಹಸ್ರ ಸಹಸ್ರ ವರ್ಷಗಳಿಂದ ತುಳಿತಕ್ಕೆ ಒಳಗಾದ, ಶೋಷಣೆಗೀಡಾದ, ಅಸಮಾನತೆಗೆ ಗುರಿಯಾದ ಹರಿಜನರು ಮೇಲುವರ್ಗದವರನ್ನು ಕೆಣಕಿದ ಹೊರತೂ ಅವರ ಜೊತೆ ಹೋರಾಡದ ಹೊರತೂ ತಮಗೆ ಸಿಗಬೇಕಾದ ಸ್ಥಾನ–ಮಾನಗಳನ್ನು ಪಡೆದುಕೊಳ್ಳಲಾಗದು ಎಂದು ಒಳಗುದಿತದಲ್ಲೇ ಬೇಯುವ, ಕ್ರಾಂತಿಗಾಗಿ ತಹತಹಿಸುವ ಮೋಹನದಾಸ ಕ್ರಾಂತಿಯ ಕಿಡಿ ಹೊತ್ತಿಸಲು ಪ್ರಯತ್ನಿಸುತ್ತಾನೆ. "ಗಲಾಟೆಯಾಗಬೇಕು, ಒದೀಬೇಕು, ಸೊಂಟ ಮುರೀಬೇಕು–ಅಲ್ಲಿಯವರೆವಿಗೂ ಮೇಲುವರ್ಗದವರು ದಾರಿಗೆ ಬರೋಲ್ಲ"ವೆಂಬ ದಾವಾನಲದ ಕುದಿತ ಅವನದು. ಮೀಸೆ ಬಿಟ್ಟಿದ್ದಕ್ಕೇ ತಂದೆಯನ್ನು ಕಂಬಕ್ಕೆ ಕಟ್ಟಿ ಚರ್ಮ ಕಿತ್ತುಬರುವಂತೆ, ರಕ್ತ ಹನಿಯುವಂತೆ ಹೊಡೆಸಿದ ದೊಡ್ಡಗೌಡರ ಮಾನವೀಯತೆ ಮರೆತ ನೃಶಂಸ ವರ್ತನೆ ಎಳೆತನದಿಂದಲೂ ಅವನ ಮನದಲ್ಲಿ ಮಾಸದ ಮುದ್ರೆಯೊತ್ತಿದೆ. ವೆಂಕಟೇಶನ

ಹೋಟಲಿನಲ್ಲಿ ಕಾಫಿ ಕುಡಿಯಲು ಹೋಗಿ ಒಕ್ಕಲಿಗನೊಬ್ಬನಿಂದ ಅಪಮಾನಿತನಾಗಿ ಗಾಜಿನ ಲೋಟದಿಂದ ಹೊಡೆಸಿಕೊಂಡು ತುಟಿ ಹರಿಸಿಕೊಂಡ ಆ 'ಮಾಯದ ಗಾಯ' ಅವನು ಬಾಲ್ಯದಿಂದಲೂ ಮೇಲು ವರ್ಗದವರ ಮೇಲೆ ಬೆಳೆಸಿಕೊಂಡು ಬಂದ ವಿದ್ವೇಷದ ಕಿಚ್ಚಿಗೆ ತುಪ್ಪವಾಗಿದೆ. ಸರ್ಕಾರದವರು ಕೊಡುವ ಸವಲತ್ತಿಗೆ ಅವರ ಬಾಲಂಗೋಚಿಯಾಗಿ ಅವರ ನಿರ್ಣಯಗಳಿಗೆಲ್ಲಾ ಸಮ್ಮತಿ ಸೂಚಿಸಲು ಕೈಯೆತ್ತುವ-ಸ್ವತಂತ್ರ ವ್ಯಕ್ತಿತ್ವವೇ ಇಲ್ಲದ, ತುಳಿದ ಶೋಷಣೆಗಳ ಪರಿವೇ ಇಲ್ಲದ - ತಂದೆಯ ಬಗೆಗೆ ಅವನ ತೀವ್ರ ಆಕ್ರೋಶವಿದೆ. ತಮ್ಮನ್ನು ತೀರಾ ಹಿಂದುಳಿದವರೆಂದು ಹೇಳಿಕೊಳ್ಳುವುದರಲ್ಲಿ ನಾಚಿಕೆಯಿಲ್ಲದ,ಹಿಂದುಳಿದವರಾದುದಕ್ಕೇ ಸರ್ಕಾರ ಮೀಸಲಿಟ್ಟ ಚಾಕರಿಗಳನ್ನು ಪಡೆದು, ಅಷ್ಟಕ್ಕೇ ತೃಪ್ತರಾದ ತನ್ನ ಜಾತಿಬಾಂಧವರು ಕ್ರಾಂತಿಯಲ್ಲಿ ಸಕ್ರಿಯವಾಗಿ ಭಾಗಿಗಳಾಗದ - ಸರ್ಕಾರದ ನಿಯಮಗಳಿಂದ ತಮ್ಮನ್ನು ತಾವೇ ನಿರ್ಬಂಧಿಸಿಕೊಂಡ - ಅವರ ನಿರ್ವೀರ್ಯ ಸ್ಥಿತಿಗಾಗಿ ಅವನ ಸಿಡಿತವಿದೆ. ಮೇಲು ಜಾತಿಯವರಿಗೆ ತಮ್ಮ ಮೈ ಮಾರಿಕೊಳ್ಳುವ ತನ್ನ ಜಾತಿಯ ಹೆಣ್ಣುಗಳ ಮಾನಗೆಟ್ಟ ಬಾಳಿನ ಬಗೆಗೆ ಸಿಡಿಮಿಡಿಯಿದೆ. ತಾನು ಎಡಗೈ ಪಂಗಡಕ್ಕೆ ಸೇರಿದವನು ಎಂಬ ಒಂದೇ ಒಂದು ಕಾರಣಕ್ಕಾಗಿ ತಾನು ಪ್ರೀತಿಸಿದ ಹೆಣ್ಣಿನ ತಂದೆ ಬಲಗೈ ಪಂಗಡಕ್ಕೆ ಸೇರಿದ ತಾನು ಮೇಲಿನವನೆಂದು ಹೆಣ್ಣು ಕೊಡಲು ನಿರಾಕರಿಸಿದಾಗ ಜಾತಿಯತೆಯೇ ಎಲ್ಲಾ ಸಮಸ್ಯೆಗಳಿಗೂ ಮೂಲಕಾರಣವೆಂದು ಭಾವಿಸಿ ಅವನ ಮನ ಕೆರಳುತ್ತದೆ. ದ್ವೇಷ ಬಲಿಯದೆ ಕ್ರಾಂತಿ ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬಂದ ಆತ ಅದನ್ನು ಬಲಿಸಲು ತನ್ನ ಶಕ್ತಿಮೀರಿ ಪ್ರಯತ್ನಿಸುವನು. ಹೊನ್ನೂರನ ಹುಟ್ಟನ್ನರಿತು ಅವನ ಎಳೆಯ ಮನದಲ್ಲಿ ದ್ವೇಷದ ಬಿತ್ತನ್ನು ಬಿತ್ತಿ, ಬೆಳೆಸುತ್ತಾನೆ. ಹಿಂದುಳಿದ ಜಾತಿಯ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳ ಅಪಕ್ವ ಹಾಗೂ ಮೃದುಮನದಲ್ಲಿ ದ್ವೇಷದ ಅಗ್ನಿ ಹೊತ್ತಿಸಿ ಅವರನ್ನು ಕ್ರಾಂತಿಗೆ ಸಜ್ಜುಗೊಳಿಸುತ್ತಾನೆ. ಅವರನ್ನು ದೇವಸ್ಥಾನ ಪ್ರವೇಶಿಸಲು ಪ್ರಚೋದಿಸುತ್ತಾನೆ. ಅಹಿಂಸೆಯ ಸಾಕಾರಮೂರ್ತಿಗಳಾಗಿದ್ದ, ಗಾಂಧೀಜಿ ಹಾಗೂ ಅವರ ತತ್ವಗಳ ಆರಾಧಕರಾಗಿದ್ದ ಬೆಟ್ಟಯ್ಯನವರು ಸಹಸ್ರಾರು ವರ್ಷಗಳಿಂದ ತಮ್ಮನ್ನು ಮೇಲುವರ್ಗದವರು ತುಳಿದಿದ್ದರೂ ಅದಕ್ಕೆ ಕೆರಳದೆ ಮಣಿದು ಬದುಕುವ ಮನೋಧರ್ಮಕ್ಕೆ ತಮ್ಮನ್ನು ತಾವೇ ಹೊಂದಿಸಿಕೊಂಡಿದ್ದವರೂ ಮಗಳ ಮರಣಾನಂತರ ಮಗ ಮೋಹನದಾಸನ ಉಪದೇಶಗಳಿಗೆ, ಕ್ರಾಂತಿಯ ಹಿಂಸೆಯ ವಿಚಾರಗಳಿಗೆ ಒಲಿದದ್ದು ಒಂದು ದೊಡ್ಡ ದುರಂತವಾದರೂ ಅಂತರ್ಗತವಾಗಿದ್ದ ಅವರ ದ್ವೇಷದ ನರಗಳನ್ನು ಹಿಡಿದಲುಗಿಸಿ ಆ ಸುಪ್ತಪ್ರಜ್ಞೆಯನ್ನು ಜಾಗೃತಗೊಳಿಸಿ ದುರಂತದತ್ತ ಕೊಂಡೊಯ್ದ ಶಕ್ತಿಯ ಬಗೆಗೆ ನಾವು ಮೂಕವಿಸ್ಮಿತರಾಗುತ್ತೇವೆ.

ಹಿಂಸೆಯೇ ಪ್ರಧಾನವಾದ, ವಿದ್ವೇಷವೇ ಮೂಲವಾದ ಕ್ರಾಂತಿ ಹೇಗೆ ಸೋಲಿನ ಹಾದಿ ಹಿಡಿಯುತ್ತದೆಂಬುದಕ್ಕೆ ಮೋಹನದಾಸ ಸಾಕ್ಷಿಯಾಗಿದ್ದಾನೆ.

ದೇವಸ್ಥಾನದ ಪ್ರವೇಶದಲ್ಲಿ ಅವನ ಕ್ರಾಂತಿ ಫಲಕಾರಿಯಾಗಿ ಕಂಡುಬಂದರೂ ಪ್ರವೇಶಾನಂತರ ದೇವರ ಮುಂದೆ ನಿಂತಾಗ ತೀರ್ಥ ಸ್ವೀಕರಿಸುವಾಗ ಅವನ ಅಂತಃ ಪ್ರಜ್ಞೆ ಎಚ್ಚರಗೊಳ್ಳುತ್ತದೆ. ದೇವರ ಅಸ್ತಿತ್ವವನ್ನೇ ನಂಬದ ತಾನು ತೀರ್ಥ ಸ್ವೀಕರಿಸಲಿರುವುದು ಅತ್ಯಂತ ಖೇದವೆನ್ನಿಸಿ ಆ ಮನೋಸ್ಥಿತಿಯಲ್ಲೇ ಮೂರ್ಛೆ ಹೋಗುತ್ತಾನೆ. ತನ್ನಂತಹವನೂ ಒಂದು ಕ್ಷಣ ಈ ಬಗೆಯ ಆಕರ್ಷಣೆಗೆ ಒಳಗಾಗಿ ಮೈಮರೆತದ್ದರ ಬಗೆಗೆ ಸಿಟ್ಟುಗೊಳ್ಳುತ್ತಾನೆ. ಆ ದೈವದ ಆಕರ್ಷಣೆಯಿಂದಲೇ ತನ್ನವರು ಇನ್ನೂ ದಾಸರಾಗಿದ್ದಾರೆ ತನ್ನವರನ್ನು ಈ ಮೋಹಕ ಆಕರ್ಷಣೆಯಿಂದ ಪಾರುಮಾಡಬೇಕಾದರೆ ಈ ದೇವರನ್ನೇ ಇಲ್ಲವಾಗಿಸಬೇಕು ಎಂದು ಆಲೋಚಿಸಿ ದೇವಾಲಯವನ್ನೇ ಛಿದ್ರ ಛಿದ್ರಗೊಳ್ಳುವಂತೆ ಮಾಡುವ ಉದ್ವಿಗ್ನ ಸ್ಥಿತಿಗೆ ಮುಟ್ಟು ತ್ತಾನೆ. ಹತಾಶ ಯುವಜನಶಕ್ತಿ ನಿರ್ದಿಷ್ಟ ಗುರಿಯಿಲ್ಲದಿದ್ದರೆ, ತಿಳುವಳಿಕೆಯಿಲ್ಲ ದಿದ್ದರೆ ಹೇಗೆ ತಪ್ಪು ಹಾದಿ ಹಿಡಿಯಬಲ್ಲುದು, ಕೇಡಿಗೆ ದಾರಿಯಾಗಬಲ್ಲುದು ಎಂಬುದಕ್ಕೆ ಮೋಹನದಾಸ ಸಾಕ್ಷಿಯಾಗಿದ್ದಾನೆ. ಅವನ ಭಗ್ನ ಮನೋರಥ ವಿನಾಶ ದತ್ತ ಎಳೆದೊಯ್ದು ಡೈನಮೈಟ್ ಸಿಡಿಸಿ ದೇವಾಲಯವನ್ನು ನೆಲಸಮಮಾಡುವ, ಜಲಪ್ರಳಯದಲ್ಲಿ ಊರನ್ನೇ ಮುಳುಗಿಸುವ ಕಡೆಗೆ ಆಲೋಚಿಸುತ್ತದೆ. ಆ ವಿನಾಶ ಕಾರೀ ಯೋಜನೆಯಲ್ಲೇ ಆತ 'ಬಲಿಪಶು' ವಾಗುತ್ತಾನೆ.

ಸತ್ಯಳಿಗೆ ಕ್ರಾಂತಿಯ ಫಲದ ಬಗೆಗೆ ನಂಬುಗೆಯಿದ್ದರೂ ಅದನ್ನು ನಡೆಸುವ ವಿಧಾನದಲ್ಲಿ ಅವಳು ಮೋಹನದಾಸನಿಂದ ಭಿನ್ನಳು. ಪ್ರಾರಂಭದಲ್ಲಿ ಮೋಹನದಾಸ ಹೇಳುವ ಕ್ರಾಂತಿಯ ಮೂಲಕ ಎಲ್ಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹು ದೆನ್ನುವುದರಲ್ಲಿ ವಿಶ್ವಾಸ ಅವಳಿಗೆ ಇರದಿದ್ದರೂ ಮೇಲು ಜಾತಿಯವರನ್ನು ಒದೀದೆ ಯಾವತ್ತೂ ದಾರಿಗೆ ಬರೋಲ್ಲ; ಹಿಂಸಾಮಾರ್ಗವನ್ನು ಅನುಸರಿಸದೇ ಕಾರ್ಯವನ್ನು ಈಡೇರಿಸಲಾಗದು ಎಂಬುದನ್ನು ಪೌರ್ವಾತ್ಯ, ಪಾಶ್ಚಾತ್ಯ ಇತಿಹಾಸಗಳ ಹಿನ್ನೆಲೆ ಯನ್ನು ಕೊಟ್ಟು ಮೋಹನದಾಸ ಉಭಾಯಿಸಿ ನುಡಿದಾಗ ಅವನ ಮಾತಿನಲ್ಲಿ ತಿರುಳಿರುವುದನ್ನು ಮನಗಾಣುತ್ತಾಳೆ. ಸಾಮಾಜಿಕ ಕ್ರಾಂತಿಯಾಗದ ಹೊರತು ಜಾತೀಯವಾದ ಏರುಪೇರು ನಿವಾರಣೆಯಾಗದು ಎಂಬ ನಿಲವು ಸತ್ಯಳದು. ವಿಚಾರ ಕ್ರಾಂತಿಯ ಮೂಲಕ ಯುವಜನಾಂಗವನ್ನು ಕಟ್ಟಿ ಸಾಂಘಿಕ ಹೋರಾಟ ನಡೆಸಲು ಮೋಹನದಾಸನ ಕೋರಿಕೆಯಂತೆ ಪುಸ್ತಕವೊಂದನ್ನೂ ಬರೆಯುತ್ತಾಳೆ. ಅಹಿಂಸೆಯ ಅಪ್ಪುಗೆಯಲ್ಲಿ ಕ್ರಾಂತಿ ಸಾಗಬೇಕೆಂಬುದು ಅವಳಿಚ್ಛೆ. ಕ್ರಾಂತಿ ಹಿಂಸೆಯತ್ತ ಮುಖ ಮಾಡಿದಾಗ, ಹೊನ್ನೂರ ಹಾಗೂ ಹಿಂದುಳಿದ ವರ್ಗದ ಹಾಸ್ಟಲಿನ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಮೇಲುವರ್ಗದವರ ಬಗೆಗೆ ದ್ವೇಷದ ಬೀಜವನ್ನು ಮೋಹನದಾಸ ಬಿತ್ತ ಹೊರಟಿದ್ದಾನೆ ಎಂಬುದು ತಿಳಿದಾಗ ಸತ್ಯ ಆ ಬಗೆಯ ಕ್ರಾಂತಿಯಲ್ಲಿ ವಿಶ್ವಾಸವನ್ನೇ ಕಳೆದುಕೊಳ್ಳುತ್ತಾಳೆ. ಅದು ವಿನಾಶದತ್ತ ಧಾವಿಸಿ ಹೊರಟಾಗ ಒಂದು ಕ್ಷಣ ಅವಳಿಗೆ

ಗಾಬರಿ, ಸಂಕಟಗಳಾಗುತ್ತವೆ. ಮೋಹನದಾಸ ಸಮಾನತೆಗೆ ಹೊಡೆದಾಡದೆ ಮೇಲು ವರ್ಗದವರನ್ನು ತುಳಿದು ಅವರನ್ನು ಆಳುವುದೇ ಗುರಿಯನ್ನಾಗಿ ಹೊಂದಿದಾಗ, ಪೂಜಾರಿಗಳ ಸ್ಥಾನದಲ್ಲಿ ತನ್ನವರು ನಿಲ್ಲಬೇಕು, ತಮ್ಮವರ ಹೊಲದಲ್ಲಿ ಮೇಲುವರ್ಗ ದವರು ದುಡಿಯಬೇಕು, ಮೇಲುವರ್ಗದವರ ಹೆಂಗಸರನ್ನು ತನ್ನವರು ಭೋಗ್ಯ ವಸ್ತುವಾಗಿ ಅನುಭವಿಸಬೇಕು —ಎಂಬುದು ಅವನ ಕ್ರಾಂತಿಯ ಎಲ್ಲಕ್ಕಿಂತ ಹೆಚ್ಚಾಗಿ ಅವನ ಒಳಮನದ ಹುಚ್ಚು ಆಸೆಯ ಗುರಿ ಎಂಬುದು ಅವನಿಂದಲೇ—ಮೈಮರೆತು ಆಡಿದ–ಅವನ ಮಾತುಗಳಿಂದಲೇ ಸತ್ಯಳಿಗೆ ವೇದ್ಯವಾಗುತ್ತದೆ. ಅವಳಿಗೆ ಅವನ ಕ್ರಾಂತಿ ಯಲ್ಲಿ ತಳೆದಿದ್ದ ನಂಬುಗೆ ಜಾರುತ್ತದೆ; ಅವಳ ಭ್ರಮೆ ನಿರಸನವಾಗುತ್ತದೆ. ಕ್ರಾಂತಿಯಿಂದ ಸಮಾನತೆಯನ್ನು ಗಳಿಸಹೊರಟು, ಅದು ಲಭ್ಯವಾದಾಗ ಮರಳಿ ಇವರೂ ಶೋಷಕವರ್ಗವಾಗುವ ದುರಂತದ ಮುಂಗಾಣ್ಕೆಯಿಂದ ಒಂದು ಕ್ಷಣ ಸ್ತಂಭೀಭೂತಳಾದ ಸತ್ಯಳಿಗೆ ಆ ಕ್ರಿಯೆಯಲ್ಲಿ ಚರಿತ್ರೆಯ ಪುನರಾವರ್ತನೆಯನ್ನು ಕಂಡು ಬೇಸರವಾಗುತ್ತದೆ.

ನೆಲದ ಸಂಪರ್ಕವಿಲ್ಲದೆ ಕೇವಲ ಪುಸ್ತಕಗಳಿಂದ ಪಡೆದ ಜ್ಞಾನದಿಂದ ಜೀವನ ವನ್ನು ಅರ್ಥೈಸಿದ್ದ ಅವಳಿಗೆ ಶ್ರೀನಿವಾಸನೊಂದಿಗೆ ತನ್ನ ಮದುವೆ ನಿಂತ ಮೇಲೆ, ಮರಳಿ ಹಳ್ಳಿಗೆ ಬಂದು ನೆಲಸಿದ ಮೇಲೆ ಅವಳಿಗೆ ಜೀವನದ ಸ್ಪಷ್ಟ ತಿಳುವಳಿಕೆ ಕ್ರಮಕ್ರಮೇಣ ಆಗತೊಡಗುತ್ತದೆ. ಅವಳು ಜೀವನದಲ್ಲಿ ಬಂದ ಅನುಭವಗಳನ್ನು ಅವು ಬಂದಂತೆಯೇ ಸ್ವೀಕರಿಸುತ್ತಾಳೆ. ಸಂಕೀರ್ಣ ಅನುಭವಗಳು, ಅವುಗಳ ಶೋಧನೆ ಯಲ್ಲಿ ನಿರತವಾದ ಅವಳ ಚಿಂತನಶೀಲಪ್ರವೃತ್ತಿ ಬಂದ ಒಂದೊಂದೇ ಅನುಭವ ಗಳನ್ನು ಕೆದಕಿ, ಒರೆಹಚ್ಚಿ ಸ್ವೀಕರಿಸುತ್ತಾ ಹೋಗುವುದು. ಪೌರ್ವಾತ್ಯ, ಪಾಶ್ಚಾತ್ಯ ದೇಶಗಳ ಇತಿಹಾಸದ ಅಭ್ಯಾಸದ ಹಿನ್ನೆಲೆಯಲ್ಲಿ ಅವಳ ವಿಚಾರಶಕ್ತಿ ಹರಿತಗೊಂಡು ಪರಂಪರೆಯ ದಬ್ಬಾಳಿಕೆಯ ಬಗೆಗೆ ಪುಸ್ತಕ ಬರೆಯ ಹೊರಟಾಗ ಅವಳಿಗೆ ಜಾತಿಯ ಮೂಲ ಸಮಸ್ಯೆ ಹಳ್ಳಿಯಲ್ಲಲ್ಲದೆ ಪಟ್ಟಣದಲ್ಲಿ ಅಲ್ಲ ಎಂಬ ಸತ್ಯದ ಪರಿಚಯವಾಗು ತ್ತದೆ. ಸೆನ್ಸಸ್ ವೇಳೆಯಲ್ಲಿ ಪ್ರತಿಯೊಂದು ಜಾತಿಯ ಅಂತಸ್ತು ನಿರ್ಣಯ ಮಾಡಲು ಸಭೆ ಸೇರಿದಾಗ ಬ್ರಾಹ್ಮಣೇತರರು ತಮ್ಮನ್ನು ಬ್ರಾಹ್ಮಣರೆಂದು ಕರೆದುಕೊಳ್ಳಲು ಕಚ್ಚಾಡುತ್ತಿದ್ದಾಗ ಸತ್ಯಳಿಗೆ ಇತಿಹಾಸದ ಸತ್ಯದರ್ಶನವಾಗುತ್ತದೆ.

ಜಾತಿ ಹಾಗೂ ಅದರ ಆಚರಣೆಗಳ ವಿರೋಧಿಯಾದ ಸತ್ಯ, ತಂದೆ ತಮ್ಮ ರೇಗಿದ ಹುಚ್ಚಿನಲ್ಲಿ ತನಗೆ ಬ್ರಹ್ಮೋಪದೇಶವಿತ್ತು ಯಜ್ಞೋಪವೀತಧಾರಣೆ ಮಾಡಿ ಗಾಯತ್ರೀ ಮಂತ್ರವನ್ನು–ಉಪದೇಶಿಸಿದಾಗ ಕಿತ್ತು ತಿನ್ನುವ ತನ್ನ ಏಕಾಕೀತನದಿಂದ ಬಿಡುಗಡೆ ಹೊಂದಲು ಅದನ್ನು ಪ್ರತಿಭಟಿಸದೆ ಸ್ವೀಕರಿಸುತ್ತಾಳೆ. ತನ್ನನ್ನು ತಾನೇ ಶುದ್ಧೀಕರಿಸಿಕೊಳ್ಳಲು ಸತ್ಯ ಮತೀಯ ಆಚರಣೆಯಾದ, ಅಂಧಶ್ರದ್ಧೆಯ ಕುರುಹಾದ ಹವನವನ್ನು ಒಂದು ಮಾಧ್ಯಮವಾಗಿ ಬಳಸಿಕೊಳ್ಳುತ್ತಾಳೆ. ಜಾತೀಯತೆಯ

ಭೇದಭಾವ ನಿವಾರಣೆಯಾಗಬೇಕಾದರೆ ಪರಿಜನರಂತೆ ಮಣ್ಣಿನೊಂದಿಗೆ ಸಂಪರ್ಕ ಬೆಳೆಸಬೇಕು ಎಂದು ಆಲೋಚಿಸುತ್ತಾಳೆ. ಅಂತೆಯೇ ತನ್ನ ಪಾಲಿಗೆ ಬಂದ ತೋಟದಲ್ಲಿ ತೆಂಗಿನ ಸಸಿಗೆ ಪಾತೆ ಕಟ್ಟುತ್ತಾಳೆ. ಉಳಲಿಕ್ಕೆಂದು ಮೋಟೆ ಒಡೆಯುತ್ತಾಳೆ. ಅಡುಗೆಗೆಂದು ಕಟ್ಟಿಗೆ ಹೊಡೆಯುತ್ತಾಳೆ. ಹೀಗೆ ಒಂದೊಂದೇ ಅನುಭವಗಳನ್ನು ತನ್ನದಾಗಿಸಿಕೊಳ್ಳುತ್ತಾ ಒಂದರಿಂದ ಮತ್ತೊಂದಕ್ಕೆ ಸತ್ಯ ದಾಟುತ್ತಾಳೆ. ಮೋಹನದಾಸನ ಕ್ರಾಂತಿ ಹಿಂಸೆಯತ್ತ ತಿರುಗಿ ಅದು ವಿನಾಶದತ್ತ ಸಾಗುತ್ತಾ ಊರನ್ನೇ ನಾಶ ಮಾಡುವಲ್ಲಿ ಪರ್ಯವಸಾನಗೊಂಡಾಗ, ಮೀರಳ ಮರಣ ಹಾಗೂ ಶ್ರೀನಿವಾಸನ ಹುಚ್ಚಿನಿಂದ ಮೊದಲೇ ನಿರ್ವಿಣ್ಣವಾಗಿದ್ದ ಅವಳ ಮನ ನಿರಾಶೆಯನ್ನು ತಬ್ಬುತ್ತದೆ. ತನ್ನೆಲ್ಲ ಅನುಭವಗಳು ಅರ್ಥವಿಹೀನವೆಂಬ ನಿಲುವಿಗೆ ಬಂದ ಸತ್ಯ, ಉಕ್ಕಿಬಂದ ನೀರಿಗೆ ತನ್ನ ಯಜ್ಞೋಪವೀತವನ್ನು ಕಿತ್ತು ಎಸೆಯುವುದು ಹೆಚ್ಚು ಅರ್ಥವತ್ತಾಗಿ ಕಂಡು ಬರುತ್ತದೆ.

ಕಾದಂಬರಿಯಲ್ಲಿ ಗಮನಸೆಳೆಯುವ ಪಾತ್ರ ಸತ್ಯಳದು ಎಂಬುದರಲ್ಲಿ ಎರಡು ಮಾತಿಲ್ಲ. ಸತ್ಯಳ ವಿಚಾರಧಾರೆಗಳಲ್ಲಿ ಕಾದಂಬರಿಕಾರರ ಪ್ರಭಾವಮುದ್ರೆ ಬಿದ್ದಿರುವುದರಿಂದಾಗಿ ಹೆಣ್ಣಾದ ಸತ್ಯಳ ವಿಚಾರ–ಆಚಾರಗಳಲ್ಲಿ ಸಹಜತೆಯ ಸಂಸ್ಪರ್ಶವಿಲ್ಲವೆನ್ನುವ ಗುಮಾನಿಯೂ ಓದುಗನಿಗಾಗುತ್ತದೆ. ಮೈಸೂರಿನಿಂದ ಹಳ್ಳಿಗೆ ಹಿಂತಿರುಗುವಾಗ ಹೋಲ್ಡಾಲನ್ನು ತಲೆಯ ಮೇಲೆ ಹೊತ್ತು ಮನೆಗೆ ಬರುವುದು ; ಸಾಯುವ ಹಿಂದಲ ದಿನ ವೆಂಕಟರಮಣಯ್ಯನವರು ಪ್ರಲಯ ಜಲ ಉಕ್ಕಬೇಕು ಎಂದು ಬಡಬಡಿಸಿದ್ದು ಸತ್ಯಳ ಪಾಲಿಗೆ ನಿಜವಾದದ್ದು–ಇವೇ ಮೊದಲಾದ ಎಡೆಗಳಲ್ಲಿ ಅತಿಭಾವುಕತನದಿಂದ ಕಾದಂಬರಿಕಾರರು ಸತ್ಯಳ ಪಾತ್ರವನ್ನು ಚಿತ್ರಿಸಿದಂತೆ ಕಂಡು ಬರುತ್ತದೆ.

ದುರ್ಬಲ ಮನಸ್ಸಿನ ಸ್ವಯಂನಿರ್ಧಾರ ಕೈಗೊಳ್ಳುವ ದೃಢಮನವಿಲ್ಲದ ಶ್ರೀನಿವಾಸನ ದುರಂತವು ಕಾದಂಬರಿಯ ಒಂದು ಭಾಗವಾಗಿದೆ. ವಾಸ್ತವ್ಯದ ಪ್ರಜ್ಞೆಯಿದ್ದರೂ ಎಚ್ಚೆತ್ತು ಮುಂಬರುವ ಆಪತ್ತುಗಳನ್ನು ಎದುರಿಸುವ ಧೈರ್ಯವಿಲ್ಲದೆ ಶ್ರೀನಿವಾಸ ಪಲಾಯನವಾದಿಯಾಗುತ್ತಾನೆ. ಶ್ರೀನಿವಾಸನ ದುರಂತಕ್ಕೆ ಅವನ ತಂದೆ ಎಷ್ಟು ಕಾರಣರೋ ಅಷ್ಟೇ ಮಟ್ಟಿಗೆ ಜಾತಿಪದ್ಧತಿಯೂ ಕಾರಣವೆಂಬುದನ್ನು ನಾವು ಅಲ್ಲಗಳೆಯಲು ಸಾಧ್ಯವಾಗದು.

ಪಾತ್ರಚಿತ್ರಣದಲ್ಲಿ ಅದರಲ್ಲೂ ಸತ್ಯ, ಮೋಹನದಾಸ, ಮೇಲುಗಿರಿಗೌಡರು, ವೆಂಕಟೇಶ, ವೆಂಕಟರಮಣಯ್ಯ – ಈ ಪಾತ್ರಗಳ ಗುಣಾವಗುಣಗಳನ್ನು ಚಿತ್ರಿಸುವಲ್ಲಿ ಕಾದಂಬರಿಕಾರರು ಅದ್ಭುತ ಸಿದ್ಧಿಯನ್ನು ಪಡೆದಿದ್ದಾರೆ. ವೈಚಾರಿಕತೆಯನ್ನೇ ಮೂಲ ಗುಣವನ್ನಾಗಿ ಒಳಗೊಂಡ ಈ ಕಾದಂಬರಿ ಜ್ವಲಂತ ಸಮಸ್ಯೆಯೊಂದನ್ನು ವಿಶ್ಲೇಷಿಸ

ಹೊರಟಿದ್ದರೂ ಕಾದಂಬರಿಕಾರರು ಹೊಸಬಗೆಯ ತಂತ್ರಕ್ಕೆ ಕೈಹಾಕಿಲ್ಲ. ಕಾದಂಬರಿ ಪ್ರಪಂಚದಲ್ಲಿ ಹಳತಾದ ನಿರೂಪಣಾ ವಿಧಾನವನ್ನೇ ಕಾದಂಬರಿಕಾರರು ಅನುಸರಿಸಿರುವರು. ಇದರಿಂದ ಪಾತ್ರಗಳ ಒಳಮನಸ್ಸನ್ನು ಚಿತ್ರಿಸಲು ತೊಂದರೆಯೇನೂ ಆಗಿಲ್ಲ. ಹಳಯ ನಿರೂಪಣಾ ವಿಧಾನವನ್ನು ಅನುಸರಿಸಿಯೂ ಅಪೂರ್ವವೆನ್ನುವಂತೆ ಪಾತ್ರಚಿತ್ರಣ ಮಾಡಿರುವುದು ಡಾ. ಎಸ್. ಎಲ್. ಭೈರಪ್ಪನವರ ಪ್ರತಿಭಾ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಒಟ್ಟಿನಲ್ಲಿ, ಆರೋಗ್ಯಕರ ದೃಷ್ಟಿಯಿಂದ ಜಾತೀಯ ಸಮಸ್ಯೆಯ ಬಗೆಗೆ ವಿಶ್ಲೇಷಿಸಿರುವ ಡಾ. ಎಸ್. ಎಲ್. ಭೈರಪ್ಪನವರ 'ದಾಟು' ಕಾದಂಬರಿ ಇತ್ತೀಚಿನ ದಿನಗಳಲ್ಲಿ ಬಂದ ಮಹತ್ವಪೂರ್ಣ ಕೃತಿಯಾಗಿದೆ.*

* [ಈ ಲೇಖನವು ಬೆಂಗಳೂರು ಆಕಾಶವಾಣಿ ಕೇಂದ್ರದಲ್ಲಿ ನಾನು 'ದಾಟು' ಕಾದಂಬರಿಯನ್ನು ಕುರಿತು ಓದಿದ ವಿಮರ್ಶೆಯ ವಿಸ್ತೃತರೂಪವಾಗಿದೆ].

# ಶ್ರೀರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯನವರನ್ನು ಕುರಿತ ಲಾವಣಿ

ಕೃತಿಕಾರ : (ದಿ) ಮೂಗೂರುಮಲ್ಲಪ್ಪ

ಸಂಪಾದಕ : ಎಸ್. ಭೀಮಪ್ಪ

## ಕರ್ತೃವಿನ ಪರಿಚಯ

"ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯನವರನ್ನು ಕುರಿತ ಲಾವಣಿ"ಯ ಕರ್ತೃ ದಿವಂಗತ ಮೂಗೂರು ಮಲ್ಲಪ್ಪನವರು. "ಜೋಗಾದ ಗುಂಡಿ" ಲಾವಣಿಯಿಂದ ಕರ್ನಾಟಕದಲ್ಲಿಯೇ ಅಲ್ಲದೆ ವಿಶ್ವದಲ್ಲಿಯೇ ಪರಿಚಯವಾದ ಶ್ರೀ ಮೂಗೂರು ಮಲ್ಲಪ್ಪನವರು ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕ್ ಆನವಟ್ಟಿಯ ಬಳಿ ಮೂಗೂರು ಎಂಬ ಹಳ್ಳಿಯಲ್ಲಿ ಕ್ರಿ.ಶ. 1898 ರಲ್ಲಿ ರಜಕ ವಂಶದಲ್ಲಿ ಜನಿಸಿದರು. ಕಷ್ಟ ಪರಿಸ್ಥಿತಿಯಲ್ಲಿ ಬಹು ಪರಿಶ್ರಮಪಟ್ಟು ಕನ್ನಡ ಲೋಯರ್ ಸೆಕೆಂಡರಿ ಮತ್ತು ಕನ್ನಡ ಅಪ್ಪರ್ ಸೆಕೆಂಡರಿ ಪರೀಕ್ಷೆಗಳಲ್ಲಿ ತೇರ್ಗಡೆಯಾದರು. ಇವರು ಪ್ರಾಥಮಿಕ ಶಾಲೆಯ ಉಪಾಧ್ಯಾಯರಾಗಿ ಕೆಲವು ವರ್ಷ ಸೇವೆ ಮಾಡಿದನಂತರ ಟಿ.ಸಿ.ಎಲ್. ತರಬೇತಿ ಪಡೆದು ಹಿಂದಿನ ಮಾಧ್ಯಮಿಕ (Middle School) ಶಾಲೆಗಳಲ್ಲಿ ಕನ್ನಡ ಪಾಠ ಹೇಳುವ ಉಪಾಧ್ಯಾಯರಾಗಿ ನೇಮಕಗೊಂಡರು. ಅವರ ತರಬೇತಿ ಅವಧಿ ಕನ್ನಡ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಒಂದು ಸುವರ್ಣ ಅವಕಾಶವಾಯಿತು. ಶಿರಾಳಕೊಪ್ಪದಲ್ಲಿ ಕನ್ನಡದ ಉಪಾಧ್ಯಾಯರಾಗಿ ವರ್ಗವಾಗಿ ಬಂದಮೇಲಂತೂ, ಶಾಲೆಯ ಆಗಿನ ಪದವೀಧರ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಸೊರಬದ ಸುಬ್ಬರಾಯರ ನೇತೃತ್ವ ಮತ್ತು ಪ್ರೋತ್ಸಾಹ ಅವರ ಸಾಹಿತ್ಯ ಚಟುವಟಿಕೆಗೆ ಹೊಸ ತಿರುವು ತಂದಿತು. ಊರಿನ ಚಟುವಟಿಕೆಯ ಕೇಂದ್ರವಾದ ಶಾಲಾ ಕರ್ನಾಟಕ ಸಂಘದ ಆಶ್ರಯದಲ್ಲಿ ಇವರು ಅನೇಕ ಲಾವಣಿ ಮತ್ತು ಕವನಗಳನ್ನು ಬರೆದು ಹಾಡಿದರು.

ಶ್ರೀ 'ಅಂಬಿಕಾತನಯದತ್ತ', ಶ್ರೀ 'ಶ್ರೀನಿವಾಸ' ಇವರು ಒಮ್ಮೆ ಶಿರಾಳಕೊಪ್ಪದ ಕರ್ನಾಟಕ ಸಂಘಕ್ಕೆ ದಯಮಾಡಿಸಿದಾಗ ಇವರ ಜೋಗಾದ ಗುಂಡಿ ಮತ್ತು ಇತರೆ ಲಾವಣಿಗಳನ್ನು ಕೇಳಿ ತುಂಬಾ ಸಂತೋಷಪಟ್ಟು ಇವರ ಸಾಹಿತ್ಯ ಚಟುವಟಿಕೆ ಬೆಳೆಯಲೆಂದು ಆಶೀರ್ವಾದ ಮಾಡಿದ್ದಾರೆ. ಜೋಗದ ಜೋಕ್ ಎಂಬ ಇವರ ಲಾವಣಿಯಂತೂ ಕನ್ನಡ ಸಾರಸ್ವತ ಲೋಕದಲ್ಲಿ ಉನ್ನತ ಸ್ಥಾನವನ್ನು ಪಡೆದ ಜಾನಪದ ಲಾವಣಿಯಾಗಿದೆ. ರಾಷ್ಟ್ರಕವಿ ಶ್ರೀ ಕುವೆಂಪುರವರು "ಜೋಗದ ಜೋಕ್ ಎಂಬ ಶ್ರೀ ಮಲ್ಲಪ್ಪನವರ ಲಾವಣಿ ನಮ್ಮ ಸಾಹಿತ್ಯದ ಸುಂದರ ಕೃತಿಗಳಲ್ಲಿ ಒಂದು" ಎಂದು ಮನಮೆಚ್ಚಿ ಶ್ಲಾಘಿಸಿದ್ದಾರೆ. ಐತಿಹಾಸಿಕ ಶಿವಶರಣರ ಸುಕ್ಷೇತ್ರವಾದ ಬಳ್ಳಿಗಾವೆ ಕ್ಷೇತ್ರದ ವರ್ಣನೆಯನ್ನು ಜನಸಾಮಾನ್ಯರಿಗೂ ತಿಳಿಯುವಂತೆ ಸುಮಾರು ಇಪ್ಪತ್ತೆರಡು ನುಡಿಗಳಲ್ಲಿ "ಬಳ್ಳಿಗಾವೆಯ ಲಾವಣಿ" ಎಂಬ ಸುಂದರ ಕೃತಿಯನ್ನು ರಚಿಸಿದ್ದಾರೆ. ಚಂದ್ರಹಾಸನ ಲಾವಣಿ

ಅವರ ಮೊದಲ ಕೃತಿಯಾದರೂ ಒಮ್ಮೆ ಓದಲು ಪ್ರಾರಂಭಿಸಿದರೆ ಬಿಡಲು ಮನಸ್ಸೇ ಬರುವುದಿಲ್ಲ ವೆಂದು ಶ್ರೀ ಸೊರಬ ಸುಬ್ಬರಾಯರು ಹೇಳಿದ್ದಾರೆ. ಶ್ರೀಗಳಾದ ಎ.ಆರ್. ಶ್ರೀಎಸ್.ವಿ. ರಂಗಣ್ಣ ನವರು, ಹೊಯಿಸಳ, ಸುಬೋಧ ರಾಮರಾಯರು, ಮಾಳವಾಡರು ಮತ್ತು ಶ್ರೀಮತಿ ಆರ್. ಕಲ್ಯಾಣಮ್ಮನವರು ಇವರ ಕವಿತಾ ಶಕ್ತಿಯ ಬಗ್ಗೆ ತುಂಬಾ ಸಂತೋಷಪಟ್ಟಿದ್ದಾರೆ. ಸರಸ್ವತಿ, ಮತ್ತು ಸುಬೋಧಾ ಪತ್ರಿಕೆಗಳಲ್ಲಿ ಚಂದ್ರಹಾಸನ ಲಾವಣಿ, ಬಳ್ಳಿಗಾವೆ ಲಾವಣಿ, ರಾಮಣ್ಣ ನಾಯ್ಕ ಹುಲಿ ಹೊಡೆದ ಲಾವಣಿ, ಜೋಗಾದ ಜೋಕ್ ಲಾವಣಿಗಳು ಪ್ರಕಟವಾಗಿವೆ. ಅವರ ಜೋಗಾದ ಜೋಕ್, ಬಳ್ಳಿಗಾವೆ, ಮತ್ತು ಬಿ.ಎಂ.ಶ್ರೀಯವರ ಲಾವಣಿಗಳಲ್ಲಿ ಅವರ ದೇಶಾಭಿ ಮಾನ ಉಕ್ಕಿ ಹರಿಯುತ್ತದೆ. ಇವರ ಲಾವಣಿ ಮತ್ತು ಕವನಗಳನ್ನು ಕೇಳಿದ ಪಂಡಿತರು ಮೆಚ್ಚುತ್ತಿದ್ದರು. ಪಾಮರರು ಇವರ ಜಾನಪದ ಧಾಟಿಗೆ ತಲೆ ತೂಗುತ್ತಿದ್ದರು. 1942 ರಲ್ಲಿ ಧಾರವಾಡದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಕವಿ ಮೇಳದಲ್ಲಿ ಶ್ರೀ ಮಲ್ಲಪ್ಪನವರು ಭಾಗ ವಹಿಸಿ ಮೆಚ್ಚಿಗೆಯನ್ನು ಸಂಪಾದಿಸಿದ್ದರು. 1939 ರಲ್ಲಿ ಶ್ರೀ ಎಂ. ಆರ್. ಶ್ರೀ.ಯವರು ಶಿರಾಳ ಕೊಪ್ಪಕ್ಕೆ ಬಂದಾಗ ಶ್ರೀ ಮಲ್ಲಪ್ಪನವರು ಬರೆದ ಸ್ವಾಗತ ಗೀತೆಯನ್ನು ಕೇಳಿ "ಭಾಮಿನಿ ಷಟ್ಪದಿ ವ್ಯವಸಾಯವನ್ನು ಶ್ರೀ ಮಲ್ಲಪ್ಪನವರು ಕೈಬಿಡಬಾರದು" ಎಂದಿದ್ದಾರೆ. "ಬಸವನ ಕನಸು" ಎಂಬ ರಗಳೆಯನ್ನೂ ಸಹ ಬರೆದಿದ್ದರಂತೆ. ಆಕೃತಿ ಇನ್ನೂ ಸಿಕ್ಕಿಲ್ಲ. ಕಂದ, ವೃತ್ತ, ಷಟ್ಪದಿ, ರಗಳೆ ಮತ್ತು ನವೀನ ಲಾವಣಿಗಳನ್ನು ಜಾನಪದ ಧಾಟಿಯಲ್ಲಿ ಬರೆದು ಶ್ರೀ ಮಲ್ಲಪ್ಪನವರು ಜನಪ್ರಿಯ ಕವಿಗಳಾಗಿದ್ದಾರೆ.

ಶ್ರೀ ಬಿ. ಎಂ. ಶ್ರೀಯವರು ಶಿರಾಳಕೊಪ್ಪದ ಕರ್ನಾಟಕ ಸಂಘಕ್ಕೆ ಬಂದಾಗ, ಅವರನ್ನು ಕುರಿತು "ರಾಜ ಸೇವಾಸಕ್ತ ಶ್ರೀ ಬಿ. ಎಂ. ಶ್ರೀಕಂಠಯ್ಯನವರನ್ನು ಕುರಿತ ಲಾವಣಿ" ಎಂಬ ಲಾವಣಿ ಬರೆದು ಹಾಡಿದಾಗ ಎಲ್ಲರೂ ಇವರ ಕವಿತಾಶಕ್ತಿಗೆ ಮಾರುಹೋಗಿದ್ದರು." ಎಂಬುದಾಗಿ ಶ್ರೀ ಸುಬ್ಬರಾಯರು ಅವರ ಪರಿಚಯದ ಲೇಖನದಲ್ಲಿ ತಿಳಿಸಿದ್ದಾರೆ. ಈ ಲಾವಣಿಯಲ್ಲಿ ಕನ್ನಡ ನಾಡಿನ ಹಿಂದಿನ ವೈಭವ, ಕನ್ನಡಿಗರ ಅಂದಿನ ಸ್ಥಿತಿ, ಅವರ ಕರ್ತವ್ಯಗಳನ್ನು ಬಹು ಮಾರ್ಮಿಕ ವಾಗಿ ತಿಳಿಸಿದ್ದಾರೆ. ಹೇಗೆ ಕನ್ನಡ ತಾಯಿಗೆ ಗೌರವ ಸಂಪಾದಿಸಿಕೊಡಲು ಶ್ರೀಯವರು ಪ್ರಯತ್ನಿ ಸಿದ್ದಾರೆ ಎನ್ನುವುದನ್ನು ಮನೋಜ್ಞವಾಗಿ ತಿಳಿಸಿದ್ದಾರೆ. ಕರ್ನಾಟಕದ ಜನತೆ ಶ್ರೀಕಂಠನ ನಗಾರಿ ನಾದಕ್ಕೆ ಎಚ್ಚರಗೊಂಡರು ಎಂಬುದನ್ನು ವರ್ಣಿಸಿ, ಶ್ರೀಕಂಠಗುರು 'ಕಣ್ವ ಕನ್ನಡಕ್ಕೆ' ಎಂದು ಬಿ. ಎಂ. ಶ್ರೀಯವರನ್ನು ಕನ್ನಡದ ಕಣ್ವ ಎಂದು ಕರೆದು ಗೌರವಿಸಿ ಇವರ ಸೇವೆ ಬಹುನೂರ ಬೆಳೆಯಲಿ ಎಂದು ಹಾರೈಸಿದ್ದಾರೆ. 1943 ರಲ್ಲಿ ಈ ಜಾನಪದ ಕವಿ ದೈವಾಧೀನರಾದರು. ಇನ್ನೂ ಅನೇಕ ಅಮೂಲ್ಯ ಕೃತಿಗಳು ಇವರಿಂದ ಮೂಡಿಬರುತ್ತಿದ್ದುವೇನೋ! ಆದರೆ ಪರಮಾತ್ಮ ಕನ್ನಡಿಗರಿಂದ ಬಹು ಜಾಗ್ರತೆ ಕಸಿದುಕೊಂಡ. ಇಂತಹ ಜನಕುಸುಮದಂತಿದ್ದ ಜಾನಪದ ಕವಿಯ ಕೃತಿಗಳನ್ನು ಹೊರಕ್ಕೆ ತರುವ ಪ್ರಯತ್ನ ಮಾಡುತ್ತಿದ್ದೇನೆ.

ಗಣಪತಿ ಘನಮತಿ ಚಣಚಣಕೆರಗುವೆ ।
ನಿಜಮತಿ ಕೊಡು ನೀ ದಿನಾದಿನ ।
ಗುಣಮಣಿ ಕುಲಮಣಿ ಕನ್ನಡದರಗಿಣಿ ।
ಮಾನ್ಯರ ಕತೆಯಿದ ಹೇಳುವೆನಾ ॥ಪಲ್ಲ॥

ಕನ್ನಡನಾಡಿನ ಅಂದಿನ ವೈಭವ ।
ಎಷ್ಟೆಂತ್ಹೇಳಲಿ ನಾನದನ
ಚಿನ್ನದ ಬಾಗಿಲು ರನ್ನದ ಗೋಪುರ ।
ಮೆರೆಯುವ ಗುಡಿ ಗುಂಡಾರವನ ॥

ರನ್ನ ಪೊಂಪ ಸಂಪನ್ನರು ಬೆಳಗಿದ ।
ಕನ್ನಡ ಜ್ಯೋತಿಯ ಹಿರಿಮೆಯನ ।
ಚೆನ್ನಿಗರಾಯರು ಶೌರ್ಯದಿ ಕಟ್ಟಿದ ।
ಕನ್ನಡನಾಡಿನ ಸೊಬಗನ್ನ ॥

ಮುನ್ನರಾಮ ಬಲಭೀಮರ ಬದುಕಿನ ।
ಹಾಡನು ಹೇಳುವ ಶಿಲ್ಪವನ ।
ಉನ್ನತ ಕಲೆಗಳ ಸೊಬಗನು ಬೀರಿದ
ಕನ್ನಡದೇವಿಯ ಸಿರಿಯನ್ನ ॥

॥ ಇಳವು ॥

ಸೂರಿಮಾಡಿದಾರ ನಮ್ಮ ಸಿರಿಯ ।
ನಾವಾಗಿ ದೇವಿ ಬರಿಗೈಯ ।
ಮೆಟ್ಟಿ ತುಳಿಯು ತಾರ ನಮ್ಮತಾಯ
ಕವಿದಿತ್ತು ನಮಗ ಬಲು ಮಾಯ
ಸಾಹಿತ್ಯ ಬಿಡುತಲಿದೆ ಬಾಯ
ತಿಳಿದಿಲ್ಲ ನಮಗಯಿದರಾಯ

॥ ಏರು ॥

ಕನ್ನಡಿಯಂತ ಕನ್ನಡನಾಡು ಕಟ್ಟು ಹರಿದು ಕಳಚಿಬಿದ್ದು ।
ಮಣ್ಣುಗೂಡಿ ಹೋಗುವುದು ತಿಳಿಯದ್ಹಂಗ ॥
ಕಣ್ಣುಮುಚ್ಚಿ ಕುರುಡರಂಗ ಕೈಯಕಟ್ಟಿ ಕುಳಿತರ್‍ಯಾಂಗ ।
ದಾಳಿಯಾಗುತಾವ ಒಳಗೊಳಗ ॥

ಕನ್ನಡತಾಯಿ ಮಕ್ಕಳಾಗಿ ಅನ್ಯರಿಗೆ ಶರಣುಹೋಗಿ
ಮರೆತರು ಕನ್ನಡ ನಡೆನುಡಿಯ ॥
ತನ್ನದೊಂದು ಉನ್ನತಿಯು ಕಣ್ಣೀರೊಳಗ ಕರುಗತಾವ
ಬಣ್ಣಭೇದ ಮಾಡುವದ್ಯಾವನ್ಯಾಯ ॥

ಎಟ್ಟಿಗೆಟ್ಟಿ ಬಾಳು ಹಲವರ ಬುಟ್ಟಿಯೊಳಗ ಬಿದ್ದು ಪರ
ಪುಟ್ಟನ್ಹಂಗ ಕೊರಗುತಿರುವ ನಮ್ಮ ತಾಯ ॥
ಕಟ್ಟಕಡೆಗೆ ಯಾರಿಗಾದ್ರು ಕೆಟ್ಟ ಮೇಲೆ ಬುದ್ಧಿ ನೋಡು
ಸಿಟ್ಟು ಬಂದ್ರೆ ಮಾಡೋದಿಲ್ಲ ಹೈಯಗೈಯ ॥

ನಾಡು ನುಡಿ ಜೀವನಾಡಿಯತ್ತ ಬೇಕು ಯತ್ನಮಾಡಿ ।
ಕಾಲನೋಡಿ ಬಣ್ಣಕಟ್ಟಿ ನುಡಿನುಡಿಯ ।
ಬಟ್ಟಿಯಿಳಿಸಿ ಭಾವಗಳಿಸಿ ತೊಟ್ಟುತೊಟ್ಟುಉಣಿಸಿ ಬಲ ।
ಪುಷ್ಟಿಯಾಗಿ ಬೆಳಸಬೇಕು ನಮ್ಮತಾಯ ॥

॥ ಇಳಿವು ॥

ಕರುಳು ಕರಗಿ ದಾವ ಶ್ರೀಯುವರ ।
ಸೆರಗ್ಹಿಡಿದುವರಸಿ ಕಣ್ಣೀರ ।
ಮರುಗಿ ಹೇಳುತಾರ ಮಾತೆಯರ ।
ನಾವಮಾಡತೇನಿ ಪರಿಹಾರ ।
ಹರಸಿ ಕಳುವು ತಾಯೆ ನಾಕುವರ ।
ಬಿಡುತಾಯೆ ಮನದ ಬ್ಯಾಸರ ॥

॥ ಏರು ॥

ಭಂಟ ನಮ್ಮ ಶ್ರೀಕಂಠಯ್ಯ ಸೊಂಟಕಟ್ಟಿ ನಿಂತ್ರುನೋಡು ।
ಸುಂಟರಗಾಳಿ ಬೀಸಿದ್ಹಂಗೊಂದು ಚಣಾಚಣಕ ।
ಎಂಟು ಮೂಲಿಗೆದ್ರು ನಮ್ಮ ನೆಂಟರೆಲ್ಲ ಕಣ್ಣುಬಿಟ್ರು ।
ಶ್ರೀಕಂಠ ನಗಾರಿ ನಾದಕ್ಕ ॥

ಬಳ್ಳಾರಿ ಧಾರ್ವಾಡ ಮಂಗಳೂರು ಕಾರವಾರ ।
ಜಮುಖಂಡಿ ಬೆಳಗಾವಿ ಬಿಜಾಪುರ ।
ರಾಯಚೂರು ಕಲ್ಬುರಗಿಯವರ್ನೆಲ್ಲ ಕರೆದರು ।
ಮರೆತನೆ ? ನೋಡು ಬಿದರೆಯ ನಾಡವರ ।
ಮೇಳಗೂಡಿ ಮಾತನಾಡಿ ತಾಳಿಮಾಡಿಕೊಂಡರಪ್ಪ ।
ತಾಯಿಯ ಬಂಧನ ಹರಿಸೋದಕ ।
ಮೂಲಪುರುಷರಾಗಿ ಮುಂದೆ ಹೆಗಲಗೊಟ್ಟು ನಿಂತರಪ್ಪ ।
ಶ್ರೀಕಂಠಗುರು ಕಣ್ವ ಕನ್ನಡಕೆ ॥

ಕುಲಧರ್ಮ ನೋಡಿಕೊಂಡು ಕಾಲಿಟ್ಟು ನಡಿಯಬೇಕು ।
ತಾಯ್ನುಡಿಯೇ ಗುರು ಎಲ್ಲ ಜನಕ ।
ಸೋಲ್ಗೆಲುವು ನಮ್ಮದಲ್ಲ ಕೈಯಬಿಟ್ಟು ಕೂಡಬಾರದು ।
ಗಟ್ಟಿಮನಸಿರಬೇಕು ಸಾಧನಕ ॥

॥ ಇಳವು ॥

ಕರ್ಣಾಟ ಮಾತೆಯ ಭಕ್ತ ।
ಸಾಹಿತ್ಯದೊಳಗ ಬಲುಶಕ್ತ ।
ಭ[illegible]ಾಜಸೇವ ಆಸಕ್ತ ।
ಬಿ[illegible]ದಾಂಕ ಕನ್ನಡದ ರಕ್ತ ।
ಕನ್ನಡಕೆ ದುಡಿಯುತಾರ ನಿತ್ಯ ।
[illegible]ಹುದೂರ ಬೆಳೆಯಲಿವರ ಕೃತ್ಯ ॥

॥ ಏರು ॥

[illegible]ಬುನೋಡಿ ಗೊತ್ತುಮಾಡಿ ಗುಡಿಯಕಟ್ಟಿ ತೊಡೆಯತಟ್ಟಿ ।
[illegible]ಬಿ ಹೊಗ[illegible]ವುಟನ ।
[illegible]ವಿಗೊಡೆಯ ಶ್ರೀಕಂಠನ ಅಡಿಯ ನಂಬಿ ಪಡೆಯೊ ಮುಕ್ತಿ ।
[illegible]ಡೆಯನಾದ ಶ್ರೀಗುರು ಮಲ್ಲೇಶನ ॥

# ಒಕ್ಕೂಟ ರಾಜ್ಯಗಳ ಆರ್ಥಿಕ ಸಮಸ್ಯೆಗಳು

ಡಿ. ಟಿ. ನಂಜೇಗೌಡ

ಒಕ್ಕೂಟ ರಾಜ್ಯವು ಒಂದಕ್ಕಿಂತ ಹೆಚ್ಚು ಪ್ರಾಂತೀಯ ಇಲ್ಲವೆ ಪ್ರಾದೇಶಿಕ ರಾಜ್ಯಗಳನ್ನು ಒಳಗೊಂಡಿರುತ್ತದೆ. ಅಮೆರಿಕದ ಸಂಯುಕ್ತ ಸಂಸ್ಥಾನ, ಕ್ಯಾನಡಾ, ಆಸ್ಟ್ರೇಲಿಯ, ಸ್ವಿಟ್ಜರ್ಲೆಂಡ್ ಮತ್ತು ಭಾರತ ಇಂಥ ಒಕ್ಕೂಟರಾಜ್ಯಗಳಿಗೆ ಒಳ್ಳೆಯ ಉದಾಹರಣೆಗಳು. ಒಂದು ಒಕ್ಕೂಟ ರಾಜ್ಯ ಏಕಾಗಿ ಅಸ್ತಿತ್ವಕ್ಕೆ ಬರಬೇಕು ಎಂಬುದು ಒಂದು ಮಹತ್ವದ ಪ್ರಶ್ನೆಯಾಗಿದ್ದು, ಅರ್ಥಶಾಸ್ತ್ರಜ್ಞರೂ, ಶಿಕ್ಷಣವೇತ್ತರೂ ಈ ಬಗ್ಗೆ ಸದಾ ಚರ್ಚೆನಡೆಸುತ್ತಿದ್ದಾರೆ. ವ್ಯಷ್ಟಿ ಇಲ್ಲವೆ ಸಮಷ್ಟಿಯ ಕಾರಣಗಳಿಗಾಗಿಯೇ ಆಗಲಿ, ಒಂದು ದೇಶದ ಐಕ್ಯವನ್ನು ಎತ್ತಿಹಿಡಿಯಲು ಮತ್ತು ಬಲಪಡಿಸಲು ಹಾಗೂ ಅದರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಸಂಯೋಜಿತ ಪ್ರಗತಿ ಸಾಧಿಸಲು ಒಕ್ಕೂಟಗಳು ಇರುತ್ತವೆಂಬ ವಿಚಾರವನ್ನು ಸಾಮಾನ್ಯವಾಗಿ ನಂಬಲಾಗಿದೆ. "ಹೆಚ್ಚಾಗಿ ಅಂಶತಃ, ಕೆಲವೊಮ್ಮೆ ಪೂರ್ತಿಯಾಗಿ ಆರ್ಥಿಕ ಉದ್ದೇಶಗಳನ್ನೇ ಗಮನದಲ್ಲಿಟ್ಟುಕೊಂಡು ಬಳಸುವ ರಾಜಕೀಯ ಸಾಧನವಾಗಿದೆ ಒಕ್ಕೂಟದ ಕಲ್ಪನೆ", ಎಂಬುದಾಗಿ ಎ. ಎಚ್. ಬರ್ಚ್ ಹೇಳಿದ್ದಾರೆ. ಆದರೆ ಆರ್ಥಿಕ ಮತ್ತು ರಾಜಕೀಯ ಉದ್ದೇಶಗಳನ್ನು ಸ್ಪಷ್ಟವಾಗಿ ವಿಂಗಡಿಸಿ ಹೇಳುವುದು ಹೇಗೆಂಬುದೇ ಒಂದು ಜಟಿಲ ಸಮಸ್ಯೆ. ರಾಜಕೀಯ ಉದ್ದೇಶಗಳ ನಿರೂಪಣೆ ಸುಲಭ. ಆದರೆ ಆರ್ಥಿಕ ಪ್ರಶ್ನೆಗಳ ವ್ಯಾಪ್ತಿ ಹೆಚ್ಚುತ್ತಿರುವುದರಿಂದ ಆರ್ಥಿಕ ಉದ್ದೇಶಗಳ ವ್ಯಾಖ್ಯೆ ಮಾಡುವುದು ಮಾತ್ರ ಕಷ್ಟದ ಕೆಲಸ. "ಒಕ್ಕೂಟ ಸರಕಾರ ಎಂಬ ಪದವನ್ನು ರಾಜಕೀಯ ಚರ್ಚೆಗಳಲ್ಲಿ ಬಹಳ ಲಘುವಾಗಿ ಬಳಸಲಾಗುತ್ತಿದೆ; ಆದರೆ ಅದರ ಸ್ಪಷ್ಟ ಹಾಗೂ ಖಚಿತ ಅರ್ಥದಲ್ಲಿ ಅದನ್ನು ಅಪರೂಪವಾಗಿ ಬಳಸಲಾಗುತ್ತಿದೆ........" ಎಂಬುದಾಗಿ ಪ್ರೊ. ಕೆ. ಸಿ. ಟ್ವಿಯರ್ಸ್ ಸತ್ಯವ್ಯಾಖ್ಯಾನಮಾಡಿದ್ದಾರೆ. ಹೇಗಿದ್ದರೂ ಒಕ್ಕೂಟರಾಜ್ಯ ಎಂಬುದರ ಅರ್ಥನಿರೂಪಣೆ ನಮಗಿಲ್ಲಿ ಮುಖ್ಯವಲ್ಲ. ಅದರ ಕಾರ್ಯ ನಮಗೆ ಪ್ರಧಾನವಾದುದು.

ಒಂದು ಒಕ್ಕೂಟದಲ್ಲಿನ ಪ್ರಾಂತೀಯ ಸರಕಾರಗಳು ಕೇಂದ್ರ ಸರಕಾರಗಳ ರಕ್ತವಾಹಿನಿಗಳಷ್ಟೇ ಅಲ್ಲ; ಒಕ್ಕೂಟದಲ್ಲಿನ ಕೇಂದ್ರ ಸರಕಾರವು ರೂಪುತಾಳಲು ಬೇಕಾದ ರಕ್ತಮಾಂಸಗಳೂ ಈ ಪ್ರಾಂತೀಯ ಸರಕಾರಗಳೇ. ಇಲ್ಲಿ ಒಬ್ಬ ನಾಗರಿಕನ ಆದಾಯದಮೇಲೆ ಎರಡು ಆರ್ಥಿಕ ವ್ಯವಸ್ಥೆಗಳು ಕಾರುಭಾರುಮಾಡುತ್ತವೆ. ಇಂಥ

ಒಕ್ಕೂಟಗಳಲ್ಲಿ ಕೇಂದ್ರ ಸರಕಾರವು ದೇಶದ ವಿಶಿಷ್ಟ ಸಮಸ್ಯೆ ಮತ್ತು ಆವಶ್ಯಕತೆಗಳಿಗನುಗುಣವಾಗಿ ಹೊಂದಾಣಿಕೆ ಮಾಡಿಕೊಳ್ಳಲು ತನ್ನ ಉಪಾಂಗಗಳನ್ನು ಸಿದ್ಧವಾಗಿಡಬೇಕಾಗುತ್ತದೆ. ಇಲ್ಲವಾದಲ್ಲಿ ಒಕ್ಕೂಟ ತನ್ನ ಕೊನೆಯನ್ನು ಕಾಣಬೇಕಾದೀತು. ಒಂದು ಒಕ್ಕೂಟದಲ್ಲಿ ಐಕ್ಯಕಾರಕ ಮತ್ತು ವಿಚ್ಛಿದ್ರಕಾರಕ ಶಕ್ತಿಗಳು ಒಟ್ಟಾಗಿಯೇ ಕಾರ್ಯನಿರತವಾಗಿರುತ್ತವೆ. ತನ್ನ ವ್ಯಾಪ್ತಿ ಮತ್ತು ಉದ್ದೇಶಗಳಲ್ಲಿ ತೀರ ಸೀಮಿತವಾಗಿದ್ದ ಪ್ರಥಮ ಶ್ರೇಣಿಯ ಒಕ್ಕೂಟಗಳ ಕಾಲ ಆಗಿಹೋಯಿತು. ಇಂದು ಒಕ್ಕೂಟಗಳ ವೈಧಾನಿಕ ಕಾರ್ಯಾಚರಣೆಯೇ ಒಂದು ಸಮಸ್ಯೆಯಾಗಿದೆ. ಇದಕ್ಕೆ ಕಾರಣ ಬದಲಾದ ಕಾಲ, ಹಾಗೂ ಪರಿವರ್ತನೆಯಾದ ರಾಜಕೀಯ ನಿಲುವು. ಆಧುನಿಕ ಒಕ್ಕೂಟಗಳ ರಾಷ್ಟ್ರೀಯ ಉದ್ದೇಶವು ಈಗ ಆರ್ಥಿಕ ಪ್ರಗತಿಯೊಂದೇ.

ಆರಂಭದಲ್ಲಿ ಕಲ್ಪಿಸಿದಂತೆ ಆಧುನಿಕ ಒಕ್ಕೂಟಗಳು ರೂಪುಗೊಂಡುದು ಆರ್ಥಿಕ ಪ್ರಗತಿಗಿಂತ ಹೆಚ್ಚಾಗಿ ರಾಜಕೀಯ ಸ್ಥಿರತೆಗಾಗಿ. ಇಂದಿನ ತಾಂತ್ರಿಕ ಪ್ರಗತಿಯು ಸಮಾಜದಮೇಲೆ ಎಂಥ ಪ್ರಭಾವ ಬೀರಿದೆಯೆಂದರೆ ಇಂದಿನ ಪ್ರಕೃತ ವಿಶ್ವದ ಬೆಳೆಯುತ್ತಿರುವ ಆವಶ್ಯಕತೆಗಳ ಕಡೆ ಗಮನ ನೀಡುವುದು ಈಗ ಅನಿವಾರ್ಯವಾಗಿದೆ. ಸತತವಾಗಿ ನಡೆಯುತ್ತಿರುವ ಕೈಗಾರಿಕೀಕರಣ, ವಿಶೇಷಜ್ಞತೆಯ ಹೆಚ್ಚಳ, ರಾಷ್ಟ್ರೀಯ ಮಟ್ಟದಲ್ಲಿ ಅರ್ಥವ್ಯವಸ್ಥೆಯ ಅನುಕಲನೆ, ಸರಕಾರದ ಚಟುವಟಿಕೆಯ ಸರ್ವವ್ಯಾಪಿ ವಿಸ್ತರಣೆ, ಆರ್ಥಿಕ ವ್ಯವಸ್ಥೆಯ ಚಾಲನೆಗಳ ಮೂಲಕ ಒಟ್ಟು ಸಂಪನ್ಮೂಲಗಳ ಹೆಚ್ಚು ಹೆಚ್ಚು ಭಾಗಗಳನ್ನು ಅನ್ಯಾನ್ಯ ಕ್ಷೇತ್ರಗಳಿಗೆ ಹೊರಳಿಸುವ ಸಾಧ್ಯತೆ, ಇವೆಲ್ಲವುಗಳೂ ಇಂಥ ಪರಿಸ್ಥಿತಿಗೆ ಕಾರಣವಾದ ಸಂಗತಿಗಳು. ಅರ್ಥವ್ಯವಸ್ಥೆಯು ಹೆಚ್ಚು ಹೆಚ್ಚು ಉತ್ಪಾದನಾಶೀಲವಾದಂತೆ ವೈಯಕ್ತಿಕ ಆದಾಯದಲ್ಲಿ ಅಸಮಾನತೆ ಕೂಡ ಹೆಚ್ಚುತ್ತಹೋಗಿದೆ. ಈ ಅಸಮಾನತೆ ವ್ಯಕ್ತಿವ್ಯಕ್ತಿಗಳ ನಡುವೆಯಷ್ಟೇ ಅಲ್ಲ, ಪ್ರದೇಶ ಪ್ರದೇಶಗಳ ನಡುವೆಯೂ ಒಕ್ಕೂಟಗಳ ಮಟ್ಟಿಗೆ ಇವೆ. ಇದರಿಂದಾಗಿ ಸಾರ್ವಜನಿಕ ಸೇವೆಗಳಿಗೆ ಕುಮ್ಮಕ್ಕು ನೀಡುವ ಸಾಮರ್ಥ್ಯವು ಒಕ್ಕೂಟಗಳಲ್ಲಿನ ರಾಜ್ಯಗಳಲ್ಲಿ ಸಮಾನವಾಗಿಲ್ಲ. ಹೀಗಾಗಿ ಆರ್ಥಿಕ ಪ್ರಗತಿಯನ್ನು ಸಾಧಿಸುವ ಕರ್ತವ್ಯ ಒಕ್ಕೂಟದ ಸರಕಾರಕ್ಕಷ್ಟೇ ಸೇರಿದ್ದಾಗಿರಬಾರದೆಂಬ ಬೇಡಿಕೆ ಬಲವಾಗುತ್ತದೆ. ತಾವು ಮಲತಾಯಿ ಧೋರಣೆಗೆ ಪಕ್ಕಾಗಿದ್ದೇವೆ, ತಮ್ಮ ನಿರ್ಣಯಗಳನ್ನು ಬದಿಗೊತ್ತಲಾಗುತ್ತಿದೆ, ಎಂಬ ಭಾವನೆಯೂ ಇತ್ತೀಚಿಗೆ ಪ್ರಾಂತ ಸರಕಾರಗಳಲ್ಲಿ ಕಾಣಬರುತ್ತಿದೆ. ಹೀಗಾಗಿ ಇಂಥ ರಾಜಕೀಯ ವ್ಯವಸ್ಥೆ ಈಗ ಕೆಲಸಕ್ಕೆ ಬಾರದ್ದು, ಒಕ್ಕೂಟದ ಕಲ್ಪನೆ ಹಳೆಯ ಕಂದಾಚಾರದ್ದು ಎಂಬ ಕಲ್ಪನೆ ಅನೇಕ ವಿದ್ವಾಂಸರಲ್ಲಿ ಈಗ ಮೂಡುತ್ತಲಿದೆ.

ಭಾರತ ಒಕ್ಕೂಟದ ಬಗ್ಗೆ ವಿಚಾರಮಾಡುವಾಗ ಇಲ್ಲಿ ಕೆಲವು ವಿಚ್ಛಿದ್ರಕಾರಕ ಶಕ್ತಿಗಳು, ಅವು ಇನ್ನೂ ಆರಂಭದ ಸ್ಥಿತಿಯಲ್ಲೇ ಇದ್ದರೂ, ಕಾರ್ಯಮಗ್ನವಾಗಿರುವುದು ನಮಗೆ ಕಂಡುಬರುತ್ತದೆ. ಅವು ಯಾವುವೆಂದರೆ, (1) ರಾಜ್ಯ ಮತ್ತು ಕೇಂದ್ರ ಸರಕಾರಗಳ ನಡುವಣ ಹಿತಾಸಕ್ತಿಗಳ ನಡುವಣ ಘರ್ಷಣೆಗಳು. (2) ತಮ್ಮ ಅವಶ್ಯಕತೆಗಳು ಏನೆಂಬುದು ತಮಗೆ ಮಾತ್ರ ತಿಳಿದಿದೆ, ಮತ್ತು ಈ ಕಾರಣದಿಂದಾಗಿ ತಮಗೆ ಹೆಚ್ಚು ಅಧಿಕಾರ ಮತ್ತು ಸಂಪನ್ಮೂಲಗಳು ಬೇಕೆಂದು ರಾಜ್ಯ ಸರಕಾರಗಳು ವಾದಿಸುತ್ತಲಿವೆ. ಒಕ್ಕೂಟವು ರಾಜಕೀಯ ಚೌಕಾಶಿಯ ಪರಿಣಾಮವಾಗಿ ಅಸ್ತಿತ್ವಕ್ಕೆ ಬಂದಂಥದ್ದಾದರೂ ಕೇಂದ್ರ ಮತ್ತು ಪ್ರಾಂತಗಳ ನಡುವೆ ಸಂಘರ್ಷ ಅನಿವಾರ್ಯವಾಗಿ ನಡೆಯುತ್ತದೆಂದೂ ಇಲ್ಲಿ ಗಮನಿಸಬೇಕು. ಈ ಹಿತಾಸಕ್ತಿಗಳ ಸಂಘರ್ಷವು ಕೇಂದ್ರ–ರಾಜ್ಯಗಳ ನಡುವಣ ರಾಜಕೀಯ ಮತ್ತು ಆಡಳಿತನಿರ್ವಾಹಕ ಸಂಬಂಧಗಳ ಇಡೀ ಸ್ವರೂಪದಮೇಲೆ ಪರಿಣಾಮ ಬೀರುವುದೆಂದೂ ತಿಳಿಯಬೇಕು.

ಈ ಭಿನ್ನಾಭಿಪ್ರಾಯಗಳಿಂದಾಗಿ, ನಮ್ಮ ಒಕ್ಕೂಟದ ಸಂವಿಧಾನದ ಕಾರ್ಯಾಚರಣೆ ಕಷ್ಟಕರವಾಗುತ್ತಿದೆ. ಯಾವ ಪಾವಿತ್ರ್ಯದ ದೃಷ್ಟಿಯಿಂದ ಅದನ್ನು ರಚಿಸಲಾಗಿತ್ತೋ ಅದು ಆಗಾಗ ಆಗುತ್ತಿರುವ ತಿದ್ದುಪಡಿ ಹಾಗೂ ಇರುವ ವಿಧಿಗಳ ಬದಲಾವಣೆಯಿಂದಾಗಿ ನಿಧಾನವಾಗಿ ನಷ್ಟವಾಗುತ್ತಿದೆ. ಆದರೆ ಜಗಿಯಾದ ಸಂವಿಧಾನದ ರಚನೆಯಾಗಬೇಕೆಂಬುದು ಇಲ್ಲಿನ ವಾದವಲ್ಲ. ಆದರೆ ತಿದ್ದುಪಡಿಗಳು ಪ್ರಗತಿಪರ ದೃಷ್ಟಿಕೋನವನ್ನು ಬೆಳೆಸುವಂಥವಾಗಬೇಕು, ಪಕ್ಷಪಾತದ ಧೋರಣೆಯದಾಗಿರಬಾರದು ಎಂಬುದಷ್ಟೇ ಗಮನಿಸಬೇಕಾದ ವಿಷಯ. ಭಾರತದ ಸಂವಿಧಾನ ಕೇಂದ್ರಕ್ಕೆ ಹೆಚ್ಚು ಅಧಿಕಾರ ನೀಡುತ್ತದೆ, ವಿಶೇಷತಃ ತೆರಿಗೆಗಳ ಸಂಗ್ರಹದ ವಿಚಾರದಲ್ಲಿ; ಮತ್ತು ಇಲ್ಲಿ ರಾಜ್ಯಗಳಿಗೆ ಸಿಗಬೇಕಾದ ತೆರಿಗೆಯಪಾಲನ್ನು ಕೇಂದ್ರವೇ ಸೆಳೆಯುತ್ತದೆ, ಎಂಬುದಾಗಿ ಈ ಸಂದರ್ಭದಲ್ಲಿ ವಾದಿಸಲಾಗುತ್ತದೆ. ಹೀಗಾಗಿ ಸ್ವಾಯತ್ತತೆಯ ಮುಸುಕಿನಲ್ಲಿ ಹೆಚ್ಚುಹೆಚ್ಚು ಅಧಿಕಾರಗಳನ್ನು ರಾಜ್ಯಗಳು ಕೇಳುತ್ತಿವೆ. ಇದು ಭಾರತದ ಒಕ್ಕೂಟದಲ್ಲಿಯಷ್ಟೇ ಕಾಣಿಸುವ ಸಂಗತಿಯಲ್ಲ; ಬೇರೆ ಒಕ್ಕೂಟಗಳಲ್ಲೂ ಅದು ಇದೆ. ಸಮಕಾಲೀನ ಒಕ್ಕೂಟಗಳಲ್ಲಿನ ಬಹುಪಾಲು ಸಮಸ್ಯೆಗಳನ್ನು ಈ ರೀತಿ ಸಂಗ್ರಹಿಸಿ ಹೇಳಬಹುದು: (1) ಕೇಂದ್ರೀಕರಣ ಬೇಕೇ ಅಥವಾ ವಿಕೇಂದ್ರೀಕರಣವಾಗಬೇಕೆ? (2) ಇಂಥ ಪರಿವರ್ತನೆಗಳು ಕಾರ್ಯಸಾಧ್ಯವೇ? (3) ಇಂಥ ಬದಲಾವಣೆಗಳ ಫಲಿತಾಂಶವೇನು?

ಇಂದಿನ ಒಕ್ಕೂಟಗಳಲ್ಲಿನ ಬಹುಪಾಲು ವಿಕೇಂದ್ರೀಕರಣದ ಕೂಗುಗಳಿಗೆಲ್ಲ ಕೇಂದ್ರ ಮತ್ತು ರಾಜ್ಯಗಳ ನಡುವೆ ಸಂಪನ್ಮೂಲಗಳ ವಿತರಣೆಯ ಪ್ರಶ್ನೆಯೇ ಆಧಾರ. ಹೆಚ್ಚು ಆದಾಯ ನೀಡುವ ತೆರಿಗೆಗಳ ಸಂಗ್ರಹಣಾಧಿಕಾರವನ್ನು ಕೇಂದ್ರವೇ ಇರಿಸಿಕೊಂಡು ರಾಜ್ಯಗಳನ್ನು ಆರ್ಥಿಕ ನೆರವಿಗಾಗಿ ಕೇಂದ್ರದ ಕೃಪಾದೃಷ್ಟಿಯಲ್ಲಿ

ಇಟ್ಟಿರುವುದೇ ಇಂದಿನ ಸಮಸ್ಯೆಗಳಿಗೆ ಮೂಲ. ಹಳೆಯ ಒಕ್ಕೂಟರಾಜ್ಯಗಳಲ್ಲಿ ಒಂದು ಭದ್ರ ರಕ್ಷಣಾವ್ಯವಸ್ಥೆಯ ಸ್ಥಾಪನೆ ಹಾಗೂ ಕೆಲವೊಂದು ರಾಷ್ಟ್ರೀಯ ಮಹತ್ವದ ಯೋಜನೆಗಳ (ಉದಾ : ಹೆದ್ದಾರಿಗಳು, ರೈಲುದಾರಿಗಳು, ಇತ್ಯಾದಿ) ಕಾರ್ಯಾಚರಣೆ ಇದೇ ಕೇಂದ್ರದ ಕೆಲಸಗಳಾಗಿ ಭಾವಿಸಲಾಗಿದ್ದು ಅದರಂತೆ ಕೇಂದ್ರ – ರಾಜ್ಯಗಳ ನಡುವಣ ಸಂಬಂಧಗಳನ್ನು ಹೊಂದಿಸಲಾಗಿತ್ತು. ಕೇಂದ್ರ ಸರಕಾರದ ಮಿತಿ ಆದಾಯವನ್ನು ಸೇನಾವೆಚ್ಚಗಳಂಥ ಅಂಶಗಳಿಗಾಗಿ ಸುರಿಯಲಾಗುತ್ತಿತ್ತು. ಹಳೆಯಕಾಲದ ಅರ್ಥತಜ್ಞರ ಅಭಿಪ್ರಾಯಗಳಂತೆ, ಸೀಮಿತ ಕರಾಕರಣೆಯ ತತ್ವಕ್ಕನು ಗುಣವಾಗಿ ಸ್ಥಾಪಿತವಾದ ಹಳೆಯ ಒಕ್ಕೂಟಗಳ ಧ್ಯೇಯಾದರ್ಶಗಳಿಗೆ ಇದೆಲ್ಲ ಹೊಂದಿಕೆಯಾಗುವಂತಿತ್ತು. ಹೆಚ್ಚಿನ ತೆರಿಗೆಗಳೆಂದರೆ "ಬೆಳೆಯನ್ನು ನಾಶಮಾಡುವ ಆಲಿಕಲ್ಲ ಮಳೆ" ಎಂಬುದು ಅಂದಿನ ನಂಬುಗೆಯಾಗಿತ್ತು. ಜೆ. ಬಿ. ಸೇ. ಮತ್ತು ರಿಕಾರ್ಡೋ ಇದೇ ವಿಚಾರ ಪ್ರತಿಪಾದಿಸುತ್ತಿದ್ದರು. ಆದರೆ ಈಗ ಇಂಥ ವಿಚಾರಗಳಿಗೆ ಬೆಲೆಯಿಲ್ಲ.

ಹಿಂದಣ ಒಕ್ಕೂಟರಾಜ್ಯಗಳ ಸ್ಥಾಪನೆಗೆ ಕಾರಣವಾದ ಕಲ್ಪನೆ ಮತ್ತು ಆದರ್ಶ ಗಳನ್ನೇ ಹೊಸ ಒಕ್ಕೂಟಗಳೂ ಯಥಾವತ್ತಾಗಿ ಅನುಸರಿಸಿದ್ದೇ ಇಂದಿನ ಒಕ್ಕೂಟಗಳ ಪ್ರಮುಖ ದೋಷ. ಇಂದಿನ ಒಕ್ಕೂಟಗಳ ಸಂವಿಧಾನಗಳನ್ನು ಓದಿದಾಗ ಈ ದೋಷ ಮನದಟ್ಟಾಗುತ್ತದೆ. ಭಾರತದ ಮಟ್ಟಿಗೂ ಈ ಮಾತು ನಿಜ. ಬದಲಾದ ಕಾಲವು ಹೇರುವ ಕಟ್ಟುಪಾಡುಗಳನ್ನೂ ಒಕ್ಕೂಟದಲ್ಲಿ ಹೊಸದಾಗಿ ಬೆಳೆಯುವ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಗಳನ್ನೂ ಸಂವಿಧಾನ ನಿರ್ಮಾಪಕರು ಮುಂಗಾಣದಿರು ವುದನ್ನು ಇದು ಸೂಚಿಸುತ್ತದೆ. ವೈವಿಧ್ಯಮಯ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಗಳುಳ್ಳ ಈ ಒಕ್ಕೂಟಗಳು ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಹಾಗೂ ತಮ್ಮ ಆರ್ಥಿಕ ಪ್ರಗತಿಯ ವೇಗವನ್ನು ವರ್ಧಿಸಲು ಒಂದಲ್ಲ ಒಂದು ವಿಧದ ಸರಕಾರೀ ಯೋಜನೆಗಳನ್ನು ಕೈಗೊಂಡಿವೆ. ಆದರೆ ಅತ್ಯಂತ ವಿವೇಚನಾಯುಕ್ತ ಗಣನೆಗಳಿಂದ ಉಪಲಬ್ಧ ಸಂಪನ್ಮೂಲಗಳನ್ನು ವಿತರಣೆ ಮಾಡುವುದು ಯೋಜನೆಗಳನ್ನು ರೂಪಿಸುವಲ್ಲಿ ಅತ್ಯವಶ್ಯವಾಗಿದೆ. ಆದರೆ ಹಾಗೆ ಮಾಡುವುದು ನಂಬಿದಷ್ಟು ಸುಲಭವಲ್ಲ. ಇದರಿಂದಾಗಿಯೇ ಆಧುನಿಕ ಒಕ್ಕೂಟಗಳ ಸರ್ವಾಂಗೀಣ ಆರ್ಥಿಕ ಪ್ರಗತಿಗೆ ಬಾಧಕವಾಗುವಂತಹ ಅನೇಕ ಎಡರುಗಳು ಎದುರಾಗಿವೆ. ಇದರ ಉತ್ತಮ ಉದಾಹರಣೆ ಭಾರತ ಒಕ್ಕೂಟವೇ.

ಇಂಥ ಪರಿಸ್ಥಿತಿಯಲ್ಲಿ ಕೇಂದ್ರದಲ್ಲಿ ಹಳೆಯ ಪದ್ಧತಿಯ ಅಧಿಕಾರಿಗಳನ್ನು ನಿಕ್ಷೇಪಿಸಬೇಕೆ ಅಥವಾ ಈ ಅಧಿಕಾರಗಳ ವಿಕೇಂದ್ರೀಕರಣವಾಗಬೇಕೆ, ಎಂಬುದು ಈಗ ಪರಿಶೀಲಿಸಬೇಕಾದ ವಿಷಯ. ಇಂಥ ಕೇಂದ್ರೀಕರಣ ಅಥವಾ ವಿಕೇಂದ್ರೀ ಕರಣದ ಫಲಿತಾಂಶವೇನೆಂಬುದೂ ಪರಿಶೀಲನೀಯವಾದ ಸಂಗತಿ. ರಾಜ್ಯಗಳ

ಸಂಪನ್ಮೂಲಗಳಿಂದ ಅತ್ಯಧಿಕ ತೆರಿಗೆಗಳನ್ನು ಸಂಗ್ರಹಿಸುವ ಅಧಿಕಾರ ಕೇಂದ್ರಕ್ಕೆ ಇರಬೇಕೇ, ಎಂಬುದೇ ಸಾಮಾನ್ಯ ಮನುಷ್ಯನಿಗೆ ಈ ಸಂದರ್ಭದಲ್ಲಿ ಎದುರಾಗುವ ಮೊದಲ ಪ್ರಶ್ನೆ. ಈ ಸಂಗ್ರಹಣ ಕಾರ್ಯವನ್ನು ರಾಜ್ಯಗಳಿಗೇ ಕೊಟ್ಟು ರಾಜ್ಯಗಳು ತಮ್ಮ ಒಟ್ಟು ಆದಾಯದ ಕೆಲವೊಂದು ಭಾಗಗಳನ್ನು ಕೇಂದ್ರದ ರಾಷ್ಟ್ರೀಯ ಏಕೀಕೃತ ನಿಧಿಗೆ ಕೊಡುವಂತಾಗಬಾರದೇ ಎಂಬುದು ಒಂದು ಪ್ರಶ್ನೆ. ಆದರೆ ಈ ವಾದಗಳನ್ನು ಅವುಗಳ ತಾರ್ಕಿಕ ಮಿತಿಗಳಲ್ಲಿಯೇ ವಿಸ್ತರಿಸಿದಲ್ಲಿ ಅವು ಒಕ್ಕೂಟದ ಅಭಿಪ್ರಾಯವನ್ನೇ ಸಡಿಲಿಸಬಹುದು. ಏನೆಂದರೆ, ಪ್ರಾದೇಶಿಕ ಅಸಮತೋಲನಕ್ಕೆ ಮೇಲೆ ಹೇಳಿದ ಸಂಗತಿಗಳೇ ಕಾರಣವೇ ಅಥವಾ ಗುಪ್ತವಾದ ಹಾಗೂ ಮೂಲ ಭೂತವಾದ ಯಾವುದಾದರೂ ಸಂಗತಿಗಳು ಆರ್ಥಿಕ ಪ್ರಗತಿಯ ತಡೆಗೆ ಕಾರಣವಾಗಿರ ಬಹುದೇ ಎಂದೂ ಇಲ್ಲಿ ಪರಿಶೀಲಿಸಬೇಕು. ಆರ್ಥಿಕ ದಕ್ಷತೆ ಹಾಗೂ ರಾಷ್ಟ್ರೀಯ ಕಲ್ಯಾಣವನ್ನು ಗಮನಿಸಿ ಇಲ್ಲಿ ನಿಷ್ಪಕ್ಷಪಾತ ದೃಷ್ಟಿಯ ವಿಶ್ಲೇಷಣೆ ಆಗುವುದು ಅವಶ್ಯ.

ಇತ್ತೀಚಿಗಿನ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಜಟಿಲತೆಗಳ ಬೆಳಕಿನಲ್ಲಿ ಕೇಂದ್ರ ಸರಕಾರದ ಮೇಲೆ ಬಿದ್ದಿರುವ ಭಾರಿ ಜವಾಬ್ದಾರಿಗಳನ್ನೂ ಪ್ರಾದೇಶಿಕ ಆಡಳಿತಗಳು ಇಲ್ಲಿ ಗಮನಿಸಬೇಕು. ಅಭದ್ರ ಆರ್ಥಿಕ ತಳಹದಿಯ ಮೇಲೆ ಇಂತ ಒಂದು ಭದ್ರ ಕೇಂದ್ರ ಸರಕಾರವನ್ನು, ಅದೂ ಸಹ ಇಂದಿನ ಯೋಜನಾಯುಗದಲ್ಲಿ, ಊಹಿಸಲು ಬಾರದು. ಅರ್ಥ ಶಕ್ತಿಯು ಕೇಂದ್ರದ ಆಯುಧವಷ್ಟೇ ಅಲ್ಲ, ಒಕ್ಕೂಟ ಸರಕಾರದ ಒಂದು ಪ್ರಮುಖ ಸಂಪರ್ಕದ ಕೊಂಡಿಯೂ ಹೌದು. ಕೆಲವೊಂದು ಪ್ರಸಂಗಗಳಲ್ಲಿ ರಾಜ್ಯಗಳನ್ನು ಬದಿಗೆ ಸರಿಸುವ ಅಧಿಕಾರ ಕೇಂದ್ರಕ್ಕಿರಬಹುದು. ಆದರೆ ಒಕ್ಕೂಟ ಸರಕಾರವಿರುವಲ್ಲಿ ರಾಜ್ಯ ಸರಕಾರಗಳ ಧೋರಣೆಗಳಿಗೆ ಒಂದು ರಾಷ್ಟ್ರೀಯ ದೃಷ್ಟಿಯಿರುವುದು ಅತ್ಯವಶ್ಯ. ಹೀಗಾಗಿ ತನ್ನನ್ನು ಶಕ್ತಿಶಾಲಿಯಾಗಿ ಹಾಗೂ ಭದ್ರವಾಗಿ ಇಟ್ಟುಕೊಳ್ಳುವಂಥ ಕೆಲವೊಂದು ಅಧಿಕಾರಗಳು ಕೇಂದ್ರಕ್ಕಿರುವುದು ಸ್ಪಷ್ಟ. ಹೆಚ್ಚು ಹೆಚ್ಚು ಆರ್ಥಿಕ ಬೇಡಿಕೆಗಳನ್ನು ರಾಜ್ಯಗಳು ಕೇಂದ್ರದ ಮುಂದೆ ಇಡುತ್ತ ಹೋದಲ್ಲಿ ಆರ್ಥಿಕ ಸ್ವಾಯತ್ತತೆಯು ನಷ್ಟವಾಗಬಹುದೆಂಬುದನ್ನೂ ರಾಜ್ಯ ಸರಕಾರಗಳು ಗಮನಿಸುವುದು ಒಳಿತು. ಹಾಗಾದರೆ ಕೇಂದ್ರ ಸರಕಾರದ ಕೃತಿಗಳಿಂದ ಕಾಣಿಸಿಕೊಳ್ಳುವ ಆರ್ಥಿಕ ಅನ್ಯಾಯಗಳನ್ನು ಸರಿಪಡಿಸುವುದು ಹೇಗೆ, ಎಂಬುದಾಗಿ ರಾಜ್ಯಗಳ ಸ್ವಾಯತ್ತತೆಯ ಬೆಂಬಲಿಗರು ಪ್ರಶ್ನಿಸಬಹುದು. ಎಲ್ಲ ರಾಜ್ಯಗಳೂ ತಮಗೆ ಬೇಕಾಗುವ ಸಂಪನ್ಮೂಲ ಗಳನ್ನು ಹೊಂದುವ ಹಾಗೂ ಬೇಕಾದುದನ್ನೆಲ್ಲವನ್ನೂ ಪಡೆಯುವ ವರವನ್ನು ಹೊಂದಿಲ್ಲವೆಂಬ ಸತ್ಯ ಸಂಗತಿಯನ್ನು ನಾವು ಇಲ್ಲಿ ಗಮನಿಸಬೇಕು. ಆದುದರಿಂದ, ರಾಜ್ಯಗಳಿಗೆ ಹೆಚ್ಚಿನ ಆರ್ಥಿಕ ಸ್ವಾಯತ್ತತೆ ನೀಡುವುದು ಇತರ ಪ್ರದೇಶಗಳಲ್ಲಿ

ಆರ್ಥಿಕ ಅರಾಜಕತೆಗೆ ಹಾದಿಮಾಡಿಕೊಡುವುದಲ್ಲದೆ ಇನ್ನೇನೂ ಅಲ್ಲ. ಇದರಿಂದ ಎಲ್ಲ ಆಧುನಿಕ ಸರಕಾರಗಳ ಪ್ರಥಮ ಗುರಿಯಾದ ಕಲ್ಯಾಣಕಾರಿ ಸಮಾಜ ರಚನೆಯ ಸಾಧನೆಗೆ ಇದರಿಂದ ಅಪಾಯ ಉಂಟಾಗಬಹುದು. ಒಕ್ಕೂಟಗಳ ಅಸಮರ್ಪಕ ಆರ್ಥಿಕ ಬೆಳವಣಿಗೆಯನ್ನು ಪರಿಪರಿಸಬಲ್ಲ ಏಕಮಾತ್ರ ಸಿದ್ಧೌಷಧ ಯಾವುದು ? ಈಗಿರುವ ವಿತ್ತೀಯ ಆಯೋಗಕ್ಕೂ ಹೆಚ್ಚು ಯೋಗ್ಯವಾದ ಇನ್ನೊಂದು ಆಯೋಗದ ರಚನೆಯ ಬಗ್ಗೆ ನಾವು ಯೋಚಿಸಬಹುದೆ? ಅಥವಾ ರಾಜ್ಯಗಳಲ್ಲಿ ಸಂಪನ್ಮೂಲಗಳ ವಿತರಣೆ ಮಾಡಬಲ್ಲ ಬೇರೊಂದು ವಿಧಾನವನ್ನು ನಾವು ರೂಪಿಸಬಹುದೆ? ಈ ಕೆಲವು ಪ್ರಶ್ನೆಗಳು ರಾಜನೀತಿಜ್ಞರನ್ನೂ ಶಿಕ್ಷಣ ತಜ್ಞರನ್ನೂ ಕಾಡುತ್ತಲಿವೆ.

ಮೇಲಣ ಸಮಸ್ಯೆಗಳ ಪರಿಹಾರದ ಪರ ಅಥವಾ ವಿರುದ್ಧ ಹೂಡಲಾದ ವಾದಗಳು ಒಕ್ಕೂಟ ರಾಜ್ಯದ ಆರ್ಥಿಕ ಪ್ರಗತಿಯು ಇತ್ತೀಚೆಗಿನ ಪರಿಸ್ಥಿತಿಗಳಿಗೆ ಸಂಬಂಧಿಸಿದವುಗಳಾಗಿ ಇರಲಾರವು. ಸಂಪನ್ಮೂಲಗಳ ವಿತರಣೆಯ ರೂಪ ಮತ್ತು ವಿಧಾನಗಳು ಯಾವುದೇ ಆಗಿದ್ದರೂ ಹಾಗೂ ಆ ಬಗ್ಗೆ ರಚಿಸುವ ಕಟ್ಟುನಿಟ್ಟಿನ ನಿಯಮಗಳು ಎಂಥವೇ ಆದರೂ ಕಣ್ಣುತಪ್ಪಿಸುವ ಅವಕಾಶಗಳು ಇದ್ದೇ ಇರುತ್ತವೆ; ಹಾಗೂ ತಾಂತ್ರಿಕರು ಇಂಥ ಪರಿಸ್ಥಿತಿಯ ಲಾಭಪಡೆಯಲು ಎಂದಿಗೂ ಹಿಂಜರಿಯರು. ಒಂದು ಒಕ್ಕೂಟದ ನಿಲುವಿನಲ್ಲಿ ಪರಿವರ್ತನೆ ತರಬಲ್ಲ ಹಾಗೂ ಕೇಂದ್ರ–ರಾಜ್ಯಗಳ ಸಂಬಂಧವನ್ನು ಒಂದು ಸುಸಂಬದ್ಧ ಸಮನ್ವಯಕ್ಕೆ ತರಬಲ್ಲ ಬೇರೆ ಮಾರ್ಗವೇ ಇಲ್ಲವೆಂದು ಇದರ ಅರ್ಥವಲ್ಲ. ಪ್ರತಿಯೊಂದು ಒಕ್ಕೂಟದ ಅವಶ್ಯಕತೆಗಳಿಗನುವಾಗಿ ಅಪೇಕ್ಷಿತ ಬದಲಾವಣೆಗಳನ್ನು ಕಾರ್ಯಾಚರಣೆಗೆ ತರುವುದರಲ್ಲಿಯೇ ಪರಿಹಾರಮಾರ್ಗವಿರುವುದು. ಆದರೆ ಈ ಪರಿಹಾರವನ್ನು ಹುಡುಕುವಾಗ "ಅರ್ಥ ಮಾಡಿಕೊಳ್ಳುವ ಮತ್ತು ಹೊಂದಿಕೊಳ್ಳುವ," ಹಾಗೂ ಇಂಥ ಕೆಲವು ಮೂಲ ಸೂತ್ರಗಳನ್ನು ಗಮನಿಸಲೇಬೇಕು. ಕೇಂದ್ರ ಹಾಗೂ ರಾಜ್ಯಗಳ ನಡುವೆ ಪರಸ್ಪರ ತಿಳುವಳಿಕೆ ಮತ್ತು ಹೊಂದಾಣಿಕೆ ಮೂಡಿಸಲು ಸಂವಿಧಾನದ ವಿನಾ ಇನ್ನಾವುದೇ ವ್ಯವಸ್ಥೆ ಇದ್ದಂತಿಲ್ಲ. ವೈಧಾನಿಕ ಮಾರ್ಗಗಳೇ ಕೇಂದ್ರದ ಶಕ್ತಿಯನ್ನು ವರ್ಧಿಸುವ ಹಾಗೂ ಘಟಕಗಳ ಸ್ಥಿತಿಯನ್ನು ಸುಧಾರಿಸಲು ಇರುವ ಸಾಧನಗಳು. ಒಂದು ಒಕ್ಕೂಟದಲ್ಲಿ ರಾಜಕೀಯ ಸಂಗತಿಗಳಿಗಿಂತ ಹೆಚ್ಚಾಗಿ ಆರ್ಥಿಕ ಸಂಗತಿಗಳನ್ನು ಗಮನಿಸುವುದು ಅವಶ್ಯವೆಂಬುದು ಮಾತ್ರ ಮನವರಿಕೆ ಮಾಡಿಕೊಳ್ಳಬೇಕಾದ ಸಂಗತಿ.

# ಮುಟ್ಟುನಿಲ್ಲುವಿಕೆ

**ಕೆ. ಎಸ್. ಷಡಕ್ಷರಪ್ಪ**

ನೀವು ಇಂದು ಮುಟ್ಟುನಿಲ್ಲುವಿಕೆಯ ಹಂತ ತಲುಪಿದ್ದಲ್ಲಿ, ನಿಮ್ಮ ತಾಯಂದಿರು ನಿಮ್ಮ ವಯಸ್ಸಿನಲ್ಲಿದ್ದಾಗ ಅನುಭವಿಸಿದ್ದ ಪರಿಸ್ಥಿತಿಗಳನ್ನು ನೆನೆದರೆ ನೀವು ಅದೃಷ್ಟಶಾಲಿಗಳೆನ್ನಬಹುದು. ಜೀವನದ ಈ ಹಂತದಲ್ಲಿ ಆಗಾಗ್ಗೆ ಉದ್ಭವಿಸುವ ಮಾನಸಿಕ ಹಾಗೂ ಭಾವನಿಕ ಸಮಸ್ಯೆಗಳನ್ನು ಈಗ ಎಷ್ಟೋ ಚೆನ್ನಾಗಿ ಅರ್ಥ ಮಾಡಿಕೊಳ್ಳಲಾಗುತ್ತಿದೆಯಲ್ಲದೆ ಅವುಗಳನ್ನು ಎದುರಿಸುವ ರೀತಿಗಳೂ ಬದಲಾಗುತ್ತಿವೆ ಉತ್ತಮವಾಗುತ್ತಿವೆ. ವೈದ್ಯರು ಆಗ ಕಾಣಿಸಿಕೊಳ್ಳುವ ದೈಹಿಕ ಬದಲಾವಣೆಗಳನ್ನು ಕೂಲಂಕಷವಾಗಿ ಅಭ್ಯಸಿಸಿ ಅವುಗಳಿಗೆ ಯಶಸ್ವಿ ಚಿಕಿತ್ಸೆಗಳನ್ನು ನೀಡುತ್ತಿದ್ದಾರೆ. ಇಷ್ಟೇ ಅಲ್ಲ, ಒಬ್ಬ ವ್ಯಕ್ತಿಯಾಗಿ ನೀವು ಎಂದಿಗಿಂತ ಹೆಚ್ಚು ಪ್ರಶಂಸೆಗೆ ಅರ್ಹರಾಗಿದ್ದೀರಿ. ನಿಮ್ಮ ಒಟ್ಟು ಸಂಖ್ಯೆಯೇ ಸ್ತ್ರೀಯರ ಮೂರನೇ ಒಂದು ಭಾಗದಷ್ಟಿದೆಯಲ್ಲದೆ ನೀವು ಇನ್ನೂ 20–30 ವರ್ಷಗಳ ಪೂರ್ಣ ಬದುಕು ಬಾಳುವವರಿದ್ದೀರಿ. ಈ ಆಧಾರಗಳ ಮೇಲೆ ನಿಮ್ಮನ್ನು "Tap ಮಾಡು ಬಯಸುವ ಸಹಜ ಸಾಧನೆ" ಮತ್ತು 'ಭರವಸೆ ಇಡಬೇಕಾದ ಶಕ್ತಿ' ಎಂದು ಕರೆಯುವುದು ತಪ್ಪಲ್ಲ. ಇಷ್ಟರಿಂದಾಗಿ ಮುಟ್ಟುನಿಲ್ಲುವಿಕೆ ಎಂದರೆ ಎಲ್ಲದರ ಮುಕ್ತಾಯವಲ್ಲವೆಂದು ಸ್ಪಷ್ಟವಾಗುತ್ತದೆ.

ಭಯ, ಅಜ್ಞಾನ ಮತ್ತು ಆತಂಕ ಇವು ಕೆಲವೇ ಕಾಲದ ಹಿಂದೆ ಮುಟ್ಟು ನಿಲ್ಲುವಿಕೆಗೆ ಇದ್ದ ಪ್ರತಿಕ್ರಿಯೆ. ಸ್ತ್ರೀಯರಿಗೆ ಅದರ ಕಲ್ಪನೆಯೆಂದರೆ ನರಳುವುದು ; ಅನೇಕರು ನರಳಿದ್ದೂ ಉಂಟು. ಅವರು ಇದೇ ಜೀವನದ ಅಂತ್ಯ ಎಂದು ಭಾವಿಸಿದರು. ಅನೇಕ ಬಾರಿ ಹಾಗಾಗಿದ್ದರೂ ಅದಕ್ಕೆ ಕಾರಣ ಆ ಕಾಲದಲ್ಲಿ ಜನ ಅಷ್ಟು ಕಾಲ ಬಾಳುತ್ತಿರಲಿಲ್ಲ. ಇನ್ನು ಕೆಲವರು ತಾವು ಮತಿಭ್ರಾಂತಿ ಹೊಂದುತ್ತಿದ್ದೇವೆಂದು ಭಾವಿಸಿದ್ದರು. ಯಾರಿಗೂ ಹಾಗೆ ಆಗದಿದ್ದರೂ ಹಾಗೆ ಆದವರಿಗಂತೂ ಅದಕ್ಕೆ ಮುಟ್ಟುನಿಲ್ಲುವಿಕೆ ಕಾರಣವಾಗಿರಲಿಲ್ಲ. ಡಾಕ್ಟರಗಳೂ ಸೇರಿದಂತೆ ಎಲ್ಲರೂ ಅದನ್ನು ಒಂದು ಸಹಜ ಪರಿಸ್ಥಿತಿಯೆಂದು ಸರಿಯಾಗಿಯೇ ಭಾವಿಸಿದ್ದರು. ಆದರೆ ಅದು ಸಹಿಸಬೇಕಾದ ಒಂದು ವಿಪತ್ತು ಎಂಬ ಅವರ ಭಾವನೆ ತಪ್ಪಾಗಿತ್ತು.

ಮುಟ್ಟುನಿಲ್ಲುವ ಸಮಯದಲ್ಲಿ ನಿಯಮಾನುಸಾರ ಸಮಾಧಾನ ಅಗತ್ಯ. ತಮ್ಮ ಮಧ್ಯವಯಸ್ಸು ಮತ್ತು ನಂತರದ ಅನೇಕ ವರ್ಷಗಳನ್ನು ಸಂತೋಷದಿಂದ

ಅನುಭವಿಸಲು ಸ್ತ್ರೀಯರು ಬಯಸುತ್ತಾರೆ. ಆ ರೀತಿಯೇ ಬದುಕಲು ಅವಶ್ಯವಿದ್ದಲ್ಲಿ ಔಷಧಿ ಅವರಿಗೆ ನೆರವು ನೀಡುತ್ತದೆ. ಇವೆಲ್ಲಕ್ಕಿಂತ ನಿಮ್ಮ ತಿಳುವಳಿಕೆ ಮತ್ತು ನಿಮ್ಮ ಧೋರಣೆಗಳು ಉತ್ತಮ ಮಾನಸಿಕ ಹಾಗೂ ದೈಹಿಕ ಆರೋಗ್ಯ ಕಾಪಾಡಲು ಅತ್ಯಗತ್ಯ. ಈ ಮಾತ್ರಕ್ಕೆ ದೈಹಿಕ ಅಥವಾ ಭಾವಸಿಕ ಅಥವಾ ಅವೆರಡರ ಮಿಶ್ರಣದ ಆತಂಕಕಾರಿಯಾದ ಮತ್ತು ತೀವ್ರತರ ಪರಿಣಾಮಗಳನ್ನು ಮುಟ್ಟುನಿಲ್ಲುವಿಕೆ ಉಂಟು ಮಾಡಬಲ್ಲದೆಂಬ ಸಂಗತಿಯನ್ನು ಅಲ್ಲಗಳೆಯುವಂತಿಲ್ಲ. ಈ ಅವಧಿ ಜೀವನದ ಒಂದು ಸೂಕ್ಷ್ಮ ಹಾಗೂ ಸಂಕೀರ್ಣ ಘಟ್ಟವಾದುದರಿಂದ ನಡೆಯುವುದನ್ನು ಸಂಪೂರ್ಣ ಅರ್ಥ ಮಾಡಿಕೊಳ್ಳುವುದೇ ಅದನ್ನು ಸುಲಭವಾಗಿ ದಾಟುವುದ ಪ್ರಥಮ ಹಂತ.

ಸ್ತ್ರೀ ಹಾರ್ಮೋನುಗಳ ಕ್ಷೀಣಿಸುವಿಕೆ ಮತ್ತು ಹರಿಯುವಿಕೆಯಿಂದ ಪ್ರಚೋದಿತವಾದ ದೈಹಿಕ ಬದಲಾವಣೆಗಳನ್ನು ಸ್ತ್ರೀಯರು ಅನುಭವಿಸುತ್ತಾರೆ. ಒಂದು ಹೆಣ್ಣು ಮಗು ಹುಟ್ಟುವಾಗಲೇ ತನ್ನಂತಹ ಮಕ್ಕಳ ಜನನಕ್ಕೆ ಕಾರಣವಾಗುವಂತಹ ಎಲ್ಲ ದೈಹಿಕ ಸಾಧನಗಳನ್ನು ಪಡೆದಿರುತ್ತದೆ. ಅನೇಕ ಸಾವಿರ ಸೆಲೆಗಳ ಎರಡು ಚಿಕ್ಕ ಅಂಡಾಶಯ—ಅವುಗಳಲ್ಲಿ ಕೆಲವು ನೂರುಗಳು ಮಾತ್ರ ಪ್ಯೂಬರ್ಟಿ ಘಟ್ಟದ ನಂತರದಲ್ಲಿ ಅಂಡಾಣುಗಳಾಗುತ್ತವೆ. ಕ್ರಮೇಣ ವೃದ್ಧಿ ಹೊಂದುವ ಅಂಡಾಣು ಸಾಮಾನ್ಯವಾಗಿ ಒಂದೊಂದಾಗಿ ನಿಷೇಚನಕ್ಕಾಗಿ ಅಥವಾ ಋತುಸ್ರಾವದಲ್ಲಿ ಹೊರ ಹಾಕಲ್ಪಡುತ್ತವೆ.

ಇದಕ್ಕೂ ಪೂರ್ವದಲ್ಲಿ ಸುಮಾರಿಗೆ ಎಂಟನೇ ವಯಸ್ಸಿನ ಅಂಡಾಶಯಗಳು ತಮ್ಮ ಹೆಣ್ಣು ಪ್ರಕ್ರಿಯೆಗಳಲ್ಲಿ ಕೆಲವನ್ನಾಗಲೇ ಪ್ರಾರಂಭಿಸಿರುತ್ತವೆ. ಸ್ತ್ರೀತ್ವದೆಡೆಗೆ ಬೆಳೆಯಲು ದೈಹಿಕ ಬೆಳವಣಿಗೆಯಲ್ಲಿ ನೆರವಾಗುವ ಎಸ್ಟ್ರೋಜಿನ್‌ನ ಅಲ್ಪ ಪ್ರಮಾಣದ ಉತ್ಪತ್ತಿಯಲ್ಲಿ ಅವು ತೊಡಗಿರುತ್ತವೆ. ಪಿಟ್ಯೂಟರಿ ಎಂಬ ಇಡೀ ಎಂಡೋಕ್ರೈನ ವ್ಯವಸ್ಥೆಯ ಮುಖ್ಯಗ್ರಂಥಿಯು ಅಂಡಾಶಯಗಳನ್ನು ತೀವ್ರವಾಗಿ ಪ್ರಚೋದಿಸುವ ಹಾರ್ಮೋನನ್ನು ಉತ್ಪಾದಿಸುತ್ತದೆ. ಆ ಪರಿಣಾಮದ ಎಸ್ಟ್ರೋಜಿನ್ ಉತ್ಪಾದನೆಯು ಹುಡುಗಿಯ ದೇಹ ಸೌಷ್ಠವಕ್ಕೆ, ಎದೆಯ ಬೆಳವಣಿಗೆಗೆ, ಸೊಂಟದ ಸುತ್ತಳತೆ ಹೆಚ್ಚಲು ಮತ್ತು 11 ರಿಂದ 15 ($13\frac{1}{2}$) ವರ್ಷಗಳ ಮಧ್ಯದಲ್ಲಿ ಋತುಸ್ರಾವ ಪ್ರಾರಂಭವಾಗುವವರೆಗೆ ಆಕೆಯ ಜೆನೈಟಲ್ ಅಂಗಗಳ ಬೆಳವಣಿಗೆಗೆ ಕಾರಣವಾಗುತ್ತದೆ.

ಈ ಪ್ರಕ್ರಿಯೆ ಜಟಿಲವಾದುದರಿಂದ ಸ್ಥೂಲವಾಗಿ ಅದನ್ನು ಈ ರೀತಿ ತಿಳಿಸಬಹುದು. ಋತುಸ್ರಾವ ವರ್ತುಲದ ಮಧ್ಯಕಾಲದಲ್ಲಿ ಅಂಡಾಶಯದ ಎಸ್ಟ್ರೋಜಿನ್, ಪಿಟ್ಯೂಟರಿ ಗ್ರಂಥಿಯಿಂದ ಪ್ರಚೋದಿತವಾಗಿ ಎಗೆಸೆಲ್ ಹೊಂದಿರುವ ಒಂದು ವಿಶೇಷ ಚೀಲದಿಂದ ಅಸೆಲ್ ಅನ್ನು ಹೊರಹಾಕಲು ಕಾರಣವಾಗುವವರೆಗೆ ಹೆಚ್ಚುತ್ತಾ ಹೋಗುತ್ತದೆ. ಆ ಖಾಲಿ ಚೀಲ ಈಗತಾನೇ ಪಿಟ್ಯೂಟರಿ ಪ್ರಚೋದನೆ

ಹೊಂದಿ progesterone ಎನ್ನುವ ತನ್ನದೇ ಹಾರ್ಮೋನ್ ಉತ್ಪಾದಿಸುವ corpusluteum ಎಂಬ ಒಂದು ಹಳದಿ ಪದಾರ್ಥದಿಂದ ತುಂಬಿಕೊಳ್ಳುತ್ತದೆ. ಪಿಟ್ಯೂಟರಿಯು ಕ್ಷೀಣವಾದಾಗ ಅಂಡಾಶಯದ ಎಸ್ಟ್ರೋಜೆನ್ ಕಾರ್ಯ ತೀವ್ರವಾಗುತ್ತದೆ. ಅಂಡಾಶಯದ ಎಸ್ಟ್ರೋಜೆನ್ Progesterone ನೊಂದಿಗೆ ಸೇರಿ ಗರ್ಭಾಶಯದ ಒಳ ಆವರಣ ದಪ್ಪವಾಗಲು ಮತ್ತು ರಕ್ತಭರಿತವಾಗಲು ಕಾರಣ ವಾಗುತ್ತದೆ. ನಿಷೇಚನ ಹೊಂದಿದ ಅಂಡವಿಲ್ಲದಿದ್ದರೆ ಅಥವಾ ಲೆವೆಲ'ಡ್ರಾಪ್ ಇಲ್ಲದಿದ್ದರೆ corpusluteum ಮತ್ತು ಗರ್ಭಾಶಯದ ದಪ್ಪವಾದ ಒಳಾವರಣವು ಹೊಂದಿಕೆ ಬಿಟ್ಟುಕೊಳ್ಳುತ್ತದೆ; ಪರಿಣಾಮವಾಗಿ ಋತುಸ್ರಾವ ಪ್ರಾರಂಭವಾಗುತ್ತದೆ. ಅದರ ಮುಕ್ತಾಯವಾಗುವಾಗ ಪಿಟ್ಯೂಟರಿ ಎಸ್ಟ್ರೋಜೆನ್ ಕಾರ್ಯ ತೀವ್ರವಾಗುತ್ತದೆ. ಅದು ಅಂಡಾಶಯಗಳನ್ನು ಪ್ರಚೋದಿಸುತ್ತದೆ. ಹೀಗೆ ಕ್ರಿಯಾಚಕ್ರ ಮತ್ತೆ ಪ್ರಾರಂಭವಾಗುತ್ತದೆ.

ಗರ್ಭಧಾರಣೆ ತನ್ನ ವಿಪರೀತ ದೈಹಿಕ ಬದಲಾವಣೆಗಳೊಂದಿಗೆ ಕ್ರಿಯಾಚಕ್ರದ ಏಕತಾನತೆಯನ್ನು ಭಂಗಗೊಳಿಸಬಹುದು. ಗರ್ಭಧರಿಸಿರುವ ಸಮಯದಲ್ಲಿ progetserone ಮತ್ತು estrogen ಮಟ್ಟಗಳು ತುತ್ತತುದಿಗೇರುತ್ತವೆ. ಗರ್ಭ ಧರಿಸುವ ವರ್ಷಗಳು ಕೊನೆಮುಟ್ಟುವಾಗ ಅನಿವಾರ್ಯವಾಗಿ ಕ್ರಿಯಾಚಕ್ರವೂ ಅಂತ್ಯಗೊಳ್ಳುತ್ತದೆ. ಕೆಲ ಸ್ತ್ರೀಯರಿಗೆ ಅದು ಇದ್ದಕಿದ್ದಂತೆ ಉಂಟಾದರೆ ಮುಕ್ಕಾಲು ಪಾಲು ಸ್ತ್ರೀಯರಿಗೆ ಕ್ರಮೇಣವಾಗಿ ಕೆಲವು ತಿಂಗಳು ಅಥವಾ ವರ್ಷಗಳ ಅವಧಿಯಲ್ಲಿ ಉಂಟಾಗುತ್ತದೆ.

ಇದನ್ನೇ ಮುಟ್ಟುನಿಲ್ಲುವಿಕೆ ಅಥವಾ ಕ್ಲೈಮ್ಯಾಕ್ಟೆರಿಕ್ ಎನ್ನುವುದು. ಇದು ಸಾಮಾನ್ಯವಾಗಿ 50 ರ ಸುಮಾರಿನಲ್ಲಿ ಸಂಭವಿಸಿದರೂ, ಕೆಲವರಿಗೆ ತಡವಾಗಿ ಅಥವಾ 35ನೇ ವಯಸ್ಸಿನಷ್ಟು ಬೇಗದಲ್ಲಿಯಾದರೂ ಆಗಬಹುದು. Ovulation ಮತ್ತು progesterone ಉತ್ಪಾದನೆ ನಿಂತುಹೋಗಿರುತ್ತದೆ. ಅಂಡಾಶಯದ estrogen ಮಟ್ಟಗಳು ಇಳಿಮುಖವಾಗಿ ಕೊನೆಯಲ್ಲಿ ನಿಲ್ಲುತ್ತ ಹೋದಂತೆ ಪಿಟ್ಯೂಟರಿ ಹೆಚ್ಚು ಕ್ರಿಯಾಶಾಲಿಯಾಗುತ್ತದೆ. ಅದು ಥೈರಾಡ್‌ನಂತಹ ಇತರ ಗ್ರಂಥಿಗಳಿಗೂ ಪ್ರಚೋದಕವಾದ್ದರಿಂದ ಚಿಂತೆ ಮತ್ತು ಆತಂಕದಂತಹ ಪರಿಣಾಮ ನೀಡುವ ಸಮತೋಲನ ತಾತ್ಕಾಲಿಕ ಮಾರ್ಪಾಡು ಕಾಣಿಸಿಕೊಳ್ಳಬಹುದು. ಹೊಸ ರೀತಿಯ ಸಮತೆಯು ಸ್ಥಾಪನೆಯಾಗುವ ಮುನ್ನ ಈ ಬದಲಾವಣೆಯ ಸಂಕೀರ್ಣ ಪ್ರಕ್ರಿಯೆಯಲ್ಲಿ The Sympathetic ನರಮಂಡಲ ಮತ್ತು ರಕ್ತನಾಳಗಳ ಮೇಲಿನ ಅದರ ಕಾರ್ಯಗಳು ಪರಿಣಾಮ ಹೊಂದಬಹುದು. ರಕ್ತದ ತಕ್ಷಣ ನುಗ್ಗುವಿಕೆಯುಂಟಾಗಿ ಸುಪರಿಚಿತ hot flushes ಗೆ ಕಾರಣವಾಗಬಹುದು. ಅದರ ಇಳಿತ ನಿಮ್ಮ ಬೆರಳುಗಳು ಜುಮ್ಮೆನ್ನುವಂತೆ ಮತ್ತು ಪಾದಗಳು ಜಡವೆನಿಸುವಂತೆ ಮಾಡುತ್ತವೆ.

ಇವುಗಳೆಲ್ಲದರ ಜೊತೆ ಮಧ್ಯವಯಸ್ಸಿನ ಸಾಮಾನ್ಯ ಚಿಂತೆ ಹಾಗೂ ಒತ್ತಡಗಳೂ ಸೇರಿ ಮನೋಪಾಸ ಅವಧಿ ಒಂದು ಪರೀಕ್ಷೆಯಾಗುವುದು ಆಶ್ಚರ್ಯವೇನಲ್ಲ. ಅದು ಇನ್ನು ಮುಂಚೆ ಹಾಗೆ ಆಗದಿರುವುದೇ ಆಶ್ಚರ್ಯದ ಸಂಗತಿ. ಕೆಲವರಿಗೆ ಋತುಸ್ರಾವ ಆಗದೆ ಕೆಲವರಲ್ಲಿ ಇದು ಮನೋಪಾಸ್ ಅಥವಾ ತಡವಾಗಿ ಆದ ಗರ್ಭಧಾರಣೆಯೆ ಎಂಬ ಆತಂಕಭರಿತ ಆಶ್ಚರ್ಯ ಕೆರಳಿಸಬಹುದು. ಆ ಸ್ರಾವ ಪೂರ್ಣ ನಿಂತು ಹೋಗುವ ಮುಂಚೆ ಸಾಮಾನ್ಯವಾಗಿ ಕಡಿಮೆ ಅವಧಿ ಹಾಗೂ ಪ್ರಮಾಣದ್ದಾಗುತ್ತ ಬರುತ್ತದೆ. ovulation ಮತ್ತು progestrerone ಉತ್ಪಾದನೆ ನಿಂತ ನಂತರವೂ ಅಂಡಾಶಯದ ಎಸ್ಟ್ರೋಜಿನ್ ಉತ್ಪಾದನೆಯಾಗುತ್ತಲೇ ಇದ್ದರೆ ಹೆಚ್ಚಿನ ಸ್ರಾವದ ಸಾಧ್ಯತೆಯುಂಟು. ಏನೇ ಆದರೂ ಇದಕ್ಕೆ ಮನೋಪಾಸ್‌ಗೆ ಸಂಬಂಧಿಸಿದ ಕಾರಣಗಳಿರುವುದರಿಂದ ಇದನ್ನು ತ್ವರಿತವಾಗಿ ವೈದ್ಯರಿಂದ ಪರೀಕ್ಷೆ ಮಾಡಿಸಿಕೊಳ್ಳ ಬೇಕು. ಒಂದು ವರ್ಷದವರೆಗೆ ಋತುಸ್ರಾವವಿಲ್ಲದಿದ್ದರೆ ಮನೋಪಾಸ್ ಪೂರ್ಣಗೊಂಡಿತೆಂದು ಅರ್ಥ.

ಮೇಲ್ಕಂಡಂತೆ ಎಸ್ಟ್ರೋಜಿನ್ ಮಟ್ಟಗಳ ಇಳಿಮುಖವು ರಕ್ತನಾಳಗಳ ಮೇಲಿನ ಕೇಂದ್ರ ನರಮಂಡಲದ ನಿಯಂತ್ರಣಕ್ಕೆ ಪರಿಣಾಮ ಬೀರಬಹುದು. ಇದರಿಂದ ಆಗಾಗ್ಗೆ ಮೈಬಿಸಿಯುಂಟಾಗುವುದಷ್ಟೇ ಇರಬಹುದು. ಆದರೂ ಕೆಲವು ಸಂದರ್ಭಗಳಲ್ಲಿ ಬಿಸಿಯ ಅಲೆಗಳು ದೇಹವನ್ನೆಲ್ಲಾ ಆವರಿಸಿ ಮುಖ ಮತ್ತು ಕತ್ತುಗಳನ್ನು ವಿಪರೀತ ಕೆಂಪು ಮಾಡಿ ಕಡಿಮೆಯಾಗುತ್ತವೆ; ಇದಕ್ಕೊಳಗಾದ ಬೆವರಿನಿಂದ ತೊಯ್ಯಲ್ಪಟ್ಟು ಥಂಡಿ ಅನುಭವಿಸುತ್ತಾರೆ. ಈ ರೀತಿಯ ಸಾಕಷ್ಟು ಆಘಾತಗಳುಂಟಾಗಿ ಜೀವನ ಕಷ್ಟಕರವೆನಿಸುವಂತೆ ಮಾಡಬಹುದು. ಅದೃಷ್ಟವಶಾತ್ ದೇಹ ಸಮತೆಯನ್ನು ಹೊಂದುವವರೆಗೆ ಈ ಆಘಾತಗಳನ್ನು ಸುಲಭಗೊಳಿಸುವ ಅಥವಾ ನಿವಾರಿಸುವ ವೈದ್ಯಕೀಯ ಸಹಾಯ ದೊರಕುತ್ತದೆ. ಈ ಬಗ್ಗೆ ನಂತರ ವಿವರಿಸಿ ಹೇಳಲಾಗಿದೆ. ಅನೇಕ ವೈದ್ಯರ ಪ್ರಕಾರ ಭಾವೋದ್ರೇಕದ ಸ್ತ್ರೀಯರಲ್ಲಿ ಈ ಬಿಸಿಯೇರುವಿಕೆ ಹಾಗು ಬೆವರುವಿಕೆ ಇನ್ನೂ ತೀವ್ರವಾಗಿರುತ್ತದೆ ಮತ್ತು ಒತ್ತಡ ಹಾಗೂ ಉದ್ರೇಕಗಳನ್ನು ಜಾಸ್ತಿಗೊಳಿಸುತ್ತದೆ. ಆದ್ದರಿಂದ ಸಮಾಧಾನಚಿತ್ತ ರಾಗಿರಲು ಪ್ರಯತ್ನಿಸುವುದು ಅಗತ್ಯ.

ಉದ್ವಿಗ್ನ ಹಾಗೂ ನಿರುತ್ಸಾಹಿಗಳಾಗುತ್ತಿದ್ದೇವೆ; ಮುದುಕರಾಗುತ್ತಿ ದ್ದೇವೆಂಬ ಸಂಗತಿಯನ್ನು ನಾವೆಲ್ಲ ಎದುರಿಸಬೇಕಾಗಿ ಬಂದಾಗ ಅದು ಜೀವನದ ಒಂದು ಘಟ್ಟದಲ್ಲಿ ಆಗಾಗ್ಗೆ ಚಿಂತೆ ತರುವ ವಿಷಯವಾಗುತ್ತದೆ. ಇದಕ್ಕೆ ಸ್ತ್ರೀಯರಲ್ಲಿ ಎಂಡೋಕ್ರೈನ ವ್ಯವಸ್ಥೆಯೂ ಕಾರಣವಾಗಬಹುದು ಎಂದು ಡಾ॥ ಎಡ್ವಿನ್ ಎಚ್. ಡನ್‌ಲಪರ ಅಭಿಪ್ರಾಯ. ನಿರುತ್ಸಾಹ ಪುರುಷರಲ್ಲಿ ಆಗುವುದಕ್ಕಿಂತ ಮೂರುಪಟ್ಟು

ಹೆಚ್ಚು ಸ್ತ್ರೀಯರಲ್ಲಿ ಆಗುತ್ತದೆ ಮತ್ತು ಹಾರ್ಮೋನು ಬದಲಾವಣೆಗಳಾದಾಗ ನಿರುತ್ಸಾಹ ಉಂಟಾಗುತ್ತದೆ ಎಂಬ ವಿಷಯದ ಬಗ್ಗೆ ನಮ್ಮ ಗಮನ ಸೆಳೆಯುತ್ತಾರೆ. ತಾರುಣ್ಯಾವಧಿಯ ಮಾನಸಿಕ ಸ್ಥಿತಿ ಉಬ್ಬರ ಇಳಿತಗಳು ಕೆಲವೇಳೆ ನಿರುತ್ಸಾಹ ಋತುಸ್ರಾವದ ಮುನ್ನ ಅಥವಾ ಆ ಅವಧಿಯಲ್ಲಿ ಕಂಡುಬರುತ್ತದೆ. ಮಗುಹುಟ್ಟಿದನಂತರ 'Baby blues' ಮತ್ತು ಈಗ ಮೆನೋಪಾಸ್.

ಈ ಸಮಯದಲ್ಲಿ ಅನೇಕ ಸ್ತ್ರೀಯರು ದೂರುವ ತಲೆನೋವಿಗೆ ಮೆದುಳಿನಲ್ಲಿರುವ ರಕ್ತನಾಳಗಳ ತಾತ್ಕಾಲಿಕ erratic dilation ಕಾರಣವಾಗಿರಬಹುದು. ಅಥವಾ ಅದು ಜೀವನದಲ್ಲಿನ ಹೆಚ್ಚಿನ ಒತ್ತಡ ಹಾಗೂ ಹೊಣೆಯಿಂದಾಗಿರಬಹುದು. ಬೆನ್ನುನೋವು, ಅಜೀರ್ಣ Palpitaions, (ಹೃದಯಾತಿಸ್ಪಂದನ) nsomonia ನಿದ್ರೆ ಇಲ್ಲದಿರುವಿಕೆ, ಅಸಹನೆ, ದಣಿವು, ನಗರಗಳಿಂದಾದ ಉದ್ವಿಗ್ನತೆ–ಮೆನೋಪಾಸ್ ಕಾರಣವೆನ್ನುವ ಇವೆಲ್ಲದರ ಪಟ್ಟಿಗೆ ಮಿತಿ ಇಲ್ಲ. ಅದೃಷ್ಟವಶಾತ್ ಒಬ್ಬರಿಗೇ ಇವೆಲ್ಲಾ ಇರುವುದಿಲ್ಲ. ಆದರೆ ಅವುಗಳೇನಾದರೂ ನಿಮಗೆ ಇದ್ದಲ್ಲಿ ಅದನ್ನು ಸುಮ್ಮನೆ ಸಹಿಸುವುದೇ ಅದರ ಔಷಧಿಯಲ್ಲ. ವೈದ್ಯರಿಂದ ಕೂಲಂಕಷ ದೈಹಿಕ ಪರೀಕ್ಷೆ, ಮೇಲಾಗಿ ಅವುಗಳ ನಿಜವಾದ ಕಾರಣ ತಿಳಿಯಲು ಅವರೊಡನೆ ಭರವಸೆಯಿಂದ ಕೂಡಿದ ಸಂಭಾಷಣೆ ನಡೆಸುವುದು ಹಾಗೂ ಅವುಗಳ ನಿವಾರಣೆಯ ಕ್ರಮ ಕೈಕೊಳ್ಳುವುದು ಮುಖ್ಯ.

ಮಧ್ಯ ವಯಸ್ಸಿನಲ್ಲಿ ಬದುಕನ್ನು ಸ್ವಲ್ಪ ಲಘುವಾಗಿ, ಸುಲಭವಾಗಿ ತೆಗೆದುಕೊಂಡು ಎಲ್ಲದರ ಬಗ್ಗೆ ತಲೆಕೆಡಿಸಿಕೊಳ್ಳದಿರುವುದರ ಅಗತ್ಯ ಸಾಕಷ್ಟಿದೆ. ನೀವು ಉದ್ಯೋಗಸ್ಥ ಮಹಿಳೆ, ಕ್ರಿಯಾಶಾಲಿ ಕ್ಲಬ್ ಸದಸ್ಯೆ, ಸಮಾಜದ ಪ್ರಮುಖರು ಎಂದಿಟ್ಟುಕೊಳ್ಳಿ. ಈ ಜವಾಬ್ದಾರಿ ಹಾಗೂ ಪ್ರಾಮುಖ್ಯದ ಸ್ವಲ್ಪಾಂಶವನ್ನಾದರೂ ಬಿಟ್ಟುಕೊಡಲು ನೀವು ತಯಾರಿಲ್ಲ. ಇದರಿಂದ ನೀವು ಎಡಬಿಡದೆ ಪ್ರಯತ್ನಿಸುತ್ತೀರಿ, ಹೆಚ್ಚುಹೆಚ್ಚು ಆತಂಕಕ್ಕೊಳಗಾಗುತ್ತೀರಿ. ನಿಮಿಷ ನಿಮಿಷವೂ ನಿಮ್ಮೊಡನೆ ಹೆಣಗುವುದು ಕಷ್ಟವಾಗುತ್ತದೆ. ನೀವೇನು ಮಾಡಬೇಕು ವಿಶೇಷವಾಗಿ ನೀವೇನು ಮಾಡಬಾರದೆಂದು ಯಾರೂ ಹೇಳುವುದಿಲ್ಲ. ನಿಮ್ಮ ಕೆಲಸ ನಿಮಗಷ್ಟೇ ಅಲ್ಲ, ನಿಮ್ಮ ಸಂಘಕ್ಕೂ ಸಾಕಷ್ಟು ಮುಖ್ಯವಾದ್ದರಿಂದ ನೀವೀಗ ಅದರ ಕೈ ಬಿಡಲಾರಿರಿ. ನಿಮಗೆ ಹಿಂಸೆ ಎನಿಸಬಹುದು. ಆ ಬಿಸಿಯೇರುವಿಕೆ ಮತ್ತು ಬೆವರುವಿಕೆ ಕೇವಲ ತೊಂದರೆ ಮಾತ್ರವಲ್ಲ, ಇನ್ನೂ ಹೆಚ್ಚಿನ ಕಾಟವೆನಿಸುತ್ತದೆ. ಆದರೂ ನೀವು ಹೇಗಾದರೂ ಮುಂದುವರೆಯಬೇಕು ; ಉತ್ತಮ ಸ್ವರೂಪದಲ್ಲೇ ಉಳಿಯಬೇಕು.

ಈ ಸಮಯಕ್ಕೆ ಕೌಟುಂಬಿಕ ಹೊಣೆಗಾರಿಕೆಗಳು ಹೆಚ್ಚಬಹುದು. ನಿಮ್ಮ ತಂದೆತಾಯಿಗಳು ನಿಮ್ಮ ಸಹಾಯವನ್ನು ಅಪೇಕ್ಷಿಸಬಹುದು. ತಾರುಣ್ಯದ ಸಮಸ್ಯೆ

ಗಳಿಂದ ತುಂಬಿದ ಮಕ್ಕಳನ್ನು ನೀವು ಹೊಂದಿರಬಹುದು...ನಿಮ್ಮ ಅಳಿಯನು ಕೆಲಸದ ಮೇಲಿರುವ ಪ್ರಯುಕ್ತ ನಿಮ್ಮ ಮಗಳು ತನ್ನ ಇಬ್ಬರು ಮಕ್ಕಳೊಡನೆ ವಾಸಿಸುತ್ತಿರಬಹುದು. ನೀವು ನಿಮಗಾಗಿಯೇ ಸಾಕಷ್ಟು ಸಮಾಧಾನ, ಶಾಂತಿಗಳನ್ನು ಬಯಸುತ್ತಿರುವ ಈ ಸಮಯದಲ್ಲಿಯೇ ನಿಮ್ಮಿಂದ ದೈಹಿಕ, ಭಾವನಾತ್ಮಕ ಮತ್ತು ಆರ್ಥಿಕ ಸಹಾಯಗಳನ್ನು ಬೇಡುವ ರೋಗವೊಂದು ಕುಟುಂಬದಲ್ಲಿ ಉಂಟಾಗ ಬಹುದು. ಅಥವಾ ತತ್‌ಕ್ಷಣ, ನೀವು ಮಾಡಲು ಸಾಕಷ್ಟು ಕೆಲಸ ಪಡೆಯುವಿರಿ; ನೀವು ಒಂಟಿಯಾದಂತೆ, ತಿರಸ್ಕೃತವಾದಂತೆ, ಭಾವಿಸಬಹುದು. ನೀವು ಓರ್ವ ಹೆಂಡತಿ ಮತ್ತು ತಾಯಿ ಆಗಿದ್ದೀರಿ, ನೀವು ನಿಮ್ಮ ಪೂರ್ಣ ಬದುಕನ್ನು ಸ್ವಂತ ಇಚ್ಛೆಯಿಂದ ನಿಮ್ಮ ಕುಟುಂಬಕ್ಕೆ ಧಾರೆಯೆರೆದಿದ್ದೀರಿ ನೀವು ನಿರುತ್ಸಾಹಿತರಾಗಿದ್ದೀರಿ, ನಿಮ್ಮ ತಲೆ ನೋಯುತ್ತಿದೆ. ನಿಮ್ಮ ಬೆನ್ನು ನೋಯುತ್ತಿದೆ, ಮತ್ತು ಬದುಕಲಿಕ್ಕೆ ನಿಮಗೆ ಏನು ತಾನೇ ಇದೆ? ಈಗ ಮುಟ್ಟುನಿಲ್ಲುವಿಕೆಯು ನೀವು ಮತ್ತಷ್ಟು ಮಕ್ಕಳನ್ನು ಪಡೆಯದ ಹಾಗೆ ದಾರಿ ತಡೆದಿದೆ. ಇದು ನಿಮ್ಮ ಹೆಣ್ತನದ ಮುಕ್ತಾಯವೇ? ಇದು ನಿಮ್ಮ ಲೈಂಗಿಕ ಜೀವನದ ಮುಕ್ತಾಯವೆ?

ಇಂತಹ ಭಯಗಳು ಸಾಮಾನ್ಯವಾದುವಲ್ಲ. "ನಮ್ಮ ಮಾದರಿಯ ಹೆಂಗಸ ರಲ್ಲಿ ಕೆಲವರು ಮುಟ್ಟುನಿಲ್ಲುವಿಕೆಯ ವಯಸ್ಸು ದಾಟಿ ಮತ್ತು ಐವತ್ತು ಅರವತ್ತು ವಯಸ್ಸಿನವರಾಗಿದ್ದರೂ ಲೈಂಗಿಕವಾಗಿ ಹೆಚ್ಚಿನ ಚಟುವಟಿಕೆ ಪಡೆದಿದ್ದರು. ಅವರಲ್ಲಿ ಕೆಲವರ ಅಂಡಾಶಯಗಳು ಹತ್ತರಿಂದ ಹದಿನೈದು ವರ್ಷಗಳ ಮೊದಲೇ ತೆಗೆಯಲ್ಪಟ್ಟಿದ್ದುವು". ಅಂಡಾಶಯದ ಹಾರ್ಮೋನು ಕೊರತೆಯು ಲೈಂಗಿಕ ಆಕಾಂಕ್ಷೆ, ಲೈಂಗಿಕ ಕ್ರಿಯೆ ಅಥವಾ ಲೈಂಗಿಕ ಪ್ರತಿಕ್ರಿಯೆಗಳ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ. ಸತ್ಯಾಂಶವೇನೆಂದರೆ ಅನೇಕ ಹೆಂಗಸರು ಗರ್ಭಧಾರಣೆಯ ಭಯವಿರದ ಕಾರಣ ಮುಟ್ಟುನಿಂತ ಮೇಲೆಯೇ ಲೈಂಗಿಕವಾಗಿ ನಿರ್ಭಯ ಮತ್ತು ಸಂತೋಷಗಳನ್ನು ಅನುಭವಿಸುತ್ತಾರೆ. ಮತ್ತು ಆ ನಿರ್ಭಯ ಮನೋಭಾವವೇ ಗಂಡುಹೆಣ್ಣಿನ ಯಶಸ್ವಿ ಲೈಂಗಿಕ ಜೀವನಕ್ಕೆ ಅತಿಮುಖ್ಯವಾಗಿ ಬೇಕಾದ ಸಾಮಾನ್ಯ ಮಾನಸಿಕ ಶಮನವನ್ನು ಉಂಟುಮಾಡುತ್ತದೆ. ಒಂದು ವೇಳೆ ಯೋನಿಯ ಅಂಗಾಂಶಗಳಲ್ಲಿನ ಶುಷ್ಕತೆಯ ಕಾರಣದಿಂದ ಸಂಭೋಗದಲ್ಲಿ ನೋವುಂಟಾಗುವಂತಹ ದೈಹಿಕ ಸಮಸ್ಯೆ ಏಳಬಹುದು. ಇದನ್ನು ನಿಮ್ಮ ವೈದ್ಯರು ಸೂಚಿಸಬಹುದಾದ ಔಷಧೋಪಚಾರ ಅಥವಾ ಇತರ ಚಿಕಿತ್ಸೆಯಿಂದ ಹೋಗಲಾಡಿಸ ಬಹುದು. ಮುಟ್ಟುನಿಲ್ಲುವಿಕೆಯು ಹೆಣ್ತನದ ಮುಕ್ತಾಯವಲ್ಲವೇ ಅಲ್ಲ.

ವೈದ್ಯರು ಮುಟ್ಟುನಿಲ್ಲುವಿಕೆಯ ಸಮಸ್ಯೆಗಳಿಗೆ ಹೆಚ್ಚು ಗಮನ ಕೊಡಲಿಲ್ಲ. ಮೊದಲ ಕಾರಣ, ಹೆಂಗಸರು ಇಂತಹ ವೈಯಕ್ತಿಕ ವಿಚಾರವನ್ನು ಅವರೊಡನೆ

ಬಂದು ಹೇಳಲು ನಾಚುತ್ತಿದ್ದರು ಮತ್ತು ಅವರ ತೊಂದರೆಯಿಂದ ಬಿಡುಗಡೆಯಿದೆ ಎಂಬ ವಿಷಯುವನ್ನರಿಯುದಷ್ಟು ಅಜ್ಞಾನಿಗಳಾಗಿದ್ದರು. ಎರಡನೆಯದಾಗಿ ಜನ ಚಿಕ್ಕವಯಸ್ಸಿನಲ್ಲಿಯೇ ಸಾಯುತ್ತಿದ್ದುದರಿಂದ ಮಧ್ಯ ಮತ್ತು ಮುದಿ ವಯಸ್ಸಿನ ವಿಚಾರಗಳು ಮುಖ್ಯವಾಗಿ ತೋರುತ್ತಿರಲಿಲ್ಲ. ಮುಟ್ಟು ನಿಲ್ಲುವಿಕೆಯು ಕೆಲವು ತೊಂದರೆಗಳೊಡನೆ ಎಸ್ಟ್ರೋಜಿನ್ ಮಟ್ಟಗಳ ತೀವ್ರ ಇಳಿಮುಖವು ಕೆಲವು ಸಲ ಪರಿಣಾಮಕಾರಿಯಾಗುವುದೆಂಬ ವಿಚಾರ ಅಭ್ಯಾಸಗಳಿಂದ ತಿಳಿದುಬಂದ ನಂತರ ವೈದ್ಯರು ಔಷಧೋಪಚಾರದಿಂದ ಎಸ್ಟ್ರೋಜಿನ್ ಬದಲಿಕೆಯನ್ನು, ಎಚ್ಚರಿಕೆ ಯಿಂದ ಕೂಡಿದ ಅಭ್ಯಾಸವನ್ನು ಮೊದಲು ಮಾಡಿದರು. ಫಲಿತಾಂಶಗಳು ತೃಪ್ತಿ ಕರವಾಗಿದ್ದುವು.

200 ರೋಗಿಗಳ ವರದಿಯು ಪ್ರಕಾರ 98 ಜನ ಬಿಸಿಯೇರುವಿಕೆಯಿಂದ ಮತ್ತು 95 ರಷ್ಟು ಬಾಧಕವಾದ ಬೆವರುವಿಕೆಯಿಂದ ಬಿಡುಗಡೆ ಪಡೆದರು. ಅವರು ಶುಷ್ಕ ಮತ್ತು ತೆಳ್ಳಗಾದ ಯೋನಿಯ ಅಂಗಾಂಶಗಳ ಸುಧಾರಣೆಯ ಬಗ್ಗೆ ವರದಿ ಮಾಡಿದ್ದಾರೆ. ಶಸ್ತ್ರಚಿಕಿತ್ಸೆಯಿಂದ ಅಚಾನಕ ಮುಟ್ಟುನಿಲ್ಲುವಿಕೆಯುನ್ನು ಉಂಟಾಗಿ ಸಿದರೆ, ತತ್‌ಕ್ಷಣವೇ ಎಸ್ಟ್ರೋಜಿನ್ ಬದಲಿಕೆ ಮಾಡುವುದು ಸಾಮಾನ್ಯ. ಆದ್ದರಿಂದ ಅದು ಎಚ್ಚರಿಕೆಯಿಂದ ಕೂಡಿದ ಅಭ್ಯಾಸ ಮತ್ತು ವಿಶ್ಲೇಷಣೆ ಮತ್ತು ಪೂರ್ಣ ವೈದ್ಯಕೀಯ ಚರಿತ್ರೆಯ ಆಧಾರದ ಮೇಲೆ ರೂಪಿತವಾದ ಗಮನ ಪೂರ್ಣ ಚಿಕಿತ್ಸೆಗಳನ್ನು ಅಪೇಕ್ಷಿಸುತ್ತದೆ. ಕೆಲವು ವೈದ್ಯರು ಎಸ್ಟ್ರೋಜಿನ್ ಬದಲಿಕೆ ಚಿಕಿತ್ಸೆ ಯನ್ನು ದೈಹಿಕ ರೋಗ ಲಕ್ಷಣಗಳನ್ನು ಹೋಗಲಾಡಿಸಲು, ವಿಶೇಷವಾಗಿ ಅವು ಕ್ಲೇಶದಾಯಕವಾಗಿದ್ದರೆ, ಸಂಕ್ಷಿಪ್ತರೂಪದಲ್ಲಿ ಉಪಯೋಗಿಸುತ್ತಾರೆ. ಕೆಲವರು ಅದನ್ನು ದೇಹವನ್ನು ಆರೋಗ್ಯ ಸ್ಥಿತಿಯಲ್ಲಿಡಲು ನಿವಾರಕ ವಸ್ತುವಿನಂತೆ ನಿರಂತರ ವಾಗಿ ಮುಂದುವರಿಸಬೇಕೆಂದು ಅಭಿಪ್ರಾಯಪಡುತ್ತಾರೆ.

ಎಸ್ಟ್ರೋಜಿನ್ ಕ್ಯಾನ್ಸರಿಗೆ ಕಾರಣವಾಗುತ್ತದೆಂಬ ಭಯ ಇನ್ನೂ ಇದೆ. ಆದರೆ 30 ವರ್ಷಗಳ ಅಭ್ಯಾಸದಿಂದ ರೋಗಿಗಳ ಎಸ್ಟ್ರೋಜಿನ್ ಉಪಯೋಗದಿಂದ, ವೈದ್ಯಶಾಸ್ತ್ರವು ಅದಕ್ಕೆ ಸಾಕ್ಷಿಗಳನ್ನು ಕಂಡಿಲ್ಲ. ಎಸ್ಟ್ರೋಜಿನ್ ಮಟ್ಟಗಳು ಅತಿ ಹೆಚ್ಚಿನವಾಗಿದ್ದಾಗ ಯೌವನ ಮತ್ತು ಗರ್ಭಧಾರಣೆಗಳ ಸಂದರ್ಭ ಗಳಲ್ಲಿ ಕ್ಯಾನ್ಸರಿನ ಅಲ್ಪವ್ಯಾಪ್ತಿಯೂ, ಮತ್ತು ಎಸ್ಟ್ರೋಜಿನ್ ಮಟ್ಟಗಳು ಕಡಿಮೆ ಯಾಗಿದ್ದಾಗ ಮಧ್ಯವಯಸ್ಸಿನಲ್ಲಿ ಕ್ಯಾನ್ಸರಿನ ಅತಿವ್ಯಾಪ್ತಿಯೂ ಇವೆ. ನೀವು ನಿಮ್ಮ ಮುಟ್ಟುನಿಲ್ಲುವಿಕೆಯ ಬಗ್ಗೆ ಉದ್ವೇಗ ತಳಮಳದ ಸ್ಥಿತಿಯಲ್ಲಿದ್ದರೆ, ಎಸ್ಟ್ರೋಜಿನ್ ಮಟ್ಟಗಳ ಅನಿರ್ದಿಷ್ಟ ಇಳಿಮುಖವೇ ಅದಕ್ಕೆ ವಿಶೇಷ ಅಥವಾ ಅವಶ್ಯ ಕಾರಣವಾಗ ಬೇಕಿಲ್ಲ. ಡಾ॥ ಫಾರ್‌ಮನ್ನರು ಹೀಗೆ ಹೇಳುತ್ತಾರೆ: ನೀವು ಯಾವಾಗಲೂ

ಉದ್ವಿಗ್ನತೆ ಮತ್ತು ಮುಜುಗರದ ಸ್ವಭಾವದವರಾಗಿದ್ದು ಅವು ಮಧ್ಯ ವಯಸ್ಸಿನ ಯೋಚನೆಗಳಿಂದ ಹೆಚ್ಚಾಗಿರಬಹುದು. ನೀವು ಏನಾಗಿದ್ದಿರೋ ಅದೇ ಆಗಿದ್ದೀರಿ ಸ್ವಲ್ಪಹೆಚ್ಚಿನ ರೀತಿಯಲ್ಲಿ ಅಷ್ಟೆ ; ಯಾರು ಭಯಂಕರ ಮುಟ್ಟು ನಿಲ್ಲುವಿಕೆಯನ್ನು ಹೊಂದಲಿರುವರೆಂಬುದನ್ನು ಕೆಲವು ಡಾಕ್ಟರರು ಮೊದಲೇ ಕಂಡುಹಿಡಿದುಬಿಡುತ್ತಾರೆ.

ಆಗ ಶಾಂತಗೊಳಿಸುವ ಮತ್ತು ಉತ್ಸಾಹವರ್ಧಕವಾದ ಗುಣ ಸಂಯೋಜನೆಯ ಇತರ ಪರಿಣಾಮಕಾರೀ ಔಷಧಗಳನ್ನು ಸೂಚಿಸಬಹುದು. ನಿಮ್ಮ ವೈದ್ಯರು ಮನೋರೋಗ ಚಿಕಿತ್ಸೆಯನ್ನು ಸೂಚಿಸಿದರೆ ಗಾಬರಿಪಡಬೇಡಿ. ಅದನ್ನು ಬದುಕಿನ ಈ ಸಮಯದಲ್ಲಿ ಅನೇಕ ಅಪ್ರಿಯ ಬದಲಾವಣೆಗಳಿಗಾಗಿ ಹೆಚ್ಚಾಗಿ ಮತ್ತು ಯಶಸ್ವಿಯಾಗಿ ಉಪಯೋಗಿಸುತ್ತಿದ್ದಾರೆ. ಅಪ್ರಿಯ ಬದಲಾವಣೆಗಳು ಎಲ್ಲವೂ ದೈಹಿಕವೇನಲ್ಲ. "ಮುಟ್ಟು ನಿಲ್ಲುವಿಕೆಯು ಅದರದೇ ಆದ ಅಸೌಖ್ಯ ಮತ್ತು ಸಮಸ್ಯೆಗಳನ್ನು ತರಬಹುದು. ಅವುಗಳಲ್ಲಿ ಕೆಲವು ಮಧ್ಯವಯಸ್ಸಿನ ಸಮಸ್ಯೆ ಹಾಗೂ ಲಕ್ಷಣಗಳಾದ ನಿರುತ್ಸಾಂಶ ಮತ್ತು ಆಯಾಸ ; ಕಿರಿಕಿರಿ, ನಿದ್ರಾನಾಶ ಇವುಗಳೊಡನೆ ಆಶ್ಚರ್ಯಕರವಾದ ಹೋಲಿಕೆ ಹೊಂದಿವೆ. ಮಧ್ಯವಯಸ್ಸಿನಲ್ಲಿ ಮುಟ್ಟುನಿಲ್ಲುವಿಕೆಯು ಉಂಟಾದಾಗಿನಿಂದ ಯಾವ ಲಕ್ಷಣಗಳು ಯಾವ ಕಾರಣಗಳಿಂದ ಉಂಟಾಗಿವೆ ಎಂದು ನಿರ್ಧರಿಸುವುದು ಅನೇಕ ಸಲ ಕಷ್ಟಕರವಾಗಿ ತೋರುತ್ತದೆ. ಆದರೆ ಮುಟ್ಟು ನಿಲ್ಲುವಿಕೆಯಲ್ಲದ ಲಕ್ಷಣಗಳೊಡನೆ ಮುಟ್ಟುನಿಲ್ಲುವಿಕೆಯ ಚಿಕ್ಕ ಲಕ್ಷಣಗಳನ್ನು ಸಹ ಜೋಡಿಸಿದರೆ ಅಸಹನೀಯವೆನಿಸುತ್ತದೆ ಎಂದು ನಾವು ತಿಳಿದಿದ್ದೇವೆ.

ಅನೇಕ ಹೆಂಗಸರಿಗೆ ಮಧ್ಯವಯಸ್ಸು ಹೊಸ ರೀತಿಯ ಬದುಕನ್ನು ಆರಂಭಿಸುವ ಅಥವಾ ಬದುಕಿನಲ್ಲಿ ವಿಶ್ರಾಂತಿ ಪಡೆಯುವ ಬಿಡುಗಡೆಯ ಒಂದು ಕಾಲವಾಗಿದೆ. ಅವರು ಚುರುಕಾಗಿ, ಆಕರ್ಷಕವಾಗಿ ಬದುಕಿನಲ್ಲಿ ಆಸಕ್ತಿ ಮತ್ತು ಯಾವ ಬದಲಾವಣೆಯನ್ನಾದರೂ ಸ್ವೀಕರಿಸುವ ಸಾಮರ್ಥ್ಯ ಇವುಗಳನ್ನು ಹೊಂದುತ್ತಾರೆ.

ನೀವು ಯಾವುದೇ ರೋಗಲಕ್ಷಣಗಳು ಚಿಂತೆಗಳು ಮತ್ತು ವೈದ್ಯರನ್ನು ಕಾಣುವ ಕಾರಣ ಇವುಗಳನ್ನು ಹೊಂದಿರದಿದ್ದರೂ ಸ್ವಂತ ಕ್ರಮಬದ್ಧ ದೈಹಿಕ ಪರೀಕ್ಷೆಗಳನ್ನು ಮಾಡಿಸಿಕೊಳ್ಳಿ. ಇದು ಎಲ್ಲ ಕಾಲಕ್ಕೆ ಗಂಡಸರು ಮತ್ತು ಹೆಂಗಸರಿಗೆ ಮತ್ತು ವಿಶೇಷವಾಗಿ ವಯಸ್ಸು ಹೆಚ್ಚುವ ಸ್ವಾಭಾವಿಕ ಕ್ರಿಯೆಯು ತೀವ್ರ ವ್ಯಥೆಯ ಗುರುತುಗಳನ್ನು ಮುಚ್ಚಿ ಹಾಕಬೇಕಾದ ಈ ಸಮಯದಲ್ಲಿ, ಅವಶ್ಯಕವಾಗಿದೆ. ಆಮೇಲೆ ಬೇಕಾದರೆ ಅನಂತರದ ಮತ್ತು ವಿಶ್ವಾಸಪೂರ್ಣ ಶಾಂತತೆಯ ವರ್ಷಗಳ ಸಂತೋಷವನ್ನು ಹೆಚ್ಚಿಸಲು ಬೇಕಾದ ನಿವಾರಕ ಔಷಧಗಳನ್ನು ತೆಗೆದುಕೊಳ್ಳಬಹುದು.

ದೈಹಿಕವಾಗಿ ನಿಮ್ಮನ್ನು ನೀವು ಒಳ್ಳೆಯ ಆರೋಗ್ಯ ಸ್ಥಿತಿಯಲ್ಲಿಟ್ಟುಕೊಳ್ಳಿ. ಅಂದರೆ ಅದೆಷ್ಟೇ ಚಿಕ್ಕ ಪ್ರಮಾಣದ್ದಾಗಿರಲಿ, ವ್ಯಾಯಾಮದ ಅಭ್ಯಾಸವನ್ನಿರಿಸಿಕೊಳ್ಳುವುದು ; ಮತ್ತು ಪ್ರತಿದಿನವೂ ಪ್ರೋಟೀನ್‌ಗಳ ಹೆಚ್ಚಳವಿರುವ ಪ್ರಮಾಣಬದ್ಧ ಆಹಾರವನ್ನು ಸೇವಿಸುವುದು. ಆಹಾರ ಪೋಷಣೆಯ ಕೊರತೆಯ ಕ್ಲೇಶವು ಬಡವರಿಗಷ್ಟೇ ಸೀಮಿತವಾಗಿಲ್ಲ. ಆಹಾರ ಪೋಷಣೆಯ ಕೊರತೆಯು ಅನೇಕ ಸುತ್ತುದಾರಿಗಳಿಗೆ ಕೊಂಡೊಯ್ಯುತ್ತದೆ. ಅದು ನಾವು ತರುಣರೂ ಉತ್ಸಾಹಿಗಳೂ ಆಗಿದ್ದಾಗ ಆರಂಭವಾಗಿ ನಾವು ವಯಸ್ಕರಾಗುತ್ತಿರುವಾಗ ಮತ್ತು ಸ್ವಾಭಾವಿಕವಾಗಿ ಹಸಿವಿನ ಕೊರತೆಯಿರುವಾಗ ಬೆಳೆಯುತ್ತಾ ಹೋಗುತ್ತದೆ. ಈ ಕೊರತೆ ನಿಮ್ಮನ್ನು ಕಾಡದಂತೆ ನೋಡಿಕೊಳ್ಳಿ.

ನಿಮಗೆ ತೊಂದರೆಗಳೇನಾದರೂ ಇದ್ದರೆ, ಅವು ಸಣ್ಣವಾದರೂ ಸರಿ, ಅವನ್ನು ಸುಮ್ಮನೆ ಕಡೆಗಣಿಸಬೇಡಿ. ನಿಮ್ಮ ವೈದ್ಯರನ್ನು ಭೇಟಿ ಮಾಡಿ. ಎಚ್ಚರಿಕೆಯಿಂದ ಕೂಡಿದ ದೈಹಿಕ ಪರೀಕ್ಷೆ ಮತ್ತು ನೀವು ನಿಮ್ಮ ಅನ್ನಿಸಿಕೆಗಳನ್ನು ಸರಳವಾಗಿ ಚರ್ಚಿಸುವ ಸಂಭಾಷಣೆಯನಂತರ ನಿಮ್ಮ ವೈದ್ಯಕೀಯ ಆವಶ್ಯಕತೆಗಳನ್ನು ಸರಿಯಾದ ರೀತಿಯಲ್ಲಿ ನಿರ್ಣಯಿಸುವವರು ಅವರೇ. ನಿಮ್ಮ ಸ್ವಂತ ಅನ್ನಿಸಿಕೆಯ ಮೇಲೆ ಮಾತ್ರೆಗಳನ್ನು ಮುಕ್ಕಬೇಡಿ. ಎಲ್ಲ ಔಷಧೋಪಚಾರವನ್ನೂ ನಿಮ್ಮ ವೈದ್ಯರಿಗೆ ಬಿಡಿ. ದೈಹಿಕ ಅಥವಾ ಭಾವೋದ್ವೇಗದ ಯಾವುದೇ ಸಮಸ್ಯೆಗಳಿಗಾಗಿ ಯಾಂತ್ರಿಕವಾಗಿ ಮುಟ್ಟು ನಿಲ್ಲುವಿಕೆಯನ್ನು ಆಕ್ಷೇಪಿಸಬೇಡಿ. ಅದು ಒಂದು ಮುಖ್ಯ ಕಾರಣವಾಗಿದ್ದರೂ, ನಿಮ್ಮ ವಯಸ್ಸು ಹೆಚ್ಚುತ್ತಿರುವುದರಂತಹ ಅಂಶಗಳು ಇತರ ಅನೇಕ ಕಾರಣಗಳಾಗಿರಬಹುದು. ಹೆಚ್ಚಿನ ಜನ ಅವನ್ನು ಪೂರ್ಣ ಶಾಂತಚಿತ್ತದೊಡನೆ ಒಪ್ಪಿಕೊಳ್ಳುವುದಿಲ್ಲ.

ಮುಟ್ಟುನಿಲ್ಲುವಿಕೆಯನ್ನು ಬದುಕಿನ ಬದಲಾವಣೆಯೆಂದು ಕರೆಯುತ್ತಾರೆ. ಏಕೆಂದರೆ ಅದು ಒಂದು ವಿಲಕ್ಷಣವಾದ ದೈಹಿಕ ಬದಲಾವಣೆ ಆಗಿದೆ. ಅದು ಬಿಡುಗಡೆಯ ಒಂದು ಕಾಲವಾಗಿರಬಹುದು. ಅದು ಕಲಿಯುವುದರ ಸಲುವಾಗಿ ಕಲಿಯುವ, ಜ್ಞಾನದ ಸಲುವಾಗಿ ಜ್ಞಾನವನ್ನು ಪ್ರೀತಿಸುವ ಕೇವಲ ತಮ್ಮ ಸ್ವಯಂ ಕೇಂದ್ರಿತ ಮನೋಭಾವದ ವಿಸ್ತರಣವಲ್ಲದೆ ಇತರರನ್ನು ಅವರಿರುವಂತೆಯೇ ಪ್ರೀತಿಸುವ ತಮ್ಮನ್ನು ತಾವು ಗೌರವಿಸಿಕೊಂಡು ಮತ್ತು ಎಲ್ಲಕ್ಕಿಂತ ಹೆಚ್ಚಿನ ಕಷ್ಟಕರ ಕೆಲಸ ಮಾಡಿದ ರೀತಿಯಲ್ಲಿ ಹೆಮ್ಮೆಪಡುವ ಬದುಕಿನೊಡನೆ ಹೋರಾಡುವ ಮತ್ತು ತಮ್ಮನ್ನು ತಾವು ಮೋಸಪಡಿಸಿಕೊಳ್ಳುವ ಒಂದು ಕಾಲವಾಗಿರಲೂಬಹುದು.

ಅನೇಕ ಮಂದಿ ಹೆಂಗಸರು ಕೇವಲ ಆಸಕ್ತಿ ಮತ್ತು ಸಂತೋಷಗಳಿಂದಾಗಿ ; ಸಮಸ್ಯೆಗಳ ಸಂಘರ್ಷದಿಂದ ಮಾನಸಿಕ ಒತ್ತಡಗಳಿಗೆ ಒಳಗಾಗಿರುವ ಈ ಕಾಲದಲ್ಲಿ

ಹೊಸದೊಂದು ಭಾಷೆ, ಕಲೆ, ಸಾಹಿತ್ಯ ಮತ್ತು ಸಾಮಾಜಿಕ ವಿಷಯಗಳನ್ನು ಆದಷ್ಟು ಬೇಗ ಕಲಿಯಲು ಅವರು ಹಾರೈಸುತ್ತಾರೆ. ಹಾಗೆ ಹೊಸತನ್ನು ಕಲಿಯುವ ಕಾಲ ಮಿಂಚಿಹೋಗಿಲ್ಲ. ನಿಮ್ಮ ಗುರಿಗಳ ಬಗ್ಗೆ ಮಾತ್ರ ದೃಢತೆ ಹೊಂದಿರಿ, ಇಲ್ಲದಿದ್ದರೆ ನೀವು ಮತ್ತೊಮ್ಮೆ ಪೂರ್ಣ ನಿರಾಶರಾಗಬೇಕಾದೀತು. ಎಷ್ಟೋ ಹೆಂಗಸರು ಮನೆಯಲ್ಲಿ ಹೊಸ ಅಥವಾ ಹಳೆಯ ಆಸಕ್ತಿಗಳಲ್ಲಿ ಹೆಚ್ಚಿನ ತೃಪ್ತಿ ಕಾಣುತ್ತಾರೆ ಮತ್ತು ಅವರಿಗೆ ಮಾಡಲು ಸಾಕಷ್ಟು ಕೆಲಸವೂ ಇರುತ್ತದೆ. ನಮ್ಮ ಸಮಾಜದ ಸಾಂಘಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಪರೋಪಕಾರ ಚಟುವಟಿಕೆಗಳು ಹೆಚ್ಚಿನ ಮಟ್ಟಿಗೆ 40 ರಿಂದ 65 ರೊಳಗಿನ ಹೆಂಗಸರಿಂದಲೇ ನಡೆಯುತ್ತಿವೆ. ಸಾಧನೆ ಮತ್ತು ಸಂತೃಪ್ತಿಗಳಿಗಾಗಿ ಮಧ್ಯ ವಯಸ್ಸಿನ ಸಾಧ್ಯತೆಯನ್ನು ಕಂಡುಕೊಳ್ಳಲು ಅವರು ಸಮರ್ಥರಾಗಿದ್ದಾರೆ. ಹೆಂಗಸರು ಇಂತಹ ಹಾದಿಯಲ್ಲಿ ಮುಂದುವರೆಯಬಹುದಾಗಿದೆ.

# ಬಟ್ಟೆಯಂಗಡಿಯಲ್ಲಿ

**ಕೆ. ಶ್ರೀಕಂಠ ಕೂಡಿಗೆ**

ಅಂಗಡಿಯಾತ
ಜೋಡು ದಾಖಲೆಗಳ ಪುಸ್ತಕ ತೆರೆಯುವ ಹೊತ್ತಿಗೆ
ಪೇಟೆಬೀದಿ ಮಾತನಾಡಿ
ಜನ ಘೇರಾಯಿಸುತ್ತದೆ ಅಂಗಡಿಯೊಳಗೆ
ಸುತ್ತು ಕೋಲಿಂದ ಸಪ್ತವರ್ಣದ ಪಕಳೆಗಳು
ಮರ್ಕ್ಯುರಿ ಬಲ್ಬುಗಳ ತಳಪಳದಲ್ಲಿ
ಪಟಪಟನೆ ಮೈಚಾಚುತ್ತವೆ

ಒಂದು ಎರಡು ಮೂರು ಹೀಗೆ ನೂರು
ಬಿಳಿ ಹಳದಿ ಕೆಂಪು ಚೌಕಳಿ ತರಾವರಿ
ಬಟ್ಟೆಮಾರುವ ಮಾರಾಯನ ಶಿಫಾರಸು
ಅರಳು ಹುರಿಯುವ ಮಾತು
'ಖರೀದಿಸದಿದ್ದರೆ ಪರವಾಗಿಲ್ಲ ನೋಡಿ ಬಿಡಿ'
ಮಾತು ಕಿವಿ ತುಂಬುತ್ತದೆ

ಅತ್ತ ಇತ್ತ ಮಗುಚಿ ಮೈ ಬದಲಾಯಿಸಿ ಬೆಲೆ ವಿಚಾರಿಸುವಾಗ
ತಿಂಗಳೊಂದಿನ ಜಮಾ-ಖರ್ಚು, ವಾಪಸಾತಿ ಎಲ್ಲಾ ನೆನಪು.
'ಆಮೇಲೆ ಬರುತ್ತೇವೆ' ಗಿರಾಕಿ ಗೃಹಸ್ಥನ ಮರುಮಾತು
ಹೀಗೆ ನೂರು ಅಂಗಡಿಗಳ ಷೋ ಕೇಸುಗಳ
ಹರಳುಗಳ ಮೇಲೆ ನೆರಳುಗಳು ಹಾದು ಹೋಗುತ್ತವೆ
ಮತ್ತೊಂದಂಗಡಿಯಲ್ಲಿ ಮತ್ತೆ ಮುಂದುವರಿಯುತ್ತದೆ
ಹುಡುಕುವ ಹೊಂದಾಣಿಸುವ ಅರ್ಥಶಾಸ್ತ್ರದ ಕ್ರಿಯೆ.
ಬಟ್ಟೆಯಂಗಡಿಯವನ 'ಕಪ್ಚಕ್ ಕಪ್ಚಕ್' ಕತ್ತರಿ ಸದ್ದಿನ
ಕಡೆಗಳಿಗೆಯ ನಿಲುಗಡೆಯಲ್ಲಿ
ಮನಸ್ಸಿನ ಹಲವು ಹೌದು-ಅಲ್ಲಗಳು ತುಂಡುಗಡಿಯುತ್ತವೆ.

# ತಂಬೂರ ಶಾಸನಗಳು

( ಕದಂಬ ಜಯಕೇಶಿ ಪೆರ್ಮಾಡಿದೇವರ ಶಾಸನ. ಕ್ರಿ. ಶ. 1125, 1159 ಮತ್ತು 1169. )

---

**ಆರ್. ಎಸ್. ಗುರವ**

ತಂಬೂರ ಗ್ರಾಮವು ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನಲ್ಲಿ ಕಲಘಟಗಿಯಿಂದ ನೈಋತ್ಯಕ್ಕೆ 10 ಕಿ.ಮಿ. ಅಂತರದಲ್ಲಿದೆ. ಸುಮಾರು 3 ಕಿ.ಮಿ. ಉದ್ದವಾದ ಅರಣ್ಯ ಇಲಾಖೆಯ ರಸ್ತೆಯೊಂದು ಅದನ್ನು ದೇವಿಕೊಪ್ಪ ಗ್ರಾಮದ ಹತ್ತಿರ ಹುಬ್ಬಳ್ಳಿ – ಕಾರವಾರ ಹೆದ್ದಾರಿಗೆ ಜೋಡಿಸುತ್ತದೆ. ಈಗ ಕಾಡಿನಲ್ಲಿಯ ಒಂದು ಸಣ್ಣ ಗ್ರಾಮವದು. ಆದರೆ ಶಾಸನ ಕಾಲದಲ್ಲಿ ಅದು ದೊಡ್ಡ ಪಟ್ಟಣವಾಗಿತ್ತು. ಈ ಗ್ರಾಮದಲ್ಲಿ 10-12 ಶಾಸನಗಳು ಕಂಡು ಬರುತ್ತವೆ. ಅವುಗಳನ್ನು ಪ್ರಸ್ತುತ ಲೇಖನ ಮಾಲೆಯಲ್ಲಿ ಪ್ರಕಟಿಸಲಾಗುವುದು. ಅವೆಲ್ಲ ಅಪ್ರಕಟಿತವಾದವುಗಳು.

ಊರ ಸಮಿಪಕ್ಕೆ ಹೋದ ಹಾಗೆ ಬಲಗಡೆಗೆ ಒಂದು ಎತ್ತರವಾದ ದಿಬ್ಬ ಕಾಣುತ್ತದೆ. ಇದು ಆ ಗ್ರಾಮದ ಕೋಟೆಯ ಅವಶೇಷ. ಎಡಗಡೆಗೆ ಒಂದು ಬಯಲು ಕಾಣುತ್ತದೆ. ಈ ಬಯಲಿನಲ್ಲಿ ಒಂದು ಜೈನಮಂದಿರದ ಮುಂದಿರುವ ಎತ್ತರವಾದ ಮಾನಸ್ತಂಭ ನಿಂತಿದೆ. ಬಯಲಿನ ಮತ್ತೊಂದು ಕಡೆಗೆ ಹಾಳು ಗುಡಿಯ ಅವಶೇಷಗಳು ಕಾಣುತ್ತವೆ. ಇದೊಂದು ವಿಷ್ಣುಗೃಹವಾಗಿರಬಹುದು. ಇದರೆ ಮುಂದೆ ಒಂದು ಹಾಳು ಬಾವಿಯ ತಗ್ಗು ಯಿದೆ. ಇದರಲ್ಲೊಂದು ತ್ರುಟಿತವಾದ ಶಾಸನ ಬಿದ್ದಿದೆ. ಮಾನಸ್ತಂಭವು ಬಹುಶಃ ಪ್ರಸ್ತುತ ಶಾಸನದಲ್ಲಿ ಹೇಳಿದ ಜೈನ ಮಂದಿರಕ್ಕೆ ಸಂಬಂಧಿಸಿದ್ದಿರಬಹುದು. ದಿಬ್ಬದ ಕೆಳಗೆ, ರಸ್ತೆಯ ಪಕ್ಕದಲ್ಲಿ ಒಂದು ಹರಿ ಇದ್ದು ಅದು ಕೋಟೆಯ ಅಗಳ್ತೆಯಾಗಿರಬಹುದು. ಇವರಲ್ಲೊಂದು ಸುಂದರವಾದ ವೀರಗಲ್ಲು ಬಿದ್ದಿತ್ತು. ಈ ವಿಷ್ಣುಗೃಹದ ಶಾಸನ ಹಾಗು ವೀರಗಲ್ಲಿನ ಬಗ್ಗೆ ಮುಂದಿನ ಲೇಖನದಲ್ಲಿ ಬರೆಯುತ್ತೇನೆ.

ಪ್ರಸ್ತುತ ಜಯಕೇಶಿ ಮತ್ತು ಪೆರ್ಮಾಡಿದೇವರ ಶಾಸನ, ಮೇಲೆ ಹೇಳಿದ ಕೋಟೆಯಲ್ಲಿ ಗಿಡಗಂಟಿಗಳ ನಡುವೆ ಬಿದ್ದಿರುವ ಒಂದು ವಿಶಾಲವಾದ ಕಲ್ಲಿನ ಮೇಲೆ ಕಂಡರಿಸಿರುತ್ತದೆ. ಶಾಸನದ ಕೊನೆಯ ಭಾಗದ ಕೆಲವು ಸಾಲುಗಳ ಮಧ್ಯಭಾಗವನ್ನು ನಾಶಪಡಿಸುವಂತೆ ಕಲ್ಲಿನ ಒಂದು ದೊಡ್ಡ ಪದರು ಬಿಚ್ಚಿ ಹೋದದ್ದನ್ನು ಬಿಟ್ಟರೆ

ಶಾಸನವು ಅತ್ಯುತ್ತಮ ಸ್ಥಿತಿಯಲ್ಲಿದೆ. ಅಕ್ಷರಗಳು ಒಂದೇ ಸಮನಾಗಿದ್ದು ಸುಂದರ ವಾಗಿರುತ್ತವೆ. ಕಂಡರಿಸಿದ ಕಲಾಕಾರನ ಕೌಶಲ್ಯ ಹಾಗು ಅವಿಶ್ರಾಂತ ಪರಿಶ್ರಮಗಳನ್ನು ನಾವು ಈ ಶಾಸನದ ಕೆತ್ತನೆಯಲ್ಲಿ ಕಾಣುತ್ತೇವೆ. ಮೊದಲಿನ 58 ಸಾಲುಗಳು ಒಬ್ಬನ ಹಸ್ತಾಕ್ಷರದಲ್ಲಿದ್ದು ಮಿಕ್ಕ 8 ಸಾಲುಗಳು ಬೇರೊಬ್ಬನ ಹಸ್ತಾಕ್ಷರದಲ್ಲಿವೆ. ಶಾಸನದ ಮೇಲ್ಭಾಗದ ವಿಗ್ರಹಗಳ ಕೆತ್ತನೆಗಳಲ್ಲಿ ಎರಡೂ ಪಕ್ಕಗಳಲ್ಲಿ ಹಸ್ತಾಕಾರದಷ್ಟು ಎರಡು ವ್ಯಕ್ತಿಗಳ ಆಕೃತಿಗಳಿವೆ. ಒಂದರ ಕೆಳಗೆ ಬಮ್ಮ್ರಜಯ್ಯ ವೆಂದು ಮತ್ತೊಂದರ ಕೆಳಗೆ ರಾಜಮಲ್ಲ ಎಂದು ಬರೆದಿದೆ.

**ಶಾಸನದಲ್ಲಿಯ ಅರಸು ಮನೆತನಗಳು:** ಪ್ರಾರಂಭದಲ್ಲಿ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಆಳಿಕೆಯನ್ನು ಹೇಳಲಾಗಿದೆ. ತರುವಾಯ, ಗೋವೆಯ ಕದಂಬ ಮನೆತನದ ಮಹಾಮಂಡಳೇಶ್ವರನಾದ ಎರಡನೆಯ ಜಯಕೇಶಿ ಕೊಂಕಣ ಒಂಬಯ್ಯುನ್ನೂರು, ಪಲಸಿಗೆ ಪನ್ನಿಚ್ಛಾಸಿರ ಹಾಗೂ ಕವಡಿದ್ವೀಪ ಸಪಾಲಕ್ಕಗಳನ್ನಾಳು ತ್ತಿದ್ದನೆಂದು ಹೇಳಿದೆ. ಈತನು ವಿಕ್ರಮ ಚಕ್ರವರ್ತಿಯ ಅಳಿಯ. ಚಕ್ರವರ್ತಿಯ ಮಗಳಾದ ಮೈಳಲದೇವಿ ಈತನ ಪಟ್ಟದರಾಣಿ. ಜಯಕೇಶಿಯ ಅಕ್ಕ ಪದ್ಮಲದೇವಿ. ಅವಳ ಪತಿ ಮಹಾಮಂಡಳೇಶ್ವರ ಹಾಕಿಬಲ್ಲದೇವ. ಹಾಕಿಬಲ್ಲ ಬನವಾಸಿ ಪನ್ನಿಚ್ಛಾಸಿರವನ್ನಾಳುತ್ತಿದ್ದನು. ಆತನ ತಂದೆ ಮಾವುಲಿದೇವ. ತಂದೆಯ ಹೆಸರಿನಿಂದ ಹಾಗು ಬನವಾಸಿ ನಾಡನ್ನಾಳುವ ಉಲ್ಲೇಖದಿಂದ ಹಾಕಿಬಲ್ಲನು ಹಾನಗಲ್ಲ–ಬನವಾಸಿ ಕದಂಬ ಮನೆತನಕ್ಕೆ ಸೇರಿದವನಂತೆ ಕಾಣುತ್ತದೆ. ಜಯಕೇಶಿಯ ಅಕ್ಕ ಪದ್ಮಲದೇವಿ, ಹಾನಗಲ್ಲ–ಬನವಾಸಿ ಕದಂಬ ಮನೆತನಕ್ಕೆ ಸೇರಬಹುದಾದ ಮಹಾಮಂಡಳೇಶ್ವರ ಹಾಕಿಬಲ್ಲದೇವ ಇವರ ಹೆಸರುಗಳನ್ನು ನಾವು ಈ ಶಾಸನದಲ್ಲಿ ಪ್ರಥಮತಃ ಕಾಣುತ್ತೇವೆ. ಡಾ॥ ಫ್ಲೀಟ್ ಮತ್ತು ಡಾ॥ ಮೋರೆಸ್ ಅವರಿಗೆ ಇವರಿಬ್ಬರ ಹೆಸರುಗಳು ಗೊತ್ತಿರಲಿಲ್ಲ.

**ಶಾಸನದ ಸಾರಾಂಶ:** ಮಹಾಮಂಡಳೇಶ್ವರ ಹಾಕಿಬಲ್ಲದೇವನ ಸಚಿವೋತ್ತಮರು ಬಮ್ಮ್ರಜಯ್ಯ ಮತ್ತು ರಾಜಮಲ್ಲರು. ಬಮ್ಮ್ರಜಯ್ಯನ ತಂದೆ ಬಲ್ಲಿರಾಜ, ತಾಯಿ ಮಾಳಿಯಕ್ಕ, ಗುರು ಗೋಪನಂದಿ, ಹೆಂಡತಿ ಭಾಗವ್ವೆ ಹಾಗೂ ಮಗ ಶಾಂತಿವರ್ಮ. ಇವರು ನಿಷ್ಠಾವಂತ ಜಿನಭಕ್ತರಾಗಿದ್ದರು. ಹಾಕಿಬಲ್ಲದೇವ ಹಾಗೂ ಆತನ ಮಂತ್ರಿದ್ವಯರು ಒಂದು ದಿವಸ ಧರ್ಮಕಥಾಪ್ರಸಂಗದಲ್ಲಿರುವಾಗ, ತನ್ನ ತಂದೆ ಮಾವುಲಿದೇವನ ಪುಣ್ಯಾರ್ಥವಾಗಿ ತನ್ನ ಬಿಯುಗಂ ಜಯಕೇಶಿದೇವನಾಳ್ವ ಪಲಸಿಗೆ ನಾಡಿನ ಕಂಪಣ ಮಾವಳಿಯಯ್ನೂರಲ್ಲಿರುವ ತಂಬೂರ ಗ್ರಾಮದಲ್ಲಿ ಒಂದು ಬಸದಿಯನ್ನು ಮಾಡಿಸಲುದ್ಯುಕ್ತನಾಗಿ, ಹಾಗೆ ಮಾಡಲು ತನ್ನ ಮಹತ್ತರ್ಗೆ ಅಜ್ಞೆಯನ್ನಿತ್ತ. ಆ ಪ್ರಕಾರ, ಅವರು ಆ ಗ್ರಾಮದಲ್ಲಿ ನೆಲವನ್ನು ಪಡೆದು

ಪ್ರಾಸಾದತುಲ್ಯ ಜೈನಮಂದಿರವೊಂದನ್ನು ನಿರ್ಮಿಸಿದರು. ಆ ಕಾಲದಲ್ಲಿ ತಂಬೂರ ಪುರವನ್ನು ದಂಡನಾಯಕ ಜಯಕೇಶಿ ಆಳುತ್ತಿದ್ದನು. ಆತನ ತಂದೆ ಜಂಗದೇವ, ತಾಯಿ ಆಚಲದೇವಿ, ತಮ್ಮ ಮಾದಿರಾಜ ಮತ್ತು ಮಗ ನರಸಿಂಹ. ವಾಸುಪೂಜ್ಯ ಮುನೀಂದ್ರ, ಆತನ ಶಿಷ್ಯ ಅಯ್ಯಪಂಡಿತದೇವ, ಅವನ ಸಹಧರ್ಮಿ ಮೇಘಚಂದ್ರ ವ್ರತಿಪತಿ – ಹೀಗೆ ಅಲ್ಲಿಯ ಜೈನ ಗುರುಗಳ ಪರಂಪರೆ ಬರುತ್ತದೆ. ಈ ಗುರುಗಳ ಸಂಪ್ರದಾಯ ಮೂಲಸಂಘದ ಸೂರಸ್ಥಗಣ. ಈ ಮೇಘಚಂದ್ರ ಪಂಡಿತದೇವರ ಪಾದಪ್ರಕ್ಷಾಳನಂ ಮಾಡಿ ತಾವು ನಿರ್ಮಿಸಿದ ಜಿನಗೇಹಕ್ಕಾಗಿ ಬಮ್ಮರ್ಾಚಯ್ಯ ಹಾಗು ರಾಚಮಲ್ಲರು ಉಕ್ತವಾದ ತಿಥಿಯಲ್ಲಿ ಎರಡು ಮತ್ತರ ಗದ್ದೆಯನ್ನು ಹಾಗು ಎರಡು ಮತ್ತರ ಹಕ್ಕಲವನ್ನು ದಾನ ಮಾಡಿದರು. ಅದೇ ಪ್ರಕಾರ ಈ ಜೈನ ನಿವಾಸದಲ್ಲಿ ವಾಸಿಸುತ್ತಿರುವ ಮುನಿಜನರ ಆಹಾರಕ್ಕಾಗಿ ಕೆಲವು ಭೂಮಿಯನ್ನು ಬಿಟ್ಟರು. ಅದೇ ಕಾಲಕ್ಕೆ ನಕರ ಸಮೂಹ ಒಂದು ಸಟ್ಟುಗ ಭತ್ತವನ್ನು, ತೆಲ್ಲಿಗ ಸಂಘದವರು ಒಂದು ಸೌಟು ಎಣ್ಣೆಯನ್ನು ಮತ್ತು ಎಲೆಗಾರರು ಕೆಲವು ಎಲೆಗಳನ್ನು ದೇವರಿಗೆ ಬಿಟ್ಟರು. ತಂಬೂರ ಅಧಿಪತಿಗಳಾದ ಜಯಕೇಶಿ ದಂಡನಾಯಕಾದಿಗಳು ದೇವರ ಪುಷ್ಪಕ್ಕಾಗಿ ಒಂದು ಹೂದೋಟವನ್ನು ದಾನ ಮಾಡಿದರು. ಫಲಶ್ರುತಿಯ ಪದ್ಯಗಳ ತರುವಾಯ ಮುಂದಿನ ಕಾಲದಲ್ಲಿ ನೀಡಿದ ಎರಡು ದಾನಗಳ ಉಲ್ಲೇಖಗಳು ಬರುತ್ತವೆ. ಈಗ ಕದಂಬ ರಾಜ್ಯವನ್ನು ಜಯಕೇಶಿದೇವನ ಮಗನಾದ ಪೆರ್ಮಾಡಿದೇವ ಮತ್ತು ತಂಬೂರ ಸಂಸ್ಥಾನವನ್ನು ಮಹಾಸಾಮಂತ ರುದ್ರಯ್ಯ ಆಳುತ್ತಿದ್ದರು. ಆನುಷಂಗಿಕವಾಗಿ ಈ ಕಾಲದ ತಂಬೂರ ಸಂಸ್ಥಾನದ ವ್ಯಾಪ್ತಿ ತಂಬೂರು ಹನ್ನೆರಡು, ಹುಲಿಗೋಡು, ಮಾವಳ್ಳಿ, ಕೋಟಿಕಿಱುವತ್ತಿ ಮುಂತಾದ ಗ್ರಾಮಗಳನ್ನು ಒಳಗೊಂಡಿದ್ದಿತೆಂದು ಹೇಳಲಾಗಿದೆ. ಮಹಾಸಾಮಂತ ರುದ್ರಯ್ಯನು ರಾಚಮಲ್ಲಯ್ಯನ ಬಸದಿಯ ದೇವರ ಚರುಗಿಗಾಗಿ ಹಾಗು ಬಸದಿಯ ಮುಂದಿನ ದಾನಶಾಲೆಗಾಗಿ ಗದ್ದೆ ಮತ್ತು ಮನೆಗಳನ್ನು ದಾನ ಮಾಡಿಕೊಟ್ಟನು. ಹತ್ತು ವರ್ಷಗಳ ನಂತರ ಜನಕನಾಯಕನು ಅದೇ ಬಸದಿಗೆ ತೋಟದ ಬಟ್ಟೆಸುಂಕವನ್ನು ಬಿಟ್ಟುಕೊಟ್ಟನು. ಈಗ ಈ ಬಸದಿಗೆ ಪದ್ಮಲದೇವಿಯ ಜೈನಗೇಹವೆಂದು ಹೆಸರು ಬಿದ್ದಿತ್ತು.

**ಶಾಸನದಲ್ಲಿಯ ತಿಥಿಗಳು**

(1) ಮೊದಲನೆಯ ತಿಥಿ ಸಾಲು 45–46 ಗಳಲ್ಲಿ "ಶ್ರೀಮಚ್ಚಾಳುಕ್ಯ ವಿಕ್ರಮವರ್ಷದ ವಿಶ್ವಾವಸು ಸಂವತ್ಸರದ ಮಾಘ ಶುದ್ಧ ಪಾಡಿವ ಆದಿತ್ಯವಾರಮು ಮುತ್ತರಾಯಣ ಸಂಕ್ರಮಣಮುಂ" ಎಂದು ಬಂದಿದೆ. ಪ್ರಸ್ತುತ ವಿಶ್ವಾವಸು ಸಂವತ್ಸರದಲ್ಲಿ ಮಾಘ ಶುದ್ಧ ಪಾಡಿವ ಸರಿಯಾಗಿ ಆದಿತ್ಯವಾರ ದಿವಸ ಬರುತ್ತಿದ್ದು, ಆ ತಿಥಿಗೆ ಸಮಾನವಾದ **ಕ್ರಿಸ್ತ ತಾರೀಖು ಆದಿತ್ಯವಾರ, 27 ಡಿಸೆಂಬರ 1125**

ಆಗುತ್ತದೆ. ಆದರೆ, ಉತ್ತರಾಯಣ ಸಂಕ್ರಮಣವು ಡಿಸೆಂಬರ 24 ನೆಯ ತಾರೀಖಿಗೆ ಆಗಿದ್ದು ಆ ದಿವಸ ಗುರುವಾರವಿತ್ತು.

(2) ಎರಡನೆಯ ತಿಥಿ ಸಾಲು 59 ರ ಮೇಲೆ "ಸಕವರ್ಷ 1081 ನೆಯ ಪ್ರಮಾದಿ ಸಂವತ್ಸರದ..............ಮಿ ಆದಿವಾರದಂದು" ಎಂದು ಬಂದಿದೆ. ಸಂವತ್ಸರದ ನಿರ್ದೇಶವು ಶಕ 1081 ನೆಯ ಗತವರ್ಷಕ್ಕೆ ಸರಿಯಾಗಿದ್ದು ಅದಕ್ಕೆ ಸಮಾನವಾದ **ಕ್ರಿಸ್ತವರ್ಷ** 1159–60 ಆಗುತ್ತದೆ. ಮಿಕ್ಕ ವಿವರಗಳು ನಾಶವಾದ ಮೂಲಕ ತಿಂಗಳು ಮತ್ತು ತಿಥಿ ಹೇಳಲಿಕ್ಕೆ ಬರುವಂತಿಲ್ಲ.

(3) ಮೂರನೆಯ ತಿಥಿ ಸಾಲು 64–65 ರಲ್ಲಿ "ಸಕವರ್ಷ 1091 ನೆಯ ವಿರೋಧಿ ಸಂವತ್ಸರದ ಪುಶ್ಯ ಸುದ್ಧ 5 ಗುರುವಾರದಂದು ಸಂಕ್ರಮಣಮುಂ ವ್ಯತೀಪಾತಮುಂ" ಎಂದು ಬಂದಿದೆ. ವಿರೋಧಿ ಸಂವತ್ಸರವು ಶಕ 1091 ಕ್ಕೆ ಸರಿಯಾಗಿ ಗತವರ್ಷವಾಗಿದ್ದು ಈ ವರ್ಷದಲ್ಲಿ ಪೌಷ್ಯ ಶುದ್ಧ ಪಂಚಮಿ ಗುರುವಾರವೇ ಬರುತ್ತದೆ. ಇವಕ್ಕೆ ಸಮಾನವಾದ **ಕ್ರಿಸ್ತ ತಾರೀಖು ಗುರುವಾರ 25 ಡಿಸೆಂಬರ 1169 ಆಗುತ್ತದೆ.** ಉತ್ತರಾಯಣ ಸಂಕ್ರಮಣವು ಅದೇ ದಿವಸ ಸರಾಸರಿ ಸೂರ್ಯೋದಯದ ನಂತರ 1 ಗಂಟೆ 45 ನಿಮಿಷಕ್ಕೆ ಸಂಭವಿಸಿತ್ತು.

**ಶಾಸನದಲ್ಲಿಯ ಭೌಗೋಲಿಕ ಉಲ್ಲೇಖಗಳು**

(1) ಕೊಂಕಣ (ಸಾಲು 6); ಕೊಂಕಣವೊಂಬಯ್ಯೂ್ಱು (ಸಾಲು 7); (2) ಪಲಸಿಗೆ ಪನ್ನಿಚ್ಛಾಸಿರ (ಸಾಲು 7, 22); (3) ಕವಡದ್ವೀಪ ಸವಾಲಕ್ಕ (ಸಾಲು 7); (4) ಬನವಾಸಿ ಪನ್ನಿಚ್ಛಾಸಿರ (ಸಾಲು 8); (5) ಮಾವಳಿಯ ಯ್ಯೂ್ಱು (ಸಾಲು 23); (6) ತಮ್ಮಿಯೂರ (ಸಾಲು 23); ತಾಂಬ್ರಾಪೂರ (ಸಾಲು 24–25); (7) ತಮ್ಮಿಯೂರ ಹನ್ನೆರಡು (ಸಾಲು 59–60); (8) ಹುಲಿಗೋಡು (ಸಾಲು 69); (9) ಮಾವಳ್ಳಿ (ಸಾಲು 60); (10) ಕೋಟೆ ಕಿಱುವತ್ತಿ (ಸಾಲು 60);

1. **ಕೊಂಕಣ ಒಂಬಯ್ಯೂ್ಱು ಮತ್ತು ಗೋವೆಯ ಕದಂಬರ ಕೊಂಕಣ :** ಇವೆರಡೂ ಒಂದೇ. ಈ ನಾಡು ಒಂಬತ್ತುನೂರು ಹಳ್ಳಿಗಳನ್ನು ಸಮಾವೇಶ ಗೊಂಡಿದ್ದ ಒಂದು ಭೂಪ್ರದೇಶ. ಇವರಲ್ಲಿ ಈಗಿನ ಗೋವಾರಾಜ್ಯ, ರತ್ನಾಗಿರಿ ಜಿಲ್ಲೆಯ ದಕ್ಷಿಣ ತುದಿಯ ಒಂದು ಒಂದೂವರೆ ತಾಲೂಕುಗಳು, ಹಿಂದಿನ ಸಾವಂತವಾಡಿ ಸಂಸ್ಥಾನ (ಈಗ ಅದು **ರತ್ನಾಗಿರಿ** ಜಿಲ್ಲೆಯ ಒಂದು ತಾಲೂಕು ಆಗಿದೆ) ಮತ್ತು ಕಾರವಾರ ಜಿಲ್ಲೆಯ ಕಾರವಾರ ಹಾಗೂ ಅಂಕೋಲಾ ತಾಲೂಕುಗಳು

ಸಮಾವೇಶಗೊಳ್ಳುತ್ತಿದ್ದವು. ಈ ಎಲ್ಲ ಭಾಗಗಳು ಕೂಡಿ ಸುಮಾರು 900 ಹಳ್ಳಿಗಳು ಆಗುತ್ತವೆ. ಈ ಪ್ರದೇಶದ ಸೀಮೆಗಳು–ಉತ್ತರಕ್ಕೆ ಕವಡಿದ್ವೀಪ, ಪೂರ್ವಕ್ಕೆ ಕೊಲ್ಹಾಪುರ ಜಿಲ್ಲೆ ಮತ್ತು ಪಲಸಿಗೆ ನಾಡು, ದಕ್ಷಿಣಕ್ಕೆ ಹೈವೆ ನಾಡು, ಮತ್ತು ಪಶ್ಚಿಮಕ್ಕೆ ಅರಬೀ ಸಮುದ್ರ.

2. **ಪಲಸಿಗೆ ಪನ್ನಿಚ್ಛಾಸಿರ :** ಇದು ಪಲಸಿಗೆ ದೇಶ, ಪಲಸಿಗೆ ನಾಡು, ಪಲಸಿಕಾ ದೇಶ- ಪಲಸೀದೇಶ, ಹಲಸಿಗೆ ಹಂನ್ನಿಸ್ಸಾಸಿರ ಮುಂತಾದ ಹೆಸರುಗಳಿಂದ ಶಾಸನಗಳಲ್ಲಿ ಪ್ರಸಿದ್ಧವಿರುತ್ತದೆ. ಕಾರವಾರ ಜಿಲ್ಲೆಯ ಹಲ್ಯಾಳ, ಸೂಪಾ, ಯಲ್ಲಾಪೂರ ತಾಲೂಕುಗಳು ಮತ್ತು ಮುಂಡಗೋಡ ತಾಲೂಕಿನ ವಾಯುವ್ಯ ಮೂಲೆಯ ಭಾಗ, ಬೆಳಗಾವಿ ಜಿಲ್ಲೆಯ ಖಾನಾಪೂರ ಹಾಗೂ ಬೈಲಹೊಂಗಲ ತಾಲೂಕುಗಳಲ್ಲಿಯ ಮಲಪ್ರಭಾ ನದಿಯ ದಕ್ಷಿಣಕ್ಕಿರುವ ಭಾಗಗಳು, ಮತ್ತು ಧಾರವಾಡ ಜಿಲ್ಲೆಯ ಕಲಘಟಗಿ, ಧಾರವಾಡ ತಾಲೂಕುಗಳು ಹಾಗೂ ಪೂರ್ವ ಭಾಗವನ್ನು ಬಿಟ್ಟು ಉಳಿದ ಹುಬ್ಬಳ್ಳಿ ತಾಲೂಕು, ಕುಂದಗೋಳ ತಾಲೂಕಿನ ನೈಋತ್ಯ ಮೂಲೆಯಲ್ಲಿಯ ಕೆಲವು ಹಳ್ಳಿಗಳು. ಇಷ್ಟು ಭಾಗಗಳನ್ನೊಳಗೊಂಡ 11 ಭೂ ಪ್ರದೇಶ. ಸುಮಾರು 1000 ಹಳ್ಳಿಗಳ ಪ್ರದೇಶವಾಗುತ್ತದೆ. ಇದರ ಮೇರೆಗಳು ಉತ್ತರಕ್ಕೆ ಮಲಪ್ರಭಾ ನದಿ ಹಾಗೂ ಕೂಂಡಿ ನಾಡು (ಸವದತ್ತಿ ತಾಲೂಕಿನ ಭಾಗ), ಪೂರ್ವಕ್ಕೆ ಬೆಳವಲ ಮೂನ್ನೂರು, ಅದರ ದಕ್ಷಿಣಕ್ಕೆ ನೈಋತ್ಯ ಮುಖವಾಗಿ ಪುಲಿಗೆರೆ ಮೂನೂರು, ಅದರ ದಕ್ಷಿಣಕ್ಕೆ ನೈಋತ್ಯ ಮುಖವಾಗಿ ಪಾನುಂಗಲ್ ಐಯ್ಯೂನ್ರು ಮತ್ತು ಪಶ್ಚಿಮಕ್ಕೆ ಕೊಂಕಣ ಒಂಬಯ್ಯೂನ್ರು.

3. **ಕವಡದ್ವೀಪ ಸವಾಲಕ್ಕ :** ಇದು ಶಾಸನಗಳಲ್ಲಿ ಕವಡಿದ್ವೀಪ, ಕವಡೆ ದ್ವೀಪ ಹಾಗೂ ಕಾಪರ್ದಿಕ ದ್ವೀಪವೆಂದು ಪ್ರಸಿದ್ಧವಿದೆ. ಸಾಂಪ್ರದಾಯಿಕವಾಗಿ ಆ ಕಾಲದಲ್ಲಿ ಉತ್ತರ ಕಿಲಾಹಾರರು ಆಳುವ ನಾಡು. ಗೋವೆಯ ಕದಂಬರು ಈ ನಾಡನ್ನು ಕೆಲವು ಸಲ ಗೆದ್ದು ತಮ್ಮ ವಶದಲ್ಲಿ ಇಟ್ಟುಕೊಳ್ಳುತ್ತಿದ್ದರು. ಕೊಂಕಣ ಒಂಬಯ್ಯೂನ್ರು ದೇಶದಲ್ಲಿ ಪ್ರವಿಷ್ಟನಾದ ರತ್ನಾಗಿರಿ ಜಿಲ್ಲೆಯ ಉಳಿದ ಭಾಗ ಕುಲಾಬಾ ಹಾಗೂ ಠಾಣೆ ಜಿಲ್ಲೆಗಳನ್ನೊಳಗೊಂಡ ಭೂಪ್ರದೇಶ ಈ ಕವಡಿ ದ್ವೀಪ.

4. **ಬನವಾಸಿ ಪನ್ನಿಚ್ಛಾಸಿರವು** ತುಂಗಭದ್ರಾ ಹಾಗೂ ವರದಾ ನದಿಗಳ ನಡುವಿನ ಪ್ರದೇಶ. ಸಾಂಪ್ರದಾಯಿಕವಾಗಿ ಇದು ಹನ್ನೆರಡು ಸಾವಿರ ಹಳ್ಳಿಗಳ ನಾಡು. ಪಲಸಿಗೆ ಪನ್ನಿಚ್ಛಾಸಿರದಂತೆ ಅದರಲ್ಲಿಯೂ ಬನವಾಸಿ–ಹಾನಗಲ್ಲ ಕದಂಬರ ಕಾಲದಲ್ಲಿ 1000–1200 ಕ್ಕಿಂತ ಹೆಚ್ಚು ಹಳ್ಳಿಗಳಿದ್ದಿರಲಿಲ್ಲ.

5. **ಮಾವಳೆಯಯ್ಯೂನ್ರು :** ಇದು ಪಲಸಿಗೆ ಪನ್ನಿಚ್ಛಾಸಿರದ ಒಂದು ಉಪಭಾಗ. ಕಲಕುಂಡಿ (ಕಲಘಟಗಿ ತಾಲೂಕು) ಶಾಸನದಲ್ಲಿ ಇದನ್ನು ವರ್ಣಿಸಿದ ಬಗೆ ಕೆಳಗಿನಂತಿದೆ :

ವಸುಧಾಕಾಮಿನಿನೋಬ್ಬ್ರದರ್ಪ್ಪಣಮೆನಿಪ್ಪಾದೇಶಮಂ ತಾಳ್ದಿ ನಿ
ಪ್ಪೊ ಸತಾಗಲ್ ಪರಿರಂಜಿಕುಂ ಪನಸಿಕಾದೇಸಂ ಸಮಂತಲ್ಲಿ ಸೋ
ಭಿಸುಗುಂ ಮಾವಳೆನಾಡು ಪಂಚಸತ ಸಂಖ್ಯಾಗ್ರಾಮದಿಃ [ತ] ತೃವಿ
ಷ್ಟಿ ಸುಕೋತಂ ಭರಣೀಪುರಂ ಸೊಗಯಿಕುಂ ನಾನಾವಿಧೋದ್ಯಾನದಿಂ ||

ಕಲಘಟಗಿ ತಾಲೂಕಿನ ತಡಸ–ಕಲಘಟಗಿ–ಹಲ್ಯಾಳ ರಸ್ತೆಯ ದಕ್ಷಿಣ ಭಾಗ, ಯಲ್ಲಾಪೂರ ತಾಲೂಕು, ಮುಂಡಗೋಡ ತಾಲೂಕಿನ ವಾಯುವ್ಯ ಮೂಲೆಯಲ್ಲಿಯ ಕೆಲವು ಹಳ್ಳಿಗಳು, ಯಲ್ಲಾಪೂರ ತಾಲೂಕಿಗೆ ಹತ್ತಿರದ ಹಲ್ಯಾಳ ತಾಲೂಕಿನ ಹಳ್ಳಿಗಳು–ಇಷ್ಟು ಭಾಗಗಳು ಮಾವಳೆ ನಾಡಿನಲ್ಲಿದ್ದವು. ಈ ನಾಡಿನ ಸೀಮೆಗಳು ಉತ್ತರಕ್ಕೆ ಹಾಗು ಪೂರ್ವಕ್ಕೆ ಹಲಸಿಗೆ ನಾಡಿನ ಉಪಭಾಗವಾದ ಕುಂದೂರು, ಐನೂರು, ದಕ್ಷಿಣಕ್ಕೆ ಹಾಗು ದಕ್ಷಿಣ ಪೂರ್ವಕ್ಕೆ ಪಾನುಂಗಲ್, ಐನೂರಿನ ಉಪಭಾಗವಾದ ಕೊಂಡಕುಳಿ ಮೂವತ್ತು ಮತ್ತು ಪಶ್ಚಿಮಕ್ಕೆ ಪಲಸಿಗೆ ನಾಡಿನ ಭಾಗ.

6. **ತಮ್ಮಿಯೂರು, ತಾಂಬ್ರಾಪುರ** : ಇವೆರಡೂ ಒಂದೇ ಗ್ರಾಮವಾಗಿದ್ದು ಅದು ಈಗಿನ ತಂಬೂರು.

7. **ತಮ್ಮಿಯೂರು ಹನ್ನೆರಡು** : ತಮ್ಮಿಯೂರು ಪ್ರಮುಖವಾಗಿದ್ದ ಹನ್ನೆರಡು ಹಳ್ಳಿಗಳ ಒಂದು ಆಡಳಿತದ ಚಿಕ್ಕ ವಿಭಾಗ.

8. **ಹುಲಿಗೋಡು** : ಈಗಿನ ಹುಲಗೂಡ – ಯಲ್ಲಾಪುರ ತಾಲೂಕಿನ ಯಲ್ಲಾಪೂರದಿಂದ ಪೂರ್ವಕ್ಕೆ ಸುಮಾರು 18 ಕಿ. ಮಿ. ಅಂತರದಲ್ಲಿ ಮತ್ತು ತಂಬೂರಿನಿಂದ ದಕ್ಷಿಣಕ್ಕೆ ಸುಮಾರು 12 ಕಿ. ಮಿ. ಅಂತರದಲ್ಲಿದೆ.

9. **ಮಾವಳ್ಳಿ** : ಕಲಘಟಗಿ ತಾಲೂಕಿನಲ್ಲಿ ತಂಬೂರಿನಿಂದ ಉತ್ತರಕ್ಕೆ ಸುಮಾರು 3 ಕಿ. ಮಿ. ಅಂತರದಲ್ಲಿದೆ.

10. **ಕೋಟೆ ಕಿಱುವತ್ತಿ** : ಯಲ್ಲಾಪುರ ತಾಲೂಕಿನಲ್ಲಿ, ಹುಬ್ಬಳ್ಳಿ–ಕಾರವಾರ ಹೆದ್ದಾರಿಯ ಮೇಲೆ ಕಲಘಟಗಿಯಿಂದ ಸುಮಾರು 15 ಕಿ. ಮಿ. ಅಂತರದಲ್ಲಿದ್ದ ಈಗಿನ ಕಿರವತ್ತಿ,

**ಶಾಸನದಲ್ಲಿಯ ಭಾಷಿಕ ಹಾಗು ಪಾರಿಭಾಷಿಕ ಶಬ್ದಗಳು**

(1) **ಸ್ಯಾದ್ವಾದ** (ಸಾ. 1) : ಜೈನ ಸಿದ್ಧಾಂತದ ಸಪ್ತಭಂಗಿ ನ್ಯಾಯ (i) ಸ್ಯಾದಸ್ತಿ (ii) ಸ್ಯಾನ್ನಾಸ್ತಿ (iii) ಸ್ಯಾದಸ್ತಿ ನಾಸ್ತಿ (iv) ಸ್ಯಾದವಕ್ತವ್ಯ (v) ಸ್ಯಾದಸ್ತ್ಯವಕ್ತವ್ಯಂ (vi) ಸ್ಯಾನ್ನಾಸ್ತ್ಯವಕ್ತವ್ಯಂ (vii) ಸ್ಯಾದಸ್ತಿನಾಸ್ತ್ಯವಕ್ತವ್ಯ ಎಂಬವು ಸಪ್ತ ಭಂಗಿಗಳು. (2) **ದಧೀಚಿ** (ಸಾ. 10) ಒಬ್ಬ ಪ್ರಖ್ಯಾತ ಋಷಿ. ಸಾಯಲೊಪ್ಪಿ ತನ್ನ ಎಲುಬುಗಳನ್ನು ದೇವರಿಗೆ ನೀಡಿದವನು. ಆ ಎಲುಬುಗಳಿಂದ ವಿಶ್ವಕರ್ಮನು ವಜ್ರಾಯುಧವನ್ನು ತಯಾರಿಸಿ

ಇಂದ್ರನಿಗೆ ಕೊಟ್ಟ. ಆ ಆಯುಧದಿಂದ ಇಂದ್ರನು ವೃತ್ರಾಸುರನನ್ನು ಸೋಲಿಸಿದ ನೆಂದು ಆಖ್ಯಾಯಿಕೆ. (3) **ರೇವಂತ** (ಸಾ. 10) : ಗುಹ್ಯಕರ ಅಧಿಪತಿ. ವಿಶ್ವ ಕರ್ಮನ ಮಗಳಾದ ಸಂಜ್ಞಾ ಹಾಗು ಸೂರ್ಯ ಇವರ ಅಶ್ವಾವಸ್ಥೆಯಲ್ಲಿಯ ಪುತ್ರ, ಅಶ್ವಗಳ ಆಧಿಪತ್ಯ ಇವನ ಕಡೆ ಇತ್ತೆಂದು ಪುರಾಣಗಳು (ಮಾರ್ಕಂಡೇಯ ಪುರಾಣ 103). ಸೂರ್ಯ ಹಾಗು ಸಂಧ್ಯಾ ಇವರ ಪುತ್ರ. ಹುಟ್ಟುವಾಗಲೆ ಖಡ್ಗ, ಕವಚ, ಧನುರ್ಬಾಣಾದಿಗಳಿಂದ ಯುಕ್ತನಾಗಿ ಅಶ್ವಾರೋಹಿಯಾಗಿದ್ದನೆಂದು ಡಾ॥ ಫ್ಲೀಟ್ (ಅಬ್ಲೂರ ಶಾಸನ E I.V ಪು. 236 ಅ. ಟಿ. 1). (4) **ಸಮ್ಯಕ್ತ್ವ ರತ್ನಾಕರ** (ಸಾ. 16) : ಜೈನ ತತ್ವದಲ್ಲಿ ಅತ್ಯಂತ ಶ್ರದ್ಧೆಯುಳ್ಳವನು. (5) **ಕಂಪಣ** (ಸಾ. 23) : ಆಡಳಿತದ ಅನುಕೂಲಕ್ಕಾಗಿ ಮೂವತ್ತು, ಎಪ್ಪತ್ತು, ನೂರು, ಮುಂತಾದ ವಿಶಿಷ್ಟ ಸಂಖ್ಯೆಯಲ್ಲಿದ್ದ ಗ್ರಾಮಗಳನ್ನೊಳಗೊಂಡಿರುವ ಭೂಭಾಗ. (6) **ಮಹತ್ತರ** (ಸಾ. 25) : ಪೆರ್ಗ್ಗಡೆಗೆ ಸಮಾನಾರ್ಥಕವಾದ ಶಬ್ದ. ಹಿರಿಯ ಅಧಿಕಾರಿ ಎಂದರ್ಥ. (7) **ಮಘವನ ಇಕ್ಕೆಯ ಪಟ್ಟಣ** (ಸಾ. 28) : ಅಮರಾವತಿ ಪಟ್ಟಣ. (8) **ಭವ್ಯಪ್ರತತಿ** (ಸಾ. 41) : ಜೈನ ತತ್ವದಲ್ಲಿ ನಂಬಿಕೆಯುಳ್ಳ ಜನರ ಸಮೂಹ. (9) **ಮಿಥ್ಯಾಪ್ರತತಿ** (ಸಾ. 41) : ಜೈನ ತತ್ವದಲ್ಲಿ ನಂಬಿಕೆಯಿಲ್ಲದಂತಹ ಜನರ ಸಮೂಹ. (10) **ಪಾದಪೂಜೆ** (ಸಾ. 43) : ಭೂಮಿ, ಮಾಗೆ, ನಿವೇಶನ ಮುಂತಾದ ಸೊತ್ತುಗಳ ಬೆಲೆ, ಪರಿಹಾರ ಧನ, ಗೌರವ ಧನ, ರಾಜಧನ, ಹಕ್ಕು ಬಿಟ್ಟು ಕೊಡುವ ಬಗ್ಗೆ ಧನ ಇತ್ಯಾದಿ ಅರ್ಥಗಳು ಈ ಶಬ್ದಕ್ಕಾಗುತ್ತವೆ. ಪ್ರಸ್ತುತ ಶಾಸನದಲ್ಲಿ ಗ್ರಾಮದ ಅಧಿಪತಿಗಳಾದ ಜಯಕೇಶಿ ಹಾಗು ಮಾದಿರಾಜು ದಂಡ ನಾಯಕರಿಗೆ, ದಾನ ಮಾಡಲ್ಪಡುವ ಭೂಮಿಗಳ ಮೇಲಿನ ತಮ್ಮ ಅಧಿಕಾರವನ್ನು ಬಿಟ್ಟುಕೊಡಲು ಸಲ್ಲಿಸಿದ ರಾಜಧನ (Royalty) ಎಂದರ್ಥವಾಗುತ್ತದೆ. (11) **ಪಿರಿಯಗಳೆ** (ಸಾ. 44) : ಒಂದು ವಿಧದ ಅಳತೆಗೋಲು. ಗಳೆಯೆಂಬುದು ಭೂಮಿ ಯನ್ನು ಉಳುವ ಸಾಧನ. ಅದಕ್ಕೆ ಜೋಡಿಸಿರುವ ಉದ್ದವಾದ ಅಳತೆಯ ಕೋಲು- ಅಳತೆಗೋಲು. ಇಂಥ ಕೋಲಿನಿಂದ ಅಳತೆಮಾಡಿದ ಎರಡು ಮತ್ತರಗಳನ್ನು ದಾನ ಮಾಡಲಾಗಿದೆ. (12) **ಮತ್ತರ** (ಸಾ. 44) : ನಿವರ್ತನ ಶಬ್ದದ ತದ್ಭವ ರೂಪ. ಭೂಮಿಯ ಕ್ಷೇತ್ರವನ್ನು ಅಳೆಯುವ ಪ್ರಮಾಣ. ಈಗಿನ ಕಾಲದ ಎಕರೆ, ಹೆಕ್ಟೇರ ವಿದ್ದಂತೆ. (13) **ಗದ್ದೆ** (ಸಾ. 44) : ಭತ್ತ ಬೆಳೆಯಲು ಯೋಗ್ಯವಾದ ಭೂಮಿ. ಗ್ರಾಮದ ಭೂಮಿಗಳಲ್ಲಿ ಸಮನಾದ ಕೆಳಗಿನ ಮಟ್ಟದ ಭೂಮಿಗಳನ್ನು ಬದುವು ಗಳನ್ನು ತಯಾರಿಸಿ ನೀರು ನಿಲ್ಲುವಂತೆ ಮಾಡಿ ಭತ್ತ ಬೆಳೆಯಲು ಅನುಕೂಲ ಮಾಡಿದ ಭೂಮಿ. (14) **ಹಕ್ಕಲು** (ಸಾ. 45) : ಗದ್ದೆಗೆ ಹತ್ತಿ ಮೇಲೆ ಮೇಲಕ್ಕೆ ಹೋಗುವ ಇಳಿಜಾರು ಭೂಮಿ. ಈ ಭೂಮಿಯಲ್ಲಿ ಸಾಕಷ್ಟು ನೀರು ನಿಲ್ಲಿಸಲು ಸಾಧ್ಯ ವಾಗುವಂತೆ ಇರುವುದಿಲ್ಲ. ಇಂಥ ಭೂಮಿಗಳಲ್ಲಿ ಜೋಳ, ರಾಗಿ, ಸಜ್ಜೆ ಮುಂತಾದ

ಕಡಿಮೆ ನೀರಿನಿಂದ ಬರುವ ಧಾನ್ಯಗಳನ್ನು ಬೆಳೆಯುತ್ತಾರೆ. (15) **ನಕರ** (ಸಾ. 51) : ನಗರ, ನಖರ ಎಂದು ರೂಪಾಂತರಗಳು ಶಾಸನಗಳಲ್ಲಿ ಕಂಡು ಬರುತ್ತವೆ. ಇದು ಗ್ರಾಮದಲ್ಲಿಯ ವರ್ತಕರ ಸಂಘ. 'ನಖರಂಗಳ್' ಎಂದು ಬಹುವಚನದಲ್ಲಿ ಪ್ರಯೋಗ ಬಂದಾಗ 'ವರ್ತಕರ ಮಂಡಳಿಗಳು' (Firms) ಎಂದು ಅರ್ಥವಾಗುತ್ತದೆ. (16) **ಸಟ್ಟುಗ** (ಸಾ. 51) : ಧಾನ್ಯ ಅಳೆಯುವ ಎಲ್ಲಕ್ಕೂ ಸಣ್ಣದಾದ ಪ್ರಮಾಣ ; ಸೌಟು, ಹುಟ್ಟು ಎಂದರ್ಥ. (17) **ತೆಲ್ಲಿಗರ ಪ್ರಕರ** (ಸಾ. 51) : ಗ್ರಾಮದಲ್ಲಿ ಎಣ್ಣೆಯನ್ನು ಉತ್ಪಾದಿಸುವ ಗಾಣಿಗರ ಸಂಘ ; ತೆಲ್ಲಿಗರಯ್ವತ್ತೊಕ್ಕಲು ಎಂದು ಶಾಸನಗಳಲ್ಲಿ ಪ್ರಸಿದ್ಧವಿದೆ. (18) **ಸೊಂಟಿಗೆ** (ಸಾ. 51) : ಎಣ್ಣೆ ಅಳೆಯುವ ಎಲ್ಲಕ್ಕೂ ಸಣ್ಣದಾದ ಪ್ರಮಾಣ. ಸೌಟು, ಪಳಿಗೆ ಎಂದೂ ಶಾಸನಗಳಲ್ಲಿ ಬರುತ್ತದೆ. (19) **ಪರ್ನೋಪಜೀವಕರ್** (ಸಾ. 52) : ಎಲೆಗಾರರು. (20) **ಗುಣಿಗ** (ಸಾ. 54) : ಇದು ಅಳತೆಗೆ ಬಳಸುವ ಒಂದು ಪ್ರಮಾಣ. ಕದಾಚಿತ್ ಗುಣ (ಹಗ್ಗ) ಶಬ್ದದಿಂದ ತದ್ಧಿತ ರೂಪವಾಗಿ ಗುಣಿಗವಾಗಿರಬಹುದು. ಈ ಹಗ್ಗವು ಸಾಂಪ್ರದಾಯಿಕವಾಗಿ ಒಂದು ವಿಶಿಷ್ಟ ಅಳತೆಯ ಪ್ರಮಾಣವಾಗಿರಬಹುದು. ಈಗಾದರೂ ಹಳ್ಳಿಗಳಲ್ಲಿ ಹಗ್ಗದಿಂದ ಭೂಮಿಯನ್ನು ಅಳೆಯುವ ಪದ್ಧತಿಯಿದೆ. ಇನ್ನೊಂದು ವಿಚಾರ : ಗುಣಿಗ ಎಂಬುದು ಒಂದು ವ್ಯಕ್ತಿಯ ಹೆಸರಾಗಿರಬಹುದು. ಗಂಗನ ಪೊಂಗದ್ಯಾಣವೆಂದು ಗದ್ಯಾಣದ ಹೆಸರು ಬರುತ್ತದೆ. ಸೆವಚಿತ್ತಗೋಲು ಎಂದು ಅಳತೆಗೋಲಿನ ಹೆಸರೂ ಬರುತ್ತದೆ. ಇದೇ ಪ್ರಕಾರ ಗುಣಿಗನ ಮತ್ತರು ಎಂದು ಆಗಿರಬಹುದು. (21) **ತ್ರಿಭೋಗಾಭ್ಯಂತರಂ** (ಸಾ. 60) : ಒಡೆತನದ ಒಂದು ಪ್ರಕಾರ. ಮೂರು ಭೋಗಗಳನ್ನೊಳಗೊಂಡ ಸ್ವಾಮ್ಯತ್ವ. ಆದರೆ ಈ ಮೂರು ಭೋಗಗಳ ಸ್ವರೂಪವೇನೆಂಬುದು ಗೊತ್ತಾಗುವುದಿಲ್ಲ. ದೇವರಿಗೆ ಒಂದು ಭಾಗ, ಬ್ರಾಹ್ಮಣರಿಗೆ ಒಂದು ಭಾಗ, ಮೂರನೆಯ ಭಾಗ ತನ್ನದೆಂದು ಕೆಲವು ಸಂದರ್ಭಗಳಲ್ಲಿ ಅರ್ಥ ಹೇಳುತ್ತಾರೆ. ಇದು ಮೂರರಲ್ಲಿ ಒಂದರ ಸ್ವಾಮ್ಯತ್ವ. ಇವು ಮೂರು ಸ್ವಾಮ್ಯತ್ವಗಳು ಒಬ್ಬನೇ ಒಡೆಯನಲ್ಲಿ ಏಕೀಕೃತವಾದ ಪಕ್ಷದಲ್ಲಿ ತ್ರಿಭೋಗಾಭ್ಯಂತರ ಸಿದ್ಧಿಯಾಗುವುದು. ಭೂಮಿಗಳನ್ನಾಗಲಿ, ಗ್ರಾಮಗಳನ್ನಾಗಲಿ, ನಾಡುಗಳನ್ನಾಗಲಿ ತ್ರಿಭೋಗಾಭ್ಯಂತರ ಸಿದ್ಧಿಯಿಂದ ದಾನಮಾಡುವ ಇಲ್ಲವೆ ಆಳುವ ಪದ್ಧತಿಯಿತ್ತು. ಏಕಭೋಗದ ಪ್ರಭು, ಉಭಯ ಸ್ವಾಮ್ಯ, ಅಷ್ಟಭೋಗ ತೇಜ ಸ್ವಾಮ್ಯ ಮುಂತಾದ ಸ್ವಾಮ್ಯತ್ವದ ಬೇರೆ ಬೇರೆ ಪ್ರಕಾರಗಳು ಶಾಸನಗಳಲ್ಲಿ ಕಂಡುಬರುತ್ತವೆ. (22) **ಚರುಗಿಂಗೆ** (ಸಾ. 61) : ನಿವೇದ್ಯಕ್ಕಾಗಿ. (23) **ಕಯಿ** (ಸಾ. 61) : ಮನೆ, ಬಣಬೆ, ನಿವೇಶನಾದಿಗಳನ್ನು ಅಳೆಯಲು ಉಪಯೋಗಿಸುವ ಒಂದು ಪ್ರಮಾಣ. ಹಸ್ತವೆಂದು ಸಂಸ್ಕೃತ ರೂಪವೂ ಶಾಸನಗಳಲ್ಲಿ ಬರುತ್ತದೆ. ಇದು ಈಗಿನ 3 ಅಡಿಗೆ ಸಮಾನವಾಗಿರಬಹುದೆಂದು ನನಗನಿಸುತ್ತದೆ. ಹಸ್ತ ಶಬ್ದಕ್ಕೆ ನಿಘಂಟುಗಳಲ್ಲಿ ಒಂದೂವರೆ ಅಡಿ ಎಂದು ಅರ್ಥ

ಕೊಡುತ್ತಾರೆ. ಆದರೆ ಕೆಲವು ಪ್ರಯೋಗಗಳಲ್ಲಿ ಈ ಅರ್ಥವು ಸಮರ್ಪಕವೆನಿಸು ವುದಿಲ್ಲ. 'ಇಕ್ಕಯಿ ಅಗಲ ಮನೆ' ಎಂಬ ಒಂದು ಉದಾಹರಣೆಯುಲ್ಲಿ ಎರಡು ಕಯಿ (ಮೂರು ಅಡಿ) ಅಗಲವಾದ ಮನೆಯನ್ನು ಪ್ರತ್ಯಕ್ಷದಲ್ಲಿ ಕಟ್ಟಲು ಸಾಧ್ಯವಿಲ್ಲ. ಆದ್ದರಿಂದ ಒಂದು ಕಯಿ ಎಂದರೆ 3 ಅಡಿ ಎಂದು ಅರ್ಥವಿರಿಸಿಕೊಳ್ಳುವುದು ಹೆಚ್ಚು ಸಮಂಜಸ. (24) **ತೋಂಟದಾಯ** (ಸಾ. 63) : ತೋಟದ ಭೂಮಿಯ ಮೇಲೆ ವಿಧಿಸಲ್ಪಡುವ ತೆರಿಗೆ. (25) **ಕುಳಿಯ ಸುಂಕ** (ಸಾ. 63) : ತೋಟಕ್ಕೆ ನೀರು ಪೂರೈಸುವ ಬಾವಿ ಇಲ್ಲವೆ ಕುಣಿಯ ಮೇಲೆ ವಿಧಿಸಲ್ಪಡುವ ವಂತಿಗೆ. (26) **ತೋಂಟದ ಬಟ್ಟೆಸುಂಕ** (ಸಾ. 66) : ಊರಿಂದೂರಿಗೆ ಸಾಗಿಸುವಾಗ ಇಲ್ಲವೆ ಸುಂಕದ ಕಟ್ಟೆಯನ್ನು ದಾಟಿಸುವಾಗ ತೋಟದ ಹುಟ್ಟುವಳಿಯ ಸರಕುಗಳ ಮೇಲೆ ವಿಧಿಸ ಲ್ಪಡುವ ಸುಂಕ. ಮೇಲ್ವಟ್ಟೆ, ಕೀಳ್ವಟ್ಟೆ ಎಂಬ ಪನ್ನಾಯದ ಎರಡು ವಿಧ ಪದಗಳಲ್ಲಿ ಈ ಬಟ್ಟೆ ಶಬ್ದ ಬರುತ್ತದೆ.

ಸಾಹಿತ್ಯದ ವಿವಿಧ ರೂಪಗಳಲ್ಲಿ ಚಂಪುವು ಶಾಸನದ ಸಹಜವಾದ ರೂಪ. ರಾಜಪ್ರಶಸ್ತಿ, ರಾಜಾವಳಿಯಲ್ಲಿಯ ವ್ಯಕ್ತಿಗಳ ಸಂಬಂಧಗಳು, ದತ್ತಿ ಮತ್ತು ಸೀಮೆಗಳ ಉಲ್ಲೇಖ ಇವುಗಳನ್ನು ಗದ್ಯದಲ್ಲಿ ಅಳವಡಿಸಿ ವರ್ಣನಾತ್ಮಕ ಭಾಗಗಳನ್ನು ಪದ್ಯಗಳಲ್ಲಿ ರೂಪಿಸುವುದು ಒಂದು ಸೊಗಸಾದ ರೀತಿ. ಇದೇ ಚಂಪುವಿನ ಸ್ವರೂಪ. ಇಂಥ **ಚಂಪೂ ರೂಪಿನಲ್ಲಿ ಸಾ**ಗಿದೆ ಈ ಶಾಸನ. ಕವಿಯ ಬಂಧವು ಲಲಿತವಾಗಿಯೂ ಮನೋಹರವಾಗಿಯೂ ಇದೆ. "ತಚ್ಚಕ್ರವರ್ತ್ತಿಯ ವಿಕ್ರಮ ಸಹಾಯನೆನಿಪ ನಚ್ಚಿನಳಿಯ', 'ತದಗ್ರಜ ಪ್ರಿಯಾತ್ಮಜ' ಮುಂತಾದ ಗದ್ಯದಲ್ಲಿರುವ ಚಿಕ್ಕ ತುಣುಕುಗಳು ಮನಃಪಟಲದಲ್ಲಿ ಮಿಂಚಿನ ರೇಖೆಗಳಂತೆ ಮೂಡಿ ನಿಲ್ಲುತ್ತವೆ. ಖ್ಯಾತ ಕಾರ್ನಾಟಕ ವೃತ್ತಗಳಲ್ಲಿಯ ಕವಿಯ ಪದ್ಯಗಳು ಹೃದಯಂಗಮವಾಗಿವೆ. 'ಸುರತರು ವೆನಲೀವಂ ವಂದಿಬೃಂದಕ್ಕಮೋಘಂ ಕರಮರಿಯರೊಳಾಗ್ಗ್ರಂ ಬಲ್ಲಿದಂ ಶೌರ್ಯ ದಿಂದಂ । ವರವಧುನಿವಹಸ್ನೇಹಸಂಬಂಧಿಗೀತಂ ಸ್ಮರಶರಸದೃಶಾಕಾರನೀ ಮಾದಿರಾಜಂ ॥' ಎಂದು 16ನೆಯ ಪದ್ಯವು ಕಾಳಿದಾಸನ 'ಮಧುಕರ ಮದಿರಾಕ್ಷ್ಯಾ: ಶಂಸ ತಸ್ಯಾಃ ಪ್ರವೃತ್ತಿಂ ವರತನುರಥವಾಸೌ ನೈವ ದೃಷ್ಟಾ ತ್ವಯಾ ಮೇ। ಯದಿ ಸುರಭಿಮವಾಪ್ಸ್ಯಸ್ತನ್ಮುಖೋಚ್ಛ್ವಾಸಗಂಧಂ ತವ ರತಿರಭವಿಷ್ಯತ್ಪುಂಡರೀಕೇ ಕಿಮಸ್ಮಿನ್ ॥' ಪದ್ಯವನ್ನು ಶ್ರುತಿಮಾಧುರ್ಯದಲ್ಲಿ ನೆನಪಿಗೆ ತಂದು ಕೊಡುತ್ತದೆ. ಶಾಸನದ ಸವಿಯನ್ನು ಅನುಭವಿಸಲು ಅದನ್ನು ಪುನಃ ಪುನಃ ಗಟ್ಟಿಯಾಗಿ ವೃತ್ತಗಳ ದಾಟಿಯಲ್ಲಿ ಹೇಳಬೇಕು. ಅಂದರೆ ಮೇಲೆ ಹೇಳಿದ ಮಾತುಗಳು ಮನವರಿಕೆಯಾಗುವವು. ಹೀಗಿದ್ದರೂ ಶಾಸನಕವಿ ಅಜ್ಞಾತನಾಗಿರುತ್ತಾನೆ. ಆತನ ಆಶ್ರಯದಾತ 'ಸುಕವಿ ಶುಕಫಳೋಪೇತಚೂತೋರ್ವಿಜಾತಂ' ಎಂದು ವರ್ಣಿಸಲ್ಪಟ್ಟ ಮಂತ್ರಿಶಿಖಾಮಣಿ ಬಮ್ಮರ್ಚಯ್ಯನಿದ್ದಂತೆ ಕಾಣುತ್ತದೆ.

**ಶಾಸನ ಪಾಠ**†

[ಛಂದಸ್ಸುಗಳು: ಅನುಷ್ಟುಪ್: 1, 30, 31; ಮತ್ತೇಭವಿಕ್ರೀಡಿತಃ 2, 6, 8, 15, 25, 26; ಮಹಾಸ್ರಗ್ಧರೆಃ 3, 4, 7, 21, 24; ಕಂದಃ 5, 9, 10, 13, 14, 18, 19, 20, 22, 23, 27, 28; ಚಂಪಕಮಾಲೆ: 11, 12, 32; ಮಾಲಿನಿ: 17; ಶಾಲಿನಿ: 29.]

[1]ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂ
ಜೀ[2]ಯಾತ್ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ ॥ [1 *]

[3]ಸ್ವಸ್ತಿ[। *] ಸಮಸ್ತಭುವನಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರಂ ಪರಮಭಟ್ಟಾರಕಂ ಸತ್ಯಾಶ್ರಯಕುಳತಿಳಕಂ ಚಾ[4]ಳುಕ್ಯಾಭರಣಂ **ಶ್ರೀಮತ್ತ್ರಿಭುವನಮಲ್ಲದೇವರ** ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿಪ್ರವರ್ದ್ಧಮಾನಮಾಚನ್ದ್ರಾರ್ಕತಾರಂ ಸಲುತ್ತಮಿರೆ॥ [5]ತಚ್ಚಕ್ರವರ್ತ್ತಿವಿಕ್ರಮಸಹಾಯನೆನಿಪ ನಚ್ಚಿನಳಿಯಂ ॥ವೃ॥

ಅರಿಭೂಭೃತ್ಕರಿಸಿಂಹನರ್ತ್ಥಿಜನಚಿನ್ತಾರತ್ನನಾಶಾನ್ತಭಾ-
ಸುರಕೀರ್ತ್ತಿ ಪ್ರಮದಾ[6]ಪ್ರಿಯಂ ವಿಬುಧಕೀರವ್ರಾತಮಾಕಂದಭೂ-
ಮಿರುಹಂ ಕೊಂಕಣ ಚಕ್ರವರ್ತ್ತಿತಿಳಕಂ ಶ್ರೀಮೂರ್ತಿನಾರಾಯಣಂ
ನರನಾಥಂ **ಜಯಕೇಸಿದೇವ**ನೆಸೆದಂ ಕಾದಂಬ[7]ಕಣ್ಠೀರವಂ ॥ [2 *]

ವ॥ ಆ ಕೊಂಕಣಾಧೀಶಂ **ಕೊಂಕಣವೊಂಬಯ್ನೂಱುಮಂ ಪಲಸಿಗೆ ಪನ್ನಿಚ್ಛಾಸಿರಮುಮಂ ಕವಡದ್ವೀಪ ಸವಾಲಕ್ಕಮುಮ**ನೇಕಚ್ಛತ್ರದಿಂದಾಳುತ್ತ[8]ಂ ಸುಖದಿನಿರೆ [॥ *] ತನ್ಮಹೀಶ್ವರನಿಂ ಪಿರಿಯಳು **ಪದ್ಮಲದೇವಿಯ** ಮನೋವಲ್ಲಭಂ **ಹಾಕಿಬಲ್ಲದೇವಂ ಬನವಾಸಿ ಪನ್ನಿಚ್ಛಾಸಿರಮ**ನಾಳುತ್ತಂ ಸು[9]ಖದಿನಿರೆ ॥ವೃ॥

ವಿದಿತಂ ರೂಪಿಟ್ಟರಾತಿವ್ರಜಕೆ ವಿವಿಧವನ್ದಿವ್ರಜಕ್ಕಮ್ಮ ಸೌಭಾ-
ಗ್ಯದೆ ನಚ್ಚಿಂದಿರ್ಪ್ಪ ಯೋಷಿಜ್ಜನಕೆ ತುರಗಬೃಂದಾಳಿಗಣ್ಮಿಂ ಗೆಲಲ್ಸಂ-
ಪದದಿಂ[10]ದಾರ್ತ್ತೀಯಲೆನ್ತುಂ *ವಸಕೆವರಲ್ಕಾರೂಢದೊಳ್ದಾ* ನವಧ್ವಂ-
ಶಿ ದಧೀಚಿ ಶ್ರೀಸುತಂ ತಾನೆನಲತಿಶಯ ರೇವನ್ತನೀ ಹಾಕಿಬಲ್ಲ ॥ [3 *]

† 1954-58ರಲ್ಲಿ ನಾನು ಹುಬ್ಬಳ್ಳಿ-ಕಲಘಟಗಿಯಲ್ಲಿ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟನಾಗಿದ್ದ ಸಮಯದಲ್ಲಿ ತೆಗೆದುಕೊಂಡ ಶಾಸನದ ಅಚ್ಚುಗಳಿಂದ. ಸಾಲಿನ ಮೇಲ್ಭಾಗದಲ್ಲಿ ಬರುವ ಸಣ್ಣ ಅಂಕೆಗಳು ಶಾಸನದ ಸಾಲುಗಳನ್ನು ಸೂಚಿಸುತ್ತವೆ. *ವೃತ್ತದ ಸಲುವಾಗಿ ''ವಸಕೆವರಲಿರೂಢದೊಳ್ದಾ'' ಎಂದು ಓದಿರಿ

ಆ ಮಣ್ಡಳಿಕ ತ್ರಿಣೇತ್ರ[11]ನ ಮನೋವಲ್ಲಭೆ ॥
ಸುವತೀ ಸದ್ರೂಪಮನ್ತಾಳ್ದಿದ ಸುರಕುಜವೆಂಬನ್ತೆ ವಾರಾಂಗನಾರೂ-
ಪದ ಚಿನ್ತಾರತ್ನಮೆಂಬನ್ತೆಸೆವ ಸುರಭಿಕಾನ್ತಾವತಾರ[12]ತ್ವಮಾದ-
ನ್ತುದಿತಂ ಶ್ರೀಹಾಕಿಬಲ್ಲಪೃಥುತರ ಹೃದಯಾವಾಸಿಕೂರ್ತ್ತಿವಳಾನಂ-
ದದೆ ಲಕ್ಷ್ಮಾದೇವಿ ಪಂದಿಪ್ರತತಿಗೆ ಕನಕಾನೀಕಮಂ ರಾಗ[13]ದಿಂದ ॥ [4 *]

ಕಂ ॥

ಪರಿಜನ ಕಲ್ಪಕುಜಾತೆಗೆ
ನಿರತಿಶಯ ಸುಖಾನುಭವನವಿಭವೆಗೆ ಧರೆಯೊ-
ಳ್ದೊರೆಯಾಪ್ಪರ್ದ್ಮಲದೇವಿಗೆ
ನಿರನ್ತರಂ ಹಾಕಿ[14]ಬಲ್ಲನರಸಿಗೆ ಸತಿಯರ್ ॥ [5*]

ತತ್ಸಚಿವೋತ (ತ್ತ) ಮಂ ॥ವೃ॥

ಮನಮಂ ಶ್ರೀಜಿನರಾಜಚಾರುಚರಣಾಂಭೋಜಾತದೊಳ್ನಿಷ್ಠೆಯಿಂ
ತನುವಂ ಜೈನ ವಿಶುದ್ಧ ಮಾರ್ಗ್ಗಚರಿತ[15]ವ್ಯಾಪಾರದೊಳ್ಸಂತತಂ
ಧನಮಂ ಸದ್ಬುಧರೊಳ್ ಯಶೋವನಿತೆಯಂ ದಿಗ್ಭಿತ್ತಿಯೊಳ್ ಕೂಡಿ ಸ-
ಜ್ಜನಚಿನ್ತಾಮಣಿ **ಬಮ್ಮಚಯ್ಯ**ನೆಸೆದಂ ಸಮ್ಯ[16]ಕ್ತ್ವರತ್ನಾಕರಂ॥ [6*]
ಜಿನಪಾದಾಂಭೋಜಭೃಂಗಂ ಮನುಚರಿತನಪಾರಶ್ರುತಾಂಭೋಧಿಸಂವ-
ರ್ದ್ಧನಚಂದ್ರಂ ನೀತಿ ರತ್ನಾಕರನಮಳಿನಕಾದಂಬರಾಜ್ಯಾಂಬುಜೊ[17]ನ್ಮೀ-
ಳನತಿಗ್ಮದ್ಯೋತಿ ವಿಸ್ತಾರಿತ **ಧವಳಯಶಂ** ಗೋತ್ರವಿಸ್ತಾರನುರ್ವ್ವೀ-
ವಿನುತಂ ಶ್ರೀ ಬಮ್ಮಚಯ್ಯಂ ಸುಕವಿಶುಕಫಳೋಪೇತಚೂತೋರ್ವ್ವಿ
ಜಾತಂ ॥ [7 *]

ತದನುಜಂ[18] ॥ವೃ॥

ಅಸತೀಸಂಗಮದೂರನಿಷ್ಟಜನತಾಕಲ್ಪದ್ರುಮಂ ಜೈನಪಾ-
ದಸರೋಜಾನತ ಭೃಂಗನೂರ್ಜ್ಜಿತಯಶಂ ವಾರಾಂಗನಾ ಚಿತ್ತಜಂ
ವಸುಧಾಧೀಶ್ವರ ಹಾಕಿಬ[19]ಲ್ಲನೃಪನಾಮಾತ್ಯಂ ದಯಾಂಭೋಧಿ ತಾ-
ನೆಸೆದಂ ಸದ್ಗುಣಿ **ರಾಚಮಲ್ಲ**ನಸುಹೃಚ್ಛೈಲೇಂದ್ರವಜ್ರಾಯುಧಂ ॥ [8 *]

ಕ ॥

ಜನಪತಿ **ಮಾವುಲಿದೇವಂ**
ತನಗಾಳ್ದಂ ಗುರು[20]ಗಳಯ್ಯಪಣ್ಡಿತದೇವ-
ರ್ವ್ವಿನಯನಿಧಿ ಮಾಳಿಯಕ್ಕಂ
ಜನನಿಯೆನಲು ರಾಚಮಲ್ಲನನ್ತಾರ್ದ್ಧನ್ಯರ್ ॥ [9 *]

ವ॥ ಅನ್ತಾ ಸಚಿವೋತ್ತಮರಿರ್ವ್ವರುಂ ಶ್ರೀಮನ್ಮಹಾಮಣ್ಡಳೇಶ್ವರಂ[21] ಹಾಕಿಬಲ್ಲದೇವಂಗೆ ಪರಮವಿಸ್ವಾಸಭೂಮಿಗಳಾಗಿರ್ದ್ದೊಂದು ದಿವಸಂ ಧರ್ಮ್ಮಕಥಾ ಪ್ರಸಂಗದಿಂದಮಿರೆ ಹಾಕಿಬಲ್ಲದೇವಂ ತಮ್ಮಯ್ಯ ಮಾವುಲಿ[22]ದೇವಂಗೆ ಪರೋಕ್ಷ-ವಿನಯಾರ್ತ್ಥವಾಗೊಂದು ಬಸದಿಯುಂ ಮಾಡಿಸಲುದ್ಯುಕ್ತನಾಗಿ ತಮ್ಮ ಜಿಯುಗಂ ಜಯಕೇಶಿದೇವನಾಳ್ವ **ಪಲಸಿಗೆ ಪನ್ನಿಚ್ಛಾಸಿರ**[23]**ದೊಳಗಣ ಕಂಪಣಂ ಮಾವಳಿಯು-ಯ್ಯ್ಯಾಱಕ್ಕಂ** ವಿಶಿಷ್ಟಮೆನಿಪ **ತಮ್ಮಿಯೂರೊಳ್ಮಾಡಿಸಿವೆಂದು** ತನ್ಮಪತ್ರಗ್ಗೆ ನಿಯಾಮಿಸುವುದು ಮೂವರತಿ[24]ಪ್ರಸನ್ನಮನಸ್ಕರಾಗಿ॥

ಕಂ!!

ಪಲಸಿಗೆ ವಿಷಯಾನ್ತರದೊ-
ಳ್ಫಲಭರಿತ ವಿನಮ್ನಚೂತವಲ್ಲೀಕುಳದಿಂ
ಮಲವಿರಹಿತ ಜಿನನಿಳಯದಿ-
ನಿಳಿಪುದು ತಾಂಬ್ರಾ[25]ಪುರಂ ಪುರಂದರಪುರಮಂ ॥ [10*]

ವೃ॥

ಸೊಗಯಿಪ ಪೂಗಸಂಕುಳದಶೋಕಮಹೀಜದ ಪೆಂಪುವೆತ್ತ ಸಂ-
ಪಗೆಯ ಪೊದಳ್ದು ಪೂತ ನವಪಾಟಳದೊಪ್ಪುವ ನಾಳಿ[26]ಕೇರದಿಂ
ಬಗೆಗೊಳಿಸಿರ್ಪ್ಪ ಚೂತಲತೆ ಕರ್ತ್ತಲಿಸಿರ್ಪ್ಪೆಲೆವಳ್ಳಿ ಬಳ್ಳಿ ಮ-
ಲ್ಲಿಗೆಗಳ ಲೀಲೆ ಕಣ್ಗೆಸೆದು ತೋಱುಗುಮಾ ಪುರಮೆನ್ತು ನೋರ್ಪ್ಪಡ ॥
[11*]

ಬಳಸಿದ ಕೋಟೆ[27]ಯಿಂದೊಳಗೆ ಸೋಭಿಪ ಸೌಧಗೃಹಂಗಳಿಂ ಮನಂ-
ಗೊಳಿಸುವ ಹರ್ಮ್ಯ ರಾಜಿಯಿನನಂಗರಸಾರ್ಣ್ನವದೇರಿಯಿಂತೆ ಸಂ-
ಗಳಿಸುವ ಸೂಳೆಗೇರಿಗಳಿನುನ್ನತ [28]ದೇವಗೃಹಂಗಳಿಂದಮೇ-
ನಿಳಿಪುದೊ ತಮ್ಮಿಯೂರ್ಮ್ಮಘವನಿಕ್ಕೆಯ ಪಟ್ಟಣಮಂ ನಿರನ್ತರಂ ॥
[12*]

ಕಂ॥

ಪ್ರಿಯವಾಕ್ಯಂ ಮನುಚರಿತಂ
ಪಯಃಜಸನ್ನಾಭಿ ಪದಪದೋ[29]ರುಹಭೃಂಗಂ
ಜಯಲಕ್ಷ್ಮೀ (ಕ್ಷ್ಮಿ) ಕಾನ್ತನೆನಿಸಿದ
**ಜಯಕೇಸಿ ಚಮೂಪನಾ** ಪುರಕ್ಕಧಿನಾಥಂ ॥[13*]

ಶ್ರೀ ರಮಣಿಯನಸುಹೃದ್ಬಳ-
ವಾರಿಧಿಯೊಳ್ ಕಡೆದು ಪಡೆದ[30] ನಿಜಭುಜವಿಜಯಂ
ವೀರಾವತಾರನೆನಿಸಿದ
ಧೀರಂ ಜಯಕೇಸಿರಾಜದಣ್ಡಾಧೀಶಂ ॥ [14*]

ವೃ॥

ಜನಕಂ ಕೊಂಕಣ ರಾಜ್ಯನಿಸ್ತರಣಸುಪ್ರ್ವೀಪ್ರಸ್ತುತಂ ಜಂಗದೇ-
ವನಿ[31]ಳಾಕಾನ್ತೆಗವೊಳ್ಪುವೆತ್ತ ಗಿರಿರಾಜಾಪತ್ಯೆಗಂ ಪಾಟಿ ತಾ-
ನೆನಿಪೆಮ್ಮಾಜಲದೇವಿ ತಾಯೆನಿಪ ವಿಖ್ಯಾತಾನ್ವಿತಂ ಬಾಪ್ಪ ಸ-
ಜ್ಜನಸೇವ್ಯಂ ಜಯಕೇಸಿಯನ್ತೆ ಪೆಜ[32]ರಾರ್ದ್ಧನ್ಯರ್ದ್ಧರಾಜಚಕ್ರದೊಳ್॥
[15*]

ತದನುಜಂ॥

ಸುರತರುವೆನಲೀವಂ ವಂದಿಬೃಂದಕ್ಕವೋಘಂ
ಕರಮರಿಯುರೊಳಾಗ್ಗ್ರಂ ಬಲ್ಲಿದಂ ಶೌರ್ಯ್ಯದಿಂದಂ
ವರವಧು ನಿವಹಸ್ನೇಹ[33]ಸಂಬನ್ಧಿ ಗೀತಂ
ಸ್ಮರ ಶರಸದೃಶಾಕಾರನೀ **ಮಾದಿರಾಜಂ**† ॥ [16*]

ತದಗ್ರಜಪ್ರಿಯಾತ್ಮಜಂ ॥

ಸುಕವಿನಿಕರವನ್ದಿ ವ್ರಾತ ಕಲ್ಪಾವನೀಜಂ
ಪ್ರಕುಪಿತರಿಪು[34]ರಾಜಧ್ವಂಶಿ ಕೀರ್ತ್ಯಂಗನೇ (ನೀ) ತಂ
ಸಕಳಗುಣಗಣಾಳಂಕಾರವಾಣೀವಿಳಾಸಂ
ಪ್ರಕಟಿತಮನುಮಾರ್ಗಂ ಬಾಪ್ಪರೆ **ನಾರಸಿಂಹ** ॥ [17*]

ವ॥ ಅನ್ತು ತಮ್ಮ ಮೂವರು[35]ಮಿಷ್ಟವಿಷಯ ಸುಖಮನನುಭವಿಸುತ್ತ ಮಿರೆ [11*] ಮಹಾಪ್ರಧಾನಂ ಬಮ್ಮ್ರಜಯ್ಯನಾಯಕನುಂ ರಾಜಮಲ್ಲನಾಯಕನುಂ ಧರ್ಮ್ಮಪ್ರಸಂಗಮಂ[36]ಮಾಡಿ ನೆಲನಂ ಪಡೆದು ಜೈನಮಂದಿರಮಂ ಸಮೆದು॥ಕಂ॥

ಸುರಪತಿಯ ರಿತುವಿಮಾನವೊ
ಧರಣೇಂದ್ರನ ತೊಳಪ ಭುವನವೋ ಖಚರಮಹೀ-
ಶ್ವರನ ಮಣಿಖ[37]ಚಿತ ಹರ್ಮ್ಯವೊ
ಧರೆಯೊಳ್ ನಿರುಪಮಮಿದೆನಿಸಿತೀ ಜಿನಗೇಹಂ ॥ [18*]

**ತಚ್ಛಿಷರ್** ॥

---

†ವೃತ್ತ: ಅತಿಶಾಕ್ವರಿ ಮತ್ತು ಶಾಕ್ವರಿಗಳ ಮಿಶ್ರ ವೃತ್ತವಾಗಿದೆ. ಮೊದಲನೆಯ ಎರಡು ಪಾದಗಳು ಅತಿಶಾಕ್ವರಿಯ ಭೇದಗಳಲ್ಲಿ ಒಂದಾದ ಮಾಲಿನಿ ವೃತ್ತದಲ್ಲಿದ್ದು ಉಳಿದ ಎರಡು ಪಾದಗಳು ಶಾಕ್ವರಿಯ ಒಂದು ಪ್ರಕಾರವಾಗಿವೆ. ಈ ಪಾದಗಳ ರಚನೆ ನಗಣ, ನಗಣ, ತಗಣ, ತಗಣ, ಎರಡು ಗುರುಗಳು ಹೀಗೆ ಹದಿನಾಲ್ಕು ಅಕ್ಷರಗಳನ್ನು ಹೊಂದಿದೆ

ಸಿದ್ಧಾನ್ತತ್ರಯುಮೆಂಬುದು
ಸುದ್ಧಗೆಯೆನಿಸಿದುದು **ವಾಸುಪೂಜ್ಯಮುನೀಂದ್ರಂ**
ಸಿದ್ಧಾನ್ತ ಚಕ್ರ[38]ವರ್ತ್ತಿಜ-
ಗದ್ಧವಳಿತಕೀರ್ತಿಯೆಂಬುದೊಂದಚ್ಚರಿಯೇ ॥ [19*]

ಜಿನಸಮಯುವಾರ್ದ್ಧಿಚಂನ್ದ್ರಮ-
ನನಂಗಭೂಜಪ್ರಭಂಜನಂ ಭವ್ಯಲಸ-
ದ್ವನಜವನದಿ[39]ನಕರಂ ಬಾ-
ಪ್ಪನೆ ನೆಗರ್ದ್ದರ್ದ್ಧರೆಯೊಳಯ್ಯಪಣ್ಡಿತದೇವರ್ ॥ [20 *]

ತತ್ಸಹಧರ್ಮ್ಮಿಗಳ್ ॥ವೃ॥
ಮದವತ್ಕಂದರ್ಪ್ಪಧಾತ್ರೀರುಹವಿಳಯಮಹಾಮಾರುತಂ ವಾಗ್ವಧೂಟೀ[40]
ಸದಳಂಕಾರಾವತಂಸಂ ವಿಳಸಿತ ಜಿನಧರ್ಮ್ಮೋದಯಾದ್ರೀಂದ್ರರಮ್ಯಾ
[ । * ]

ಸ್ಪದಶೀತದ್ಯೋತಿ ಭವ್ಯಪ್ರಕರಸಲಲಿತೇಷ್ಟಾರ್ತ್ಥಸಿದ್ಧಿಪ್ರದಶ್ರೀ
ಪದಪದ್ಮಂ **ಮೇಘ[41]ಚನ್ದ್ರ**ವ್ರತಿಪತಿವಿಶದೋತ್ತುಂಗಕೀರ್ತ್ತಿಪ್ರಮೋದಂ॥
[ 21 * ]

ಕ ॥

ಅತಿಶಯ ವಿನಮ್ರಭವ್ಯಪ್ರ-
ತತಿಪಯೋಜಾತತೀವ್ರತೇಜಂ ಮಿಥ್ಯಾ
ಪ್ರತತಿಗಿರಿವಜ್ರದಣ್ಡಂ
ಕ್ಷಿತಿತಳದೊಳ್[42] ಮೇಘಚನ್ದ್ರಪಣ್ಡಿತದೇವರ್ ॥ [ 22 * ]

ಅನ್ತಾ ಶ್ರೀಮೂಲಸಂಘದ ಸೂರಸ್ಥಗಣ ಗಗನಚನ್ದ್ರರೆನಿಸಿದ ಮೇಘಚನ್ದ್ರ ಪಣ್ಡಿತದೇವರ ಪಾದಪ್ರಕ್ಷಾಳನಂ ಮಾ[ಡಿ][43] ಜಯಕೇಶಿ ದಣ್ಡನಾಯಕಂಗಂ ಮಾದಿರಾಜಯ್ಯ ದಣ್ಡನಾಯಕಂಗಂ ಪಾದಪೂಜೆಯುಂ ಕೊಟ್ಟು ಹೊಸಗೆಱೆಯ ಕೆಳಗಣ ನೀರ್ಪ್ಪರಿಯೊಳ್ ವಾವಣಯ್ಯನಾಯಕ[ನ ಬ][44] ಸದಿಯ ಕೆಯ್ಯಹಡುವಣ ಹತ್ತುಗೆಯೊಳಕಸಾಲಿಗೆಱೆಯಿಂ ಬಡಗಲ್ ಪಿರಿಯ ಗಳೆಯೊಳೆರಡು ಮತ್ತರ್ಗ್ಗದ್ದೆ ಯ್ಮನದಱ ಹಡುವಣ ಹತ್ತುಗೆಯೊ[ಳೆ][45]ರಡು ಮತ್ತರು ಹಕ್ಕಲುಮಂ ಪಡೆದು **ಶ್ರೀ ಮಚ್ಚಾಳುಕ್ಯ ವಿಕ್ರಮ ವರ್ಷದ ವಿಶ್ವಾವಸು ಸಂವತ್ಸರದ ಪುಷ್ಯಶುದ್ಧ ಪಾಡಿವ ಆದಿತ್ಯವಾರಮುಮುತ್ತರಾಯಣ [ಸಂಕ್ರ][46]** ಮಣಮುಂ ಸಮನಿಸಿ ಬಂದ ಪುಣ್ಯ ತಿಥಿಯೊಳಾ ಮೇಘಚನ್ದ್ರಪಣ್ಡಿತದೇವರ್ಗ್ಗೆ ಧಾರಾಪೂರ್ವ್ವಕಂ ಮಾಡಿ ಕೊಟ್ಟು ॥ ಕಂ ॥

ಶ್ರೀಮಜ್ಜಿನಸಮಯ ಲಸ-
ದ್ವ್ಯೋಮಾ[ಳಂಕಾರ][47] ತಿಗ್ಮಕಿರಣನಖಿಳಜನ-
ಪ್ರೇಮೋದ್ವಿಭಾಸಿ ಮನ್ತ್ರಿಶಿ-
ಖಾಮಣಿ ವಿಖ್ಯಾತ ಲಕ್ಷ್ಮಿಗಾಮ್ಮ೯ಂ ಬಮ್ಮ೯ಂ ॥ [ 23 * ]

ಅನ್ತುಮಲ್ಲದೆಯುಂ ॥ವೃ॥

ಜನಕಂ ಶ್ರೀಬಲ್ಲಿರಾ [ಜಂ ಗುಣ][48] ಗಣವತಿ ತಾಯ್ಮಾಳಿಯಕ್ಕಂ ಪ್ರಣೂತಂ
ಜಿನನಾಪ್ತಂ ಗೋಪನನ್ದಿ ಪ್ರತಿ ಗುರು ಸತಿ ನಿಟ್ಟಿಯಬ್ಬೆ ಭಾಗವ್ವೆ ಪುತ್ರಂ
ಜನವಂದ್ಯಂ ಶಾನ್ತಿವಮ್ಮ೯ಂ ಪತಿ ವಿಶದ [ಯಶಂ][49] ಹಾಕಿಬಲ್ಲಕ್ಷಿತೀಶಂ
ಮನುಮಾಗ್ಗ೯ಂ ರಾಚಮಲ್ಲಂ ತನಗನುಜನೆನೆಲ್ ಬಮ್ಮ೯ಚಯ್ಯಂ ಕೃತಾರ್ತ್ಥಂ ॥ [ 24 * ]

ಮತ್ತಂ ॥ವೃ॥

ವಸುಧಾಳಂಕೃತಮಪ್ಪ ಜೈನಗೃಹಮಂ ಸ್ವ[ಸ್ವಾಮಿ][50] ಪೇಳಲ್ಕೆ
ಮಾಡಿಸಿ ತಜ್ಜೈನ ನಿವಾಸವಾಸ ಮುನಿಪಗ್ರಾ೯ಹಾರ ದಾನಕ್ಕೆ ಪೆಂ-
ಪೆಸೆಯಲ್ ಭೂಮಿಯನಿತ್ತು ಸದ್ವಿಬುಧರತ್ಯಾನನ್ದದಿಂ ಕೂರ್ತು೯ [ವಾ]-
[ಸಿ][51] ಸಲೀ ಬರ್ಮ೯ಚ ರಾಚಮಲ್ಲರಸದಿನ್ನೇವಣ್ಣಿಪೋಂ ಬಣ್ಣಿಪ ॥ [ 25 * ]

ಮತ್ತಮಾ ಬಸದಿಗೆ ॥

ನಕರಂ ಸಟ್ಟುಗವತ್ತಮುಂ ಮನವೊಱಲ್ದಾನನ್ದದಿಂ ತೆಲ್ಲಿಗ-
ಪ್ರಕರಂ ಸೊಂಟಿ[ಗೆ][52] ಯೆಣ್ಣೆಯುಂ ಪೊಱೆಗೆ ಪೇಱಿಂಗಾಪ್ತು೯-ಪನ್ದೊ೯ಂಪಱೇ-
ವಕರಯ್ವತ್ತನೊಱಲ್ದು ಸೂಱೆಲೆಯುನತ್ಯುತ್ಸಾಹದಿಂ ಕೊಟ್ಟರಿನ್ತು-
ಕುಭೃದ್ರಾಜಧರಿತ್ರಿವಾರ್ದ್ಧಿದಿಗಿ[ಭಂ][53] ಚನ್ದ್ರಾರ್ಕರುಳ್ಳನ್ನೆಗಂ॥ [ 26 * ]

ಮತ್ತಂ ಜಯಕೇಸಿ ದಣ್ಡನಾಯಕನುಂ ಮಾದಿ[ರಾ]ಜಯ್ಯನುಂ ನರಸಿಂಹ ದೇವನುಂ ದೇವಗ್ಗ೯ ಪುಷ್ಪಫಳಕ್ಕೆ ಬಗ್ಗಱೆಯ ಬಡಗಣ ನೀರ್ವ೯ಯ್ಯ೯ಳ್ ಮಾಲ ಗಾಱ[54] ತೋಂಟದ ಮೂಡಣ ಹತ್ತುಗೆಯೊಳು ಗುಣಿಗನೊಂ[ದುಮ]ತ್ತರ್ತೊಂಟ ಮಂ ತಮಗೆ ಶ್ರೇಯೋ ನಿಮಿತ್ತಮಾಗಿ ಮೇಘಚನ್ದ್ರದೇವಗ್ಗ೯ ಧಾರಾಪೂರ್ವ್ವಕಂ ಮಾಡಿಕೊಟ್ಟರು ॥

[55]ಇದನೆಸೆದಿರೆ ಪಾಳಿಸಿದ-
ಪುರ್ಣ್ಯದಿಂ ಗಂಗಾದಿ ಪುಣ್ಯತೀರ್ತ್ಥಸ್ಥ[ಳದೊಳ್]
ವಿದಿತಂ ಗೋಸಿಕುರುಂಬಮು-
ನುದಿತಂ ಸದ್ವಿಜರ್ಗೆ ಕೊಟ್ಟ ಫಳಮಂ ಪಡೆವರ್ ॥ [ 27 * ]

ಅದನೊಲ್ಲದೆ ಕಿಡಿಸಿದವ-
ರ್ಗೆ[56]ದಮಳ ಸುಗತಿಯೆನೆ ಬಿಸುಟು ಗೋತ್ರಸಮೇ [ತಂ ]
............ಕ್ಪ ಶಸ್ತ್ರದೇಹ.
ದಿಂದೊದವಿದ ನರಕ ದುಃಖಮಂ ತವೆಯುಂಬರ್ ॥ [28*]

ಸಾಮಾನ್ಯೋಯಂ ಧರ್ಮ್ಮಸೇತುರ್ನೃ[57]ಪಾಣಾಂ
ಕಾಲೇಕಾಲೇ ಪಾಲನೀಯೋ ಭವದ್ಭಿಃ
..................ಪಾರ್ತ್ಥಿವೇನ್ದ್ರಾನ್
ಭೂಯೋ ಭೂಯೋ ಯಾಚತೇ ರಾಮಚನ್ದ್ರಃ ॥ [29*]

ಬಹುಭಿರ್ವಸುಧಾ ಭುಕ್ತ್ವಾ (ಕ್ತಾ) ರಾಜ[58]ಭಿಃ ಸಗರಾದಿಭಿಃ
ಯಸ್ಯ ಯಸ್ಯ ಬುದಾ ಭೂ.....................[॥] [30*]

.........ಪರದತ್ತಾಂ ವಾ ಯೋ ಹರೇತ ವಸುಂಧರಾಂ
ಷಷ್ಟಿರ್ವ್ವರ್ಷಸಹಸ್ರಾ(ಸ್ರಾ)ಣಿ ವಿಷ್ಟಾಯಾಂ ಜಾಯತೇ ಕೃಮಿಃ [31*]

[59]ಸ್ವಸ್ತಿ [1*] **ಶ್ರೀ ಸಕವರ್ಷ 1081 ನೆಯ ಪ್ರ[ಮಾಥಿ ಸಂವತ್ಸರದ]...... ............ ಮಿ ಯಾದಿವಾರದಂದು ಶ್ರೀಮನ್ಮಹಾಸಾಮನ್ತಂ ರುದ್ರಯ್ಯಂ ತಮ್ಮಿಯೂರು ಹನ್ನೆ[60]ರಡುಮಂ ಹುಲಿಗೋಡು ಮಾವಳ್ಳಿ ಕೋಟೆ ಕಿ [ಜುವತ್ತಿ]......** .................. [ಮೊ]ದಲಾಗೆ ತ್ರಿಭೋಗಾಭ್ಯನ್ತರಮಾಳುತ್ತಂ ಸುಖದಿನಿರ್ದ್ದು ಪೆರ್ಗ್ಗಡೆ ರಾಜಮಲ್ಲ[61]ಯ್ಯನ ಬಸದಿಯ ದೇವರ ಚರುಗಿಂಗೆ ಹೀಕ.............. .........ಣ ಗರ್ದ್ದೆಯ್ಯುಂ ಬಸದಿಯ ಮುನ್ತೆ ದಾನಶಾಲೆಗೆ ಹದಿನಯ್ದು ಕಯ್ಮೀ[62]ಳದ ಮನೆಯ್ಯುಂನೂರಿಂ ಹೊಜಿಗಣ ತೆಲ್ಲಿಗಗೇರಿಯೊಳ್........................ [ಹತ್ತು]ಗೆಯುಲ್ಲಿ ಹನ್ನೆರಡು ಕಯ್ಮೀಳದ ಮನೆಯ್ಯುಂ ಶ್ರೀ ವೀರ ಪೆರ್ಮ್ಮಾಡಿ-ದೇವರ ಕಯ್ಯಲು ಸು[63]ಂಕಾಧಿಕಾರಮಂ ಪಡೆದು ದೇವರ ತೋಂಟದಾಯ ಕು-[ ಳಿಯ ಸುಂಕ ]........................................................ [ನಿದ್ದಿ] ದೇವರ ಪಾದಪ್ರಕ್ಷಾಳನಂ ಮಾಡಿ ಶ್ರೀಮನ್ಮಹಾಸಾಮನ್ತ ರುದ್ರಮಯ್ಯಂ ಚಂದ್ರಾ[64]ರ್ಕ್ಕತಾರಂಬರಂ ನಡೆವನ್ತಾಗಿ ಕೊಟ್ಟನು ॥ ಮತ್ತಂ ಗಾಣ............ ........................ ............................................ ಶ್ರೀ

**ಸಕವರ್ಷ 1091 ನೆಯ ವಿರೋಧಿ ಸಂವತ್ಸರದ ಪುಶ್ಯ ಸುದ್ದ ಶ್ರೀ ಗುರು**[65]

**ವಾರದಂದು ಸಂಕ್ರಮಣಮುಂ ವ್ಯತೀಪಾತ [ಮುಂ]** .. ........................ ........................................................... [ ನಂದಿ-ದೇವರ ಪಾ ]ದ ಪ್ರಕ್ಷಾಳನಂ ಮಾಡಿ ॥ ವೃ ॥

ಪಿರಿದನುರಾಗದಿಂ ಜನಕ66ನಾಯಕನುಂ ವಿಭವೈಕ ಪುಣ್ಯವಿ–
ಸ್ತರ ∪∪–∪–∪∪ ∪–∪ ∪–∪ ∪–∪–∪–
∪∪∪ ∪–∪–∪∪ ∪–∪ ∪ ತೋಂಟದ ಬಟ್ಟೆ ಸುಂಕಮುಂ
ತರ67ಣಿಶಶಾಂಕರುಳ್ಳಿನೆಗ ಪದ್ಮಲದೇವಿಯಜ್ಜೈನಗೇಹಕಂ ॥ [32*]

# ಪ್ರಾಚೀನ ಕರ್ಣಾಟಕ ಮತ್ತು ಕಾಶ್ಮೀರ

**ಕೆ. ಜಿ. ವಸಂತಮಾಧವ**

ಪ್ರಾಚೀನ ಕರ್ಣಾಟಕ ಸಂಸ್ಕೃತಿಯು ದ್ರಾವಿಡ ದೇಶಗಳಲ್ಲದೆ ಉತ್ತರ ಭಾರತದಲ್ಲಿರುವ ಮಿಥಿಲ, ಅಸ್ಸಾಂ, ಬಂಗಾಳ, ನೇಪಾಳ ಮತ್ತು ಕಾಶ್ಮೀರದಲ್ಲೂ ಹಬ್ಬಿ ಅಲ್ಲಿನ ಸಂಸ್ಕೃತಿಯ ಮೇಲೆ ಪ್ರಭಾವ ಬೀರಿತೆಂದು ಸಮಕಾಲೀನ ಬರಹಗಳು ಮತ್ತು ಶಾಸನಗಳು ತಿಳಿಸುತ್ತವೆ. ಈ ಲೇಖನದಲ್ಲಿ ಕರ್ಣಾಟಕ ಮತ್ತು ಕಾಶ್ಮೀರಗಳ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧ ಹೇಗೆ ಬೆಳೆದು ಬಂದಿತೆಂದು ಸಮಕಾಲೀನ ದಾಖಲೆಗಳ ಆಧಾರದ ಮೇಲೆ ತಿಳಿಸಲಾಗುವುದು.

ಕಾಶ್ಮೀರ ಮತ್ತು ಕರ್ಣಾಟಕಗಳ ಪರಸ್ಪರ ಅರಿವು ಕ್ರಿ.ಶ. 8ನೇ ಶತಮಾನದಿಂದ ಆರಂಭವಾಯಿತೆಂದು ಡಾ॥ ಆರ್. ಎನ್. ಸಾಲತ್ತೂರ್‌ರವರು ವಾದಿಸಿದರೂ[1] ಕ್ರಿ.ಶ. 11ನೇ ಶತಮಾನದಿಂದ ಇದು ಬಲಗೊಂಡಿತೆಂದು ಶಾಸನ ಮತ್ತು ಸಮಕಾಲೀನ ಗ್ರಂಥಗಳ ಆಧಾರದ ಮೇಲೆ ಅಭಿಪ್ರಾಯಪಡಬಹುದು. ಕರ್ಣಾಟಕದ ವಿಚಾರವಾಗಿ ಮೊತ್ತ ಮೊದಲು ಕಾಶ್ಮೀರದಲ್ಲಿ ಉಲ್ಲೇಖ ದೊರೆಯುವುದು ಕಲ್ಹಣನ ರಾಜ ತರಂಗಿಣಿಯಲ್ಲಿ. ಈ ಕಾವ್ಯದ ಪ್ರಕಾರ ಕಾಶ್ಮೀರದ ಶ್ರೇಷ್ಠ ರಾಜ ಲಲಿತಾದಿತ್ಯನು ಆಗಿನ ಕರ್ಣಾಟಕದಲ್ಲಿ ಅಡಕವಾಗಿದ್ದ ಸಪ್ತಕೊಂಕಣದ[2]ವರೆಗೆ ದಿಗ್ವಿಜಯಮಾಡಿದ್ದನು.[3] ಆದರೆ ಕರ್ಣಾಟಕದ ಆಗಿನ ಕಾಲದ ಶಾಸನಗಳಾಗಲೀ ಮತ್ತು ಇನ್ನಿತರ ಬರಹಗಳಾಗಲೀ ಇದರ ಬಗ್ಗೆ ಏನೂ ತಿಳಿಸದೆ ಇರುವುದರಿಂದ ಕಲ್ಹಣನು ತನ್ನ ಬರಹದಲ್ಲಿ ಲಲಿತಾದಿತ್ಯನ ಪರಾಕ್ರಮವನ್ನು ಉತ್ಪ್ರೇಕ್ಷಿಸಿ ಬಣ್ಣಿಸಿದ್ದಾನೆಂದು ಊಹಿಸಲು ಅವಕಾಶವಿದೆ. ಆದರೂ ಕಲ್ಹಣನಿಗೆ ಕರ್ಣಾಟಕದ ಅರಿವಿದ್ದಿತ್ತೆಂಬುದನ್ನು ಅಲ್ಲಗಳೆಯಲಾಗದು. ಕಾಶ್ಮೀರದ ಇನ್ನೊಬ್ಬ ಅರಸ ಹರ್ಷನು ಕರ್ಣಾಟಕದ ಅರಸು

---

1 R. N. Saletore– A History of the community, Matha & Guruparampara. Article in Fifty year Bliss, P. 287

2 ಕೇರಳ, ತುಳುವ, ಹೈವೆ, ಕೊಂಕಣ, ಕರಾಟ, ಸೌರಾಷ್ಟ್ರ ಮತ್ತು ವಿರಾಟ (ಕರ್ಣಾಟಕ) ಸಪ್ತ ಕೊಂಕಣಗಳಾಗಿವೆ. ವಿವರಕ್ಕಾಗಿ ನೋಡಿ: B. A. Saletore— Ancient Karnataka, Vol. I, P. 26 to 29

3 ಕಲ್ಹಣನ ರಾಜತರಂಗಿಣಿಯ 4ನೇ ಪುಸ್ತಕ, ಪು. 136; ಡಾ॥ ಆರ್. ಎನ್. ಸಾಲೆತ್ತೂರರ ಅದೇ ಲೇಖನ

ಕುವರಿಯ ಸೌಂದರ್ಯಕ್ಕೆ ಮರುಳಾಗಿದ್ದನು[4]. ಇವನು ಕರ್ನಾಟಕದ ಸಾಂಸ್ಕೃತಿಕ ಅಭಿವೃದ್ಧಿಯನ್ನು ಮೆಚ್ಚಿದ್ದನು. ಕಾಶ್ಮೀರದ ಮಿಹಿರಕುಲ ರಾಜನು ( 1063–1089 ) ಸಿಂಪಳದ ದಿಗ್ವಿಜಯದ ನಂತರ ಚೋಳ ಮತ್ತು ಕರ್ನಾಟಕಗಳ ರಾಜರನ್ನು ಸೋಲಿಸಿದ್ದನೆಂದು ಕಲ್ಹಣನ ಬರಹದಿಂದ ತಿಳಿದುಬರುತ್ತದೆ[5]. ಆದರೆ ಇದು ಕೂಡಾ ಅತಿಶಯೋಕ್ತಿಯಾಗಿದೆ. ಕಂಸನೆಂಬ ಇನ್ನೊಬ್ಬ ಕಾಶ್ಮೀರದ ಅರಸನ ಆಸ್ಥಾನದಲ್ಲಿ ಕರ್ನಾಟಕದ 'ಕೌಶೀನ'ನೆಂಬುವನು ಸೇನಾಧಿಪತಿಯಾಗಿದ್ದನು[6].

ಕರ್ನಾಟಕದಲ್ಲಿ ಆಳಿದ ಅರಸು ಮನೆತನಗಳಲ್ಲಿ ಕಲ್ಯಾಣ ಚಾಲುಕ್ಯರ ದಾಖಲೆಗಳು ಹೆಚ್ಚಾಗಿ ಕಾಶ್ಮೀರದ ಕುರಿತಾಗಿ ಉಲ್ಲೇಖಿಸುತ್ತವೆ. ಸೊರಬದ ಒಂದು ಶಾಸನವು ಜಗದೇಕಮಲ್ಲನೆಂಬ ಈ ವಂಶದ ರಾಜನನ್ನು "ಕಾಶ್ಮೀರ ಮುಖ ಕಮಲ"ನೆಂದು ವರ್ಣಿಸಿದೆ[7]. ಇದೇ ವಂಶದ ತ್ರಿಭುವನದೇವ ಮಲ್ಲದೇವ ಪರಮಾನಂದಿ ದೇವನು ( 1076–1098 ) ಕಾಶ್ಮೀರದ ವರೆಗೆ ದಿಗ್ವಿಜಯ ಮಾಡಿದ್ದನೆಂದು ಇನ್ನೊಂದು ಶಾಸನವು ತಿಳಿಸುತ್ತದೆ[8]. ವಿಕ್ರಮಾಂಕನ ಒಂದು ಶಾಸನದಲ್ಲಿ ಆತನನ್ನು ಕಾಶ್ಮೀರ ಚಕ್ರವರ್ತಿಯೆಂದು ತಿಳಿಸಿದೆ[9]. ಈ ಶಾಸನಗಳಲ್ಲಿ ತಿಳಿಸಿದ ವಿಷಯ ಅತಿಶಯೋಕ್ತಿ ಯಿಂದ ಕೂಡಿದ್ದರೂ ಕಲ್ಯಾಣ ಚಾಲುಕ್ಯರು ಕಾಶ್ಮೀರದ ವಿಷಯ ತಿಳಿದಿದ್ದರೆಂಬುದು ನಿರ್ವಿವಾದ.

**ಸಾಂಸ್ಕೃತಿಕ ಸಂಬಂಧ :**

ಕರ್ನಾಟಕ–ಕಾಶ್ಮೀರಗಳ ರಾಜಕೀಯ ಸಂಬಂಧಕ್ಕಿಂತ ಸಾಂಸ್ಕೃತಿಕ ಸಂಬಂಧ ಬಲವಾಗಿತ್ತೆಂದು ಸಮಕಾಲೀನ ಬರಹಗಳನ್ನು ಅಭ್ಯಸಿಸಿದಾಗ ತಿಳಿದುಬರುತ್ತದೆ. ಆ ಕಾಲದಲ್ಲಿ ಕರ್ನಾಟಕ ಮತ್ತು ಕಾಶ್ಮೀರ ಅರಸುಗಳು ಯಾವ ಪ್ರಾದೇಶಿಕ ಭಾವನೆ ಗಳಿಗೂ ಒಳಗಾಗದೆ ವಿದ್ವಾಂಸರಿಗೆ ರಾಜಾಶ್ರಯ ನೀಡುತ್ತಿದ್ದರು. ಈ ಉದಾರ ನೀತಿಯ ಪರಿಣಾಮವಾಗಿ ಕರ್ನಾಟಕದಲ್ಲಿ ಕಾಶ್ಮೀರ ವಿದ್ವಾಂಸರಿಗೂ, ಕಾಶ್ಮೀರದಲ್ಲಿ ಕರ್ನಾಟಕ ವಿದ್ವಾಂಸರಿಗೂ ರಾಜಾಶ್ರಯ ಸಿಕ್ಕಿತು. ಇದು ಎರಡು ಪ್ರದೇಶಗಳ ಸಂಸ್ಕೃತಿಯ ಅರಿವು ಉಂಟಾಗಿ ಅದು ಬಲಗೊಳ್ಳಲು ಕಾರಣವಾಯಿತು. ಹರ್ಷನೆಂಬ ಕಾಶ್ಮೀರ ರಾಜನು ಕರ್ನಾಟಕದ ಸಂಸ್ಕೃತಿಗೆ ಎಷ್ಟು ಮರುಳಾಗಿದ್ದನೆಂದರೆ ತನ್ನ ರಾಜ್ಯದಲ್ಲಿ ದಾಕ್ಷಿಣಾತ್ಯ ಪದ್ಧತಿಯ ಕತೆಗಳನ್ನು ಪ್ರಚಾರಗೊಳಿಸಿ ಕರ್ನಾಟಕದಲ್ಲಿ

4 ಅದೇ ಲೇಖನ
5 P. B. Desai (Ed.), A History of Karnataka, P. xix
6 ಆರ್. ಎನ್. ಸಾಲೆತ್ತೂರರ ಲೇಖನ
7 Epigraphia Carnatica, VIII. Sb. 138
8 Ibid, XI. Dg. 90
9 Ibid, Dg. 2, dated 1121 A. D

ರೂಢಿಯಲ್ಲಿರುವ ನಾಣ್ಯಗಳನ್ನೇ ಜಾರಿಗೆ ತಂದನು[10]. ಕರ್ನಾಟಕದಲ್ಲಿರುವ ಗೋಕರ್ಣ ಮಹಿಮೆಯನ್ನು ತಿಳಿದು ಕಾಶ್ಮೀರದ ಇನ್ನೊಬ್ಬ ರಾಜನು ಗೋಕರ್ಣನೆಂದು ಹೆಸರು ಬದಲಿಸಿದ್ದಲ್ಲದೆ, ತನ್ನ ರಾಜ್ಯದಲ್ಲಿ ಶಿವಗೋಕರ್ಣೇಶ್ವರ ಎಂಬ ಕ್ಷೇತ್ರವನ್ನು ಸ್ಥಾಪಿಸಿದನು[11]. ಕಾಶ್ಮೀರದ ಉಧಂಪ್ಪುರ ಜಿಲ್ಲೆ ಶುದ್ಧ ಮಹಾದೇವ ಹಳ್ಳಿಯಲ್ಲಿ ಸಿಕ್ಕಿದ ತ್ರಿಶೂಲ ಶಾಸನವು ಕರ್ನಾಟಕ ಮತ್ತು ಕಾಶ್ಮೀರ ಸಂಬಂಧಗಳ ವಿಚಾರದಲ್ಲಿ ಹೊಸ ಬೆಳಕು ಚೆಲ್ಲುತ್ತದೆ. ಈ ಶಾಸನದಲ್ಲಿರುವ ಬರಹಗಳು ಕ್ರಿ.ಶ. 7ನೇ ಶತಮಾನಕ್ಕೆ ಸರಿಹೋಗುವಂತಹದ್ದಾಗಿವೆ. ಈ ಶಾಸನದಲ್ಲಿ ಬಳಸಲಾಗಿರುವ ಲಿಪಿಯು ಆ ಕಾಲದಲ್ಲಿ ಕರ್ನಾಟಕದಲ್ಲೂ ಬಳಕೆಯಲ್ಲಿದ್ದ ದಾಕ್ಷಿಣಾತ್ಯ ಲಿಪಿ[12]. ಕರ್ನಾಟಕದಲ್ಲಿ ಉದಯಿಸಿದ ಬಸವೇಶ್ವರರಿಂದ ಪ್ರಾರಂಭವಾದ ಶೈವ ಸಿದ್ಧಾಂತವು ಕಾಶ್ಮೀರದ ಶೈವ ಸಿದ್ಧಾಂತದ ಮೇಲೆ ಪ್ರಭಾವ ಬೀರಿತ್ತು[13]. ಕರ್ನಾಟಕದ ಸ್ತ್ರೀಯರ ವೇಷ ಭೂಷಣಗಳನ್ನು ಕೇಳಿದ ಕಾಶ್ಮೀರಿ ಸ್ತ್ರೀಯರು ಅನುಸರಿಸಲು ಆರಂಭಿಸಿದರೆಂದು ಕಲ್ಹಣನ ರಾಜ ತರಂಗಿಣಿಯು ತಿಳಿಸುತ್ತದೆ[14]. ಇವುಗಳನ್ನೆಲ್ಲಾ ಅವಲೋಕಿಸಿದಾಗ ಕರ್ನಾಟಕವು ಕಾಶ್ಮೀರದ ಸಾಂಸ್ಕೃತಿಕ ಜೀವನದ ಮೇಲೆ ಎಷ್ಟು ಪ್ರಭಾವ ಬೀರಿದೆಯೆಂದು ತಿಳಿದುಬರುತ್ತದೆ.

ಕರ್ನಾಟಕದ ಅರಸರು ಅನೇಕ ಕಾಶ್ಮೀರದ ವಿದ್ವಾಂಸರಿಗೆ ಪ್ರೋತ್ಸಾಹವನ್ನು ನೀಡಿದ್ದರು. ವಿಕ್ರಮಾಂಕ ಚರಿತ್ರೆಯನ್ನು ಬರೆದ ಬಿಲ್ಹಣನು ಮೂಲತಃ ಕಾಶ್ಮೀರದವನು. ಚಾಲುಕ್ಯ ವಿಕ್ರಮಾಂಕನು ಇವನನ್ನು ವಿದ್ಯಾಪತಿ ಎಂದು ಮನ್ನಿಸಿದನು. ಬಿಲ್ಹಣನ ವಿಕ್ರಮಾಂಕ ಚರಿತ್ರೆಯು ಕಲ್ಯಾಣ ಚಾಲುಕ್ಯರ ಇತಿಹಾಸವನ್ನು ತಿಳಿಯಲು ಸಹಾಯಕವಾಗಿದೆ. ಕರ್ನಾಟಕದವರಾಗಿದ್ದು ಈಗಿನ ಮರಾಠಿ ಮಾತಾಡುವ ಪ್ರದೇಶವನ್ನು ಆಳಿದ ನಿಪುಣರು ಕಾಶ್ಮೀರ ವಿದ್ವಾಂಸರಿಗೆ ಆಶ್ರಯ ನೀಡಿದ್ದರು. ಬಿಲ್ಲಮ Vನ ಸೇನಾನಿ ಜಲ್ಹಣ ಪಂಡಿತನು ಕಾಶ್ಮೀರದವನು[16]. ಇವನು ಸೇನಾಧಿಪತ್ಯದೊಂದಿಗೆ ತನ್ನ ವಿದ್ವತ್ತನ್ನು ಮೆರೆಸಿದ್ದನು. ಇವನು 'ಸೂಕ್ತಿ ಮುಕ್ತಾವಳಿ' ಎಂಬ ಸಂಸ್ಕೃತ ಸೂಕ್ತಿಗಳ ಸಂಗ್ರಹವನ್ನು ರಚಿಸಿದ್ದಾನೆ. ಶೋಢಲನೆಂಬ ಇನ್ನೊಬ್ಬ ಕಾಶ್ಮೀರಿ ಐದನೇ ಬಿಲ್ಲಮ, ಜೈತುಗಿ ಮತ್ತು ಸಿಂಘಣ II ರ ಕಾಲದಲ್ಲಿ ಕೋಶಾಧಿಪನಾಗಿದ್ದನು. ಕಲಚೂರಿ ಬಿಜ್ಜಳನ ಕಾಲದಲ್ಲಿ ಐಹೊಳೆ ಮತ್ತು ಇನ್ನಿತರ ಕಡೆಗಳಲ್ಲಿ ಇನ್ನಿತರ

---

10 ಕಲ್ಹಣ, ರಾಜತರಂಗಿಣಿ I, Book VI. V 926, P.340; ಆರ್. ಎನ್. ಸಾಲೆತ್ತೂರರ ಲೇಖನ

11 ಮೇಲಿನದೇ

12 ಕೆ. ವಿ. ರಮೇಶ್ : ಕರ್ನಾಟಕ ಶಾಸನ ಸಮೀಕ್ಷೆ, ಪು. 24

13 P. B. Desai, ಉಪರಿಉಕ್ತ, P. XX

14 ಅದೇ, P. XIX, XX

15 Desai, P.B. 218–19

16 ಆರ್. ಎನ್. ಸಾಲೆತ್ತೂರರ ಲೇಖನ, P. 291

ಜನರೊಂದಿಗೆ ಕಾಶ್ಮೀರಿಗಳು ನೆಲಸಿದ್ದರೆಂದು ಇಲ್ಲಿ ಸಿಕ್ಕಿದ ಶಾಸನವು ತಿಳಿಸುತ್ತದೆ[17]. ಕಾಶ್ಮೀರದ ಶಾರದಾದೇವಿಯನ್ನು ಕರ್ಣಾಟಕದಲ್ಲಿ ಅತ್ಯಂತ ಶ್ರದ್ಧೆಯಿಂದ ಪೂಜಿಸುತ್ತಿದ್ದರು. ಈ ವಿಚಾರವಾಗಿ ಶಿಕಾರಿಪುರ ಶಾಸನವು "ಶೀಲಗುಣ ಸಂಪನ್ನ ಈಶಾನ ಶಕ್ತಿ ಪಂಡಿತ ದೇವರ...ಕಾಶ್ಮೀರ ಶಾರದಾದೇವಿ ಲಬ್ಧವರ ಪ್ರಸಾದ"ರೆಂದು ತಿಳಿಸುತ್ತದೆ[18].

ಕರ್ಣಾಟಕದ ಅರಸರು ಕಾಶ್ಮೀರದ ಆರ್ಥಿಕ, ರಾಜಕೀಯ ಅಸ್ಥಿರತೆಯನ್ನು ಸಹಿಸದೆ ಓಡಿ ಬಂದ ಕಾಶ್ಮೀರಿ ಪ್ರಜೆಗಳಿಗೆ ಆಶ್ರಯ ನೀಡಿದ್ದರು. ಅವರಲ್ಲಿ ಸಾರಸ್ವತರು ಪ್ರಮುಖರಾಗಿದ್ದಾರೆ; ಇವರ ವಿಚಾರ ನಮಗೆ ಕರ್ಣಾಟಕದಲ್ಲಿ ಉಲ್ಲೇಖವಿರುವುದು 1113 ರ ಶಿಕಾರಿಪುರದ ಶಾಸನದಲ್ಲಿ[19]. ದಕ್ಷಿಣ ಕನ್ನಡ ಜಿಲ್ಲೆಯ ಬಾರಕೂರಿನ ಪಂಚಲಿಂಗೇಶ್ವರ ದೇವಸ್ಥಾನದ ಶಾಸನದಲ್ಲಿ ಕಾಶ್ಮೀರಿ ಬ್ರಾಹ್ಮಣ ಸರ್ಜೀರ್ಣನಿಗೆ ಆಳುಪ ಅರಸ ಭುಜಬಲ ಕವಿ ಅಲುಪೇಂದ್ರನು ಕೋಟೆಕೇರಿಯ ಕೆಲವು ಪ್ರದೇಶಗಳನ್ನು ದತ್ತಿ ಬಿಟ್ಟಿದ್ದ ವಿಚಾರ ತಿಳಿಸುತ್ತದೆ[20]. ಇದೇ ರೀತಿಯಲ್ಲಿ ಹೊಯ್ಸಳ ಚಕ್ರವರ್ತಿ ವೀರಬಲ್ಲಾಳ II ನು ಸಾರಸ್ವತ ದೇವಾಲಯಕ್ಕೂ ದತ್ತಿ ಬಿಟ್ಟಿದ್ದನು. ಇವನ ಆಶ್ರಿತನಾಗಿ ಜೈಭಟ್ಟಯ ನಾಯಕನೆಂಬುವನಿದ್ದನು. ಇವನನ್ನು ಕಾಶ್ಮೀರ ರಾಷ್ಟ್ರಕ್ರಮ ರಾಜನೆಂದು ಶಾಸನವು ತಿಳಿಸುತ್ತದೆ. ಇದೇ ಶಾಸನದಂತೆ ಚಕ್ರವರ್ತಿ ವೀರಬಲ್ಲಾಳನು ಚಂದ್ರ ಗ್ರಹಣ ಕಾಲದಲ್ಲಿ ಸಾರಸ್ವತ ದೇವಾಲಯದಲ್ಲಿ ನಡೆಯುವ ಪುಣ್ಯಕಾರ್ಯಕ್ಕೆ ನಲವತ್ತು ಗದ್ಯಾಣ ಮತ್ತು ಆನೆಹಳ್ಳಿ ಗ್ರಾಮವನ್ನು ಜೈಭಟ್ಟಯ ನಾಯಕನಿಗೆ ದಾನವನ್ನಿತ್ತಿದ್ದನು[21]. ವಿಜಯ ನಗರ ಅರಸರ ಆಳ್ವಿಕೆಯಲ್ಲೂ ಕಾಶ್ಮೀರದಿಂದ ಬ್ರಾಹ್ಮಣರು ವಲಸೆ ಬರುತ್ತಿದ್ದರು.

ಪ್ರಾಚೀನ ಕರ್ಣಾಟಕವು ಕೂಪ ಮಂಡೂಕದಂತೆ ಇರದೆ ಭಾರತದ ಇನ್ನಿತರ ಪ್ರದೇಶಗಳನ್ನು ಅರಿತು ಕಲೆ, ಸಾಹಿತ್ಯ ಮತ್ತು ಕಲೆಗಳಲ್ಲಿ ಪರಿಣತರಾದ ಭಾರತೀಯ ವಿದ್ವಾಂಸರಿಗೆ ಆಶ್ರಯ ನೀಡಿ ಅವರ ವಿದ್ವತ್ತನ್ನು ಬೆಳಗಿಸಲು ಸಹಾಯ ಮಾಡಿದ್ದು ಕರ್ಣಾಟಕದ ಇತಿಹಾಸದ ವೈಶಿಷ್ಟ್ಯ. ಕಾಶ್ಮೀರದ ವಿದ್ವಾಂಸರಿಗೆ ತಮ್ಮ ರಾಜ್ಯದಲ್ಲಿ ಪ್ರೋತ್ಸಾಹವಿಲ್ಲದೆ ಅವರು ಅಲೆದಾಡುವ ಕಾಲದಲ್ಲಿ ಅವರಿಗೆ ಆಶ್ರಯವನ್ನಿತ್ತು ಅವರ ವಿದ್ವತ್ತನ್ನು ಬೆಳಗಿಸಿದ ಕೀರ್ತಿ ಕರ್ಣಾಟಕಕ್ಕೆ ಸಲ್ಲುತ್ತದೆ.

---

17 E. C. VII, Sk. 199

18 Ibid, Sk. 99

19 Ibid; ಈ ಶಾಸನಗಳ ಆಧಾರದ ಮೇಲೆ ಸಾರಸ್ವತ ಬ್ರಾಹ್ಮಣರು ಪೋರ್ತುಗೀಸರು ಗೋವೆಗೆ ಬರುವ ಪೂರ್ವದಲ್ಲೇ ಕರ್ಣಾಟಕಕ್ಕೆ ಬಂದಿದ್ದರೆಂದು ಹೆನ್ರಿಹೆರಾಸರು ವಾದಿಸುತ್ತಾರೆ. Henry Heras, Konkan and Sarswath Migration. Journal of Bombay Historical Society, 1928, I, P. 101

20 South Indian Inscriptions, Vol. VII

21 E. C. V. Hn. 63

# "ದಿ ವಿನ್‌ಸ್ಲೊ ಬಾಯ್"
(The Winslow Boy)

---

**ಎಸ್. ಕೃಷ್ಣಭಟ್ಟ**

ಟೆರೆನ್ಸ್ ರ್‍ಯಾಟಿಗನ್ (Terence Rattigan) ಈ ಶತಮಾನದ ಓರ್ವ ಜನಪ್ರಿಯ ಆಂಗ್ಲ ನಾಟಕಕಾರ. ಲಂಡನ್ನಿನಲ್ಲಿ ಒಂದು ಸಾವಿರಕ್ಕೂ ಹೆಚ್ಚು ಪ್ರದರ್ಶನಗಳ ಜಯಭೇರಿಯನ್ನು ಹೊಡೆದ ಈತನ 'ಫ್ರೆಂಚ್ ವಿಥೌಟ್ ಟಿಯರ್ಸ್' ದಂತಹ ನಾಟಕಗಳು ಈತನ ಜನಪ್ರಿಯತೆಗೆ ಸಾಕ್ಷಿ. ಈತನು ಲಘುನಾಟಕಗಳನ್ನಲ್ಲದೆ, ವಾಸ್ತವ ಹಾಗೂ ಗಂಭೀರವಾದ ಕೆಲವು ನಾಟಕಗಳನ್ನೂ ಬರೆದಿದ್ದಾನೆ. ಅವುಗಳಲ್ಲಿ 'ದಿ ವಿನ್‌ಸ್ಲೊ ಬಾಯ್' (The Winslow Boy) ಎಂಬ ನಾಲ್ಕು ಅಂಕಗಳ ನಾಟಕವು ಇಂಗ್ಲೆಂಡಿನ ಪ್ರಜಾಪ್ರಭುತ್ವದ ಇತಿಹಾಸದ ದೃಷ್ಟಿಯಿಂದ ಅತ್ಯಂತ ಪ್ರಮುಖವಾದದ್ದು.

'ದಿ ವಿನ್‌ಸ್ಲೊ ಬಾಯ್' ನಾಟಕದ ಕಥಾವಸ್ತುವಿಗೆ 1908ರಲ್ಲಿ ಇಂಗ್ಲೆಂಡಿನಲ್ಲಿ ಕೋಲಾಹಲವೆಬ್ಬಿಸಿದ ಒಂದು ಘಟನೆಯೇ ಆಧಾರ. ಆಸ್‌ಬೊರ್ನ್ ನೌಕಾದಳದ ಕಾಲೇಜಿನಲ್ಲಿ ಓದುತ್ತಿದ್ದ ಜಾರ್ಜ್ ಆರ್ಚರ್-ಶೀ (George Archer-Shee) ಎಂಬ ಹದಿಮೂರು ವರ್ಷ ವಯಸ್ಸಿನ ವಿದ್ಯಾರ್ಥಿ (Cadet) ಯನ್ನು ಅಲ್ಲಿನ ಅಧಿಕಾರಿಗಳು (The Admiralty) ಕಾಲೇಜಿನಿಂದ ವಜಾಮಾಡಿದರು. ಒಂದು ಪೋಸ್ಟಲ್ ಆರ್ಡರನ್ನು ಕದ್ದು, ಅದರ ಮೇಲೆ ಸುಳ್ಳು ರುಜುಮಾಡಿ ಹಣಪಡೆದ ನೆಂಬ ಆಪಾದನೆಯನ್ನು ಅವನಮೇಲೆ ಹೊರಿಸಲಾಗಿತ್ತು. ಆಗ ಅವನ ತಂದೆಯು ಸರ್ ಎಡ್ವರ್ಡ್ ಕಾರ್ಸನ್ ಎಂಬ ಸುಪ್ರಸಿದ್ಧ ನ್ಯಾಯವಾದಿಯ ಸಹಾಯ ಪಡೆದು, ಮೊಕದ್ದಮೆಯ ಬಗ್ಗೆ ಕ್ರಮವಾದ ವಿಚಾರಣೆ ನಡೆಸಬೇಕೆಂದು ನೌಕಾಕಾಲೇಜಿನ ಅಧಿಕಾರವರ್ಗಕ್ಕೆ ಒತ್ತಾಯಮಾಡಿದನು. ಹಾಗೂ ಹೀಗೂ ನೌಕಾದಳದ ವಿಭಾಗದವರಿಂದಲೇ ಎರಡು ವಿಚಾರಣೆಗಳು ನಡೆದುವು. ಆದರೂ ಜಾರ್ಜ್ ಆರ್ಚರ್-ಶೀ ಆಪಾದನೆಗಳಿಂದ ಮುಕ್ತನಾಗಲಿಲ್ಲ. ಕೊನೆಗೆ ಇಂಗ್ಲೆಂಡಿನ ಕಾನೂನಿನ ಪ್ರಕಾರ ಹಕ್ಕಿನ ಅರ್ಜಿ (Petition of Right) ಯ ಮೂಲಕ ಪ್ರಭುತ್ವದ ಅಪ್ಪಣೆ ಪಡೆದು ಪ್ರಭುತ್ವಕ್ಕೆ ಸೇರಿದವರೇ ಆದ ನೌಕಾದಳದ ಅಧಿಕಾರ ವರ್ಗದ ಮೇಲೆ ಹುಡುಗನ ಹೆಸರಿನಲ್ಲಿ "ಕರಾರಿನ ಉಲ್ಲಂಘನೆ" (Breach of Contract) ಯ ಮೊಕದ್ದಮೆಯನ್ನು ನ್ಯಾಯಾಲಯದಲ್ಲಿ ಹೂಡಲಾಯಿತು. ಮೊದಲು ಈ

ಅಂಶವು ತಿರಸ್ಕೃತವಾದರೂ, ಕಾಮನ್ಸ್ ಸಭೆಯ ಆದೇಶದಂತೆ ನ್ಯಾಯಾಲಯವು ವಿವರವಾದ ವಿಚಾರಣೆ ನಡೆಸಿ, ಹುಡುಗ ನಿರಪರಾಧಿ ಎಂದು ತೀರ್ಪುಕೊಟ್ಟಿತು. ಇದೆಲ್ಲಕ್ಕೂ ಸುಮಾರು ಎರಡು ವರ್ಷಕಾಲ ಹಿಡಿಯಿತು.

ಆ ಕಾಲದಲ್ಲಿ ಮೂಲಭೂತ ಹಕ್ಕಿನ ವಿಚಾರದಲ್ಲಿ ಇಂಗ್ಲೆಂಡಿನ ಜನತೆಯನ್ನು ಸಾಕಷ್ಟು ಕೆರಳಿಸಿದ್ದ ಈ ಘಟನೆ ಟೆರೆನ್ಸ್ ರ್‍ಯಾಟಿಗನ್‌ನ ಕೈಯಲ್ಲಿ ಒಂದು ಸುಂದರ ನಾಟಕವಾಯಿತು. ನಾಟಕಕಾರ ಕಾಲ್ಪನಿಕ ಪಾತ್ರಗಳನ್ನು ಸೃಷ್ಟಿಮಾಡಿಕೊಂಡಿರುವುದಲ್ಲದೆ ಕತೆಯಲ್ಲೂ ಅಲ್ಲಲ್ಲಿ ಕಲಾತ್ಮಕವಾಗಿ ಸ್ವಲ್ಪಮಟ್ಟಿಗೆ ಕ್ಯಾಥರೀನ್, ಡೆಮಂಡ್ ಕರಿ (Desmond Curry), ಡಿಕ್ಕಿ ಮುಂತಾದವರ ಪ್ರಕರಣಗಳನ್ನು ಸೇರಿಸಿ ಬದಲಾವಣೆ ಮಾಡಿಕೊಂಡಿದ್ದಾನೆ. ನಾಟಕದಲ್ಲಿ ಆಪಾದಿತ ವಿದ್ಯಾರ್ಥಿಯು ರೊನಾಲ್ಡ್ ವಿನ್‌ಸ್ಲೊ (Ronald Winslow) ಅಥವಾ ಮುದ್ದಿನ ಹೆಸರಿನಂತೆ ರೋನಿ. ಅವನ ತಂದೆ ಆರ್ಥರ್ ವಿನ್‌ಸ್ಲೊ ಓರ್ವ ನಿವೃತ್ತ ಬ್ಯಾಂಕಿನ ಅಧಿಕಾರಿ. ತಾಯಿ ಗ್ರೇಸ್ ವಿನ್‌ಸ್ಲೊ. ಡಿಕ್ಕಿ ಅವನ ಅಣ್ಣ, ಕ್ಯಾಥರೀನ್ ಅವನ ಅಕ್ಕ. ಇಲ್ಲಿ ವಿನ್‌ಸ್ಲೊ ಮೊಕದ್ದಮೆಯನ್ನು ನಡೆಸುವವರು ಸುಪ್ರಸಿದ್ಧ ನ್ಯಾಯವಾದಿ ಸರ್ ರಾಬರ್ಟ್ ಮಾರ್ಟನ್ ಎಂಬುವರು.

ಅಲ್ಲಲ್ಲಿ ಕೆಲವು ಮಾರ್ಪಾಟುಗಳಿದ್ದರೂ, ನಾಟಕದ ಮುಖ್ಯ ಕತೆ (The main plot) ಯು ನಡೆದ ಘಟನೆಯ ಜಾಡನ್ನೇ ಹಿಡಿದು ಮುಂದುವರಿಯುತ್ತದೆ. ನಿಯಮಿತ ಕಾಲಕ್ಕಿಂತ ಮುಂಚೆಯೇ ಕಾಲೇಜಿನಿಂದ ಮನೆಗೆ ಹಿಂತಿರುಗಿದ ಮಗ ರೊನಾಲ್ಡ್ (ರೋನಿ) ನಿಂದ ತಂದೆ ಆರ್ಥರ್ ವಿನ್‌ಸ್ಲೊಗೆ ಸಂಗತಿಗಳೆಲ್ಲಾ ತಿಳಿಯುತ್ತವೆ. ಮೊದಲು ರೋನಿಗೆ ಆರ್ಥರ್ ಚಮತ್ಕಾರವಾದ ಪ್ರಶ್ನೆಗಳನ್ನು ಹಾಕಿ ಅವನು ಪೋಸ್ಟಲ್ ಆರ್ಡರಿನ ಹಗರಣದಲ್ಲಿ ಸಂಪೂರ್ಣ ನಿರಪರಾಧಿ ಎಂಬುದನ್ನು ಖಚಿತಪಡಿಸಿಕೊಳ್ಳುತ್ತಾನೆ. ಅನಂತರ ತನಗೆ ಎಷ್ಟು ಕಷ್ಟವಾದರೂ ಈ ಅನ್ಯಾಯದ ವಿರುದ್ಧ ಹೋರಾಡಲೇಬೇಕೆಂಬ ದೃಢ ನಿರ್ಧಾರದಿಂದ ರಾಬರ್ಟ್ ಮಾರ್ಟನ್ ಎಂಬ ನ್ಯಾಯವಾದಿಯ ಸಹಾಯದಿಂದ ಮುಂದುವರಿಯುತ್ತಾನೆ. ಕೇವಲ ಸ್ವಪ್ರತಿಷ್ಠೆಗಾಗಿ ಈ ಐತಿಹಾಸಿಕ ಮೊಕದ್ದಮೆಯನ್ನು ಹಿಡಿದ ಮಾರ್ಟನ್ ಕೂಡ ರೋನಿಯ ನಿರಪರಾಧಿತ್ವವನ್ನು ಖಚಿತಪಡಿಸಿಕೊಳ್ಳಲು ಮನೆಯಲ್ಲೇ ತೀಕ್ಷ್ಣವಾದ ಪಾಟೀಸವಾಲು ನಡೆಸುತ್ತಾರೆ. ಮೂಲ ಘಟನೆಯಂತೆಯೇ ಇಲ್ಲಿಯೂ ನೌಕಾದಳದ ಅಧಿಕಾರಿಗಳು ಮನಸ್ಸಿಲ್ಲದೆ ಮರುವಿಚಾರಣೆ ನಡೆಸಿ, ರೋನಿಯ ಮೇಲಿನ ಆಪಾದನೆಗಳನ್ನು ಖಾಯಂ ಮಾಡುತ್ತಾರೆ.

ಮುಖ್ಯ ಕಥೆಯ ಜೊತೆಗೆ ನಾಟಕಕಾರ ಹೆಣೆದಿರುವ ಕ್ಯಾಥರೀನ (ರೋನಿಯ ಅಕ್ಕ)ಳ ಮದುವೆಯ ಪ್ರಯತ್ನದ ಹಗರಣವು ಸ್ವಾರಸ್ಯಕರವಾಗಿದೆ. ಜಾನ್ ವ್ಯಾಥರ್‌ಸ್ಟನ್ ಎಂಬುವನ ಜೊತೆಯಲ್ಲಿ ಆಕೆಯ ವಿವಾಹ ನಿಶ್ಚಿತವಾಗಿತ್ತು. ಆದರೆ

ವಿನ್‌ಸ್ಲೊ ಮೊಕದ್ದಮೆಯಲ್ಲಿ ಆಕೆ ತಂದೆಗೆ ಬಲಗೈಯಂತೆ ಇದ್ದುದರಿಂದ ವಿವಾಹದ ದಿನ ಮುಂದೂಡಲ್ಪಟ್ಟಿತ್ತು. ಈ ನಡುವೆ ದೇಶದಲ್ಲೆಲ್ಲಾ ಸಾಕಷ್ಟು ಗುಲ್ಲೆಬ್ಬಿಸಿದ ಈ ಮೊಕದ್ದಮೆ ಜಾನ್‌ನ ತಂದೆಗೆ ಹಿಡಿಸಲಿಲ್ಲ. ಇನ್ನೇನು ಪ್ರಭುತ್ವದ ಸೇವೆಯಲ್ಲಿರುವ ನೌಕಾದಳದ ಅಧಿಕಾರವರ್ಗದ ಮೇಲೆಯೇ ನ್ಯಾಯಾಲಯದಲ್ಲಿ ಮೊಕದ್ದಮೆ ಹಾಕಬೇಕೆಂದಿರುವಷ್ಟರಲ್ಲಿ, ಆತನಿಂದ ಆರ್ಥರ್‌ಗೆ ಒಂದು ಪತ್ರ ಬರುತ್ತದೆ. ಮೊಕದ್ದಮೆಯನ್ನು ಕೂಡಲೆ ನಿಲ್ಲಿಸದಿದ್ದರೆ, ತನ್ನ ಮಗ ಜಾನ್‌ನು ಕ್ಯಾಥರೀನಳನ್ನು ಮದುವೆಯಾಗದಂತೆ ತಡೆಯುವುದಾಗಿ ಅದರಲ್ಲಿ ತಿಳಿಸುತ್ತಾನೆ. ಮಗಳ ಯೋಗ ಕ್ಷೇಮದ ದೃಷ್ಟಿಯಿಂದ ರೋನಿಯ ಮೊಕದ್ದಮೆಯನ್ನು ಕೈಬಿಡುವುದೇ ಸೂಕ್ತವೆಂದು ಆರ್ಥರ್ ಆಲೋಚಿಸುತ್ತಾನೆ. ಅಷ್ಟರಲ್ಲಿ, ಇವರು ಹಾಕಿದ್ದ ಹಕ್ಕಿನ ಅರ್ಜಿ ( Petition of Right ) ಗೆ ಸರ್ಕಾರದ ಅನುಮೋದನೆ ದೊರೆತುದರ ಫಲವಾಗಿ ನೌಕಾದಳದ ಅಧಿಕಾರಿಗಳ ಮೇಲೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡುವ ಅವಕಾಶವುಂಟಾಗಿದೆಯೆಂಬ ಸುದ್ದಿ ಬರುತ್ತದೆ. ಆಗ ಮಾರ್ಟಿನ್ ಮತ್ತು ಕ್ಯಾಥರೀನ್‌ರ ಎದುರಿನಲ್ಲಿ ಪುನಃ ಮೊಕದ್ದಮೆ ಹೂಡುವ ವಿಚಾರವನ್ನು ಆರ್ಥರ್ ಒಪ್ಪಿಕೊಳ್ಳುತ್ತಾನೆ. ದಿನವೂ ನ್ಯಾಯಾಲಯದಲ್ಲಿ ಕಿಕ್ಕಿರಿದ ಜನಸಂದಣಿ; ರೋನಿ, ಆ ಕಾಲೇಜಿನ ಕೆಲಸದವಳು ಮುಂತಾದವರ ಸಾಕ್ಷ್ಯ; ಎರಡೂ ಪಕ್ಷದ ನ್ಯಾಯವಾದಿಗಳ ವಾದ–ಪ್ರತಿವಾದಗಳು ; ರೋನಿಯ ಮನೆಯವರ ಮನಸ್ಸಿನಲ್ಲಿ ತೀರ್ಪಿನ ಜೋಕಾಲಿ. ಕೊನೆಗಾದರೂ ನ್ಯಾಯಕ್ಕೆ ಮನ್ನಣೆ ದೊರೆಯಿತು. ಇಂಗ್ಲೆಂಡಿನಲ್ಲಿನ ಪ್ರಜಾ ಪ್ರಭುತ್ವಕ್ಕೆ, ಜನತೆಯ ಮೂಲಭೂತ ಹಕ್ಕಿಗೆ ಜಯ ಲಭಿಸಿತು. ಸರ್ಕಾರೀ ಅಧಿಕಾರಿಗಳ ವಿರುದ್ಧ ನ್ಯಾಯಾಲಯವಿತ್ತ ತೀರ್ಪಿನ ಪ್ರಕಾರ ರೋನಿಯು 'ನಿರಪರಾಧಿ'ಯಾದ.

ನಾಟಕದಲ್ಲಿ ಕತೆಗೆ ಪೋಷಕವಾಗಿ ಬರುವ ಉತ್ತಮ ಪಾತ್ರ ಚಿತ್ರಣವನ್ನೂ ಕಾಣುತ್ತೇವೆ: ಆರ್ಥರ್ ವಿನ್‌ಸ್ಲೊನ ದಿಟ್ಟತನ ಹಾಗೂ ನ್ಯಾಯನಿಷ್ಠುರತೆ; ಗ್ರೇಸ್‌ಳಲ್ಲಿರುವ ಆದರ್ಶಗೃಹಿಣಿಯ ಲಕ್ಷಣಗಳು ; ರೋನಿಯ ಸತ್ಯಸಂಧತೆ ಹಾಗೂ ವ್ಯಾಸಂಗದಲ್ಲಿ ಶ್ರದ್ಧೆ; ಅದಕ್ಕೆ ವಿರುದ್ಧವಾಗಿರುವ ಅವನ ಅಣ್ಣ ಡಿಕ್ಕಿಯ ಆರಾಮ ಜೀವನದ ಹಂಬಲ; ಸೇವಕಿ ವಯಲೆಟ್‌ಳ ಪ್ರಾಮಾಣಿಕತೆ; ನ್ಯಾಯವಾದಿ ರಾಬರ್ಟ್ ಮಾರ್ಟಿನ್‌ರ ಪ್ರತಿಭೆ. ಇವುಗಳಿಗಿಂತ ಮಿಗಿಲಾಗಿ, ಮೂಲಭೂತ ಹಕ್ಕುಗಳಿಗಾಗಿ ತನ್ನ ಸ್ವಂತ ಸುಖವನ್ನೂ ತ್ಯಾಗಮಾಡಿದ ಕ್ಯಾಥರೀನ್ ಶೋಭಿಸುತ್ತಾಳೆ.

ನಾಟಕದುದ್ದಕ್ಕೂ ಸೊಗಸಾದ ಸಂಭಾಷಣೆಗಳಿವೆ. ಪ್ರತ್ಯಕ್ಷವಾದ ನ್ಯಾಯಾಲಯದ ದೃಶ್ಯಗಳಿಲ್ಲದೆ, ಅಲ್ಲಿ ನಡೆದುದನ್ನು ನಾನಾವಿಧವಾಗಿ ತಿಳಿಸುವ ತಂತ್ರವನ್ನು ಬಳಸಲಾಗಿದೆ. ಅಲ್ಲದೆ ಆ ಕಾಲದ ಸಾಮಾಜಿಕ ಹಾಗೂ ರಾಜಕೀಯ ಪರಿಸ್ಥಿತಿಗಳನ್ನು ಪ್ರೇಕ್ಷಕರಿಗೆ ತಿಳಿಸುವಲ್ಲೂ ನಾಟಕ ಯಶಸ್ವಿಯಾಗಿದೆ. ಆದರೆ

ಕೊನೆಯ ಅಂಕದಲ್ಲಿ ತೀರ್ಪಿನ ನಂತರ ಅನವಶ್ಯಕವಾಗಿ ಮುಂದುವರಿಯುವ ಸಂಭಾಷಣೆಗಳು ಪ್ರೇಕ್ಷಕರಿಗೆ ಬೇಸರವನ್ನುಂಟುಮಾಡಬಹುದು.

ಹೀಗೆ ಇಂಗ್ಲೆಂಡಿನ ಇತಿಹಾಸದಲ್ಲಿ ಪ್ರಜಾಸತ್ತೆಯ ಜಯಭೇರಿ ಮೊಳಗಿಸಿದ ಬಾಲಕ ಜಾರ್ಜ್ ಆರ್ಥರ್ – ಶೀ ನಾಟಕಕಾರನ ಕೈಯಲ್ಲಿ 'ರೋನಿ'ಯಾಗಿ 'ನಿರಪರಾಧಿ'ಯಾದ.

# ಈಸೂರು ನೆಲಸಮವಾಗಿದೆ

**ಸಂ: ಸೂರ್ಯನಾಥ ಕಾಮತ್**

('ಸಾಧನೆ'ಯ ಸಂಚಿಕೆ VIIIರಲ್ಲಿ 'ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ' ಎಂಬ ಬರಹವನ್ನು ನಾನು ಪ್ರಕಟಿಸಿದ್ದೆ. ನಾನು ಇಂಗ್ಲಿಷ್‌ನಲ್ಲಿ ಮಾಡಿದ್ದ ಎರಡು ಭಾಷಣಗಳ ಸಂಗ್ರಹಾನುವಾದವಾದ ಈ ಬರಹದಲ್ಲಿ, ಸಂಗ್ರಾಮದ ರಕ್ತರಂಜಿತ ಅಧ್ಯಾಯಗಳಲ್ಲಿ ಒಂದಾದ ಈಸೂರು ಪ್ರಕರಣದ—1942—ಉಲ್ಲೇಖವೇ—ಮೂಲ ಇಂಗ್ಲಿಷ್ ಬರಹದಲ್ಲಿ ಅದು ಇತ್ತಾದರೂ—ಬರಲಿಲ್ಲ. ಈ ಪ್ರಮಾದವನ್ನು ಸರಿಪಡಿಸಲೆಂದು, ಈಸೂರು ಪ್ರಕರಣದ ನಂತರ ಕಾಂಗ್ರೆಸ್ ಪ್ರಕಟಿಸಿದ್ದ "Isur Razed to the Ground" ಎಂಬ ಸಚಿತ್ರ ಪುಸ್ತಿಕೆಯಲ್ಲಿನ ಬರಹದ ಕನ್ನಡಾನುವಾದವನ್ನು ಇಲ್ಲಿ ಪ್ರಕಟಿಸಿದ್ದೇನೆ. ಈ ಅಪೂರ್ವ ದಾಖಲೆಯನ್ನು ನನಗೆ ದಯವಿಟ್ಟು ಒದಗಿಸಿದವರು ಡಾ|| ರಂ. ರಾ. ದಿವಾಕರ ಅವರು.)

ಶಿವಮೊಗ್ಗ–ಶಿಕಾರಿಪುರ ರಸ್ತೆಯಿಂದ ಕೆಲವೇ ಮೈಲಿ ದೂರದಲ್ಲಿರುವ, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಒಂದು ಊರು ಈಸೂರು. ತೀರ ಕಾಂಗ್ರೆಸ್ ಮನೋವೃತ್ತಿಯ ಹಳ್ಳಿಗಳ ಗುಂಪುಗಳಿಗೆ ಸೇರಿದ ಗ್ರಾಮಗಳಲ್ಲಿ ಅದು ಒಂದು. ಮೈಸೂರು ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷ ಶ್ರೀಯುತ ಎಚ್. ಸಿದ್ದಯ್ಯ ಹಾಗೂ ಶ್ರೀಯುತ ಮರಿಸ್ವಾಮಿ ಹಿರೇಮಠ, ಈ ಎರಡು ಗಣ್ಯ ಕಾಂಗ್ರೆಸ್ ಕಾರ್ಯಕರ್ತರು ಈ ಭಾಗದಲ್ಲಿ ಬಹಳ ಕೆಲಸಮಾಡಿದ್ದಾರೆ. ಗಾಂಧೀಜಿಯವರ ಬಂಧನವಾದ ತಕ್ಷಣವೇ ಈ ಗ್ರಾಮಗಳು ಈಸೂರಿನ ನಾಯಕತ್ವದಲ್ಲಿ ಗ್ರಾಮ ಸ್ವರಾಜ್ಯ ಪಂಚಾಯತು ಮತ್ತು ಶಾಂತಿದಳಗಳನ್ನು ರಚಿಸಲು ಆರಂಭಿಸಿದವಲ್ಲದೆ ಗ್ರಾಮಾಧಿಕಾರಿಗಳಿಗೆ ರಾಜೀನಾಮೆ ನೀಡಲು ಕರೆಯಿತ್ತವು. ನೂರಕ್ಕೂ ಹೆಚ್ಚು ಈ ಅಧಿಕಾರಿಗಳು ಪಂಚಾಯತುಗಳಿಗೆ ರಾಜೀನಾಮೆ ನೀಡಿದರು. ಈ ಹಳ್ಳಿಗಳಲ್ಲಿ ಸಂಘಟನೆ ಬಲವಾಗಿತ್ತು ಮತ್ತು ಉತ್ಕೃಷ್ಟವಾಗಿ ಬೆಳೆಯುವಂಥದಾಗಿತ್ತು. ಆದರೆ ಒಂದು ದುರದೃಷ್ಟಕರ ಘಟನೆ ನಡೆಯಿತು.

ಬೇರೊಂದು ಗ್ರಾಮದಲ್ಲಿ ಇರುತ್ತಿದ್ದ ಈಸೂರಿನ ಪಟೇಲನು ರಾಜೀನಾಮೆ ಕೊಡಲು ಈಸೂರು ಪಂಚಾಯತು ನೀಡಿದ ಕರೆಯನ್ನು ಮನ್ನಿಸಲಿಲ್ಲ. ಒಂದು ದಿನ ಪಟೇಲನೂ ಶಾನುಭೋಗ (ಕುಲಕರ್ಣಿ)ನೂ ತಮ್ಮ ದಫ್ತರುಗಳಸಹಿತ ಹಳ್ಳಿಗೆ ಬರಲು, ತಮ್ಮ ನಿತ್ಯದ ಪ್ರಭಾತ ಫೇರಿಯನ್ನು ನಡೆಸುತ್ತಿದ್ದ ಮಕ್ಕಳ ಗುಂಪೊಂದನ್ನು ಎದುರುಗೊಂಡರು. ಆ ಮಕ್ಕಳು ಇವರನ್ನು ಸುತ್ತುವರಿದು ರಾಜೀನಾಮೆ

ನೀಡಲು ಕೇಳಿಕೊಂಡರು. ಕೊನೆಗೆ ಆ ಮಕ್ಕಳು ಪಟೇಲನ ದಫ್ತರನ್ನು ಸೆಳೆದು ಕೊಂಡರು. ಪಟೇಲನು ಅಮಲ್ದಾರ (ಮಾಮಲೇದಾರ)ನ ಬಳಿ ಹೋಗಿ ದೂರಿತ್ತನು.

ಒಂದೆರಡು ದಿನಗಳ ನಂತರ ಪಟೇಲನು ಮರಳಿ ಬಂದು ದಫ್ತರು ಗಳನ್ನು ಮರಳಿಸಲು ಕೇಳಿಕೊಂಡಾಗ ಅದನ್ನು ತಿರಸ್ಕರಿಸಲಾಯಿತು. ಮರುದಿನ ಅಮಲ್ದಾರನೂ ಪೋಲೀಸು ಸಬ್‌ಇನ್ಸ್‌ಪೆಕ್ಟರನೂ ಇನ್ಸ್‌ಪೆಕ್ಟರನೂ ಕೆಲವು ಪೋಲೀಸ್‌ಪೇದೆಗಳೂ ಹಳ್ಳಿಗೆ ಬಂದರು. ರಸ್ತೆಯ ಪ್ರವೇಶದ್ವಾರದ ಬಳಿಯೇ "ಸರಕಾರಿ ನೌಕರರಿಗೆ ಪ್ರವೇಶವಿಲ್ಲ", ಎಂಬ ಹಲಗೆ ಇತ್ತು. ತಾನು ಮುಂದೆ ಬರುತ್ತಿದ್ದಂತೆ ಎಸ್. ಐ. ಅದನ್ನು ಕಿತ್ತೆಸೆದ. ಎಳೆಯರು ಅವರನ್ನು ಸುತ್ತುವರಿದು ಖಾದಿ ಟೋಪಿ ಧರಿಸಲು ಮತ್ತು ಅವರ ನೌಕರಿಗಳಿಗೆ ರಾಜೀನಾಮೆಕೊಡಲು ಕೇಳಿಕೊಂಡರು. ಸಬ್‌ಇನ್ಸ್‌ಪೆಕ್ಟರ್ ಇದನ್ನು ವಿರೋಧಿಸಿ ಮಕ್ಕಳ ಮೇಲೆ ಲಾಠಿಚಾರ್ಜ್‌ಮಾಡಲು ಆಜ್ಞಾಪಿಸಿದನು. ಆ ಊರ ಸಾಹುಕಾರರ ಮಗಳು, ಒಬ್ಬ ಕಿರುಹುಡುಗಿ, ಆತನ ಹ್ಯಾಟನ್ನು ಕೆಡವಿ ಆತನ ತಲೆಯ ಮೇಲೆ ಖಾದಿಯ ಟೋಪಿಯನ್ನು ಹಾಕಲು ಯತ್ನಿಸಿದಳು. ಆಗ ಸಬ್ ಇನ್ಸ್‌ಪೆಕ್ಟರನು ತನ್ನ ರಿವಾಲ್ವರನ್ನು ಹೊರೆಸೆಳೆದು ಹುಡುಗಿಗೆ ಗುಂಡಿಕ್ಕಲು ಯತ್ನಿಸಿದ. ಗುಂಪಿನಲ್ಲಿರುವ ಯಾರೋ ಒಬ್ಬರು ಹುಡುಗಿ ಯನ್ನು ಅತನ ಗುರಿಯಿಂದ ಆಚೆಸೆಳೆಯಲು ಯತ್ನಿಸಿದರು. ಆದರೆ ಆ ಮನುಷ್ಯನೂ ಹುಡುಗಿಯೂ ಗುಂಡಿನ ಒರಸಿಗೆ ಒಳಗಾಗಿ ಕೆಳಕ್ಕೆಬಿದ್ದರು. ಇನ್ನನೇಕರು ಲಾಠಿ ಚಾರ್ಜ್‌ನಿಂದಾಗಿ ಉರುಳಿದ್ದರು.

ಸಾಹುಕಾರನ ಮಗಳು ಗುಂಡಿನಿಂದ ಸತ್ತಳೆಂದೂ ಇನ್ನನೇಕರು ಲಾಠಿಚಾರ್ಜ್‌ನಿಂದ ಕೊಲ್ಲಲ್ಪಟ್ಟರೆಂದೂ ಚೀರುತ್ತ ಅನೇಕ ಮಕ್ಕಳು ಊರಕಡೆ ಓಡಿದರು. ಎಲ್ಲ ಹಳ್ಳಿಗರೂ ತಮಗೆ ಸಿಗಬಹುದಾದ ಆಯುಧಗಳನ್ನು ತೆಗೆದುಕೊಂಡು ಸ್ಥಳಕ್ಕೆ ಧಾವಿಸಿದರು. ಅನೇಕ ಜನ ನೆಲದಮೇಲೆ ಬಿದ್ದು ನರಳುತ್ತಿರುವುದನ್ನು ಅವರು ಕಂಡರು. ಅವರೆಲ್ಲ ಸತ್ತಿದ್ದಾರೆಂದು ಅವರು ಭಾವಿಸಿದರು. ಆ ದೃಶ್ಯದಿಂದ ಹುಚ್ಚೆದ್ದವರಾಗಿ ಎಲ್ಲ ಅಧಿಕಾರಿಗಳನ್ನೂ ಪೋಲೀಸರನ್ನೂ ಅವರು ಆಕ್ರಮಿಸಿದರು. ಅಮಲ್ದಾರನೂ ಸಬ್‌ಇನ್ಸ್‌ಪೆಕ್ಟರನೂ ಕೊಲ್ಲಲ್ಪಟ್ಟರು. ಉಳಿದವರು ಸಾವಿನಭಯ ದಿಂದ ಓಡಿಹೋದರು.

ಆಗ ಗ್ರಾಮಸ್ಥರು ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸಿ, ಸೇತುವೆಗಳನ್ನು ಕೆಡವಿ, ಮರಗಳನ್ನು ಉರುಳಿಸಿ ರಸ್ತೆಗಳಿಗೆ ತಡೆಗಳನ್ನು ಒಡ್ಡಿದರು. ಮುಂದೆ ಭಯಭೀತರಾಗಿ ಊರನ್ನೇ ಬಿಟ್ಟುಹೋದರು. ಈ ಘಟನೆಯಸುದ್ದಿ ಶಿವಮೊಗ್ಗೆಯನ್ನು ಮಾರನೆಯ ದಿನ ತಲಪಿತು, ಮತ್ತು ಮೂರನೆಯ ದಿನ ಡಿ. ಸಿ (ಕಲೆಕ್ಟರ್) ಕೆಲವು ಪೋಲೀಸ್ ಪೇದೆಗಳ ತಂಡದೊಂದಿಗೆ ಬಂದನು. ಆದರೆ

ಹಳ್ಳಿಯನ್ನು ಪ್ರವೇಶಿಸುವ ಧೈರ್ಯ ಆತನಿಗಾಗಲಿಲ್ಲ. ಅವನು ಶಿಕಾರಿಪುರಕ್ಕೆ ತೆರಳಿ ಬೆಂಗಳೂರಿನಿಂದ ಸೇನೆ ಬರುವುದರ ನಿರೀಕ್ಷೆಯಲ್ಲಿ ಇದ್ದನು.

ಶ್ರೀಯುತ ಸಿ. ಕಾಡಪ್ಪ ಎಂ. ಎಲ್. ಸಿ. ಇವರು ಮೃತದೇಹಗಳನ್ನು ಶಿಕಾರಿಪುರಕ್ಕೆ ಒಯ್ದರು. ಅವರು ಗ್ರಾಮಸ್ಥರ ಮನವೊಲಿಸಿ ದೇಹಗಳನ್ನು ಸಾಗಿಸಲು ಅನುಮತಿ ಪಡೆದರು.

ಸೇನೆ ಬಂತು, ಮತ್ತು ಡಿ. ಸಿ. ಅದರ ಜೊತೆಗೆ ಬಂದ. ಆಗ ಇಡೀ ಗ್ರಾಮದ ಮೇಲೆ ಸೇಡಿನ ಒಂದು ಸತ್ರವೇ ಆರಂಭವಾಯಿತು. ಹಳ್ಳಿಯಲ್ಲಿನ ಪ್ರತಿಯೊಂದು ಮನೆಯನ್ನು ಸೈನಿಕರೂ ಪೋಲೀಸರೂ ಆವರು ನೆರೆಯ ಹಳ್ಳಿಯಿಂದ ಕರೆತಂದ ಮುಸಲ್ಮಾನರೂ ಲೂಟಿ ಮಾಡಿದರು. ಭದ್ರ ಕಪಾಟುಗಳನ್ನು ಒಡೆದರು ಮತ್ತು ಅಮೂಲ್ಯ ವಸ್ತುಗಳನ್ನೂ ಹಣವನ್ನೂ ಕದ್ದರು. ಸಾಹುಕಾರರ ಮನೆಯ ಸಹಿತ ಮೂರು ಮನೆಗಳನ್ನು ಸುಟ್ಟರು. ಸುಲಿಗೆ ಮತ್ತು ಸುಡುವಿಕೆ ಡೆಪ್ಯುಟಿ ಕಮಿಶನರರ ಎದುರಿಗೇ ನಡೆಯಿತು. ಸಾಹುಕಾರನ ಮನೆಯಿಂದಲೇ ಎರಡು ಲಕ್ಷ ರೂ. ಬೆಲೆಯ ಸಂಪತ್ತನ್ನು ದೋಚಲಾಯಿತು. ಸಾಗಿಸಿದ ವಸ್ತುಗಳ ದಾಖಲೆಗಳನ್ನೂ ಇಡಲಿಲ್ಲ. ಕಳವಾದ ವಸ್ತುಗಳ ಪಟ್ಟಿ ಮತ್ತು ಸುಲಿಗೆ ಹಾಗೂ ವಿಧ್ವಂಸಗಳಲ್ಲಿ ಪಾಲುಗೊಂಡ ಯುದ್ಧಾಪರಾಧಿಗಳ ಯಾದಿ ನಮ್ಮಲ್ಲಿದೆ. ಜನರನ್ನು ಹಳ್ಳಿಗಳಿಗೆ ಮರಳುವಂತೆ ಒತ್ತಾಯಿಸಲಾಯಿತು, ಇಲ್ಲವೇ ಮನ ಒಲಿಸಲಾಯಿತು. ಅವರನ್ನು ಹೊಡೆದರು, ಹಿಂಸಿಸಿದರು ಹಾಗೂ ಸಾವಿರ ವಿಧಾನಗಳಿಂದ ಕಾಡಿದರು. ಕೆಲವು ಸ್ತ್ರೀಯರ ಮೇಲೆ ಅತ್ಯಾಚಾರ ಮಾಡಿದರು. ಸೈನಿಕರ ಹಾಗೂ ಪೋಲೀಸರ ಸಲುವಾಗಿ ಗ್ರಾಮಸ್ಥರಿಂದ ಒತ್ತಾಯದಿಂದ ಅಡಿಗೆ ಮಾಡಿಸಲಾಯಿತು. ಹಳ್ಳಿಗೆ ಮರಳಿದ ಗ್ರಾಮಸ್ಥರಲ್ಲಿ ಒಂದಾಣೆ ಬೆಲೆಯ ವಸ್ತುವನ್ನೂ ಇರಗೊಡಿಸಲಿಲ್ಲ. ಅವರ ಬೆಳೆಗಳನ್ನೂ ಹಾಳುಮಾಡಲಾಯಿತು.

ಸುಲಿಗೆ ಮತ್ತು ಧ್ವಂಸಕಾರ್ಯಗಳನ್ನು ಮೆಚ್ಚದ ಶ್ರೀಯುತ ಸಿ. ಕಾಡಪ್ಪ ಎಂ. ಎಲ್. ಸಿ. ಆವರು ಕೆಲವು ನಿರಪರಾಧಿ ಜನರನ್ನು ರಕ್ಷಿಸಲು ಯತ್ನಿಸಿದಾಗ, ಅವರು ಬಲು ಹಿಂದಿನಿಂದ ಕಾಂಗ್ರೆಸ್‌ನ ಕ್ರಿಯಾಶೀಲ ಕಾರ್ಯಕರ್ತರಾಗಿಲ್ಲದಿದ್ದರೂ, ಅವರನ್ನು ಬಂಧಿಸಲಾಯಿತು.

ಹನ್ನೊಂದು ಜನರಿಗೆ ಫಾಶಿ ಶಿಕ್ಷೆಯನ್ನೂ ಮೂವರು ಸ್ತ್ರೀಯರ ಸಹಿತ 23 ಜನರಿಗೆ ಜೀವಾವಧಿ ಶಿಕ್ಷೆಯನ್ನು ನೀಡಿದರು. ಸ್ತ್ರೀಯರ ಪೈಕಿ ಸಾಹುಕಾರರ ಪತ್ನಿಯೂ ಇದ್ದಾರೆ. ಹೈಕೋರ್ಟ್ ಎಂಟು ಜನರಿಗೆ ಫಾಶಿ ಶಿಕ್ಷೆಯನ್ನು ಕಾಯಂ ಗೊಳಿಸಿ ಉಳಿದವರಿಗೆ ಜೈಲು ಶಿಕ್ಷೆ ವಿಧಿಸಿತು.

**ಈಸೂರು ಖಟ್ಲೆ : 11 ಜನರಿಗೆ ಗಲ್ಲುಶಿಕ್ಷೆ; 13 ಜನರಿಗೆ ಜೀವಾವಧಿ ಶಿಕ್ಷೆ.**

5–12–42. ಈಸೂರು ಖಟ್ಲೆಯ ಬಗ್ಗೆ ತೀರ್ಪನ್ನು ನೀಡಲಾಯಿತು. 11 ಜನರಿಗೆ ಮರಣದಂಡನೆ ಮತ್ತು 13 ಜನರಿಗೆ ಜೀವಾವಧಿ ಶಿಕ್ಷೆ. ಎರಡನೆಯವರ ಪೈಕಿ ಮೂವರು ಸ್ತ್ರೀಯರಿದ್ದಾರೆ: ಶ್ರೀಮತಿಯರಾದ ಹಾಲಮ್ಮ, ಪಾರ್ವತಮ್ಮ, ಸಿದ್ದಮ್ಮ.

**ಮರಣ ದಂಡನೆ**

1. ಶ್ರೀಯುತ ಔರಪ್ಪ 2. ಶ್ರೀಯುತ ಮಲ್ಲಪ್ಪ 3. ಶ್ರೀಯುತ ಸೂರ್ಯನಾರಾಯಣಾಚಾರಿ 4. ಶ್ರೀಯುತ ಗುರುಶಾಂತಪ್ಪ 5. ಶ್ರೀಯುತ ಫಣಿಯಪ್ಪಾಚಾರಿ 6. ಶ್ರೀಯುತ ಹುಚ್ಚೂರಾವ್ 7. ಶ್ರೀಯುತ ಹಳ್ಳಪ್ಪ 8. ಶ್ರೀಯುತ ಶಂಕ್ರಪ್ಪ 9. ಶ್ರೀಯುತ ಸಿದ್ಲಿಂಗಪ್ಪ 10. ಶ್ರೀಯುತ ನಾಗೇಶಾಚಾರಿ 11. ಶ್ರೀಯುತ ಚನ್ನಬಸಪ್ಪ.

**ಜೀವಾವಧಿ ಶಿಕ್ಷೆ**

1. ಶ್ರೀಯುತ ದುರ್ಗಪ್ಪ 2. ಶ್ರೀಯುತ ರಾಮಣ್ಣ 3. ಶ್ರೀಯುತ ಹನುಮಂತ 4. ಶ್ರೀಯುತ ನೀಲಕಂಠಪ್ಪ 5. ಶ್ರೀಯುತ ಸುಬ್ರಾಯ 6. ಶ್ರೀಯುತ ವೀರಬಸಪ್ಪ 7. ಶ್ರೀಯುತ ಗುರುಶಾಂತಪ್ಪ 8. ಶ್ರೀಯುತ ಹನುಮಂತಪ್ಪ 9. ಶ್ರೀಯುತ ಲಿಂಗೋಜಿ 10. ಶ್ರೀಯುತ ರಂಗಪ್ಪ.

**ಶಿಕ್ಷೆಗೊಳಗಾದ ಸ್ತ್ರೀಯರು**

11. ಶ್ರೀಮತಿ ಹಾಲಮ್ಮ 12. ಶ್ರೀಮತಿ ಪಾರ್ವತಮ್ಮ 13 ಶ್ರೀಮತಿ ಸಿದ್ದಮ್ಮ.

ಹೈಕೋರ್ಟ್‌ನಲ್ಲಿ ಅಪೀಲು ಮಾಡಲಾಯಿತು. ಕೋರ್ಟ್ ಖಟ್ಲೆಯನ್ನು ಪುನರ್ವಿಮರ್ಶಿಸಿ 1943ರ ಜನವರಿಯಲ್ಲಿ ತೀರ್ಪು ನೀಡಿತು.

1) ಶ್ರೀಯುತರಾದ ಗುರಪ್ಪ, ಮಲ್ಲಪ್ಪ, ಸೂರ್ಯನಾರಾಯಣಾಚಾರಿ, ಹಳ್ಳಪ್ಪ ಮತ್ತು ಶಂಕರಪ್ಪ, ಈ ಐವರ ಮೇಲೆ ಮರಣದಂಡನೆ ವೃಢ ಪಡಿಸಲಾಯಿತು.

2) ಶ್ರೀಯುತ ನಾಗೇಶಾಚಾರಿಯ ಮರಣದಂಡನೆಯನ್ನು ಜೀವಾವಧಿ ಶಿಕ್ಷೆಯಾಗಿ ಮಾಡಲಾಯಿತು.

3) ಮೂವರು ಸ್ತ್ರೀಯರ, ಶ್ರೀಮತಿಯರಾದ ಹಾಲಮ್ಮ, ಪಾರ್ವತಮ್ಮ ಮತ್ತು ಸಿದ್ದಮ್ಮ, ಹಾಗೂ ಶ್ರೀಯುತರಾದ ನೀಲಕಂಠಪ್ಪ, ಸುಬ್ರಾಯ, ಗುರುಶಾಂತಪ್ಪ ಇವರ ಜೀವಾವಧಿ ಶಿಕ್ಷೆಯನ್ನು ದೃಢಪಡಿಸಲಾಯಿತು.

4) ಇತರರಿಗೆ ಬೇರೆ ಬೇರೆ ಅವಧಿಯ ಶಿಕ್ಷೆಯನ್ನು ವಿಧಿಸಲಾಯಿತು.

**ಈಸೂರು ಖಟ್ಲೆಯಲ್ಲಿ ಇನ್ನೂ ಬಂಧನಗಳು**

ಈಸೂರು ಖಟ್ಲೆಯಲ್ಲಿ ಬೇಕಾಗಿದ್ದ ಇನ್ನೂ ನಾಲ್ವರನ್ನು ಬಂಧಿಸಲಾಗಿದೆ. ಆಪೈಕಿ ಒಬ್ಬಳು ಸ್ತ್ರೀ. (1) ಶ್ರೀಮತಿ ಚನ್ನಬಸಮ್ಮ (2) ಶ್ರೀಯುತ ರಮಾಲಿ ಹೊಳೆಬಸಪ್ಪ (3) ಕಮ್ಮರಘಟಿ ರಂಗಪ್ಪ (4) ತೀರ್ಥಶೈಲಪ್ಪ.

ಮರಣದಂಡನೆಗೆ ಪಾತ್ರರಾದವರು ಹಿಸ್ ಹೈನೆಸ್ ಮೈಸೂರು ಮಹಾ ರಾಜರಿಗೆ ಪುನರ್ಪರಿಶೀಲನಾ ಅರ್ಜಿ ಸಲ್ಲಿಸಿದ್ದಾರೆ. ಅನೇಕ ಸಂಸ್ಥೆಗಳೂ ಸಾರ್ವ ಜನಿಕರಲ್ಲಿ ಸಾವಿರಾರು ಜನರೂ ಮರಣ ದಂಡನೆಯನ್ನು ಕಡಿಮೆಮಾಡಿ ಅವರ ಜೀವಗಳನ್ನು ಉಳಿಸಲು ಮಹಾರಾಜರಿಗೆ ದಯಾ ಅರ್ಜಿ ಕಳುಹಿಸಿದ್ದಾರೆ. ಸರಕಾರವು ದುಷ್ಟತನವನ್ನು ಮುಂದುವರಿಸದಿರುವುದು ಮತ್ತು ಮಹಾರಾಜರು ಈ ದುರ್ದೈವೀ ಜನರ ಪ್ರಾಣವನ್ನು ಉಳಿಸಲು ನಿರ್ಧರಿಸುವುದು ಗೌರವಾರ್ಹವಾದುದೂ ಸಮರ್ಪಕವಾದುದೂ ಆದ ಕೃತಿ. ಅಧಿಕಾರದಲ್ಲಿರುವರಿಗೆ ಮಾರ್ಗದರ್ಶನ ನೀಡಲು ಹಾಗೂ ಅವರಿಗೆ ಸರಿಯಾದ ಸಂಗತಿಗಳನ್ನು ಮಾಡಲು ಮನೋಬಲವನ್ನು ನೀಡಲೆಂದು ದೇವರನ್ನು ಎಲ್ಲ ನೇರ ಮನಸ್ಸಿನ ಜನ ಪ್ರಾರ್ಥಿಸಲಿ.

[ಕೊನೆಗೂ ಆ ಐದು ಮಂದಿಯನ್ನು ಏಪ್ರಿಲ್, 1943ರಲ್ಲಿ ಬೆಂಗಳೂರು ಸೆಂ॥ ಜೈಲಿನಲ್ಲಿ ಫಾಶಿಗೇರಿಸಿದರು. ಉಳಿದ ದಂಡಿತರು 21–10–1946 ರ ವರೆಗೆ ಜೈಲಿನಲ್ಲಿಯೇ ಇದ್ದರು. ಮೇಲಣ ಪ್ರಕಟಣೆ 1943 ರ ಫೆಬ್ರವರಿ ಇಲ್ಲವೆ ಮಾರ್ಚ್ ತಿಂಗಳಲ್ಲಿ ಹೊರಬಂದಿರಬೇಕು. ಪುಸ್ತಿಕೆಯಲ್ಲಿ ಪ್ರಕಾಶಕರ, ಮುದ್ರಕರ, ಲೇಖಕರ ಹೆಸರುಗಳಿಲ್ಲ. ಈಸೂರಿನ ವಿಧ್ವಂಸವನ್ನು ಚಿತ್ರಿಸುವ ನಾಲ್ಕು ಭಾವ ಚಿತ್ರಗಳಿವೆ. ಅವುಗಳ ಪುನರ್ಮುದ್ರಣ ಅಸಾಧ್ಯ–ಸಂ ॥ ]

# ಎರಡು ವಚನಗಳ ಪಾಠಪರಿಷ್ಕರಣ

**ಪಿ. ವಿ. ನಾರಾಯಣ**

ಈಗ ನಾವು ಪಾಠದ ಬಗ್ಗೆ ಆಲೋಚಿಸಲಿರುವ ಎರಡು ವಚನಗಳಲ್ಲಿ ಒಂದು ಅರಿವಿನ ಮಾರಿತಂದೆಯದು, ಮತ್ತೊಂದು ಅಲ್ಲಮನದು. ಶ್ರೀ ಬಿ. ಎಸ್. ಸಣ್ಣಯ್ಯನವರು ಸಂಪಾದಿಸಿರುವ 'ಅರಿವಿನ ಮಾರಿತಂದೆಗಳ ವಚನಗಳು' ಎಂಬ ಸಂಕಲನದಲ್ಲಿನ ಒಂದು ವಚನವು ಈ ರೀತಿಯಾಗಿದೆ (ಅದರ ಪಾಠಾಂತರಗಳನ್ನೂ ಇಲ್ಲಿ ಕೊಡಲಾಗಿದೆ) :

''ಸ್ಥಾವರ ಲಿಂ[1]ಗಪೂಜೆ[1] ಶುದ್ಧಶೈ[2]ವ, ಶೈವಲಿಂಗ[2] ಪೂಜೆ ಸಿಂಹಾಸನ, ಪೂರ್ವಶೈವಪೂಜೆ ಸಂಕಲ್ಪ ನಿವಾರಣ, ವೀರಶೈವ ಲಿಂಗಪೂಜೆ ಅಂಗದ ಮೇಲೆ ಹಿಂಗದೆ ಧರಿಸಿಹುದು. ಇವೆಲ್ಲವು ಸರಿ [3]ಶೈ[3]ವಪೂಜೆ ಅದೆಂತೆಂದಡೆ ಇಷ್ಟಲಿಂಗ ಜೀವನ ಅಂಗ ಉಭಯವ ಕೂಡಿ ಲೀಯವಾಗಿದ್ದುದು ಶೈವಭೇದಂಗಳಿಗೆ ಹೊಱಗು ಸದಾಶಿವಮೂರ್ತಿಲಿಂಗಕ್ಕೆ ಒಳಗು.''

1. ಗ (ಕಗಚಟ), 2. ವ ಮಾರ್ಗ (ಕ) ವ ಲಿಂಗ ಶೈವಲಿಂಗ (ಗಚಟ), 3. ವೀರಶೈ (ಹ)[1]

ಕರ್ನಾಟಕ ವಿಶ್ವವಿದ್ಯಾಲಯದವರು ಪ್ರಕಟಿಸಿರುವ 'ಸಕಲ ಪುರಾತನರ ವಚನಗಳು' ಎಂಬ ಗ್ರಂಥದಲ್ಲಿ ಈ ವಚನದ ಮೊದಲ ಭಾಗವು ಹೀಗಿದೆ: ''ಸ್ಥಾವರಲಿಂಗ ಶುದ್ಧಶೈವ ಮಾರ್ಗ ಶೈವಲಿಂಗಪೂಜೆ ಸಿಂಹಾಸನ. ಪೂರ್ವಶೈವಲಿಂಗಪೂಜೆ ಸಂಕಲ್ಪ ನಿರಾವರಣ.''[2] (ಇಲ್ಲಿ ಕೊಟ್ಟಿರುವ ಪಾಠಾಂತರಗಳು ತೀರ ಅಪ್ರಮುಖ ; ಅವುಗಳ ಸ್ವೀಕಾರದಿಂದ ಯಾವ ಅರ್ಥವ್ಯತ್ಯಾಸವೂ ಆಗುವುದಿಲ್ಲ) ; ಉಳಿದ ಭಾಗವೆಲ್ಲವು ಶ್ರೀ ಸಣ್ಣಯ್ಯನವರ ಗ್ರಂಥದಲ್ಲಿದ್ದಂತೆಯೇ ಇದೆ. ಆದರೆ ಈ ಎರಡೂ ಗ್ರಂಥಗಳಲ್ಲಿನ ಈ ವಚನದ ಸ್ವರೂಪವು ಸ್ಪಷ್ಟವಾದ ಅರ್ಥವನ್ನು ನೀಡುವುದರಲ್ಲಿ ವಿಫಲವಾಗುತ್ತವೆ. ಈ ವಚನದ ಮೂಲಕ ವಚನಕಾರನು ತನಗೆ ತುಂಬ ಪ್ರಮುಖವೆನಿಸಿದ ವಿಷಯದ ಬಗ್ಗೆ ಪ್ರಸ್ತಾಪಮಾಡುತ್ತಿದ್ದಾನೆ. ಶೈವದ ಅನೇಕ ಪ್ರಭೇದಗಳಿಗೂ ವೀರಶೈವಕ್ಕೂ ಲಿಂಗಪೂಜಾವಿಧಾನದ ಬಗ್ಗೆ ಇರುವ ವ್ಯತ್ಯಾಸವನ್ನು ಹೇಳಿ, ವೀರಶೈವದ ಶ್ರೇಷ್ಠತೆಯನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದ್ದಾನೆ.

---

1. ಬಿ. ಎಸ್. ಸಣ್ಣಯ್ಯ : ಅರಿವಿನ ಮಾರಿತಂದೆಗಳ ವಚನಗಳು. ವ 45 : ಪು.11
2. ಆರ್. ಸಿ. ಹಿರೇಮಠ : ಸಕಲ ಪುರಾತನರ ವಚನಗಳು ; ವ 446 : ಪು.117

ಈಗಿರುವ ಪಾಠವನ್ನು ಸ್ವೀಕರಿಸಿಯೇ ವಚನಕ್ಕೆ ಅರ್ಥೈಸಲು ಪ್ರಯತ್ನಿಸಿದರೆ ಗೊಂದಲವುಂಟಾಗುವುದು ಸಹಜ. ಉದಾಹರಣೆಗೆ, 'ಶೈವಲಿಂಗಪೂಜೆ ಸಿಂಹಾಸನ' ಎಂದು ಮೊದಲಲ್ಲಿಯೇ ಆ ಶೈವಪ್ರಭೇದಕ್ಕೆ ಸೇರಿದವರು ಲಿಂಗವನ್ನು ಪೂಜಿಸುವ ವಿಧಾನವನ್ನು ಹೇಳಿ ಮುಂದೆ "ಶೈವಪೂಜೆ ಅದೆಂತೆಂದಡೆ..." ಇತ್ಯಾದಿಯಾಗಿ ಭಿನ್ನವಿಧಾನವನ್ನು ಹೇಳಲಾಗಿದೆ : ಒಮ್ಮೆ ಶೈವರ ಲಿಂಗಪೂಜೆಯ ಬಗ್ಗೆ ಹೇಳಿ ಮತ್ತೆ ಅದನ್ನೇ ಪ್ರಸ್ತಾಪಿಸುವ ಆವಶ್ಯಕತೆಯಿರಲಿಲ್ಲ, ಅಲ್ಲದೇ ಅವೆರಡೂ ಭಿನ್ನವಾಗಿವೆ. ಈ ವಚನದ ಧಾಟಿಯನ್ನು ಗಮನಿಸಿದರೆ ಕೆಲವು ಶೈವಪ್ರಭೇದಗಳ ಪೂಜಾವಿಧಾನವನ್ನು ಹೇಳಿ, ಕೊನೆಯಲ್ಲಿ ವೀರಶೈವದ ವೈಶಿಷ್ಟ್ಯವನ್ನು ನಿರೂಪಿಸಿ, ಆ ಕಾರಣದಿಂದಲೇ ವೀರಶೈವವು ಶ್ರೇಷ್ಠವಾದುದೆಂಬುದನ್ನು ಕೊನೆಯ ವಾಕ್ಯದಲ್ಲಿ ಮತ್ತಷ್ಟು ವಿವರಣಾ ಪೂರ್ವಕವಾಗಿ ಸ್ಥಾಪಿಸುವುದಕ್ಕೆ ವಚನಕಾರನು ತೊಡಗಿರುವುದು ಸ್ಪಷ್ಟವಾಗುತ್ತದೆ. ಆದ್ದರಿಂದಲೇ ಈ ಎರಡೂ ಸಂಕಲನಗಳಲ್ಲಿ ಸ್ವೀಕರಿಸಿರುವ ಈ ವಚನದ ಪಾಠವು ಸಮರ್ಪಕವಾಗಿಲ್ಲ. ಇವೆಲ್ಲ ಪಾಠಪ್ರಭೇದಗಳನ್ನು ಗಮನಿಸಿ ಸಮರ್ಪಕವಾದ ಪಾಠರೂಪವು ಈ ಕೆಳಕಂಡಂತಿರಬೇಕೆಂದು ನಮ್ಮ ತೀರ್ಮಾನ :

"ಸ್ಥಾವರಲಿಂಗಪೂಜೆ ಶುದ್ಧಶೈವ, ಮಾರ್ಗ (ಶೈವ) ಪೂಜೆ ಸಿಂಹಾಸನ, ಪೂರ್ವಶೈವಪೂಜೆ ಸಂಕಲ್ಪ ನಿರಾವರಣ, ವೀರಶೈವಲಿಂಗಪೂಜೆ ಅಂಗದ ಮೇಲೆ ಹಿಂಗದೆ ಧರಿಸಿಹುದು. ಇವೆಲ್ಲವು ಸರಿ; ವೀರಶೈವಪೂಜೆ ಅದೆಂತೆಂದಡೆ : ಇಷ್ಟಲಿಂಗ ಜೀವನ ಅಂಗ ಉಭಯವ ಕೂಡಿ ಲೀಯವಾಗಿದ್ದುದು ಶೈವಭೇದಂಗಳಿಗೆ ಹೊಱಗು, ಸದಾಶಿವಮೂರ್ತಿ ಲಿಂಗಕ್ಕೆ ಒಳಗು."

ಈಗ ಈ ವಚನಕ್ಕೆ ಹೆಚ್ಚು ಸಮರ್ಪಕವಾಗಿ ಅರ್ಥ ಹೇಳಲು ಸಾಧ್ಯವಾಗುತ್ತದೆ: ಶುದ್ಧಶೈವರು ಸ್ಥಾವರಲಿಂಗಪೂಜೆ ಮಾಡುವವರು, ಮಾರ್ಗಶೈವಕ್ಕೆ ಸೇರಿದವರು ಲಿಂಗವನ್ನು ಸಿಂಹಾಸನದಲ್ಲಿ (ಪೀಠದ ಮೇಲೆ) ಸ್ಥಾಪಿಸಿ ಪೂಜಿಸುವವರು, ಪೂರ್ವಶೈವದವರು ಸಂಕಲ್ಪನಿರಾವರಣದ ಮೂಲಕ ಲಿಂಗಪೂಜೆಗೈಯುವವರು (ಎಂದರೆ ತಾವು ಲಿಂಗಪೂಜೆಯನ್ನು ಮಾಡುತ್ತೇವೆಂದು ಮೊದಲು ಸಂಕಲ್ಪ ಮಾಡಿಕೊಂಡು ಅನಂತರ ಅದರಂತೆ ಪೂಜೆಗೆ ತೊಡಗುವವರು ಎಂಬುದನ್ನಿದು ಸೂಚಿಸುತ್ತದೆಯೇ ?). ಆದರೆ ವೀರಶೈವರಾದರೋ ಲಿಂಗವನ್ನು ಸದಾ ದೇಹದ ಮೇಲೆಯೇ ಧರಿಸುತ್ತಾರೆ. ಹೀಗೆ ಈ ನಾಲ್ಕು ಶೈವಪ್ರಭೇದಗಳಿಗೆ ಸೇರಿದವರು ಲಿಂಗಪೂಜೆಯನ್ನು ಮಾಡುವ ವಿಧಾನವನ್ನು ಹೇಳಿ ಕೊನೆಗೆ ವೀರಶೈವರು ಧರಿಸಿದ 'ಇಷ್ಟಲಿಂಗ'ವು ಅವರ 'ಜೀವನ ಅಂಗ'ದಲ್ಲಿಯೇ ಸೇರಿಹೋಗಿರುವುದರಿಂದ ಇವೆರಡೂ ಅಭಿನ್ನ, ಹೀಗಾಗಿ ಅಂಗ–ಲಿಂಗ ಬೇರೆಬೇರೆಯಾಗಿರುವ ಇತರ ಶೈವಗಳಿಗಿಂತ ವೀರಶೈವವು ಹೊರತಾದುದಷ್ಟೇ ಅಲ್ಲದೆ ಸದಾಶಿವಮೂರ್ತಿಲಿಂಗಕ್ಕೆ ಹೆಚ್ಚು ಹತ್ತಿರವಾದುದು – ಇದೇ ವಚನಕಾರನ ಇಲ್ಲಿನ ಆಶಯ.

ನಮ್ಮ ಈ ವಾದಕ್ಕೆ ಮಾರಿತಂದೆಯಿಂದಲೇ ಒಂದು ಸಮರ್ಥನೆಯನ್ನು ನೀಡಬಹುದು. ಅವನದೇ ಮತ್ತೊಂದು ವಚನವು ಹೀಗಿದೆ: "ವೀರಶೈವ ಗುರುವಾಗಿ

ಶುದ್ಧಶೈವಕ್ಕೆ ಹೊಱಗಾಗಬೇಕು, ಶುದ್ಧ ಶೈವ ಗುರುವಾಗಿ ಮಾರ್ಗಶೈವಕ್ಕೆ ಹೊಱಗಾಗಬೇಕು, ಮಾರ್ಗಶೈವಕ್ಕೆ ಗುರುವಾಗಿ ಪೂರ್ವಶೈವಕ್ಕೆ ಹೊಱಗಾಗಬೇಕು. ಇಂತೀ ಶೈವಂಗಳಲ್ಲಿ ಸನ್ನದ್ಧವಾಗಿ ತಿಳಿದು ಅಂಗಲಿಂಗ ಆತ್ಮನಲ್ಲಿ ನಿಂದು ಸಂಯೋಗವ ಮಾಡಬೇಕು. ಮಾಡಿದಲ್ಲಿ ಕೂಡಿದ ಕಾರಣ ವೀರಶೈವವೆಂಬ ಹೆಸರಾಯಿತ್ತು ಸದಾಶಿವಮೂರ್ತಿಲಿಂಗವನಱಿತಲ್ಲಿ."[3] ಇಲ್ಲಿ ವೀರಶೈವವನ್ನು ಮತ್ತೆ ಶುದ್ಧಶೈವ, ಮಾರ್ಗಶೈವ, ಪೂರ್ವಶೈವಗಳೊಡನೆಯೇ ಹೋಲಿಸುತ್ತಿದ್ದಾನೆ, ವಚನಕಾರ. ವೀರಶೈವ ಗುರುವಾದವನು ಕ್ರಮವಾಗಿ ಶುದ್ಧ–ಮಾರ್ಗ–ಪೂರ್ವಶೈವಗಳ ಲಕ್ಷಣಗಳನ್ನು ತೊರೆಯಬೇಕು, ಎಂದು ವಿಕಾಸಕ್ರಮವನ್ನಿಲ್ಲಿ ಸೂಚಿಸುತ್ತಿರುವಂತೆ ತೋರುತ್ತದೆ. ಆದ್ದರಿಂದ ಮೇಲೆ ಪಾಠಪರಿಷ್ಕರಣಕ್ಕಾಗಿ ಆಯ್ದುಕೊಂಡ ವಚನದಲ್ಲಿಯೂ ವೀರಶೈವವು ಶುದ್ಧಶೈವ, ಮಾರ್ಗಶೈವ, ಪೂರ್ವಶೈವಗಳೊಡನೆಯೇ ಹೋಲಿಕೆಗೊಳ್ಳುವುದು ಸಹಜವೆನಿಸುತ್ತದೆ.

ನಾವು ಪಾಠದ ಬಗ್ಗೆ ಗಮನ ಹರಿಸುತ್ತಿರುವ ಮತ್ತೊಂದು ವಚನವೆಂದರೆ ಅಲ್ಲಮನದು. ಅವನ ಒಂದು ವಚನವು 'ಅಲ್ಲಮನ ವಚನ ಚಂದ್ರಿಕೆ' ಯಲ್ಲಿ ಪಾಠಾಂತರ ಸಮೇತವಾಗಿ ಹೀಗಿದೆ :

> "ಊರಕ್ಕಿ ಊರೆಣ್ಣೆ ಉಣ್ಣು ಮಾರಿಕವ್ವೆ ; ತಾಯೆ [1] ಬಾರಿಕಮಾ [1] ರನ
> ತಲೆಗಾಯಿ ಎಂಬಂತೆ, ಕಾಡಹೂ ಕೈಯಲಿಂಗವ ಪೂಜಿಸುವಾತನ
> ಭಕ್ತನೆಂಬರು, ಅಲ್ಲ ! ತಾನು ಲಿಂಗ, ತನ್ನ ಮನವೆ ಪುಷ್ಪ, ಪೂಜೆಯ
> ಪೂಜಿಸುವಾತನೆ ಸದ್ಭಕ್ತನು ಗುಹೇಶ್ವರ. "[4]

1. ಬಾರಿಕಮ್ಮಾ (ಕ) ಬಾರೆ ಕುಮಾರನ (ಪ್ರ)

(ಈ ಮೇಲೆ ವಚನವನ್ನು ಕೊಡುವಾಗ ಇತರ ಪಾಠಾಂತರಗಳಿದ್ದರೂ ನಮಗೆ ಪ್ರಸ್ತುತವಾದ ಭಾಗಕ್ಕೆ ಇರುವ ಪಾಠಾಂತರಗಳನ್ನು ಮಾತ್ರ ನೀಡಿದ್ದೇವೆ). ಇಲ್ಲಿ ಸೂಚಿಸಿರುವ ಪಾಠಪ್ರಭೇದಗಳಲ್ಲಿ 'ಪ್ರ' ಪ್ರತಿಯ ಪಾಠವೇ ಸ್ವೀಕಾರಾರ್ಹ ಎನ್ನಿಸುತ್ತದೆ. ಅದನ್ನು ಬಳಸಿಕೊಂಡಾಗ ವಚನದ ಮೊದಲಭಾಗವು ಹೀಗಾಗುತ್ತದೆ "ಊರಕ್ಕಿ ಊರೆಣ್ಣೆ ಉಣ್ಣು ಮಾರಿಕವ್ವೆ ; ತಾಯೇ, ಬಾರೆ ಕುಮಾರನ ತಲೆಗಾಯಿ ಎಂಬಂತೆ."

ಈ ಪಾಠವನ್ನು ನಾವು ಸ್ವೀಕರಿಸಿದ್ದಾದರೆ ವಚನಕ್ಕೆ ಎಷ್ಟು ಸಮರ್ಪಕವಾಗಿ ಅರ್ಥೈಸಬಹುದೆಂಬುದನ್ನೀಗ ನೋಡೋಣ. ಈ ಮಾತು ಮಾರಿಕವ್ವೆ ಎಂಬ ಆ ಕಾಲದ ಜನಪ್ರಿಯ ಸ್ತ್ರೀದೈವವೊಂದನ್ನು ಕುರಿತದ್ದು. ಮಾರಿಕವ್ವೆ ಜೋಕನ

---

3. ಬಿ. ಎಸ್. ಸಣ್ಣಯ್ಯ : ಅರಿವಿನ ಮಾರಿತಂದೆಗಳ ವಚನಗಳು, ವ. 44 : ಪುಟ. 11
4. ಎಲ್. ಬಸವರಾಜು : ಅಲ್ಲಮನ ವಚನ ಚಂದ್ರಿಕೆ, ವ. 407 : ಪು. 91

ಹೆಂಡತಿ, ಜೋಕುಮಾರನ ತಾಯಿ ; ಅವನು ಹುಟ್ಟಿದ ಏಳು ದಿನಗಳಲ್ಲಿಯೇ ತನ್ನ ತಂದೆಯನ್ನು ಹುಡುಕಿಕೊಂಡು ಹೊರಟು ದಾರಿಯಲ್ಲಿ ಅಗಸರ ಹುಡುಗಿಯ ಮೇಲೆ ಮೋಹಗೊಂಡು ಆತುರಪಟ್ಟಾಗ ಜನರು ಅವನನ್ನು ಹೊಡೆದು ಸಾಯಿಸುತ್ತಾರೆ ಎಂಬ ಕತೆಯು ಈಗಲೂ ಜನರಲ್ಲಿ ಪ್ರಚಲಿತವಿದೆ.[5] ಹೀಗೆ ಮಗನನ್ನೇ ಜನರು ಹೊಡೆದು ಸಾಯಿಸುವಾಗಲೂ ಮಾರಿಕವ್ವೆ ಅವನನ್ನು ಕಾಪಾಡಲಾರದೇ ಹೋದಳು. ಆದ್ದರಿಂದ ಇವಳು ಯಾವ ಮಹಾ ದೊಡ್ಡ ದೇವತೆಯೆಂಬ ಭಾವನೆ ಆ ಕಾಲದ ಭಿನ್ನಧರ್ಮೀಯರಲ್ಲಿತ್ತು. " ತನ್ನ ಮಗನ ಜವನೊಯ್ದಲ್ಲಿ ಅಂದೆತ್ತ ಹೋದಳಾ ಮಾರಿಕವ್ವೆ ? "[6] ಎಂದು ಬಸವಣ್ಣನೂ ಪರಿಹಾಸ ಮಾಡುತ್ತಾನೆ. ಅಂತೆಯೇ ಬ್ರಹ್ಮಶಿವನೂ " ತನ್ನ ಪೆಮ್ಮಗಂ ಜೋಕಾರಂ ಸಾವಾಗ ಕಾಯಲಾಜಿದ ಕೀವಿಲು ಪೇಳ್ವಿಜರ್ಗೆ ಮಾಡಲಾರ್ಪಳೆ ಸುಖಮಂ "[7] ಎಂದು ತುಚ್ಛ ಭಾವನೆಯನ್ನು ತೋರ್ಪಡಿಸುತ್ತಾನೆ. ಅಲ್ಲಮನ ವಚನದ ನಾವು ಸೂಚಿಸಿದ ಪಾಠವನ್ನೊಳಗೊಂಡ ಭಾಗವೂ ಈ ಭಾವನೆಯನ್ನೇ ಪ್ರತಿಬಿಂಬಿಸುತ್ತದೆ. ಮಾರಿಕವ್ವೆಯು ಜನರಿಂದಲೇ ತಿರಿದುಂಬ ದೈವ. ಅವಳು ತನ್ನ ಮಗನನ್ನಾದರೂ ಸಾವಿನಿಂದ ತಪ್ಪಿಸುವ ಶಕ್ತಿಯನ್ನು ತೋರ್ಪಡಿಸಿದ್ದರೆ ಅವಳಿಗೆ ಊರವರು ಅಕ್ಕಿ - ಎಣ್ಣೆ ಮುಂತಾದವುಗಳನ್ನು ನೀಡಬಹುದಾಗಿತ್ತು, ಎಂದು ವ್ಯಂಗ್ಯಪೂರ್ಣವಾಗಿ ಸೂಚಿಸುತ್ತದೆ. ಈ ಕತೆಗೆ ಸೂಚನೆ ನೀಡಿದ ನಂತರ ಕೊನೆಯಲ್ಲಿ 'ಎಂಬಂತೆ' ಎಂದಿರುವುದರಿಂದ, ಈ ವಾಕ್ಯವು ಆ ಕಾಲದಲ್ಲಿ ವ್ಯಂಗ್ಯಾತ್ಮಕವಾದ ಒಂದು ಗಾದೆಯಂತೆ ಬಳಕೆಯಲ್ಲಿದ್ದಿರಬಹುದಾದ ಸಾಧ್ಯತೆಯಿದೆ. ಈ ಕತೆಯ ಹಿನ್ನೆಲೆಯನ್ನಿಟ್ಟುಕೊಂಡರೆ ಅಲ್ಲಮನ ಈ ವಚನದ ಆಶಯ ಸಂಪೂರ್ಣವಾಗಿ ಸ್ಪಷ್ಟವಾಗುತ್ತದೆ : ಹೇಗೆ ಊರಿನ ಅಕ್ಕಿ-ಎಣ್ಣೆಗಳನ್ನು ತಿರಿದುಂಬ, ಮಗನನ್ನೇ ಕಾಯಲಾರದ ಮಾರಿಕವ್ವೆಯನ್ನು ನಾವು ಹೇಗೆ ದೈವವೆಂದು ಪರಿಗಣಿಸಲಾಗುದಿಲ್ಲವೋ, ಹಾಗೆಯೇ ಕೈಯಲ್ಲಿನ ಲಿಂಗವನ್ನು ಕಾಡಿನ ಹೂವಿನಿಂದ ಪೂಜಿಸುವವನನ್ನು ಭಕ್ತನೆಂದು ಪರಿಗಣಿಸಲಾಗದು, ಯಾರು ಮನಸ್ಸೆಂಬ ಹೂವಿನಿಂದ ಪೂಜೆಮಾಡಬಲ್ಲನೋ ಅವನೇ ನಿಜವಾದ ಸದ್ಭಕ್ತ – ಎಂಬುದು ಇಲ್ಲಿನ ಅರ್ಥ.

---

5. ವಿವರಣೆಗೆ ನೋಡಿ, ಎಂ. ಚಿದಾನಂದಮೂರ್ತಿ : ಜೋಕುಮಾರ (ಸಂಶೋಧನ ತರಂಗ : ಪು. 105-114)
6. ಆರ್. ಸಿ. ಹಿರೇಮಠ : ಬಸವಣ್ಣನವರ ವಚನಗಳು, ವ. 558 : ಪು. 224
7. ಬಿ. ಎಸ್. ಕುಲಕರ್ಣಿ : ಸಮಯ ಪರೀಕ್ಷೆ, 9. 10

# ಕ್ಷೇತ್ರ

ಹೆಚ್. ಹೆಚ್. ಗಂಗಾಧರಾಚಾರ್

ಯಾವ ಹಳ್ಳಕ್ಕೆ ಯಾವ ಜಿಂಕೆ ಜಿಗಿಯಿತೊ
ಅಲ್ಲಲ್ಲಿ ಒಂದೊಂದು ಲೀಲಾಕ್ಷೇತ್ರ
ಒಂದಕ್ಕೆ ಹತ್ತಾಗುವ ಹತ್ತಕ್ಕೆ ನೂರಾಗುವ
ಈ ಸಮೃದ್ಧ ಕೇತ್ರಗಳಲ್ಲಿ
ಸರಿವ ಸಂಸಾರಗಳಲ್ಲಿ ಕ್ಷಣಕ್ಷಣಕ್ಕೆ
ಸರಸ–ವಿರಸಗಳ ಕಲಸು ಮೇಲೋಗರ
ಯಾರನ್ನು ಯಾರೋ ಮೋಹಿಸಿ
ಅಲ್ಲಲ್ಲಿ ಸಂಸಾರ ಹೂಡಿ
ಹರಿದು ಹಾಕುವ ಅಂಗಿಗಳಿಗೆ ಲೆಕ್ಕವಿಲ್ಲ
ಪರಸ್ಪರ ನಕ್ಕ ನಗೆಗಳಿಗೆ
ಅರ್ಥ ಹುಡುಕುವ ವ್ಯರ್ಥ ಸಾಹಸದಲ್ಲಿ
ಹೆಬ್ಬಾಗಿಲ ದಾಟಿ ಬಹುದೂರ ಸಾಗಿದ್ದೇವೆ
ಇಲ್ಲಿ ಬೆಳೆಯುವ ಪೈರು–ಪಚ್ಚೆ
ಮತ್ತು ಹರಡುವ ಕೊಚ್ಚೆ ವಾಸನೆ
ಮತ್ತು ಪ್ರೇಮದ ಹೆಸರಿನಲ್ಲಿ ಕಾಮು-
ದ ಕಣಕ್ಕಿಳಿದು ನಡೆಸುವ ಕಸರತ್ತು-
ಗಳಿಗೆ ಯಾವ ಶಿಲಾ ಶಾಸನದಲ್ಲಿ
ಕೊರೆಯುತ್ತಾರೆ ದಾಖಲೆ ?

# ಇಂಗ್ಲಿಷ್ ಸಾಹಿತ್ಯದಲ್ಲಿ ಸಂಪ್ರದಾಯ

**ಸಿ. ಆರ್. ಎ.**

ಆಚಾರವು 'ವೃದ್ಧಾಚಾರ'ವೆಂದು ಕರೆಸಿಕೊಳ್ಳುತ್ತದೆ. ಅದನ್ನು 'ನಡೆಸಿಕೊಂಡು ಬರಬೇಕು'–ಎಂಬುದು ಹಿರಿಯರ ಆದೇಶ. ಏಕೆ? ಎಂಬ ಪ್ರಶ್ನೆಗೆ ಸಮಾಧಾನವು ಒಂದು ರೀತಿಯಿಂದ ಕಷ್ಟಸಾಧ್ಯ, ಒಂದು ರೀತಿಯಿಂದ ಅಸಾಧ್ಯವೆಂದು ಹೇಳಬಹುದು. 'You have to move mountains' ಎಂದು ಪಾಸ್ಟರ್‌ನಾಕ್‌ರು ಬೇರೆ ವಿಷಯಕ್ಕೆ ಹೇಳಿದುದನ್ನು ಇಲ್ಲಿ ಅನ್ವಯಿಸಿಕೊಳ್ಳಬಹುದು. ಮೇಲ್ಕಂಡ ಪ್ರಶ್ನೆಯಂತಹ ಅನೇಕ ಪ್ರಶ್ನೆಗಳಿಗೆ 'ಬೇಕಾದ' ಉತ್ತರಗಳು ಅಡಗಿಹೋಗಿರುವುದು (ಅನವಶ್ಯಕ ಮನಸ್ತಾಪ ಇತ್ಯಾದಿಗಳನ್ನು ತಪ್ಪಿಸಲು) ಕಾಲ ವೈಚಿತ್ರ್ಯವೆಂದು ಕೊಳ್ಳೋಣ. (ಕಾಲನು ನಮ್ಮನ್ನು ಕ್ಷಮಿಸಲಿ. Amen!)

ಇದು ಜೀವನಕ್ಕೆ ಸಂಬಂಧಿಸಿದ ವಿಷಯವಾಯಿತು.

ಜೀವನ ಮತ್ತು ಸಾಹಿತ್ಯಗಳಲ್ಲಿ ಸಮನ್ವಯ ಶೋಧನೆಯು ಪಾಶ್ಚಾತ್ಯ ಸಾಹಿತ್ಯ (ವಿಮರ್ಶೆಯೂ ಸೇರಿದಂತೆ)ದ ನಿರ್ದೇಶಕ ತತ್ವಗಳಲ್ಲಿ ಮುಖ್ಯವಾದುದೊಂದು–ಎಂಬಂತೆ ಕಂಡು ಬರುತ್ತದೆ. ಭೂಮಿಯ ಮೇಲಿನ ಮಾನವ ಜೀವನವು ಇಂದಿನದಲ್ಲ. ಆಯಾ ಕಾಲಗಳಲ್ಲಿ, ಆಯಾ ಸಂದರ್ಭಗಳಲ್ಲಿ ಅವನು ತನ್ನನ್ನು, ತನ್ನ ಮನಸ್ಸನ್ನು ಕಾಪಾಡಿಕೊಳ್ಳಲು ನಡೆಸಿಕೊಂಡು ಬಂದ ಅವನ ಪ್ರಯತ್ನವು 'ಪರಂಪರೆ'ಯಾಯಿತು. ಅದನ್ನು ಮುಂದಿನವರು 'ಸಂಪ್ರದಾಯ'ವೆಂದರು. ಸಂಪ್ರದಾಯದೊಡಗೂಡಿದ ಜೀವನ ನಿಷ್ಠೆಯು 'ಮಾರ್ಗ'ವೆಂದಾಯಿತು. ಈ ಎಲ್ಲ ಪದಗಳೂ 'ಧಾರ್ಮಿಕ' ಎಂಬ ವಿಶೇಷಣದೊಡಗೂಡಿಯೇ ಅರ್ಥಮಾಡಿಕೊಳ್ಳಲ್ಪಡುತ್ತವೆ. ಆದರೆ ಪಾಶ್ಚಾತ್ಯ ವಿಮರ್ಶಕರು ಈ ಪದಗಳನ್ನು ಸಾಹಿತ್ಯದಲ್ಲಿ ಶೋಧಿಸುವುದಲ್ಲದೆ ಅವುಗಳನ್ನು (ಮುಖ್ಯವಾಗಿ 'ಸಂಪ್ರದಾಯ'ದ) ಅರ್ಥವಾಗುವಂತೆ (rationalising) ತರ್ಕಬದ್ಧವಾಗಿ ವಿವರಿಸುವುದು ಅವರಿಗೆ ಲಭ್ಯವಾಗಿರುವ ವೈಜ್ಞಾನಿಕ ಸೃಜನಶೀಲತೆಗೆ ಸಾಕ್ಷಿಯಾಗಿದೆ. ವಿಜ್ಞಾನವು ಬೆಳೆದ ನಾಡುಗಳಲ್ಲಿ ವೈಜ್ಞಾನಿಕ ದೃಷ್ಟಿಯೂ ಬೆಳೆದುಬಂದಿದೆ. ಅದರೊಡನೆ–ಕಾಲಕಾಲಕ್ಕೆ ವಿಮರ್ಶಕರು ಬರುವರು ಸಾಹಿತ್ಯದ ಮೌಲ್ಯಮಾಪನೆ ನಡೆಯುವುದು ಎಂಬಂಥ– ಅಪೂರ್ವ ವಿನಯವೂ ವ್ಯಕ್ತವಾಗಿದೆ.

ಇಂಗ್ಲಿಷ್ ಸಾಹಿತ್ಯದಲ್ಲಿ ಸಂಪ್ರದಾಯದ ಬಗೆಗೆ ಹೇಳಲಾಗುವ ಕೆಲವು ವಿಚಾರಗಳನ್ನು ಗಮನಿಸುವಾಗ ಆ ವಿಚಾರಗಳು ಯಾರವೋ ಅವರಿಗೆ 'ಸಂಪ್ರದಾಯ ವಾದಿಗಳು' 'ಸಂಪ್ರದಾಯಸ್ಥರು' ಎಂದು ತಕ್ಷಣ ಕರೆಯಬೇಕೆನಿಸುವ ಪ್ರವೃತ್ತಿಯನ್ನು ಸ್ವಲ್ಪ ತಡೆದು ಹಿಡಿಯುವುದು ಅವಶ್ಯಕ.

## 2

ಇಂಗ್ಲಿಷ್ ಸಾಹಿತ್ಯ (ವಿಮರ್ಶೆಯೂ ಸೇರಿಕೊಂಡು) ದಲ್ಲಿ 'ಸಂಪ್ರದಾಯ'ದ ಬಗ್ಗೆ ಖಚಿತವಾಗಿ ಮಾತನಾಡುವವರು ಎಫ್. ಆರ್. ಲೀವಿಸ್. ಅವರು ಸಂಪ್ರದಾಯದ ವಿಚಾರವಾದ ತಮ್ಮ ಬರಹವನ್ನು ಮಹಾನ್ ಸಂಪ್ರದಾಯ – The Great Tradition – ಎಂದು ಕರೆದಿದ್ದಾರೆ. ಒಳ್ಳೆಯ ವ್ಯಕ್ತಿತ್ವ, ಆಳವಾದ, ದೀರ್ಘವಾದ ಅಭ್ಯಾಸಗಳು. 'ಶೈಲಿ'ಗೆ ಎಂತಹ ಮೆರುಗನ್ನು, ಖಚಿತತೆಯನ್ನು ಕೊಡುತ್ತವೆ ಎಂಬುದಕ್ಕೆ ಅವರ ಒಂದೆರಡು ವಾಕ್ಯವನ್ನು ಗಮನಿಸಬಹುದು. ಇಲ್ಲಿ, ಒಂದು ವಿಷಯವನ್ನು ಹೇಳುವಾಗ ಆ ಹೇಳಿಕೆಗೆ ಸೃಷ್ಟಿಯಾಗಿರುವ ಪರಿಸರದ ಭದ್ರತೆಯನ್ನು ಗಮನಿಸಬೇಕು.

"It passes as fact (in spite of printed evidence) that I pronounce Milton negligible, dismiss 'The Romantics' and hold that since Donne, there is no poet we need bother about except Hopkins and Eliot. The view, I suppose, will be as confidently attributed to me that, except Jane Austen, George Eliot, James and Conrad, there are no novelists in English worth reading".

ಏನನ್ನು ಹೇಳಿದರೂ ಬೇರೆ ಏನನ್ನೋ ಅರ್ಥಮಾಡುವುದು ವಿಮರ್ಶೆಯ 'ಕಣ'ದಲ್ಲಿ ಸಹಜವೂ ಆಹುದು, ಪ್ರಯತ್ನಪೂರ್ವಕವೂ ಆಗಬಹುದು. ಆದ್ದರಿಂದಲೇ ಹೇಳಿಕೆಯಲ್ಲಿ ಆದಷ್ಟು ಸ್ಪಷ್ಟತೆ ಅವಶ್ಯಕವೆಂದು ಹೇಳುತ್ತಾರೆ.

"The only way to escape misrepresentation is never to commit oneself to any critical judgment that makes an impact that is, never to say anything. I...think that the best way to promote srofitable discussion is to be as clear as possible...to try and establish the essential discriminations in the given field of interest and to state them as clearly as one can (for disagreement, if necessary.)

* *

ಎಫ್. ಆರ್. ಲೀವಿಸ್ ಇಂಗ್ಲಿಷ್ ಕಾದಂಬರಿಗಳ ವಿಚಾರದಲ್ಲೂ ಹೇಳುತ್ತಾರೆ.

The great English novelists are Jane Austen, George Eliot, Henry James and Joseph Conrad...
ಹೀಗೆ ; ಹೀಗೆಯೇ, ಅವರು ಪ್ರಾರಂಭಿಸುವುದು.

ಕಥಾವಸ್ತು, ಚರಿತ್ರ ಚಿತ್ರಣ, ಭಾಷೆ, ಶೈಲಿ ಇವುಗಳನ್ನು ಲೆಕ್ಕಕ್ಕೆ ತೆಗೆದುಕೊಂಡ ಮೇಲೂ ಅಥವಾ ಅಷ್ಟು ವಿಷಯಗಳನ್ನು ತೆಗೆದುಹಾಕಿದ ಮೇಲೂ ಕಾದಂಬರಿಯಲ್ಲಿ ಏನಾದರೂ ಉಳಿಯುತ್ತದೆಯೋ ? ಉಳಿಯುವುದಾದರೆ, ಏನು ? ಎಂಬಂಥ ಭೂಮಿಕೆ 'ಸಂಪ್ರದಾಯ'ದ ವಿಚಾರಕ್ಕೆ ಅವಶ್ಯಕವೆನಿಸುತ್ತದೆ.

ಜೀವನವು ದೊಂಬಿ, ಗೊಂದಲಗಳಿಂದ ಕೂಡಿದುದು. ಕಲೆಯ ಮುಖ್ಯ ಗುಣ ಕ್ರಮಬದ್ಧತೆ. (ಕಲಾ ಕೃತಿಯ) ಬೇರೆ ಬೇರೆ ಭಾಗಗಳಲ್ಲಿ ಹೊಂದಾಣಿಕೆ, ಪ್ರಮಾಣಬದ್ಧತೆ ಇರಬೇಕು. ಕಾದಂಬರಿಕಾರನ ಮುಖ್ಯ ಸಮಸ್ಯೆ ಎಂದರೆ ಕ್ರಮರಹಿತ ಜೀವನವನ್ನು ನೈಜವಾಗಿಯೇ ಚಿತ್ರಿಸುವುದು ; ಅದೇ ಕಾಲಕ್ಕೆ ಜೀವನವು ಕ್ರಮಬದ್ಧವಾಗಿರುವಂತೆ, ಕ್ರಮರಾಹಿತ್ಯದ ಬಗೆಗಿನ ಎಲ್ಲ ಆಕ್ಷೇಪಣೆಗಳಿಗೂ ಉತ್ತರ ಒದಗಿಸುವಂತೆ (convinsing) ಒಂದು ಸೌಂದರ್ಯವನ್ನು ಸಾಧಿಸುವುದು. ಅಂಥ ಒಂದು ಸಫಲತೆಗಾಗಿ ಕಾದಂಬರಿಕಾರನ 'ಪ್ರಯತ್ನ' ಅವಶ್ಯಕ. ಅದನ್ನೇ 'ಜೋಡಣೆ' (composition) ಎನ್ನುವುದು.

ಜೇನ್ ಆಸ್ಟಿನ್ ಈ ಕಾರ್ಯದಲ್ಲಿ ಅತ್ಯಂತ ಯಶಸ್ವಿಯಾಗಿರುವುದರಿಂದಲೇ ಆಕೆ ಇಂಗ್ಲಿಷ್ ಕಾದಂಬರಿಯ ಸಂಪ್ರದಾಯ ಪ್ರಾರಂಭಿಸುತ್ತಾಳೆ.

ಜೀವನ ಮತ್ತು ಕಲೆ– ಇವುಗಳ ಪರಸ್ಪರ ವಿರುದ್ಧ ಬೇಡಿಕೆಗಳ ನಡುವೆ ಸಾಮರಸ್ಯ ಸಾಧಿಸಿದುದರಿಂದ ಜಾರ್ಜ ಇಲಿಯಟ್ ಇಂಗ್ಲಿಷ್ ಕಾದಂಬರಿಯ ಈ ಸಂಪ್ರದಾಯದಲ್ಲಿ ಮುಖ್ಯಳಾಗುತ್ತಾಳೆ. ಆಕೆ ಪ್ರಮುಖವಾಗಿ ನೀತಿ, ಬೋಧನೆ ಇತ್ಯಾದಿ ಧಾರ್ಮಿಕ ಸಂಪ್ರದಾಯ ಪ್ರವೃತ್ತಿಯುಳ್ಳವಳಾಗಿದ್ದು ಕಾದಂಬರಿಗಳ ರಚನೆಯಲ್ಲಿ ತನ್ನ ಪ್ರವೃತ್ತಿಗಳ ಸೀಮಾಲಂಘನೆ ಮಾಡುವುದು ಆಕೆಯ ಹೆಚ್ಚುಗಾರಿಕೆ.

ಹೆನ್ರಿ ಜೇಮ್ಸ್ ಅಮೆರಿಕನ್ ಕಾದಂಬರಿಕಾರ. (ಇಂಗ್ಲೆಂಡಿನೊಡನೆ ಅವನ ಸಂಬಂಧ ಭಾಷಾ ಪ್ರಧಾನವೆಂದು ತೆಗೆದುಕೊಳ್ಳಬಹುದು.) ಕಲಾವಿದನಾಗಿ ಆತನ ಪ್ರಮುಖ ಗುಣವೆಂದರೆ ಕಾದಂಬರಿಯ ರೂಪ (form) ಮತ್ತು ರಚನೆ (method) ಯಲ್ಲಿ ವಿಶೇಷ ಎಚ್ಚರಿಕೆ. ಈ ಎಚ್ಚರಿಕೆ ಪ್ರಯತ್ನಪೂರ್ವಕವೆಂದು ತೆಗೆದು ಹಾಕಿದರೂ, ಜೀವನದ ಬಗೆಗೆ ಆತನ ಸಹೃದಯತೆ ವಿಶೇಷ ನಿಷ್ಠೆಯಿಂದ ಕೂಡಿದುದು.

ಜೋಸೆಫ್ ಕಾನ್ರಾಡ್ ಪೋಲಂಡಿನವನು. ಮಾತೃಭಾಷೆಯನ್ನು ಬಿಟ್ಟರೆ ಆತನ ಪ್ರಥಮ ವಿದೇಶ ಭಾಷೆ ಫ್ರೆಂಚ್. ಫ್ರೆಂಚ್ ಮತ್ತು ಇಂಗ್ಲಿಷ್ ವಾಣಿಜ್ಯ ನೌಕೆಗಳಲ್ಲಿ ಕೆಲಸಮಾಡಿದ ಆತನಿಗೆ ಜೀವನದ ಎಲ್ಲ ಸ್ತರಗಳಲ್ಲಿ ಮಾನವನು ಅವಲಂಬಿ

ಯಾಗಿರುವುದು ಗೋಚರವಾಗುತ್ತಿದೆ. ಈ ಅವಲಂಬನೆಯು ಫಲವೇ ನೌಕಾ ವಾಣಿಜ್ಯ ; ಅದು ಮಾನವನ ಸ್ವಬುದ್ಧಿಯ ವಿರುದ್ಧವಾದ ಸಂಚಲ್ಲದೆ ಮತ್ತೇನು ? ಎನ್ನುವಂತೆ ಸಿಡಿದು ಬೀಳುತ್ತಾನೆ ಕಾನ್ರಾಡನ ಕಾದಂಬರಿಗಳ ನಾಯಕ. ಜೇನ್ ಆಸ್ಟಿನ್ ತನ್ನ ಪಾತ್ರಗಳನ್ನು ಏಕಾಕಿತನದಿಂದ ರಕ್ಷಿಸಿಕೊಳ್ಳಬೇಕಾಗುತ್ತಿತ್ತು ; ಅದಕ್ಕೆ ವಿರುದ್ಧವಾದುದು ಕಾನ್ರಾಡನ ಸಮಸ್ಯೆ. ಹೆನ್ರಿ ಜೇಮ್ಸ್‌ನನ್ನು ಎಲ್ಲ ರೀತಿಯಿಂದ ಹೋಲುವ ಕಾನ್ರಾಡನ ಜೀವನ ನಿಷ್ಠೆಯು ಅವನ ಗದ್ಯ ರಚನೆಗಳನ್ನು ಕಾವ್ಯದ ಮಟ್ಟಕ್ಕೂ ಒಯ್ಯುತ್ತಿದೆ.

ಹೀಗೆ, ಜೇನ್ ಆಸ್ಟಿನ್–ಜಾರ್ಜ ಇಲಿಯಟ್–ಹೆನ್ರಿ ಜೇಮ್ಸ್–ಜೋಸೆಫ್ ಕಾನ್ರಾಡ್‌ರನ್ನೊಳಗೊಂಡ ಇಂಗ್ಲಿಷ್ ಕಾದಂಬರಿಯ (central–ಕೇಂದ್ರವಲ್ಲ) ಸಂಪ್ರದಾಯ ಪ್ರಮುಖತೆಯನ್ನು ಲೀವಿಸ್ ವಿಸ್ತರಿಸುತ್ತಾರೆ. ಕಾದಂಬರಿಯ ರೂಪ (form) ರಚನೆಯಲ್ಲಿ ಮುಖ್ಯವಾದ ಡಿ. ಎಚ್. ಲಾರೆನ್ಸನ ಹೆಸರು ಈ ಸಂಪ್ರದಾಯ ದಲ್ಲಿ ಸೇರುತ್ತದೆ.

ಥಾಮಸ್ ಸ್ಟರ್ನ್ಸ್ ಇಲಿಯಟ್ ಇಂಗ್ಲಿಷ್ ನಾಗರಿಕನಾಗಿ ನೆಲೆನಿಂತ ಅಮೆರಿಕನ್ ಕವಿ, ನಾಟಕಕಾರ, ವಿಮರ್ಶಕ. ಈತನು ಚರ್ಚಿಸಿರುವ ಅನೇಕ ವಿಷಯಗಳಲ್ಲಿ, ಸಾಹಿತ್ಯದಲ್ಲಿ ಸಂಪ್ರದಾಯಕ್ಕೂ ವೈಯಕ್ತಿಕ ಪ್ರತಿಭೆಗೂ ಇರುವ ಸಂಬಂಧವು ಪ್ರಸ್ತುತದಲ್ಲಿ ಗಮನೀಯವಾದುದು. ಸಂಪ್ರದಾಯವೆಂದರೆ ಹಿಂಬಾಲಿಕೆಯೇ ? ವೈಯಕ್ತಿಕ ಪ್ರತಿಭೆಯ ನೆಲೆಏನು ? ಅದು ಸಂಪ್ರದಾಯದಿಂದ ವೃದ್ಧಿಯಾಗುತ್ತದೆಯೇ ? ಸಂಪ್ರದಾಯಕ್ಕೆ ವೈಯಕ್ತಿಕ ಪ್ರತಿಭೆ ಇಂದ ಏನಾಗುತ್ತದೆ ? ಇತ್ಯಾದಿ ವಿಷಯಗಳಿಗೆ ವಿಚಾರ ವಿಸ್ತಾರ ಮಾಡುತ್ತ ಹೋಗುವನು.

ಪ್ರತಿಯೊಂದು ರಾಷ್ಟ್ರವೂ, ಪ್ರತಿಯೊಂದು ಜನಾಂಗವೂ ತನ್ನದೇ ಆದ ಸಾಹಿತ್ಯ (creative) ಸೃಷ್ಟಿ, ಮತ್ತು ವಿಮರ್ಶಾ (critical) ಸ್ವಭಾವ (bent of mind) ವನ್ನು ಪಡೆದಿರುತ್ತದೆ. ಸಂಪ್ರದಾಯವೆಂದರೆ ಒಂದು ವಿಚಾರವನ್ನು ಅಸಹಾಯಕತೆಯಿಂದ ಹಿಂಬಾಲಿಸುವುದಲ್ಲ. ಅಂಥ ಹಿಂಬಾಲಿಕೆಗೆ ಉತ್ತೇಜನ ಕೊಡಬಾರದು. ಸಂಪ್ರದಾಯವನ್ನು ವೈಯಕ್ತಿಕ ಪ್ರತಿಭೆಯ ಮೂಲಕ, ಕ್ರಮಬದ್ಧ ದುಡಿಮೆಯಿಂದ ಸಂಪಾದಿಸಬೇಕಾಗುತ್ತದೆ.

ಯಾವ ಕಲಾವಿದನೂ ಒಂಟಿಯಾಗಿ ನಿಂತು ತಾನೇ ಬೆಳಗಲಾರ. ಅವನನ್ನು ತುಲನೆಗಾಗಿ ಪೂರ್ವಿಕರ ಮಧ್ಯದಲ್ಲಿ ನಿಲ್ಲಿಸಬೇಕಾಗುತ್ತದೆ. ಇದು (ಸೌಂದರ್ಯ) ಮೀಮಾಂಸೆಯ ತತ್ವಗಳಲ್ಲೊಂದು. ಆದುದರಿಂದ ವೈಯಕ್ತಿಕಪ್ರತಿಭೆಗೆ ಸಂಪ್ರದಾಯವೇ ಬೆಂಬಲ.

ವೈಯಕ್ತಿಕ ಪ್ರತಿಭೆಯ ಫಲರೂಪವಾದ ಹೊಸ ರಚನೆಗಳಿಂದ ಹಿಂದಿನ ಮೌಲ್ಯಗಳ ಹೊಂದಾಣಿಕೆಗಾಗಿ ಅವಶ್ಯಕ ಬದಲಾವಣೆಗಳಾಗುತ್ತವೆ; ಎಂದರೆ

ವೈಯಕ್ತಿಕ ಪ್ರತಿಭೆಯಿಂದ 'ಸಂಪ್ರದಾಯ'ವು ಹೊಸಕಳೆ ಪಡೆಯುವುದು. ಆದುದರಿಂದ ಪ್ರತಿಯೊಬ್ಬ ಕಲಾವಿದನಿಗೂ ಒಂದು ಐತಿಹಾಸಿಕ ಪ್ರಜ್ಞೆ (Historical Senes) ಅವಶ್ಯಕ; ಎಂಬುದು ಇಲಿಯಟ್ ಕವಿಯ ವಿಚಾರಗಳ ಸ್ಥೂಲರೂಪ.

*

ಒಂದು ಕಲಾಕೃತಿ ರಚನೆಯಾಗುವಾಗ ಕಲಾವಿದನ ಮನಸ್ಸಿನಲ್ಲಿ ಏನಾಗುತ್ತದೆ? ಎಂಬುದು ಐ.ಎ. ರಿಚರ್ಡ್ಸ್ ಅವರು ಕೇಳುವ ಪ್ರಶ್ನೆಗಳಲ್ಲಿ ಮುಖ್ಯವಾದುದೊಂದು. ಕಲಾವಿದನು ಒಂದು ಕೃತಿಯನ್ನು ಇನ್ನೊಬ್ಬರಿಗೆ ತೋರಿಸಲೆಂದೇ ರಚಿಸುವುದಿಲ್ಲ ವೆಂದಿಟ್ಟುಕೊಳ್ಳೋಣ,ಇನ್ನೊಬ್ಬರು ಮೆಚ್ಚಲೆಂದೇ ಪದ್ಯ ಬರೆಯುವುದಿಲ್ಲವೆನ್ನೋಣ. ಆತನನ್ನು ಕೇಳಿದರೇ 'ಹೀಗೆಯೇ ಬರೆದೆ', 'ಸುಮ್ಮನೆ ಹಾಡುವೆ' ಎನ್ನಬಹುದು.

ಆತನ ಉತ್ತರವನ್ನೇ ಪ್ರಮಾಣವೆಂದಿಟ್ಟುಕೊಂಡರೂ ಕಲಾವಿದನು ತನ್ನ ಕಲಾಕೃತಿಯನ್ನು ರಚಿಸುವ ರೀತಿಯಲ್ಲಿ (ರಚನೆ ಮಾಡಿದನೆಂದರೆ) ಅವನ ಮನಸ್ಸಿನ ಸ್ಪಷ್ಟ (deliberate) ಪ್ರಯತ್ನದ ಅಂಶವನ್ನು ಕಾಣುತ್ತೇವೆ. ಅಥವಾ, ರಚನೆಯಾ ಯಿತೆಂದರೆ ಇತರರಿಗೆ ತೋರಿಸಲೆಂದೇ–ಎಂದು ಅರ್ಥ.

ಕಲಾವಿದರ ರಚನೆಗಳಿಗೆ ಪ್ರಚೋದನೆಗಳು, ರಚನಾ ವಿಧಾನಗಳ ಬಗೆಗೆ ವಿಚಾರಿಸಿದರೆ ಅವುಗಳ ಹಿನ್ನೆಲೆಯಲ್ಲಿ ಅಗೋಚರ ಅಂಶಗಳೇ ಹೆಚ್ಚು. "ಆದರೂ... ಎನ್ನುತ್ತಾರೆ ರಿಚರ್ಡ್ಸ್.

...ಕಲಾವಿದರ ಮನಸ್ಸಿನ ಅಧ್ಯಯನ ಮಾಡಿದರೆ... ಅದರ ಯಾವ ಶಕ್ತಿಗಳು ಕಲಾಕೃತಿಗಳ ರಚನೆಯಲ್ಲಿ ಹೆಚ್ಚು ಮುಖ್ಯವಾದವೆಂಬುದನ್ನು ತಿಳಿಯಬಹುದು".

*

ಕ್ಲಿಯಾನ್ತ್ ಬ್ರುಕ್ಸ್ ಇನ್ನೊಬ್ಬ ಗಮನಾರ್ಹ ಅಮೆರಿಕನ್ ವಿಮರ್ಶಕರು. ತರುಣರು, ಎಂದರೆ ಇತ್ತೀಚಿನವರು.

'A well-wrought Urn' ಎಂಬ ಪುಸ್ತಕದಲ್ಲಿ ಅವರು ಒಂದು ಸಾಮಾನ್ಯ ಪ್ರಶ್ನೆಯನ್ನು ಕುತೂಹಲಕಾರಿಯಾಗಿ ಶೋಧಿಸುತ್ತಾರೆ. ಅಸಾಮಾನ್ಯ ವಿಷಯಗಳನ್ನು ಸ್ಪಷ್ಟಪಡಿಸುತ್ತಾರೆ.

ಸಾರಾಂಶಗ್ರಹಣ (Paraphrase) ಎಂಬ ಸಾಮಾನ್ಯ ಸಂಪ್ರದಾಯವು 'ಪದ್ಯ' ವನ್ನೇ ಗ್ರಹಿಸಲು ಸಹಾಯಮಾಡುವುದೆ? ಎಷ್ಟು ಅರ್ಥವಾದರೆ ಎಷ್ಟು ಅರ್ಥ ಮರೆಯಾಗುತ್ತದೆ. ಕೈತಪ್ಪಿಹೋದ ಅರ್ಥದಿಂದ ಗುಣಗ್ರಾಹಿಗೆ ಆಗುವ ನಷ್ಟ ಎಂಥದು... ಇತ್ಯಾದಿ......ಇತ್ಯಾದಿ.

ಅದನ್ನು ಅವರು 'The Heresy of Paraphrase' ಎಂದುಕರೆದಿದ್ದಾರೆ.

ಸಾರಾಂಶಗ್ರಹಣವು ಪದ್ಯದ ಸಂಪೂರ್ಣ ಕಲ್ಪನೆ ಕೊಡಲಾರದು ಎಂಬುದು "ನಮಗೆಲ್ಲ ಗೊತ್ತಿರುವ" ವಿಷಯವೆನಿಸಬಹುದು. ಆದರೆ ಅದರ ಹಿಂದೆ ಎಷ್ಟು

ಆಳವಾಗಿ ಪರಿಣಾಮಕಾರಿಯಾಗಬಲ್ಲ ವಿಷಯಗಳು ಹೆಣೆದುಕೊಂಡಿವೆ ಎಂಬುದನ್ನು ಸ್ಪಷ್ಟವಾಗಿ ಕಂಡಾಗ ಭಯವಾಗುತ್ತದೆ. ಈ ಹಿನ್ನೆಲೆಯನ್ನು ಕ್ಲಿಯಾನ್ತ್ ಬ್ರುಕ್ಸ್ ಸಕಾರಣವಾಗಿ ಸೂಕ್ಷ್ಮವೂ ವಿಸ್ತಾರವೂ ಸ್ಪಷ್ಟವೂ ಆಗಿ ವಿವರಿಸುತ್ತಾರೆ.

## 3

ಎಫ್. ಆರ್. ಲೀವಿಸ್ ಅವರು ತಮ್ಮ 'The Great Tradition' ಪುಸ್ತಕದ ಪ್ರಾರಂಭದಲ್ಲಿ ಡಿ. ಎಚ್. ಲಾರೆನ್ಸನ ಒಂದು ಪತ್ರದ ಒಂದು ಅಂಶವನ್ನು ಉದ್ಧರಿಸುತ್ತಾರೆ.

''I know how hard it is. One needs something to make one's mood deep and Sincere......It sounds boshy, doesn't it ? I often Think one ought to be able to pray before one works and then leaveit.........''

ಇದು ಸರ್ವಾಂಗ ಶುದ್ಧ ಧಾರ್ಮಿಕತೆ. ಆದರೆ ಸಾಹಿತ್ಯದಲ್ಲಿ ಗೊಂದಲವನ್ನು ತೊಡೆದು ಹಾಕಲು ಕಂಕಣ ಕಟ್ಟಿದ Imagist ಪಂಥದಲ್ಲಿಯೂ ಇದೆ ಲಾರೆನ್ಸ್ ಸೇರುತ್ತಾನೆ. ಸಾಹಿತ್ಯರಚನೆಯ ಪದ್ಧತಿಗೆ ಒಂದು ನಿರ್ದಿಷ್ಟತೆಯನ್ನು ತಂದು ಕೊಡ ಬೇಕೆಂದು ಕಾರ್ಯ ಪ್ರವೃತ್ತರಾದ ಬಂಡು ಖೋರರ ಗುಂಪಿನಲ್ಲಿಯೂ ಈತನಿದ್ದಾನೆ. (ಎಜ್ರಪೌಂಡನ ನಾಯಕತ್ವದಲ್ಲಿ ಸಭೆಸೇರಿ ಲೈಂಗಿಕಸಾಹಿತ್ಯವನ್ನು ಆಶ್ರಿತವರ್ಗಕ್ಕೂ ಭಾರತದ ರವೀಂದ್ರನಾಥಠಾಕೂರ್ ಮುಂತಾದವರನ್ನು ಸಾಹಿತ್ಯದಿಂದದೂಡಿ ನಿರಾಶ್ರಿತ ವರ್ಗಕ್ಕೂ ಸೇರಿಸ ಬೇಕೆಂದು...ಇತ್ಯಾದಿ ಠರಾವು ಬರೆದು ಸಹಿಹಾಕಿದ 'Blast' ಪತ್ರಿಕೆ ಸಂಪಾದಕಮಂಡಲಿ ಈ ಇಮೆಜಿಸ್ಟರ ಗುಂಪಿನದು).

ಇಂತಹ ವಿಷಯಗಳನ್ನು ಲಾರೆನ್ಸ್, ಜಾರ್ಜ ಇಲಿಯಟ್ ಮುಂತಾದವರ ಬೆಳವಣಿಗೆಯನ್ನು ನೋಡಿದರೆ ಸಾಹಿತ್ಯದಲ್ಲಿ 'ಸಂಪ್ರದಾಯ' ವೆಂದು ಹೇಳುವುದು ಸಾಮಾನ್ಯ ಸಂಪ್ರದಾಯಕ್ಕೆ ವಿರುದ್ಧವಾದುದಲ್ಲವೆನಿಸುವುದು.

ಧಾರ್ಮಿಕ ಸಂಪ್ರದಾಯದ ಅಥವಾ ಸಂಪ್ರದಾಯಸ್ಥರೆಂಬುವರ ಆಂತರಿಕ ಹಿಂಸೆ, ಮತ್ತು ಪರಿಣಾಮವಾಗಿ ಹುಟ್ಟುವ ಬಾಹ್ಯಕಿರುಕುಳವನ್ನು ಅನಪೇಕ್ಷಣೀಯವೆನ್ನೋಣ ಆದರೆ ತರ್ಕಬದ್ಧ ವಿಚಾರಗಳನ್ನು ಗಮನಿಸಿದಾಗ, ಸಂಪ್ರದಾಯವು ಹಳತೇ. ಅದರ ಸ್ವರೂಪ, ಆ ಸ್ವರೂಪವನ್ನು ವ್ಯಕ್ತಪಡಿಸುವ ರೀತಿ ಮಾತ್ರ 'ಹೊಸತು' ಎನಿಸುತ್ತದೆ.

*

"ಕಲಾಕೃತಿಯ ಮೌಲ್ಯಮಾಪನದಲ್ಲಿ ನೈಜತೆಯನ್ನು ತರಬಲ್ಲದಾದುದರಿಂದ ನಮ್ಮ ಲಕ್ಷ್ಯವು 'ಕವಿ'ಯಾಗಿರದೆ 'ಕೃತಿ'ಯಾಗುವುದು ಪ್ರಶಂಸನೀಯವಾದುದೆಂದು" ಇಲಿಯಟ್ ಹೇಳುತ್ತಾನೆ. ಅಂಥ ಮೌಲ್ಯಮಾಪನಕ್ಕೆ ಸಹಾಯವಾಗುವುದು ಸಂಪ್ರ

ದಾಯ'. ಅದು ಜೀವನಕ್ಕೆ ಭದ್ರತೆಯನ್ನು ಕೊಟ್ಟರೆ, ಸಾಹಿತ್ಯದ ಸೌಂದರ್ಯ ವೃದ್ಧಿ ಮಾಡುತ್ತದೆ.

ಈಗಾಗಲೇ 'ಸಂಪ್ರದಾಯ'ವೆಂದು ಪ್ರಾರಂಭವಾದ ಬರವಣಿಗೆಯು ವೈಯುಕ್ತಿಕ ಪ್ರತಿಭೆ, ಮನಸ್ಸಿನರೀತಿ ರೀತಿನೀತಿ, ಹೀಗೆ ಮುಂದುವರಿದು ಬಂದಿತು. 'ಸಂಪ್ರದಾಯ'ದ ಸ್ವರೂಪವನ್ನು ಹೇಳುವ ರೀತಿಮಾತ್ರ ಹೊಸತು ಎಂಬ ವಿಚಾರವನ್ನು ಹಿಡಿದು ಅಂಥ ಕಾರ್ಯಕ್ಕೆ ಹೊಸರಕ್ತ ಹೆಚ್ಚು ಯೋಗ್ಯವಾದುದೆಂದು ಹೇಳಬಹುದು. ಷೇಕ್ಸ್‌ಪಿಯರ್ (ಪ್ರಮೋದಮಯ)ಯುವ ಜೀವನವನ್ನು ಚಿತ್ರಿಸಬೇಕೆಂದರೆ ಯುವಕ ಯುವತಿಯರನ್ನು ಇಟಲಿಯ ಸ್ವಚ್ಛಂದ ವಾತಾವರಣಕ್ಕೆ ಕರೆತರುವನಂತೆ. ಅವರು ಷೇಕ್ಸ್‌ಪಿಯರ್ ಹೇಳಿದಂತೆ ಕೇಳುತ್ತಿದ್ದಾರು. ಅದರೆ...

ಯುವಕ ಕವಿ, ಕಾದಂಬರಿಕಾರರ ರಚನೆಗಳಲ್ಲಿ ನವ್ಯತೆಗೆ ಹೆಚ್ಚು ಅವಕಾಶವಿದೆ ಎಂಬುದು ಭಾವ.

ಕನ್ನಡದಲ್ಲಿ ಅಂತಹ ಹೊಸತನವಿದೆಯೇ ? ಎಂಬುದು ತಕ್ಷಣದ ಪ್ರಶ್ನೆಯಾಗಬಹುದು.

ಎಲ್ಲಿ ? ಯಾರು ? ಏಕೆ ?....ಎಂಬ ಪ್ರಶ್ನೆಗಳಿಗೆ ಜಾರುವ ಚರ್ಚೆ ಉದ್ಭವವಾಗುವ ಮೊದಲು ಈ ಲೇಖನ ಕೊನೆಗೊಳ್ಳುತ್ತದೆ.

*References* :

Collected Prose – T. S. Eliot
The Great Tradition – F. R. Leavis
Tradition and Individual Talent – T. S. Eliot
Communication and the Artist - I. A. Richards
A well – wrought urn – Cleanth Brooks

# ಕಾವ್ಯಸಾರಂ (ಮಲ್ಲಿಕಪಿ ಸಂಯೋಜಿತ) ಆಕರಗಳ ಸೂಚಿ*

— ಎಸ್. ಶಿವಣ್ಣ

'ಕಾವ್ಯಸಾರಂ' ಕೃತಿ ಸಂಕಲನ ರೂಪದಲ್ಲಿದ್ದು ಸುಮಾರು 3555 ಕಂದ, ವೃತ್ತಗಳನ್ನು ಒಳಗೊಂಡಿದೆ. ಇದರಲ್ಲಿನ ಆಶ್ವಾಸಗಳು ಮಹಾಕಾವ್ಯ ಲಕ್ಷಣಗಳಲ್ಲೊಂದಾದ ಅಷ್ಟಾದಶ ವರ್ಣನೆಗಳಿಗನುಗುಣವಾಗಿ ವಿಭಾಗಿತವಾಗಿವೆ. 'ಕಾವ್ಯಸಾರಂ'– ಅಲ್ಲಿ ಮೊದಲಿನ ಪೀಠಿಕಾ ಪ್ರಕರಣವನ್ನು ಉಳಿದರೆ ಸಮುದ್ರ ವರ್ಣನೆಯಿಂದ ವಿಪ್ರಲಂಭ ವರ್ಣನೆಯ ವರೆಗಿನ 14 ಆಶ್ವಾಸಗಳು ಉಪಲಬ್ಧವಿದ್ದು ಕೃತಿ ಅಸಮಗ್ರವಾಗಿದೆ. ಪ್ರಸ್ತುತ ಕೃತಿಯನ್ನು ಸಂಪಾದಿಸಿ, ಪ್ರಕಟಿಸಿದ ಶ್ರೀ ಎನ್. ಅನಂತರಂಗಾಚಾರ್, ಎಂ. ಎ, ಬಿ. ಟಿ. ಅವರು ಪ್ರಾಚೀನ ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಅಮೂಲ್ಯವಾದ 'ನಿಧಿ' ಯೊಂದನ್ನು ಒದಗಿಸಿರುವರು.

ಕೃತಿಯ ಹಸ್ತಪ್ರತಿಗಳಲ್ಲಿ ಪದ್ಯಗಳ ಆಕರಗಳನ್ನು ಸೂಚಿಸಿಲ್ಲ. ಶ್ರೀ ಎನ್. ಅನಂತರಂಗಾಚಾರ್ಯರು ಶ್ರಮವಹಿಸಿ ಈಗ ಉಪಲಬ್ಧವಿರುವ ಕೃತಿಗಳ ಸಹಾಯದಿಂದ ಸುಮಾರು 1500 ಪದ್ಯಗಳಿಗೆ ಆಕರಗಳನ್ನು ಗುರುತಿಸಿ ಸೂಚಿಸಿದ್ದಾರೆ. ಅವರು ಸೂಚಿಸದ ಅನೇಕ ಪದ್ಯಗಳಿಗೆ ಆಕರಗಳು ದೊರಕಿದ್ದು ಅದನ್ನು ಈ ಮುಂದೆ ಪಟ್ಟಿಯ ರೂಪದಲ್ಲಿ ಗುರುತಿಸಲಾಗಿದೆ.

ಇಲ್ಲಿ ಅನುಸರಿಸಿರುವ ಪಟ್ಟಿಯ ರಚನಾಕ್ರಮ ಈ ರೀತಿ ಇದೆ :–

ಪಟ್ಟಿಯಲ್ಲಿ ಆರು (6) ವಿಭಾಗಗಳಿವೆ. ಮೊದಲ ಸಂಖ್ಯೆ ಕ್ರಮಾಂಕವನ್ನು ಸೂಚಿಸುತ್ತದೆ. ಎರಡು, ಮೂರನೆಯ ಸಂಖ್ಯೆಗಳು ಕ್ರಮವಾಗಿ ಸಂಕಲನ ಕೃತಿಯಾದ ಕಾವ್ಯಸಾರಂ- ದ ಆಶ್ವಾಸ, ಪದ್ಯ ಸಂಖ್ಯೆಗಳನ್ನು ಸೂಚಿಸುತ್ತವೆ. ನಾಲ್ಕು, ಐದು ಹಾಗೂ ಆರನೆಯ ಸಂಖ್ಯೆಗಳು ಕ್ರಮವಾಗಿ ಆಕರ ಕೃತಿಯ ಸಂಕೇತ, ಆಶ್ವಾಸ ಹಾಗೂ ಪದ್ಯ ಸಂಖ್ಯೆಗಳನ್ನು ಸೂಚಿಸುತ್ತವೆ. (ಆಕರ ಕೃತಿಗಳಲ್ಲಿ ಆಶ್ವಾಸ ವಿಭಾಗವಿಲ್ಲದಿದ್ದರೆ [ಉದಾ. ಕಬ್ಬಿಗರ ಕಾವಂ] ಆಶ್ವಾಸದ ವಿಭಾಗದಲ್ಲಿ 'ಪದ್ಯ' ವೆಂದು ಸೂಚಿಸಿದೆ).

---

* ಈ ಆಕರಗಳನ್ನು ಕಂಡು ಹಿಡಿಯುವಲ್ಲಿ ಶ್ರೀ ಎನ್. ಅನಂತರಂಗಾಚಾರ್ಯರ "ಕನ್ನಡ ಚಂಪೂಕಾವ್ಯಗಳ ಪದ್ಯಾನುಕ್ರಮಣಿ" (1972) ಯನ್ನು ಉಪಯೋಗಿಸಿಕೊಳ್ಳಲಾಗಿದೆ.

ಈ ಸೂಚಿಯ ರಚನೆಗೆ ಬಳಸಿಕೊಂಡ ಆಕರ ಕೃತಿಗಳು ಮತ್ತು ಅವುಗಳ ಸಂಕೇತಗಳು.

1) K. 217/5 : 'ಕಾವ್ಯಸಾರಂ' ಓಲೆ ಪ್ರತಿ. ಕನ್ನಡ ಅಧ್ಯಯನ ಕೇಂದ್ರ (ಬೆಂಗಳೂರು) ದಲ್ಲಿದೆ.

2) ಅರ್ಧನೇಮಿ ಪುರಾಣಂ [ಅರ್ಧನೇ]– ನೇಮಿಚಂದ್ರ
ಸಂ. ಬಿ. ಎಸ್. ಸಣ್ಣಯ್ಯ (1961)

3) ಅನಂತನಾಥ ಪುರಾಣಂ [ಅನಂಪು] ಜನ್ನ
ಸಂ. { ಡಿ. ಶ್ರೀನಿವಾಸಾಚಾರ್ / ಎಚ್. ಆರ್. ರಂಗಸ್ವಾಮಯ್ಯಂಗಾರ್ } (1930)

4. ಅನುಭವ ಮುಕುರಂ [ಅನುಮು]– ಜನ್ನ
ಸಂ. ಎಂ. ಎಸ್. ಸುಬ್ರಹ್ಮಣ್ಯಶಾಸ್ತ್ರಿ (1956)

5. ಅಭಿನವ ದಶಕುಮಾರ ಚರಿತಂ [ಅದಚ]– ಚೌಂಡರಸ
ಸಂ. { ಎಸ್. ಜಿ. ನರಸಿಂಹಾಚಾರ್ / ಎಂ. ಎ. ರಾಮಾನುಜೈಯಂಗಾರ್ }
{ 1902 [ಆ. 1–7] [ಆ. 8–14] }

6. ಕಬ್ಬಿಗರ ಕಾವಂ [ಕಕಾವಂ]– ಆಂಡಯ್ಯ
ಸಂ. { ಎಸ್. ಜಿ. ನರಸಿಂಹಾಚಾರ್ / ಎಂ. ಎ. ರಾಮಾನುಜೈಯಂಗಾರ್ }
(1896)–ದ್ವಿ. ಮು.

7. ಕಾದಂಬರಿ { ಪೂರ್ವ ಭಾಗ [ಕಾದಂ ಪೂ] / ಉತ್ತರ ಭಾಗ [ಕಾದಂ ಉ] } — ನಾಗವರ್ಮ I
ಸಂ. ಬೇ. ಮಲ್ಲಪ್ಪ (1892)

8. ಕಾವ್ಯಸಾರಂ — ಅಭಿನವವಾದಿ ವಿದ್ಯಾನಂದ
ಸಂ. { ಎಸ್. ಜಿ. ನರಸಿಂಹಾಚಾರ್ / ಎಂ. ಎ. ರಾಮಾನುಜೈಯಂಗಾರ್ } (1898)

9. ಕಾವ್ಯಾವಲೋಕನಂ [ಕಾವ್ಯಾವ] – ನಾಗವರ್ಮ II
ಸಂ. ಎಚ್. ಆರ್. ರಂಗಸ್ವಾಮಯ್ಯಂಗಾರ್
(1939) ದ್ವಿ. ಮು.

10. ಕುಸುಮಾವಳೀ ಕಾವ್ಯಂ [ಕುಸುಮಾ] ದೇವಕವಿ
ಪ್ರಕಾ. ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು (1972)

11. ಗಿರಿಜಾ ಕಲ್ಯಾಣಂ [ ಗಿರಿಕ ] – ಹರಿಹರದೇವ
ಸಂ. { ಎಸ್. ಜಿ. ನರಸಿಂಹಾಚಾರ್
ಎಂ. ಎ. ರಾಮಾನುಜೈಯಂಗಾರ್ (1905)

12. ಚಂದ್ರಪ್ರಭ ಪುರಾಣಂ [ ಚಂದ್ರಪು ] – ಅಗ್ಗಳ
ಸಂ. { ಎಸ್. ಜಿ. ನರಸಿಂಹಾಚಾರ್
ಎಂ. ಎ. ರಾಮಾನುಜೈಯಂಗಾರ್
1901 [ ಅ. 1–8 ]
1903 [ ಅ. 9–16 ]

13. ಜಗನ್ನಾಥ ವಿಜಯಂ [ ಜಗವಿ ] – ರುದ್ರಭಟ್ಟ
ಸಂ. ಆರ್. ಶಾಮಶಾಸ್ತ್ರಿ (1923)

14. ತ್ರಿಷಷ್ಟಿ ಪುರಾತನ ಚಾರಿತ್ರಂ [ ತ್ರಿಪುಚಾ ] – ಸುರಂಗ
ಸಂ. ಆರ್. ಸಿ. ಹಿರೇಮಠ್ (1966)

15. ಧರ್ಮನಾಥ ಪುರಾಣಂ [ ಧರ್ಮಪು ] – ಮಧುರ
ಸಂ. { ಜಿ. ಬ್ರಹ್ಮಪ್ಪ
ಎಂ. ಸಿ. ಪದ್ಮನಾಭಶರ್ಮ (1955)

16. ಪಂಪ ರಾಮಾಯಣಂ [ ಪಂಪರಾ ] – ನಾಗಚಂದ್ರ
ಪ್ರಕಾ. ಕರ್ಣಾಟಕ ಸಾಹಿತ್ಯ ಪರಿಷತ್, ಬೆಂಗಳೂರು
(1921)

17. ಪಂಪಾಸ್ಥಾನವರ್ಣನಂ [ ಪಂಪಾ ] – ಚಂದ್ರಕವಿ
ಸಂ. ಎಚ್. ಎನ್. ಕೃಷ್ಣಜೋಯಿಸ್ (1955)

18. ಪುಷ್ಪದಂತ ಪುರಾಣಂ [ ಪುಷ್ಪಪು ] – ಗುಣವರ್ಮ II
ಸಂ. { ಎ. ವೆಂಕಟರಾವ್
ಎಚ್. ಶೇಷಅಯ್ಯಂಗಾರ್ (1933)

19. ಮದನತಿಲಕಂ [ ಮದನ ] – ಚಂದ್ರರಾಜ
ಸಂ. ರಾ. ಸ್ವಾ. ಪಂಚಮುಖಿ (1953)

20. ಮಲ್ಲಿನಾಥ ಪುರಾಣಂ [ ಮಲ್ಲಿಪು ] – ನಾಗಚಂದ್ರ
ಸಂ. { ಎಸ್. ಜಿ. ನರಸಿಂಹಾಚಾರ್
ಎಂ. ಎ. ರಾಮಾನುಜಯ್ಯಂಗಾರ್ (1895)

21. ಲೀಲಾವತಿ [ ಲೀಲಾ ] – ನೇಮಿಚಂದ್ರ

ಸಂ. { ಎಸ್. ಜಿ. ನರಸಿಂಹಾಚಾರ್ / ಎಂ. ಎ. ರಾಮಾನುಜಯ್ಯಂಗಾರ್

1898 [ ಆ. 1–6 ]

1908 [ ಆ. 7–11 ]

ಸಂ. ಎಂ. ಎ. ರಾಮಾನುಜಯ್ಯಂಗಾರ್ಯ

1909 [ ಆ. 12–14 ]

22. ಶಾಂತೀಶ್ವರ ಪುರಾಣಂ [ ಶಾಂತೀಪು ] – ಕಮಲಭವ

ಸಂ. ಮ. ಅಂ. ರಾಮಾನುಜಯ್ಯಂಗಾರ್ಯ

1912 [ ಆ. 1–5 ]

1915 [ ಆ. 6–10 ]

191? [ ಆ. 11–16 ]

23. ಶೂದ್ರಕ – ಗುಣವರ್ಮ I (ಅಲಭ್ಯ)

24. ಶೃಂಗಾರ ರತ್ನಾಕರಂ [ ಶೃಂಗಾರ ] – ಕವಿಕಾಮ

ಸಂ. { ಎಸ್. ಜಿ. ನರಸಿಂಹಾಚಾರ್ / ಎಂ. ಎ. ರಾಮಾನುಜಯ್ಯಂಗಾರ್ (1894)

25. ಸೂಕ್ತಿಸುಧಾರ್ಣವಂ [ ಸೂಕ್ತಿಸು ] – ಮಲ್ಲಿಕಾರ್ಜುನ

ಸಂ. ಎಱ. ಅನಂತರಂಗಾಚಾರ್ (1947)

| ಕ್ರಮಾಂಕ | ಅಧ್ಯಾಯ | ಪದ್ಯ ಸಂಖ್ಯೆ | ಆಕರ ಕೃತಿ | ಅಧ್ಯಾಯ | ಪದ್ಯ ಸಂಖ್ಯೆ |
|---|---|---|---|---|---|
| 1 | 2 | 3 | 4 | 5 | 6 |
| 1 | 1 | 2 | K 217/5 | 1 | 1 |
| 2 | 1 | 8 | ಪಂಪಾ | ಪದ್ಯ | 2 |
| 3 | 1 | 45 | ಅದಚ | 8 | 44 |
| 4 | 1 | 46 | ,, | 8 | 45 |
| 5 | 1 | 47 | ,, | 8 | 49 |
| 6 | 1 | 48a | ಧರ್ಮಪು | 1 | 111 |
| 7 | 1 | 69 | ಕಕಾವಂ | ಪದ್ಯ | 8 |
| 8 | 2 | 3 | ಅದಚ | 1 | 18 |
| 9 | 2 | 5 | ,, | 7 | 7 |
| 10 | 2 | 31 | ,, | 4 | 44 |
| 11 | 2 | 33 | ಶೂದ್ರಕ* | ? | ? |
| 12 | 2 | 40 | ಅದಚ | 1 | 20 |
| 13 | 2 | 41 | ಸೂಕ್ತಿಸು | 4 | 3 |
| 14 | 2 | 42 | ,, | 2 | 48 |
| 15 | 3 | 2 | ಗಿರಿಕ | 1 | 51 |
| 16 | 3 | 3 | ಅದಚ | 1 | 19 |
| 17 | 3 | 5 | ,, | 7 | 10 |
| 18 | 3 | 6 | ,, | 12 | 62 |
| 19 | 3 | 8 | ಗಿರಿಕ | 1 | 52 |
| 20 | 3 | 14 | ಅದಚ | 4 | 26 |
| 21 | 3 | 31 | ಸೂಕ್ತಿಸು | 3 | 84 |
| 22 | 3 | 41 | ಕಕಾವಂ | ಪದ್ಯ | 236 |
| 23 | 3 | 43 | ,, | ಪದ್ಯ | 235 |
| 24 | 3 | 50 | K. 217/5 | 2 | 59 |
| 25 | 3 | 55 | ಗಿರಿಕ | 10 | 65 |
| 26 | 3 | 56 | ,, | 10 | 66 |
| 27 | 3 | 57 | ,, | 10 | 67 |
| 28 | 3 | 63 | ಅದಚ | 4 | 71 |
| 29 | 3 | 64 | ,, | 4 | 72 |
| 30 | 3 | 65 | ಗಿರಿಕ | 1 | 67 |
| 31 | 3 | 69 | ಅದಚ | 4 | 30 |

ಅಭಿನವವಾದಿ ವಿದ್ಯಾನಂದನ 'ಕಾವ್ಯಸಾರಂ' ಉಲ್ಲೇಖ

| 1 | 2 | 3 | 4 | 5 | 6 |
|---|---|---|---|---|---|
| 32 | 3 | 75 | ಗಿರಿಕ | 5 | 20 |
| 33 | 3 | 78 | ಜಗವಿ | 16 | 53 |
| 34 | 3 | 79 | ,, | 16 | 54 |
| 35 | 3 | 80 | ,, | 16 | 55 |
| 36 | 3 | 81 | ,, | 16 | 58 |
| 37 | 3 | 82 | ,, | 16 | 39 |
| 38 | 3 | 83 | ,, | 16 | 40 |
| 39 | 3 | 84 | ,, | 16 | 41 |
| 40 | 3 | 85 | ,, | 16 | 42 |
| 41 | 3 | 86 | ,, | 16 | 43 |
| 42 | 3 | 87 | ,, | 16 | 44 |
| 43 | 3 | 88 | ,, | 16 | 45 |
| 44 | 3 | 89 | ,, | 16 | 46 |
| 45 | 3 | 90 | ,, | 16 | 47 |
| 46 | 3 | 91 | ,, | 16 | 48 |
| 47 | 3 | 92 | ,, | 16 | 49 |
| 48 | 3 | 93 | ,, | 16 | 50 |
| 49 | 3 | 94 | ,, | 16 | 51 |
| 50 | 3 | 95 | ,, | 16 | 52 |
| 51 | 3 | 96 | ,, | 16 | 56 |
| 52 | 3 | 97 | ,, | 16 | 57 |
| 53 | 3 | 98 | ,, | 16 | 59 |
| 54 | 3 | 99 | ,, | 16 | 60 |
| 55 | 3 | 100 | ,, | 16 | 61 |
| 56 | 3 | 101 | ,, | 16 | 62 |
| 57 | 3 | 102 | ,, | 16 | 63 |
| 58 | 3 | 103 | ,, | 16 | 64 |
| 59 | 3 | 104 | ,, | 16 | 65 |
| 60 | 3 | 105 | ,, | 16 | 66 |
| 61 | 3 | 108 | ಗಿರಿಕ | 3 | 12 |
| 62 | 3 | 109 | ,, | 1 | 60 |
| 63 | 3 | 110 | ,, | 1 | 61 |
| 64 | 3 | 111 | ,, | 1 | 62 |
| 65 | 3 | 115 | ಕಕಾವಂ | ಪದ್ಯ | 223 |
| 66 | 3 | 122 | ಗಿರಿಕ | 1 | 75 |
| 67 | 3 | 123 | ,, | 1 | 76 |
| 68 | 3 | 135 | ,, | 1 | 72 |

| 1 | 2 | 3 | 4 | 5 | 6 |
|---|---|---|---|---|---|
| 69 | 3 | 139 | ಗಿರಿಕ | 1 | 73 |
| 70 | 3 | 140 | ,, | 1 | 74 |
| 71 | 3 | 166 | ಜಗವಿ | 16 | 14 |
| 72 | 3 | 170 | ಅದಚ | 2 | 113 |
| 73 | 3 | 179 | ,, | 4 | 29 |
| 74 | 3 | 180 | ,, | 2 | 111 |
| 75 | 3 | 181 | ,, | 2 | 119 |
| 76 | 3 | 182 | ಸೂಕ್ತಿಸು | 3 | 76 |
| 77 | 3 | 185 | ಜಗವಿ | 16 | 30 |
| 78 | 3 | 186 | ,, | 16 | 31 |
| 79 | 3 | 193 | ಗಿರಿಕ | 1 | 77 |
| 80 | 3 | 194 | ,, | 1 | 71 |
| 81 | 3 | 197 | ,, | 1 | 70 |
| 82 | 3 | 200 | ಕಾದಂ (ಪೂ) | ಪದ್ಯ | 164 |
| 83 | 3 | 201 | ಅದಚ | 2 | 102 |
| 84 | 3 | 205 | ಅರ್ಧನೇ | 3 | 56 |
| 85 | 3 | 225 | ಸೂಕ್ತಿಸು | 3 | 210 |
| 86 | 3 | 251 | ಗಿರಿಕ | 1 | 115 |
| 87 | 3 | 252 | ,, | 1 | 119 |
| 88 | 3 | 256 | ಅದಚ | 2 | 115 |
| 89 | 3 | 257 | ಗಿರಿಕ | 1 | 80 |
| 90 | 3 | 258 | ಅದಚ | 2 | 108 |
| 91 | 3 | 259 | ,, | 2 | 107 |
| 92 | 3 | 260 | ಗಿರಿಕ | 1 | 81 |
| 93 | 3 | 261 | ,, | 1 | 82 |
| 94 | 3 | 269 | ಅದಚ | 2 | 110 |
| 95 | 3 | 270 | ,, | 2 | 109 |
| 96 | 3 | 271 | K. 217/5 | 2 | 39 |
| 97 | 3 | 272 | ಅದಚ | 2 | 114 |
| 98 | 3 | 273 | ಕಾವ್ಯಸಾರಂ | 42 | 1084 |
| 99 | 3 | 276 | K. 217/5 | 2 | 43 |
| 100 | 3 | 282 | ಅದಚ | 2 | 112 |
| 101 | 3 | 284 | ಗಿರಿಕ | 1 | 89 |
| 102 | 3 | 285 | ,, | 1 | 90 |
| 103 | 3 | 286 | ,, | 1 | 91 |
| 104 | 3 | 287 | ,, | 1 | 92 |
| 105 | 3 | 288 | ,, | 1 | 93 |

| 1 | 2 | 3 | 4 | 5 | 6 |
|---|---|---|---|---|---|
| 106 | 3 | 297 | K. 217/5 | 2 | 50 |
| 107 | 3 | 309 | ಗಿರಿಕ | 1 | 98 |
| 108 | 3 | 310 | ಅದಚ | 2 | 118 |
| 109 | 3 | 320 | ಗಿರಿಕ | 1 | 99 |
| 110 | 3 | 324 | ಸೂಕ್ತಿಸು | 3 | 138 |
| 111 | 3 | 326 | ಅದಚ | 2 | 116 |
| 112 | 3 | 330 | ಗಿರಿಕ | 1 | 101 |
| 113 | 3 | 352 | ಅದಚ | 2 | 120 |
| 114 | 3 | 353 | ,, | 2 | 137 |
| 115 | 3 | 354 | ,, | 2 | 106 |
| 116 | 3 | 357 | ,, | 2 | 121 |
| 117 | 4 | 3 | ಧರ್ಮಾಪು | 2 | 15 |
| 118 | 4 | 4 | ,, | 2 | 17 |
| 119 | 4 | 5 | ಪುಷ್ಪಪು | 9 | 16 |
| 120 | 4 | 9 | ಅದಚ | 1 | 23 |
| 121 | 4 | 10 | ,, | 1 | 22 |
| 122 | 4 | 15 | ಧರ್ಮಾಪು | 2 | 10 |
| 123 | 4 | 41 | ,, | 2 | 18 |
| 124 | 4 | 64 | ,, | 2 | 21 |
| 125 | 4 | 66 | ಪುಷ್ಪಪು | 2 | 49 |
| 126 | 4 | 68 | ಧರ್ಮಾಪು | 2 | 19 |
| 127 | 4 | 73 | ಪುಷ್ಪಪು | 2 | 20 |
| 128 | 4 | 78 | ಅದಚ | 1 | 28 |
| 129 | 4 | 87 | ಲೀಲಾ | 5 | 56 |
| 130 | 4 | 106 | ಧರ್ಮಾಪು | 2 | 30 |
| 131 | 4 | 108 | ಗಿರಿಕ | 2 | 15 |
| 132 | 4 | 109 | ಗಿರಿಕ | 2 | 16 |
| 133 | 4 | 110 | ,, | 2 | 17 |
| 134 | 4 | 112 | ಅದಚ | 1 | 29 |
| 135 | 4 | 113 | ,, | 1 | 30 |
| 136 | 4 | 114 | ಜಗವಿ | 2 | 6 |
| 137 | 4 | 125 | ಗಿರಿಕ | 2 | 21 |
| 138 | 4 | 126 | ,, | 2 | 18 |
| 139 | 4 | 127 | ,, | 2 | 19 |
| 140 | 4 | 128 | ,, | 2 | 20 |
| 141 | 4 | 129 | ,, | 2 | 22 |
| 142 | 4 | 130 | ,, | 2 | 23 |

| 1 | 2 | 3 | 4 | 5 | 6 |
|---|---|---|---|---|---|
| 143 | 4 | 131 | ಗಿರಿಕ | 2 | 24 |
| 144 | 4 | 132 | ,, | 2 | 25 |
| 145 | 4 | 133 | ,, | 2 | 26 |
| 146 | 4 | 139 | ಅದಚ | 6 | 6 |
| 147 | 4 | 142 | ಸೂಕ್ತಿಸು | 4 | 83 |
| 148 | 4 | 150 | ಗಿರಿಕ | 2 | 54 |
| 149 | 4 | 151 | ,, | 4 | 16 |
| 150 | 4 | 153 | ಜಗವಿ | 10 | 57 |
| 151 | 4 | 154 | ಪುಷ್ಪಪು | 2 | 53 |
| 152 | 4 | 156 | ,, | 2 | 52 |
| 153 | 4 | 163 | ಗಿರಿಕ | 2 | 53 |
| 154 | 4 | 169 | ಅದಚ | 4 | 33 |
| 155 | 4 | 170 | ,, | 12 | 63 |
| 156 | 4 | 172 | ಜಗವಿ | 10 | 56 |
| 157 | 4 | 173 | ,, | 10 | 58 |
| 158 | 4 | 174 | ,, | 10 | 59 |
| 159 | 4 | 175 | ,, | 10 | 60 |
| 160 | 4 | 176 | ,, | 10 | 63 |
| 161 | 4 | 177 | ಶಾಂತೀಪು | 10 | 155 |
| 162 | 4 | 178 | ಕುಸುಮಾ | 9 | 35 |
| 163 | 4 | 179 | ಕಾವ್ಯಸಾರಂ | 30 | 744 |
| 164 | 4 | 182 | ಜಗವಿ | 4 | 63 |
| 165 | 4 | 183 | ಗಿರಿಕ | 2 | 55 |
| 166 | 4 | 185 | ಕಾವ್ಯಾವ | ಪದ್ಯ | 689 |
| 167 | 4 | 187 | ಜಗವಿ | 14 | 90 |
| 168 | 4 | 188 | ಕಕಾವಂ | ಪದ್ಯ | 33 |
| 169 | 4 | 189 | ಧರ್ಮಪು | 5 | 37 |
| 170 | 4 | 190 | ಗಿರಿಕ | 7 | 59 |
| 171 | 4 | 191 | ಕಕಾವಂ | ಪದ್ಯ | 24 |
| 172 | 4 | 206 | ಜಗವಿ | 14 | 20 |
| 173 | 4 | 207 | ,, | 9 | 91 |
| 174 | 4 | 208 | ಕಾದಂ (ಪೂ) | ಪದ್ಯ | 654 |
| 175 | 4 | 215 | ಅನಂಪು | 1 | 92 |
| 176 | 4 | 218 | ಪುಷ್ಪಪು | 2 | 24 |
| 177 | 4 | 231 | ಅನಂಪು | 11 | 15 |
| 178 | 4 | 232 | ಕಕಾವಂ | ಪದ್ಯ | 53 |
| 179 | 4 | 237 | ಧರ್ಮಪು | 2 | 112 |

| 1 | 2 | 3 | 4 | 5 | 6 |
|---|---|---|---|---|---|
| 180 | 4 | 241 | ಸೂಕ್ತಿಸು | 10 | 143 |
| 181 | 4 | 243 | ಜಗವಿ | 4 | 86 |
| 182 | 4 | 247 | ಗಿರಿಕ | 2 | 30 |
| 183 | 4 | 248 | ,, | 2 | 31 |
| 184 | 4 | 252 | ಅದಚ | 10 | 71 |
| 185 | 4 | 253 | ,, | 6 | 8 |
| 186 | 4 | 254 | ಗಿರಿಕ | 2 | 72 |
| 187 | 4 | 255 | ಅದಚ | 1 | 53 |
| 188 | 4 | 256 | ಗಿರಿಕ | 2 | 47 |
| 189 | 4 | 257 | ಧರ್ಮಾಪು | 2 | 58 |
| 190 | 4 | 259 | ಗಿರಿಕ | 2 | 46 |
| 191 | 4 | 262 | ಕಕಾವಂ | ಪದ್ಯ | 103 |
| 192 | 4 | 263 | ಗಿರಿಕ | 2 | 48 |
| 193 | 4 | 264 | ಧರ್ಮಾಪು | 2 | 57 |
| 194 | 4 | 265 | ,, | 2 | 38 |
| 195 | 4 | 266 | ಕಕಾವಂ | ಪದ್ಯ | 104 |
| 196 | 4 | 267 | ಧರ್ಮಾಪು | 2 | 59 |
| 197 | 4 | 268 | ಗಿರಿಕ | 2 | 49 |
| 198 | 4 | 278 | ಪಂಪಾ | ಪದ್ಯ | 29 |
| 199 | 4 | 290 | ಅದಚ | 1 | 26 |
| 200 | 4 | 291 | ,, | 4 | 83 |
| 201 | 4 | 293 | ಕಕಾವಂ | ಪದ್ಯ | 23 |
| 202 | 4 | 294 | ,, | ಪದ್ಯ | 26 |
| 203 | 4 | 295 | ,, | ಪದ್ಯ | 32 |
| 204 | 4 | 296 | ,, | ಪದ್ಯ | 56 |
| 205 | 4 | 297 | ,, | ಪದ್ಯ | 84 |
| 206 | 4 | 312 | ಗಿರಿಕ | 2 | 51 |
| 207 | 4 | 332 | ತ್ರಿಪ್ರಜಾ | 24 | 45 |
| 208 | 4 | 355 | ಧರ್ಮಾಪು | 2 | 52 |
| 209 | 4 | 356 | ಸೂಕ್ತಿಸು | 10 | 41 |
| 210 | 4 | 360 | ಅದಚ | 6 | 24 |
| 211 | 4 | 361 | ,, | 6 | 26 |
| 212 | 4 | 362 | ,, | 6 | 25 |
| 213 | 4 | 364 | ಕಕಾವಂ | ಪದ್ಯ | 62 |
| 214 | 4 | 367 | ಜಗವಿ | 14 | 26 |
| 215 | 4 | 373 | ಸೂಕ್ತಿಸು | 10 | 39 |
| 216 | 4 | 392 | ಗಿರಿಕ | 2 | 38 |

| 1 | 2 | 3 | 4 | 5 | 6 |
|---|---|---|---|---|---|
| 217 | 4 | 393 | ಗಿರಿಕ | 2 | 39 |
| 218 | 4 | 394 | ,, | 2 | 40 |
| 219 | 4 | 395 | ಜಗವಿ | 14 | 39 |
| 220 | 4 | 400 | ಕಕಾವಂ | ಪದ್ಯ | 55 |
| 221 | 4 | 407 | ಪಂಪಾ | ಪದ್ಯ | 37 |
| 222 | 4 | 408 | ಪುಷ್ಪಪು | 2 | 50 |
| 223 | 4 | 422 | ಜಗವಿ | 14 | 36 |
| 224 | 4 | 423 | ,, | 14 | 35 |
| 225 | 4 | 425 | ,, | 14 | 34 |
| 226 | 4 | 427 | ,, | 14 | 72 |
| 227 | 4 | 434 | ಧರ್ಮಪು | 2 | 50 |
| 228 | 4 | 440 | ಅದಚ | 1 | 52 |
| 229 | 4 | 465 | ಜಗವಿ | 14 | 40 |
| 230 | 4 | 524 | ಗಿರಿಕ | 2 | 62 |
| 231 | 4 | 525 | ,, | 2 | 63 |
| 232 | 4 | 526 | ,, | 2 | 65 |
| 233 | 4 | 533 | ,, | 2 | 64 |
| 234 | 4 | 535 | ಧರ್ಮಪು | 2 | 48 |
| 235 | 4 | 548 | ಗಿರಿಕ | 2 | 79 |
| 236 | 4 | 562 | ಸೂಕ್ತಿಸು | 4 | 154 |
| 237 | 4 | 569 | ಅದಚ | 1 | 25 |
| 238 | 4 | 570 | ,, | 4 | 81 |
| 239 | 4 | 572 | ,, | 11 | 47 |
| 240 | 4 | 573 | ,, | 10 | 3 |
| 241 | 4 | 581 | ,, | 1 | 45 |
| 242 | 4 | 582 | ಗಿರಿಕ | 2 | 98 |
| 243 | 4 | 592 | ಧರ್ಮಪು | 2 | 133 |
| 244 | 4 | 598 | ಕಾದಂ (ಪೂ) | ಪದ್ಯ | 304 |
| 245 | 4 | 603 | ಧರ್ಮಪು | 2 | 130 |
| 246 | 4 | 619 | ,, | 4 | 7 |
| 247 | 4 | 620 | ,, | 4 | 14 |
| 248 | 4 | 621 | ಅದಚ | 5 | 38 |
| 249 | 4 | 625 | ಕಕಾವಂ | ಪದ್ಯ | 35 |
| 250 | 4 | 635 | ಗಿರಿಕ | 2 | 93 |
| 251 | 4 | 637 | ಜಗವಿ | 9 | 109 |
| 252 | 4 | 640 | ಕಕಾವಂ | ಪದ್ಯ | 37 |
| 253 | 4 | 641 | ಗಿರಿಕ | 2 | 92 |

| 1 | 2 | 3 | 4 | 5 | 6 |
|---|---|---|---|---|---|
| 254 | 4 | 643 | ಕಕಾವಂ | ಪದ್ಯ | 36 |
| 255 | 4 | 647 | ಗಿರಿಕ | 2 | 95 |
| 256 | 4 | 654 | ಧರ್ಮಪು | 2 | 77 |
| 257 | 4 | 669 | ಗಿರಿಕ | 2 | 91 |
| 258 | 4 | 674 | ಜಗವಿ | 9 | 113 |
| 259 | 4 | 676 | ಅದಚ | 1 | 41 |
| 260 | 4 | 679 | ,, | 1 | 40 |
| 261 | 4 | 688 | ,, | 1 | 42 |
| 262 | 4 | 695 | ,, | 8 | 87 |
| 263 | 4 | 696 | ,, | 8 | 89 |
| 264 | 4 | 697 | ಅದಚ | 8 | 94 |
| 265 | 4 | 707 | ,, | 1 | 43 |
| 266 | 4 | 718 | ಕಕಾವಂ | ಪದ್ಯ | 43 |
| 267 | 4 | 738 | ಅದಚ | 1 | 46 |
| 268 | 4 | 739 | ,, | 8 | 291 |
| 269 | 4 | 741 | ಗಿರಿಕ | 2 | 100 |
| 270 | 4 | 744 | ಜಗವಿ | 9 | 131 |
| 271 | 5 | 10 | ಅದಚ | 6 | 147 |
| 272 | 5 | 14 | ಕಾವ್ಯಸಾರಂ | 16 | 386 |
| 273 | 5 | 20 | ಜಗವಿ | 4 | 118 |
| 274 | 5 | 21 | ,, | 4 | 119 |
| 275 | 5 | 22 | ,, | 4 | 120 |
| 276 | 5 | 23 | ,, | 4 | 21 |
| 277 | 5 | 24 | ,, | 4 | 122 |
| 278 | 5 | 25 | ,, | 4 | 123 |
| 279 | 5 | 26 | ,, | 4 | 124 |
| 280 | 5 | 27 | ,, | 4 | 125 |
| 281 | 5 | 29 | ,, | 11 | 63 |
| 282 | 5 | 38 | ಸೂಕ್ತಿಸು | 5 | 24 |
| 283 | 5 | 39 | ಜಗವಿ | 11 | 72 |
| 284 | 5 | 40 | ,, | 11 | 73 |
| 285 | 5 | 41 | ಗಿರಿಕ | 2 | 106 |
| 286 | 5 | 44 | ಸೂಕ್ತಿಸು | 5 | 5 |
| 287 | 5 | 46 | ಅದಚ | 2 | 8 |
| 288 | 5 | 47 | ,, | 2 | 129 |
| 289 | 5 | 54 | ಕಕಾವಂ | ಪದ್ಯ | 46 |
| 290 | 5 | 55 | ,, | ಪದ್ಯ | 47 |

| 1 | 2 | 3 | 4 | 5 | 6 |
|---|---|---|---|---|---|
| 291 | 5 | 56 | ಕಕಾವಂ | ಪದ್ಯ | 48 |
| 292 | 5 | 57 | ,, | ಪದ್ಯ | 49 |
| 293 | 5 | 58 | ಗಿರಿಕ | 2 | 103 |
| 294 | 5 | 61 | ಧರ್ಮಪು | 3 | 45 |
| 295 | 5 | 62 | ,, | 3 | 44 |
| 296 | 5 | 63 | ,, | 3 | 43 |
| 297 | 5 | 64 | ಧರ್ಮಪು | 3 | 32 |
| 298 | 5 | 65 | ,, | 3 | 29 |
| 299 | 5 | 67 | ,, | 3 | 27 |
| 300 | 5 | 68 | ,, | 3 | 14 |
| 301 | 5 | 69 | ,, | 3 | 17 |
| 302 | 5 | 70 | ,, | 3 | 18 |
| 303 | 5 | 71 | ,, | 3 | 19 |
| 304 | 5 | 72 | ,, | 3 | 3 |
| 305 | 5 | 75 | ,, | 3 | 28 |
| 306 | 5 | 78 | ,, | 3 | 9 |
| 307 | 5 | 79 | ,, | 3 | 10 |
| 308 | 5 | 80 | ,, | 3 | 15 |
| 309 | 5 | 81 | ,, | 3 | 16 |
| 310 | 5 | 82 | ,, | 3 | 38 |
| 311 | 5 | 83 | ,, | 3 | 39 |
| 312 | 5 | 84 | ,, | 3 | 40 |
| 313 | 5 | 85 | ,, | 3 | 41 |
| 314 | 5 | 86 | ,, | 3 | 11 |
| 315 | 5 | 87 | ,, | 3 | 12 |
| 316 | 5 | 96 | ,, | 3 | 5 |
| 317 | 5 | 97 | ,, | 3 | 6 |
| 318 | 5 | 98 | ,, | 3 | 2 |
| 319 | 5 | 99 | ,, | 3 | 4 |
| 320 | 5 | 101 | ,, | 3 | 7 |
| 321 | 5 | 102 | ,, | 3 | 8 |
| 322 | 5 | 104 | ಕಾವ್ಯಸಾರಂ | 6 | 248 |
| 323 | 5 | 112 | ಲೀಲಾ | 1 | 88 |
| 324 | 5 | 113 | ತ್ರಿಪುಚಾ | 3 | 9 |
| 325 | 5 | 115 | ,, | 17 | 49 |
| 326 | 5 | 116 | ಧರ್ಮಪು | 3 | 21 |
| 327 | 5 | 117 | ,, | 3 | 22 |

| 1 | 2 | 3 | 4 | 5 | 6 |
|---|---|---|---|---|---|
| 328 | 5 | 118 | ಧರ್ಮಪು | 3 | 23 |
| 329 | 5 | 119 | ,, | 3 | 24 |
| 330 | 5 | 120 | ,, | 3 | 25 |
| 331 | 5 | 123 | ,, | 4 | 69 |
| 332 | 5 | 124 | ಜಗವಿ | 11 | 4 |
| 333 | 5 | 125 | ,, | 11 | 5 |
| 334 | 5 | 126 | ಧರ್ಮಪು | 3 | 20 |
| 335 | 5 | 127 | ,, | 3 | 33 |
| 336 | 5 | 128 | ,, | 3 | 34 |
| 337 | 5 | 129 | ,, | 3 | 35 |
| 338 | 5 | 130 | ,, | 3 | 36 |
| 339 | 5 | 131 | ,, | 3 | 37 |
| 340 | 5 | 132 | ,, | 3 | 42 |
| 341 | 5 | 134 | ಅದಚ | 12 | 18 |
| 342 | 5 | 135 | ಪಂಪಾ | ಪದ್ಯ | 75 |
| 343 | 5 | 143 | ಜಗವಿ | 5 | 18 |
| 344 | 5 | 148 | ಸೂಕ್ತಿಸು | 5 | 19 |
| 345 | 5 | 177 | ಅದಚ | 8 | 161 |
| 346 | 5 | 178 | ,, | 8 | 162 |
| 347 | 5 | 179 | ,, | 8 | 163 |
| 348 | 5 | 180 | ,, | 8 | 164 |
| 349 | 5 | 185 | ಜಗವಿ | 17 | 14 |
| 350 | 6 | 2 | ಅನಂಪು | 6 | 42 |
| 351 | 6 | 6 | ಜಗವಿ | 10 | 93 |
| 352 | 6 | 8 | ,, | 10 | 95 |
| 353 | 6 | 9 | ,, | 10 | 97 |
| 354 | 6 | 26 | ಅದಚ | 4 | 120 |
| 355 | 6 | 37 | ,, | 12 | 114 |
| 356 | 6 | 38 | ,, | 12 | 116 |
| 357 | 6 | 39 | ,, | 12 | 117 |
| 358 | 6 | 41 | ,, | 12 | 115 |
| 359 | 6 | 53 | ಚಂದ್ರಪು | 5 | 99 |
| 360 | 6 | 69 | ಅನಂಪು | 3 | 25 |
| 361 | 6 | 71 | ಅದಚ | 6 | 93 |
| 362 | 6 | 72 | ,, | 3 | 40 |
| 363 | 6 | 73 | ,, | 2 | 89 |
| 364 | 6 | 74 | ಗಿರಿಕ | 4 | 153 |

| 1 | 2 | 3 | 4 | 5 | 6 |
|---|---|---|---|---|---|
| 365 | 6 | 75 | ಅದಚ | 3 | 41 |
| 366 | 6 | 76 | ,, | 4 | 89 |
| 367 | 6 | 77 | ,, | 6 | 65 |
| 368 | 6 | 82 | ,, | 6 | 64 |
| 369 | 6 | 86 | ,, | 6 | 31 |
| 370 | 6 | 87 | ಕಾವ್ಯಸಾರಂ | 7 | 272 |
| 371 | 6 | 88 | ಕಾವ್ಯಾವ | ಪದ್ಯ | 934 |
| 372 | 6 | 89 | ಲೀಲಾ | 7 | 34 |
| 373 | 6 | 93 | ಅದಚ | 11 | 22 |
| 374 | 6 | 94 | ,, | 8 | 261 |
| 375 | 6 | 95 | ,, | 8 | 262 |
| 376 | 6 | 97 | ಕಕಾವಂ | ಪದ್ಯ | 121 |
| 377 | 6 | 98 | ,, | ಪದ್ಯ | 130 |
| 378 | 6 | 99 | ,, | ಪದ್ಯ | 93 |
| 379 | 6 | 111 | ಪುಷ್ಪಪು | 9 | 44 |
| 380 | 6 | 114 | ಧರ್ಮಪು | 3 | 96 |
| 381 | 6 | 115 | ,, | 3 | 101 |
| 382 | 6 | 116 | ,, | 3 | 95 |
| 383 | 6 | 117 | ,, | 3 | 53 |
| 384 | 6 | 118 | ,, | 3 | 54 |
| 385 | 6 | 119 | ,, | 3 | 55 |
| 386 | 6 | 120 | ಜಗವಿ | 10 | 18 |
| 387 | 6 | 121 | ,, | 10 | 19 |
| 388 | 6 | 122 | ಧರ್ಮಪು | 3 | 60 |
| 389 | 6 | 123 | ಅದಚ | 6 | 33 |
| 390 | 6 | 125 | ಕಕಾವಂ | ಪದ್ಯ | 74 |
| 391 | 6 | 129 | ಧರ್ಮಪು | 3 | 63 |
| 392 | 6 | 130 | ಜಗವಿ | 10 | 20 |
| 393 | 6 | 131 | ,, | 10 | 22 |
| 394 | 6 | 132 | ,, | 10 | 21 |
| 395 | 6 | 133 | ಧರ್ಮಪು | 3 | 61 |
| 396 | 6 | 135 | ,, | 3 | 62 |
| 397 | 6 | 136 | ಜಗವಿ | 10 | 23 |
| 398 | 6 | 138 | ಅದಚ | 6 | 34 |
| 399 | 6 | 140 | ಜಗವಿ | 10 | 24 |
| 400 | 6 | 141 | ಧರ್ಮಪು | 3 | 64 |
| 401 | 6 | 142 | ಅದಚ | 6 | 35 |

| 1 | 2 | 3 | 4 | 5 | 6 |
|---|---|---|---|---|---|
| 402 | 6 | 144 | ಕಕಾವಂ | ಪದ್ಯ | 75 |
| 403 | 6 | 149 | ಜಗವಿ | 10 | 25 |
| 404 | 6 | 150 | ಧರ್ಮಪು | 3 | 65 |
| 405 | 6 | 151 | ಅದಚ | 6 | 36 |
| 406 | 6 | 152 | ಕಾವ್ಯಾವ | ಪದ್ಯ | 733 |
| 407 | 6 | 153 | ಧರ್ಮಪು | 3 | 67 |
| 408 | 6 | 154 | ಅದಚ | 6 | 37 |
| 409 | 6 | 155 | ಜಗವಿ | 10 | 26 |
| 410 | 6 | 156 | ಧರ್ಮಪು | 3 | 68 |
| 411 | 6 | 157 | ,, | 3 | 66 |
| 412 | 6 | 158 | ಜಗವಿ | 10 | 28 |
| 413 | 6 | 159 | ಧರ್ಮಪು | 3 | 69 |
| 414 | 6 | 160 | ಅದಚ | 6 | 38 |
| 415 | 6 | 164 | ಜಗವಿ | 10 | 27 |
| 416 | 6 | 165 | ಧರ್ಮಪು | 3 | 71 |
| 417 | 6 | 167 | ಕಕಾವಂ | ಪದ್ಯ | 76 |
| 418 | 6 | 168 | ಜಗವಿ | 10 | 29 |
| 419 | 6 | 169 | ಧರ್ಮಪು | 3 | 70 |
| 420 | 6 | 170 | ಅದಚ | 6 | 39 |
| 421 | 6 | 172 | ಜಗವಿ | 10 | 30 |
| 422 | 6 | 173 | ಧರ್ಮಪು | 3 | 72 |
| 423 | 6 | 174 | ಅದಚ | 6 | 40 |
| 424 | 6 | 177 | ಲೀಲಾ | 3 | 35 |
| 425 | 6 | 178 | ಕಾವ್ಯಾವ | ಪದ್ಯ | 668 |
| 426 | 6 | 179 | ಧರ್ಮಪು | 3 | 74 |
| 427 | 6 | 180 | ಅನಂಪು | 8 | 10 |
| 428 | 6 | 182 | ಜಗವಿ | 10 | 31 |
| 429 | 6 | 183 | ,, | 10 | 32 |
| 430 | 6 | 184 | ಧರ್ಮಪು | 3 | 73 |
| 431 | 6 | 185 | ,, | 3 | 75 |
| 432 | 6 | 186 | ,, | 3 | 76 |
| 433 | 6 | 187 | ಅದಚ | 6 | 41 |
| 434 | 6 | 189 | ಜಗವಿ | 10 | 33 |
| 435 | 6 | 190 | ಧರ್ಮಪು | 3 | 77 |
| 436 | 6 | 191 | ಜಗವಿ | 10 | 34 |
| 437 | 6 | 192 | ಧರ್ಮಪು | 3 | 78 |
| 438 | 6 | 193 | ಜಗವಿ | 10 | 35 |

| 1 | 2 | 3 | 4 | 5 | 6 |
|---|---|---|---|---|---|
| 439 | 6 | 194 | ಧರ್ಮಪು | 3 | 79 |
| 440 | 6 | 195 | ಅದಚ | 6 | 42 |
| 441 | 6 | 197 | ಕಕಾವಂ | ಪದ್ಯ | 77 |
| 442 | 6 | 198 | ಚಂದ್ರಪ್ರ | 11 | 94 |
| 443 | 6 | 201 | ಧರ್ಮಪು | 3 | 80 |
| 444 | 6 | 202 | ಜಗವಿ | 10 | 36 |
| 445 | 6 | 203 | ಅದಚ | 6 | 43 |
| 446 | 6 | 204 | ಧರ್ಮಪು | 3 | 84 |
| 447 | 6 | 206 | ಜಗವಿ | 10 | 37 |
| 448 | 6 | 207 | ಧರ್ಮಪು | 3 | 85 |
| 449 | 6 | 208 | ಅದಚ | 6 | 44 |
| 450 | 6 | 210 | ಧರ್ಮಪು | 3 | 83 |
| 451 | 6 | 211 | ಜಗವಿ | 10 | 38 |
| 452 | 6 | 212 | ಧರ್ಮಪು | 3 | 81 |
| 453 | 6 | 213 | ಅದಚ | 6 | 45 |
| 454 | 6 | 214 | ಜಗವಿ | 10 | 39 |
| 455 | 6 | 215 | ಧರ್ಮಪು | 3 | 82 |
| 456 | 6 | 216 | ಅದಚ | 6 | 51 |
| 457 | 6 | 217 | ಜಗವಿ | 10 | 40 |
| 458 | 6 | 218 | ಧರ್ಮಪು | 3 | 86 |
| 459 | 6 | 219 | ಅದಚ | 6 | 46 |
| 460 | 6 | 220 | ಜಗವಿ | 10 | 41 |
| 461 | 6 | 221 | ಧರ್ಮಪು | 3 | 88 |
| 462 | 6 | 222 | ಅದಚ | 6 | 47 |
| 463 | 6 | 223 | ,, | 6 | 48 |
| 464 | 6 | 224 | ,, | 6 | 49 |
| 465 | 6 | 228 | ಕಾವ್ಯಾವ | ಪದ್ಯ | 732 |
| 466 | 6 | 232 | ಧರ್ಮಪು | 3 | 90 |
| 467 | 6 | 233 | ಅದಚ | 6 | 50 |
| 468 | 6 | 234 | ಧರ್ಮಪು | 3 | 89 |
| 469 | 6 | 235 | ಜಗವಿ | 10 | 43 |
| 470 | 6 | 236 | ಧರ್ಮಪು | 3 | 91 |
| 471 | 6 | 237 | ಜಗವಿ | 10 | 44 |
| 472 | 6 | 238 | ಧರ್ಮಪು | 3 | 92 |
| 473 | 6 | 239 | ,, | 3 | 94 |
| 474 | 6 | 240 | ಅದಚ | 6 | 53 |
| 475 | 6 | 243 | ಜಗವಿ | 10 | 45 |

| 1 | 2 | 3 | 4 | 5 | 6 |
|---|---|---|---|---|---|
| 476 | 6 | 244 | ಜಗವಿ | 10 | 47 |
| 477 | 6 | 245 | ,, | 10 | 46 |
| 478 | 6 | 246 | ಧರ್ಮಪು | 3 | 97 |
| 479 | 6 | 247 | ,, | 3 | 98 |
| 480 | 6 | 248 | ಜಗವಿ | 10 | 48 |
| 481 | 6 | 250 | ಧರ್ಮಪು | 3 | 100 |
| 482 | 6 | 257 | ಜಗವಿ | 10 | 113 |
| 483 | 6 | 258 | ಅದಚ | 6 | 37 |
| 484 | 6 | 259 | ಜಗವಿ | 10 | 115 |
| 485 | 6 | 260 | ಅದಚ | 6 | 62 |
| 486 | 6 | 261 | ಜಗವಿ | 10 | 117 |
| 487 | 6 | 262 | ಅದಚ | 6 | 58 |
| 488 | 6 | 264 | ,, | 6 | 59 |
| 489 | 6 | 267 | ,, | 6 | 60 |
| 490 | 6 | 268 | ಜಗವಿ | 10 | 121 |
| 491 | 6 | 269 | ಅದಚ | 6 | 63 |
| 492 | 6 | 270 | ಜಗವಿ | 10 | 123 |
| 493 | 6 | 271 | ಅದಚ | 6 | 55 |
| 494 | 6 | 272 | ,, | 6 | 61 |
| 495 | 6 | 273 | ಧರ್ಮಪು | 3 | 87 |
| 496 | 6 | 277 | ಜಗವಿ | 10 | 125 |
| 497 | 6 | 278 | ಅದಚ | 6 | 54 |
| 498 | 6 | 309 | ,, | 6 | 83 |
| 499 | 7 | 7 | ,, | 5 | 66 |
| 500 | 7 | 8 | ,, | 5 | 56 |
| 501 | 7 | 9 | ಅದಚ | 5 | 58 |
| 502 | 7 | 10 | ,, | 5 | 63 |
| 503 | 7 | 11 | ,, | 5 | 64 |
| 504 | 7 | 12 | ,, | 5 | 65 |
| 505 | 7 | 23 | K. 217/5 | 12 | 6 |
| 506 | 7 | 26 | ಚಂದ್ರಪು | 3 | 46 |
| 507 | 7 | 27 | ಗಿರಿಕ | 3 | 7 |
| 508 | 7 | 28 | ಧರ್ಮಪು | 3 | 125 |
| 509 | 7 | 46 | ಕಾದಂ (ಪೂ) | ಪದ್ಯ | 336 |
| 510 | 7 | 48 | ,, | ಪದ್ಯ | 337 |
| 511 | 7 | 49 | ಧರ್ಮಪು | 3 | 127 |
| 512 | 7 | 50 | ,, | 3 | 130 |

| 1 | 2 | 3 | 4 | 5 | 6 |
|---|---|---|---|---|---|
| 513 | 7 | 51 | ಧರ್ಮಪು | 3 | 133 |
| 514 | 7 | 52 | ಚಂದ್ರಪು | 3 | 53 |
| 515 | 7 | 53 | ಧರ್ಮಪು | 3 | 139 |
| 516 | 7 | 56 | ,, | 3 | 132 |
| 517 | 7 | 58 | ,, | 3 | 131 |
| 518 | 7 | 61 | ,, | 3 | 129 |
| 519 | 7 | 62 | ,, | 3 | 134 |
| 520 | 7 | 63 | ,, | 3 | 135 |
| 521 | 7 | 64 | ,, | 3 | 136 |
| 522 | 7 | 65 | ,, | 3 | 137 |
| 523 | 7 | 75 | ಅರ್ಧನೇ | 2 | 11 |
| 524 | 7 | 77 | ಪುಷ್ಪಪು | 9 | 91 |
| 525 | 7 | 78 | ,, | 9 | 92 |
| 526 | 7 | 79 | ಅದಚ | 1 | 60 |
| 527 | 7 | 81 | ಕಾವ್ಯಸಾರಂ | 9 | 343 |
| 528 | 7 | 82 | ,, | 9 | 345 |
| 529 | 7 | 92 | ಅದಚ | 1 | 61 |
| 530 | 7 | 94 | ಜಗವಿ | 2 | 72 |
| 531 | 7 | 96 | ಅದಚ | 8 | 292 |
| 532 | 7 | 97 | ಗಿರಿಕ | 3 | 26 |
| 533 | 7 | 98 | ಧರ್ಮಪು | 3 | 126 |
| 534 | 7 | 99 | ,, | 3 | 103 |
| 535 | 7 | 100 | ಗಿರಿಕ | 3 | 27 |
| 536 | 7 | 104 | ,, | 3 | 28 |
| 537 | 7 | 105 | ,, | 3 | 29 |
| 538 | 7 | 106 | ,, | 3 | 31 |
| 539 | 7 | 107 | ,, | 3 | 30 |
| 540 | 7 | 110 | ಅದಚ | 8 | 293 |
| 541 | 7 | 118 | ಲೀಲಾ | 3 | 77 |
| 542 | 7 | 121 | ,, | 4 | 12 |
| 543 | 7 | 124 | ಅದಚ | 1 | 69 |
| 544 | 7 | 125 | ಗಿರಿಕ | 3 | 40 |
| 545 | 7 | 134 | ಚಂದ್ರಪು | 3 | 84 |
| 546 | 7 | 138 | ,, | 3 | 86 |
| 547 | 7 | 146 | ,, | 3 | 89 |
| 548 | 8 | 3 | ಜಗವಿ | 6 | 11 |
| 549 | 8 | 4 | ,, | 4 | 111 |

| 1 | 2 | 3 | 4 | 5 | 6 |
|---|---|---|---|---|---|
| 550 | 8 | 10 | ಗಿರಿಕ | 4 | 65 |
| 551 | 8 | 11 | ಅದಚ | 3 | 22 |
| 552 | 8 | 12 | ,, | 8 | 76 |
| 553 | 8 | 13 | ,, | 2 | 39 |
| 554 | 8 | 15 | ,, | 8 | 77 |
| 555 | 8 | 18 | ,, | 6 | 97 |
| 556 | 8 | 26 | ,, | 5 | 33 |
| 557 | 8 | 27 | ,, | 4 | 107 |
| 558 | 8 | 28 | ,, | 10 | 33 |
| 559 | 8 | 29 | ,, | 11 | 4 |
| 560 | 8 | 31 | ,, | 8 | 310 |
| 561 | 8 | 35 | ಸೂಕ್ತಿಸು | 8 | 20 |
| 562 | 8 | 40 | ಅದಚ | 3 | 21 |
| 563 | 8 | 41 | ಗಿರಿಕ | 4 | 66 |
| 564 | 8 | 44 | ಮಲ್ಲಿಪು | 7 | 15 |
| 565 | 8 | 49 | ಅದಚ | 2 | 40 |
| 566 | 8 | 55 | ಅನಂಪು | 7 | 69 |
| 567 | 8 | 59 | ಅದಚ | 6 | 98 |
| 568 | 8 | 61 | ಗಿರಿಕ | 4 | 70 |
| 569 | 8 | 64 | ಅದಚ | 6 | 99 |
| 570 | 8 | 71 | ಸೂಕ್ತಿಸು | 8 | 41 |
| 571 | 8 | 72 | ಅದಚ | 6 | 100 |
| 572 | 8 | 73 | ,, | 6 | 101 |
| 573 | 8 | 74 | ಸೂಕ್ತಿಸು | 8 | 30 |
| 574 | 8 | 90 | ಅದಚ | 11 | 6 |
| 575 | 8 | 91 | ,, | 10 | 68 |
| 576 | 8 | 92 | ,, | 2 | 42 |
| 577 | 8 | 93 | ,, | 2 | 43 |
| 578 | 8 | 94 | ,, | 2 | 44 |
| 579 | 8 | 95 | ,, | 2 | 44 a. |
| 580 | 8 | 98 | ಪುಷ್ಪಪು | 8 | 9 |
| 581 | 8 | 100 | ಅದಚ | 5 | 34 |
| 582 | 8 | 102 | ,, | 2 | 41 |
| 583 | 8 | 112 | ಪುಷ್ಪಪು | 8 | 99 |
| 584 | 8 | 119 | ಗಿರಿಕ | 4 | 80 |
| 585 | 8 | 150 | ತ್ರಿಪುಚಾ | 24 | 131 |
| 586 | 8 | 159 | ಸೂಕ್ತಿಸು | 8 | 89 |

| 1 | 2 | 3 | 4 | 5 | 6 |
|---|---|---|---|---|---|
| 587 | 8 | 160 | ಮದನ | 8 | 40 |
| 588 | 8 | 161 | ಸೂಕ್ತಿಸು | 8 | 90 |
| 589 | 8 | 163 | ಮದನ | 8 | 42 |
| 590 | 8 | 164 | ಸೂಕ್ತಿಸು | 8 | 94 |
| 591 | 8 | 174 | ಶಾಂತೀಪು | 11 | 23 |
| 592 | 8 | 193 | ಸೂಕ್ತಿಸು | 8 | 181 |
| 593 | 8 | 201 | ಗಿರಿಕ | 4 | 94 |
| 594 | 8 | 214 | ಜಗವಿ | 16 | 105 |
| 595 | 8 | 244 | ಅದಚ | 6 | 103 |
| 596 | 8 | 245 | ,, | 8 | 259 |
| 597 | 8 | 246 | ,, | 6 | 105 |
| 598 | 8 | 253 | ಲೀಲಾ | 2 | 6 |
| 599 | 8 | 268 | ಗಿರಿಕ | 4 | 105 |
| 600 | 8 | 272 | ಜಗವಿ | 4 | 73 |
| 601 | 8 | 279 | ಗಿರಿಕ | 4 | 103 |
| 602 | 8 | 281 | ,, | 4 | 102 |
| 603 | 8 | 292 | ಅದಚ | 10 | 59 |
| 604 | 8 | 293 | ,, | 6 | 102 |
| 605 | 8 | 297 | ,, | 6 | 104 |
| 606 | 8 | 298 | ಲೀಲಾ | 2 | 46 |
| 607 | 8 | 314 | ,, | 2 | 21 |
| 608 | 8 | 331 | ಜಗವಿ | 16 | 109 |
| 609 | 8 | 334 | ಗಿರಿಕ | 4 | 106 |
| 610 | 8 | 335 | ,, | 4 | 107 |
| 611 | 8 | 336 | ,, | 4 | 110 |
| 612 | 8 | 337 | ,, | 4 | 111 |
| 613 | 8 | 338 | ಮಲ್ಲಿಪು | 7 | 39 |
| 614 | 8 | 339 | ಗಿರಿಕ | 4 | 112 |
| 615 | 8 | 349 | ಕಾವ್ಯಸಾರಂ | 37 | 918 |
| 616 | 8 | 357 | ತ್ರಿಪುಚಾ | 9 | 54 |
| 617 | 8 | 379 | ಜಗವಿ | 16 | 125 |
| 618 | 8 | 406 | ತ್ರಿಪುಚಾ | 17 | 30 |
| 619 | 8 | 407 | ಅದಚ | 1 | 44 |
| 620 | 8 | 410 | ಜಗವಿ | 16 | 111 |
| 621 | 8 | 416 | ,, | 16 | 125 |
| 622 | 8 | 429 | ,, | 11 | 15 |
| 623 | 8 | 432 | ಅದಚ | 10 | 38 |

| 1 | 2 | 3 | 4 | 5 | 6 |
|---|---|---|---|---|---|
| 624 | 8 | 437 | ಕಾವ್ಯಸಾರಂ | (ಪುಟ) 234 | 2 |
| 625 | 8 | 439 | ಚಂದ್ರಪು | 11 | 93 |
| 626 | 8 | 442 | ಸೂಕ್ತಿಸು | 8 | 393 |
| 627 | 8 | 444 | ,, | 8 | 397 |
| 628 | 8 | 446 | ಅದಚ | 4 | 96 |
| 629 | 8 | 448 | ಸೂಕ್ತಿಸು | 8 | 402 |
| 630 | 8 | 451 | ಅನುಮು | ಪದ್ಯ | 62 |
| 631 | 8 | 458 | ತ್ರಿಪುಚಾ | 24 | 179 |
| 632 | 8 | 490 | ಗಿರಿಕ | 4 | 139 |
| 633 | 8 | 526 | ಕಾವ್ಯಾವ | ಪದ್ಯ | 913 |
| 634 | 8 | 527 | ಪುಷ್ಪಪು | 13 | 35 |
| 635 | 8 | 528 | ,, | 13 | 36 |
| 636 | 8 | 548 | ಜಗವಿ | 9 | 101 |
| 637 | 8 | 550 | ತ್ರಿಪುಚಾ | 24 | 161 |
| 638 | 8 | 554 | ಗಿರಿಕ | 4 | 128 |
| 639 | 8 | 555 | ಗಿರಿಕ | 4 | 129 |
| 640 | 8 | 557 | ,, | 4 | 125 |
| 641 | 8 | 558 | ,, | 4 | 126 |
| 642 | 8 | 559 | ,, | 4 | 130 |
| 643 | 8 | 563 | ಅದಚ | 6 | 84 |
| 644 | 8 | 573 | ,, | 8 | 211 |
| 645 | 8 | 577 | ,, | 12 | 30 |
| 646 | 8 | 578 | ,, | 12 | 29 |
| 647 | 8 | 579 | ,, | 12 | 31 |
| 648 | 8 | 580 | ,, | 12 | 33 |
| 649 | 8 | 581 | ,, | 12 | 33a |
| 650 | 8 | 582 | ,, | 12 | 34 |
| 651 | 8 | 589 | ಜಗವಿ | 16 | 112 |
| 652 | 8 | 595 | ಮಲ್ಲಿಪು | 7 | 52 |
| 653 | 8 | 597 | ಜಗವಿ | 16 | 113 |
| 654 | 9 | 4 | ಅದಚ | 8 | 135 |
| 655 | 9 | 8 | ಲೀಲಾ | 7 | 100 |
| 656 | 9 | 16 | ಗಿರಿಕ | 5 | 2 |
| 657 | 9 | 43 | ಅದಚ | 10 | 67 |
| 658 | 9 | 54 | ಸೂಕ್ತಿಸು | 9 | 30 |
| 659 | 9 | 58 | ಅದಚ | 11 | 49 |
| 660 | 9 | 59 | ,, | 11 | 50 |

| 1 | 2 | 3 | 4 | 5 | 6 |
|---|---|---|---|---|---|
| 661 | 9 | 60 | K. 217/5 | 11 | 21 |
| 662 | 9 | 65 | ಅದಚ | 4 | 13 |
| 663 | 9 | 66 | ಸೂಕ್ತಿಸು | 9 | 41 |
| 664 | 9 | 72 | ಶೂದ್ರಕ/ಕಾವ್ಯಸಾರಂ | ?/27 | ?/694 |
| 665 | 9 | 78 | ಅದಚ | 8 | 133 |
| 666 | 9 | 87 | ಗಿರಿಕ | 5 | 6 |
| 667 | 9 | 88 | ,, | 5 | 7 |
| 668 | 9 | 89 | ,, | 5 | 3 |
| 669 | 9 | 90 | ,, | 5 | 8 |
| 670 | 9 | 91 | ,, | 5 | 9 |
| 671 | 9 | 93 | ಅದಚ | 11 | 31 |
| 672 | 9 | 103 | ,, | 10 | 34 |
| 673 | 9 | 104 | ,, | 8 | 134 |
| 674 | 9 | 105 | ,, | 8 | 316 |
| 675 | 9 | 106 | ,, | 6 | 108 |
| 676 | 9 | 111 | ತ್ರಿಪುಚಾ | 17 | 132 |
| 677 | 9 | 117 | ಅದಚ | 4 | 14 |
| 678 | 9 | 122 | ತ್ರಿಪುಚಾ | 61 | 34 |
| 679 | 10 | 2 | ಗಿರಿಕ | 7 | 35 |
| 680 | 10 | 4 | ಜಗವಿ | 14 | 21 |
| 681 | 10 | 13 | ಗಿರಿಕ | 7 | 37 |
| 682 | 10 | 14 | ,, | 7 | 36 |
| 683 | 10 | 15 | ,, | 7 | 38 |
| 684 | 10 | 16 | ,, | 7 | 39 |
| 685 | 10 | 17 | ,, | 7 | 41 |
| 686 | 10 | 18 | ,, | 7 | 40 |
| 687 | 10 | 19 | ,, | 7 | 42 |
| 688 | 10 | 48 | ಜಗವಿ | 14 | 25 |
| 689 | 10 | 49 | ಕಾವ್ಯಸಾರಂ | 29 | 710 |
| 690 | 10 | 51 | ಅನಂಪು | 6 | 85 |
| 691 | 10 | 83 | ಅದಚ | 4 | 21 |
| 692 | 10 | 84 | ,, | 4 | 22 |
| 693 | 10 | 85 | ,, | 4 | 23 |
| 694 | 10 | 92 | ಕಾವ್ಯಸಾರಂ | 31 | 785 |
| 695 | 10 | 105 | ಜಗವಿ | 8 | 35 |
| 696 | 10 | 107 | ,, | 17 | 72 |
| 697 | 10 | 108 | ,, | 17 | 71 |

| 1 | 2 | 3 | 4 | 5 | 6 |
|---|---|---|---|---|---|
| 698 | 10 | 110 | ಜಗವಿ | 17 | 65 |
| 699 | 10 | 111 | ,, | 17 | 66 |
| 700 | 10 | 112 | ,, | 17 | 70 |
| 701 | 10 | 113 | ,, | 17 | 78 |
| 702 | 10 | 114 | ,, | 17 | 79 |
| 703 | 10 | 115 | ,, | 17 | 80 |
| 704 | 10 | 116 | ,, | 17 | 81 |
| 705 | 10 | 117 | ,, | 17 | 82 |
| 706 | 10 | 121 | ಗಿರಿಕ | 9 | 36 |
| 707 | 10 | 122 | ,, | 9 | 37 |
| 708 | 10 | 123 | ,, | 9 | 31 |
| 709 | 10 | 124 | ಜಗವಿ | 4 | 7 |
| 710 | 10 | 126 | ಗಿರಿಕ | 9 | 38 |
| 711 | 10 | 127 | ,, | 9 | 39 |
| 712 | 10 | 134 | ,, | 9 | 41 |
| 713 | 10 | 136 | ಸೂಕ್ತಿಸು | 10 | 162 |
| 714 | 10 | 146 | ಗಿರಿಕ | 9 | 46 |
| 715 | 10 | 147 | ಜಗವಿ | 4 | 18 |
| 716 | 10 | 153 | ,, | 4 | 30 |
| 717 | 10 | 154 | ಗಿರಿಕ | 9 | 55 |
| 718 | 10 | 156 | ಜಗವಿ | 4 | 31 |
| 719 | 10 | 157 | ಗಿರಿಕ | 9 | 47 |
| 720 | 10 | 158 | ಜಗವಿ | 4 | 21 |
| 721 | 10 | 160 | ಸೂಕ್ತಿಸು | 10 | 202 |
| 722 | 10 | 161 | ಜಗವಿ | 4 | 16 |
| 723 | 10 | 167 | ಗಿರಿಕ | 9 | 48 |
| 724 | 10 | 172 | ಜಗವಿ | 4 | 9 |
| 725 | 10 | 174 | ,, | 4 | 19 |
| 726 | 10 | 175 | ,, | 4 | 23 |
| 727 | 10 | 176 | ,, | 4 | 25 |
| 728 | 10 | 180 | ಗಿರಿಕ | 9 | 42 |
| 729 | 10 | 181 | ,, | 9 | 43 |
| 730 | 10 | 182 | ,, | 9 | 44 |
| 731 | 10 | 183 | ,, | 9 | 45 |
| 732 | 10 | 184 | ,, | 9 | 49 |
| 733 | 10 | 185 | ,, | 9 | 50 |
| 734 | 10 | 186 | ,, | 9 | 52 |

| 1 | 2 | 3 | 4 | 5 | 6 |
|---|---|---|---|---|---|
| 735 | 10 | 187 | ಗಿರಿಕ | 9 | 50 |
| 736 | 10 | 188 | ,, | 9 | 54 |
| 737 | 10 | 189 | ,, | 9 | 56 |
| 738 | 10 | 197 | ಸೂಕ್ತಿಸು | 10 | 209 |
| 739 | 10 | 198 | ಅನಂಪು | 9 | 15 |
| 740 | 10 | 206 | ಚಂದ್ರಪು | 4 | 44 |
| 741 | 10 | 207 | ಜಗವಿ | 4 | 35 |
| 742 | 10 | 209 | ,, | 4 | 22 |
| 743 | 10 | 211 | ಅರ್ಧಪು | 8 | 3 |
| 744 | 10 | 213 | ಜಗವಿ | 4 | 37 |
| 745 | 10 | 215 | ಸೂಕ್ತಿಸು | 10 | 227 |
| 746 | 10 | 216 | ,, | 10 | 228 |
| 747 | 10 | 218 | ಗಿರಿಕ | 9 | 61 |
| 748 | 10 | 219 | ಸೂಕ್ತಿಸು | 10 | 231 |
| 749 | 10 | 222 | ,, | 10 | 234 |
| 750 | 10 | 230 | ಗಿರಿಕ | 9 | 62 |
| 751 | 10 | 231 | ,, | 9 | 63 |
| 752 | 10 | 232 | ,, | 9 | 64 |
| 753 | 10 | 233 | ಜಗವಿ | 4 | 59 |
| 754 | 10 | 234 | ,, | 4 | 60 |
| 755 | 10 | 235 | ,, | 4 | 61 |
| 756 | 10 | 236 | ,, | 4 | 62 |
| 757 | 10 | 237 | ,, | 4 | 64 |
| 758 | 10 | 238 | ,, | 4 | 66 |
| 759 | 10 | 239 | ,, | 4 | 68 |
| 760 | 10 | 240 | ,, | 4 | 69 |
| 761 | 10 | 241 | ,, | 4 | 70 |
| 762 | 10 | 242 | ,, | 4 | 71 |
| 763 | 10 | 244 | ,, | 4 | 72 |
| 764 | 10 | 245 | ,, | 4 | 75 |
| 765 | 10 | 268 | ಗಿರಿಕ | 9 | 70 |
| 766 | 10 | 269 | ,, | 9 | 71 |
| 767 | 10 | 271 | ,, | 9 | 78 |
| 768 | 10 | 272 | ,, | 9 | 72 |
| 769 | 10 | 273 | ,, | 9 | 73 |
| 770 | 10 | 275 | ,, | 9 | 75 |
| 771 | 10 | 276 | ,, | 9 | 77 |

| 1 | 2 | 3 | 4 | 5 | 6 |
|---|---|---|---|---|---|
| 772 | 10 | 277 | ಗಿರಿಕ | 9 | 76 |
| 773 | 10 | 278 | ,, | 9 | 77 |
| 774 | 10 | 279 | ,, | 9 | 80 |
| 775 | 10 | 280 | ,, | 9 | 81 |
| 776 | 10 | 282 | ಕಾವ್ಯಸಾರಂ | 27 | 686 |
| 777 | 10 | 297 | ಲೀಲಾ | 9 | 17 |
| 778 | 10 | 300 | ಜಗವಿ | 14 | 17 |
| 779 | 10 | 310 | ಜಗವಿ | 14 | 8 |
| 780 | 10 | 311 | ,, | 14 | 16 |
| 781 | 10 | 312 | ಗಿರಿಕ | 9 | 69 |
| 782 | 11 | 4 | ಕಕಾವಂ | ಪದ್ಯ | 88 |
| 783 | 11 | 5 | ಜಗವಿ | 14 | 43 |
| 784 | 11 | 6 | ,, | 14 | 45 |
| 785 | 11 | 8 | ಲೀಲಾ | 6 | 138 |
| 786 | 11 | 10 | ಜಗವಿ | 14 | 46 |
| 787 | 11 | 12 | ,, | 14 | 47 |
| 788 | 11 | 13 | ಕಕಾವಂ | ಪದ್ಯ | 90 |
| 789 | 11 | 14 | ಜಗವಿ | 14 | 48 |
| 790 | 11 | 17 | ಧರ್ಮಾಪು | 4 | 26 |
| 791 | 11 | 18 | ಜಗವಿ | 14 | 54 |
| 792 | 11 | 19 | ,, | 14 | 55 |
| 793 | 11 | 20 | ,, | 14 | 56 |
| 794 | 11 | 21 | ,, | 14 | 58 |
| 795 | 11 | 22 | ,, | 14 | 57 |
| 796 | 11 | 25 | ಲೀಲಾ | 5 | 21 |
| 797 | 11 | 26 | ಜಗವಿ | 14 | 49 |
| 798 | 11 | 27 | ,, | 14 | 59 |
| 799 | 11 | 28 | ,, | 14 | 61 |
| 800 | 11 | 30 | ಕಕಾವಂ | ಪದ್ಯ | 92 |
| 801 | 11 | 31 | ಅದಚ | 6 | 28 |
| 802 | 11 | 32 | ,, | 6 | 29 |
| 803 | 11 | 33 | ,, | 6 | 30 |
| 804 | 11 | 34 | ಜಗವಿ | 9 | 122 |
| 805 | 11 | 36 | ,, | 14 | 73 |
| 806 | 11 | 49 | ಕಾದಂ (ಉ) | ಪದ್ಯ | 26 |
| 807 | 11 | 55 | ಲೀಲಾ | 13 | 74 |
| 808 | 11 | 56 | ,, | 13 | 75 |

| 1 | 2 | 3 | 4 | 5 | 6 |
|---|---|---|---|---|---|
| 809 | 11 | 57 | ಲೀಲಾ | 13 | 76 |
| 810 | 11 | 58 | ,, | 13 | 78 |
| 811 | 11 | 69 | ಜಗವಿ | 14 | 66 |
| 812 | 11 | 70 | ,, | 14 | 67 |
| 813 | 11 | 71 | ,, | 14 | 73 |
| 814 | 11 | 72 | ,, | 14 | 74 |
| 815 | 11 | 73 | ,, | 14 | 75 |
| 816 | 11 | 74 | ,, | 14 | 76 |
| 817 | 11 | 75 | ,, | 14 | 77 |
| 818 | 11 | 76 | ,, | 14 | 78 |
| 819 | 11 | 77 | ,, | 14 | 79 |
| 820 | 11 | 78 | ,, | 14 | 81 |
| 821 | 11 | 79 | ,, | 14 | 80 |
| 822 | 11 | 80 | ,, | 14 | 82 |
| 823 | 11 | 81 | ಗಿರಿಕ | 5 | 65 |
| 824 | 11 | 82 | ಅದಚ | 6 | 79 |
| 825 | 11 | 86 | ಜಗವಿ | 14 | 85 |
| 826 | 11 | 87 | ,, | 14 | 86 |
| 827 | 11 | 95 | ಅದಪು | 6 | 81 |
| 828 | 11 | 96 | ,, | 6 | 80 |
| 829 | 11 | 100 | ಕಾವ್ಯಾವ | ಪದ್ಯ | 241 |
| 830 | 12 | 4 | ಜಗವಿ | 30 | 750 |
| 831 | 12 | 5 | ಲೀಲಾ | 3 | 112 |
| 832 | 12 | 8 | ಗಿರಿಕ | 4 | 19 |
| 833 | 11 | 9 | ,, | 4 | 20 |
| 834 | 12 | 10 | ,, | 4 | 21 |
| 835 | 12 | 22 | ಸೂಕ್ತಿಸು | 12 | 27 |
| 836 | 12 | 23 | ಗಿರಿಕ | 4 | 26 |
| 837 | 12 | 25 | ,, | 4 | 25 |
| 838 | 12 | 26 | ,, | 4 | 24 |
| 839 | 12 | 27 | ,, | 4 | 27 |
| 840 | 12 | 28 | ,, | 4 | 28 |
| 841 | 12 | 29 | ,, | 4 | 30 |
| 842 | 12 | 30 | ,, | 4 | 29 |
| 843 | 12 | 31 | ,, | 4 | 31 |
| 844 | 12 | 91 | ಅನಂಪು | 7 | 54 |
| 845 | 12 | 99 | ಗಿರಿಕ | 3 | 4 |

| 1 | 2 | 3 | 4 | 5 | 6 |
|---|---|---|---|---|---|
| 846 | 13 | 11 | ಅದಚ | 8 | 213 |
| 847 | 13 | 12 | ,, | 8 | 214 |
| 848 | 13 | 13 | ,, | 8 | 215 |
| 849 | 13 | 14 | ,, | 8 | 219 |
| 850 | 14 | 6 | ಜಗವಿ | 10 | 138 |
| 851 | 14 | 9 | ,, | 10 | 142 |
| 852 | 14 | 23 | ಲೀಲಾ | 13 | 28 |
| 853 | 14 | 28 | ಅದಚ | 6 | 159 |
| 854 | 14 | 29 | ,, | 6 | 160 |
| 855 | 14 | 30 | ,, | 6 | 157 |
| 856 | 14 | 31 | ,, | 6 | 163 |
| 857 | 14 | 33 | ಗಿರಿಕ | 4 | 134 |
| 858 | 14 | 34 | ,, | 4 | 135 |
| 859 | 14 | 35 | ,, | 4 | 136 |
| 860 | 14 | 36 | ,, | 4 | 144 |
| 861 | 14 | 37 | ,, | 4 | 145 |
| 862 | 14 | 38 | ,, | 4 | 146 |
| 863 | 14 | 39 | ,, | 4 | 149 |
| 864 | 14 | 40 | ,, | 4 | 150 |
| 865 | 14 | 41 | ,, | 4 | 151 |
| 866 | 14 | 47 | ಅನುಮು | ಪದ್ಯ | 69 |
| 867 | 14 | 49 | ಅದಚ | 10 | 79 |
| 868 | 14 | 50 | ,, | 10 | 80 |
| 869 | 14 | 51 | ,, | 10 | 81 |
| 870 | 14 | 52 | ,, | 10 | 82 |
| 871 | 14 | 53 | ,, | 10 | 83 |
| 872 | 14 | 55 | ,, | 6 | 162 |
| 873 | 14 | 56 | ,, | 6 | 158 |
| 874 | 14 | 70 | ಸೂಕ್ತಿಸು | 14 | 5 |
| 875 | 14 | 83 | ಅದಚ | 6 | 161 |
| 876 | 14 | 99 | ,, | 8 | 51 |
| 877 | 15 | 12 | ಅನುಮು | ಪದ್ಯ | 28 |
| 878 | 15 | 27 | ,, | ಪದ್ಯ | 35 |
| 879 | 15 | 43 | ಕಕಾವಂ | ಪದ್ಯ | 126 |
| 880 | 15 | 44 | ,, | ಪದ್ಯ | 127 |
| 881 | 15 | 45 | ,, | ಪದ್ಯ | 128 |
| 882 | 15 | 47 | ,, | ಪದ್ಯ | 137 |

| 1 | 2 | 3 | 4 | 5 | 6 |
|---|---|---|---|---|---|
| 883 | 15 | 48 | ಕಕಾವಂ | ಪದ್ಯ | 129 |
| 884 | 15 | 71 | ಅನಂಪು | 12 | 4 |
| 885 | 15 | 74 | ಅದಚ | 6 | 129 |
| 886 | 15 | 75 | ಕಕಾವಂ | ಪದ್ಯ | 63 |
| 887 | 15 | 76 | ,, | ಪದ್ಯ | 65 |
| 888 | 15 | 77 | ,, | ಪದ್ಯ | 69 |
| 889 | 15 | 83 | ಗಿರಿಕ | 4 | 115 |
| 890 | 15 | 91 | ಜಗವಿ | 11 | 8 |
| 891 | 15 | 92 | ,, | 11 | 10 |
| 892 | 15 | 93 | ,, | 11 | 15 |
| 893 | 15 | 94 | ,, | 11 | 14 |
| 894 | 15 | 95 | ,, | 11 | 18 |
| 895 | 15 | 97 | ,, | 11 | 20 |
| 896 | 15 | 98 | ,, | 11 | 21 |
| 897 | 15 | 99 | ,, | 11 | 23 |
| 898 | 15 | 100 | ,, | 11 | 24 |
| 899 | 15 | 101 | ,, | 11 | 25 |
| 900 | 15 | 102 | ,, | 11 | 36 |
| 901 | 15 | 103 | ,, | 11 | 44 |
| 902 | 15 | 104 | ,, | 11 | 37 |
| 903 | 15 | 105 | ,, | 11 | 40 |
| 904 | 15 | 106 | ,, | 11 | 46 |
| 905 | 15 | 108 | ,, | 11 | 35 |
| 906 | 15 | 114 | ಕಾವ್ಯಾವ | ಪದ್ಯ | 635 |
| 907 | 15 | 116 | ಅರ್ಥಪು | 3 | 107 |
| 908 | 15 | 117 | ಕಾವ್ಯಸಾರಂ | 24 | 613 |
| 909 | 15 | 120 | ಲೀಲಾ | 10 | 72 |
| 910 | 15 | 124 | ಚಂದ್ರಪು | 8 | 64 |
| 911 | 15 | 125 | ,, | 5 | 127 |
| 912 | 15 | 128 | ಲೀಲಾ | 4 | 50 |
| 913 | 15 | 139 | ,, | 14 | 37 |
| 914 | 15 | 141 | ಕಾವ್ಯಾವ | ಪದ್ಯ | 367 |
| 915 | 15 | 145 | ಲೀಲಾ | 11 | 40 |
| 916 | 15 | 165 | ಗಿರಿಕ | 4 | 143 |
| 917 | 15 | 171 | ,, | 4 | 154 |
| 918 | 15 | 184 | ಜಗವಿ | 16 | 133 |
| 919 | 15 | 192 | ಚಂದ್ರಪು | 8 | 66 |

| 1 | 2 | 3 | 4 | 5 | 6 |
|---|---|---|---|---|---|
| 920 | 15 | 197 | ಅದಚ | 6 | 93 |
| 921 | 15 | 198 | ,, | 6 | 106 |
| 922 | 15 | 199 | ,, | 6 | 107 |
| 923 | 15 | 201 | ಕಾವ್ಯಸಾರಂ | 23 | 576 |
| 924 | 15 | 202 | ಗಿರಿಕ | 4 | 137 |
| | | | **ಸೇರ್ಪಡೆ** | | |
| 925 | 7 | 133 | ಕಾದಂ(ಪೂ) | ಪದ್ಯ | 378 |
| 926 | 8 | 52 | ಚಂದ್ರಪು | 8 | 11 |
| 927 | 8 | 392 | ಶೃಂಗಾರ | 3 | 66 |
| 928 | 8 | 412 | ಪಂಪರಾ | 3 | 72 |
| 929 | 15 | 118 | ಶೃಂಗಾರ | 4 | 61 |

# ಈ ಊರಿನ ಕಥೆ

ಎಂ. ಎಸ್. ವ್ಯಾಸರಾವ್

ಈ ಊರಿಗೆ ಯಾರ ಶಾಪವೋ ತಲೆಗಳೇ ಇಲ್ಲ
ಬರೀ ಮುಂಡಗಳ ಜಾತ್ರೆ
ಹೊತ್ತು ಏರುವುದೇ ಇಲ್ಲ, ಏರಿದರೂ ಇಳಿಯುವುದಿಲ್ಲ
ಉದ್ದ ಬಲೂನಾಗುವ ದೀರ್ಘ ದಿನದಲ್ಲಿ
ಎಲ್ಲರಿಗೂ ಕಾಯುವುದೊಂದೇ ಕೆಲಸ

ಪರಂಪರೆಯ ಭೈರಿಗೆ ಕೊಡಲಿ ಬಿದ್ದರೂ ನೋವಾಗದ
ಚರ್ಮ ಸುಲಿದರೂ ಸುಲಿಯದಂತಿರುವ
ಚಿಗುರಿಗೆ ಚಿಗುರದ ಕಾವಿಗೆ ಸಿಡಿಯದ
ಮಣ್ಣಿಗೆ ಅರಳದ ಕೊರಗದ ಈ ಮುಂಡಗಳಿಗೆ
ಪಂಚವಾರ್ಷಿಕಕ್ಕೊಮ್ಮೆ ಉಪನ್ಯಾಸ ರುಂಡಗಳ ತೊಡಿಗೆ

ಮಣ್ಣಿಂದ ಬಿದಿರಿನವರೆಗೂ ನೆಂಟುತನ ಬಿತ್ತಿ
ಪೂಜಾರಿ ಮಂತ್ರದ ಧಾರೆಯೆರೆಯುತ್ತಾನೆ
ಜಾತ್ರೆ ನಡೆಸುತ್ತಾನೆ
ಹುರಿದ ಬೀಜದಿಂದ ಕಳೆತೆಗೆವ ಕಾರ್ಯ ಪ್ರಾರಂಭವಾಗುತ್ತದೆ
ಅಲ್ಲಿಂದ ಕೊಂಚಕಾಲ ಕಾಲುವೆಯಲ್ಲಿ ನೀರು
ಎದೆ ಎತ್ತರದ ಬತ್ತ ರಸವತ್ತು ಕಬ್ಬು
ಹಾಗೊಂದು ಬಾವಿ ಹೀಗೊಂದು ಆಲೆ
ಎಲ್ಲವೂ ಗಾಳಿಯಲ್ಲಿ ತೇಲುವ ಹಗುರ ಅಲೆ

ಇನ್ನು ಇಲ್ಲಿಯ ಶಾಪಗ್ರಸ್ತ ಕನ್ಯೆಯರು
ತಪ್ಪದೇ ಮಾಸಿಕದ ಕಂತನ್ನು ಒಪ್ಪಿಸಿ
ಬೆಂಕಿ ಭುಗಿಲಿಗೆ ಕಾಯುತ್ತಾರೆ
ಕಾಯುವುದೊಂದೇ ಕೆಲಸ

ಚಿಮ್ಮುವ ಕಾಂತಿ ತುಂಬಿದ ದೇಹ
ಹಾಗೇ ಕರಗಿ ಚೈತ್ರಕ್ಕೆ ಚಿಗುರಿ ಶಿಶಿರಕ್ಕೆ ಉದುರಿ
ಋತುವಿನುದ್ದಕ್ಕೂ ಮುಂಡಗಳಾಗಿ ಕಾಯುತ್ತಿವೆ

ಬಿದೆಗೆ ಬಿಗಿಗೆ ಮುರಿವ ನೋವಿಗೆ
ಇಷ್ಟಾದರೂ ಸದ್ದಿಲ್ಲದೆ ಶತಮಾನಗಳ ತನಕ
ಬೀಗ ಜಡಿದ ಗುಡಿಯೊಳಗೆ ಶಂಖ ಜಾಗಟೆ ಮೊಳಗು
ತೂಕಡಿಸುವ ಶಿಲ್ಪಗಳಿಗೆ ಧೂಪಾರತಿ
ನಿತ್ಯಸೇವೆ !

# ಜಲಮಂಡಲ

ವೈ. ಲಿಂಗರಾಜು

ಭೂಮಿಯನ್ನು ವಿಶಿಷ್ಟ ಗ್ರಹವನ್ನಾಗಿಸಲು ವಾತಾವರಣ ಹೇಗೆ ಮುಖ್ಯ ಪಾತ್ರವಹಿಸಿದೆಯೋ ಹಾಗೆಯೇ ಅಪಾರ ಜಲರಾಶಿ ಗ್ರಹದ ಬಹುಭಾಗವನ್ನಾವರಿಸಿ ಇತರ ಗ್ರಹಗಳಿಂದ ಬೇರೆನಿಸಿದೆ. ಭೂಮಿಯ ಹೊರಮೈನ ಹತ್ತರಲ್ಲಿ ಏಳುಭಾಗ ನೀರಿನಿಂದ ಆವರಿಸಿದ್ದು ನಾನಾ ಜೀವಿಗಳ ವಾಸಸ್ಥಾನ ಹಾಗೂ ಮಾನವನಿಗೆ ಅನೇಕ ಸಂಪನ್ಮೂಲಗಳ ಆಗರವಾಗಿದ್ದು, ವಿಜ್ಞಾನಿಗಳು ಈ ಜಲಮಂಡಲದ ಬಗ್ಗೆ ನಡೆಸುತ್ತಿರುವ ಅಧ್ಯಯನಗಳು ಕುತೂಹಲಕಾರಿ ಅಂಶಗಳನ್ನು ಹೊರಗೆಡಹಿವೆ.

ಈ ವಿಶಾಲ ಜಲಾವರಣವನ್ನು ಪಂಚಮಹಾಸಾಗರಗಳಾದ ಅಟ್ಲಾಂಟಿಕ್, ಪೆಸಿಫಿಕ್, ಹಿಂದೂ, ಆರ್ಕಟಿಕ್ ಮತ್ತು ಅಂಟಾರ್ಕಟಿಕ್ ಹಾಗೂ ಅನೇಕ ಸಮುದ್ರಗಳಾಗಿ ವಿಂಗಡಿಸಿಕೊಂಡಿದ್ದೇವಾದರೂ ಸಮಗ್ರವಾಗಿ ಭೂಮಿಯ ಹೊರಪದರದ ಮೇಲಿನ ಮತ್ತೊಂದು ಜಲಪದರವಾಗಿರುತ್ತದೆ.

ಇಷ್ಟು ಅಗಾಧ ಜಲವು ಉದ್ಭವಿಸಿದ್ದಾದರೂ ಹೇಗೆಂಬುದು ಭೂಮಿಯ ಉಗಮದ ಸಿದ್ಧಾಂತದಂತೆಯೇ ಸಾಕಷ್ಟು ಸ್ಪಷ್ಟವಾಗಿಲ್ಲ. ವರ್ತಮಾನದಲ್ಲಿ ನಡೆಯುತ್ತಿರುವ ನಾನಾ ನೈಸರ್ಗಿಕ ಪ್ರಕ್ರಿಯೆಗಳು ಭೂತದಲ್ಲಿ ನಡೆದಿರಲು ಸಾಧ್ಯವೆಂಬ ನಂಬಿಕೆಯಿಂದ ಅನೇಕ ಭೂವಿಜ್ಞಾನಿಗಳು ವಿವರಿಸುವಂತೆ ಈಗಿನ ಜ್ವಾಲಾಮುಖಿಗಳು ಅನೇಕ ರೀತಿಯ ದ್ರವ್ಯಾನಿಲ ಹಾಗೂ ಹಬೆಯನ್ನು ಹೊರಹೊಮ್ಮುತ್ತಿರುವಂತೆಯೇ ಹಿಂದೆ ಇದ್ದ ಜ್ವಾಲಾಮುಖಿಗಳು ಹೊರಹೊಮ್ಮಿದ ಜಲದ ಅಂಶವು ಭೂಮಿಯ ಹೊರಮೈಯನ್ನು ಆವರಿಸಿರಬಹುದಾಗಿರುತ್ತದೆ. ಭೂಮಿಯು ತಾನು ನಿರ್ಮಿತಗೊಳ್ಳುವ ಸಮಯದಲ್ಲಿ ಅತಿಬಿಸಿಯಾಗಿದ್ದು ಅನೇಕ ಜ್ವಾಲಾಮುಖಿಗಳ ಮೂಲಕ ವಿವಿಧ ಅನಿಲ ಮತ್ತು ಹಬೆಯನ್ನು ಹೊರಹೊಮ್ಮಿಸಿ ವಾತಾವರಣವನ್ನು ಸೇರಿಸುತ್ತಲಿತ್ತು. ಕ್ರಮೇಣ ಭೂಮಿಯು ತಣ್ಣಗಾದಂತೆಲ್ಲಾ ಹೊರಪದರವು ಸುಕ್ಕುಗೊಳ್ಳಲಾರಂಭಿಸಿತು. ಸುಕ್ಕುಗೊಂಡಂತೆಲ್ಲಾ ಒತ್ತಡ, ತುಯ್ತುಗಳು (Stress & Strain) ಉಂಟಾಗಿ ಬಿರುಕುಗಳು ಅರಳಲಾರಂಭಿಸಿ ಮತ್ತಷ್ಟು ಜ್ವಾಲಾಮುಖಿಗಳು ಉದ್ಭವಿಸಿದುವು. ತತ್ಕಾರಣ ಹೊರಚೆಲ್ಲಿದ ಅನಿಲಗಳೊಡನೆ ಬಂದ ಹಬೆಯು ವಾತಾವರಣವನ್ನು ಸೇರಿತು. ಮೊದಮೊದಲು ಈ ಹಬೆಯು ಹನಿಗೂಡಿ ಮೋಡವಾಗಿ ಮಳೆಗರೆದರೂ ಭೂಮಿಯ ಬಿಸಿಯಿಂದಾಗಿ ಮಳೆ ನೆಲ

ಸೇರದೆ ಮತ್ತೆ ಹಬೆಯಾಗಿ ಆಗಸವನ್ನೇರುತ್ತಿತ್ತು. ಕ್ರಮೇಣ ಭೂಮಿಯು ಹೊರಮೈ ತಣ್ಣಗಾದಮೇಲೆ ಜಲಪ್ರಳಯ ಉಂಟಾಗಿ ಇದ್ದೆಲ್ಲ ಕಂದರಗಳನ್ನು ತುಂಬಿಕೊಂಡು ವೃದ್ಧಿಯಾಯಿತೆಂದು ನಂಬ ಬಹುದು.

ಬಹಳ ಕಾಲದವರೆಗೆ ಸಾಗರ ತಳವು ಹೆಚ್ಚು ಏರುತಗ್ಗಾಗಿರದೇ ಸಮತಟ್ಟಾಗಿರ ಬಹುದೆಂದು ಊಹಿಸಲಾಗಿತ್ತು. ಕಳೆದ ಶತಮಾನದ ಕೊನೆಯ ಹೊತ್ತಿಗೆ ಭಾರ ವಸ್ತುಗಳನ್ನು ಕಟ್ಟಿದ ತಂತಿಗಳನ್ನು ಕೆಲವೆಡೆ ಇಳಿಬಿಟ್ಟು ಆಳಗಳಲ್ಲಿ ವ್ಯತ್ಯಾಸ ವಿರುವುದನ್ನು ಕಂಡುಕೊಳ್ಳಲಾಯಿತು.

ಈ ಶತಮಾನದಲ್ಲಿ ಸಾಗರದಾಳವನ್ನು ಕಂಡುಹಿಡಿಯಲು ಪ್ರತಿಫಲನಗೊಂಡ ಶಬ್ದದ ಅಲೆಗಳ ಸಹಾಯುವನ್ನು ಪಡೆಯಲಾಯಿತು. ಶಬ್ದಜನಕವೊಂದು ( Sound generator ) ಶಬ್ದ ಉತ್ಪತ್ತಿಮಾಡಿದಾಗ ಶಬ್ದದ ಅಲೆಯು ಸಾಗರ ತಳಕ್ಕೆ ಪಸರಿಸಿ ಬಡಿದಾಗ ಪ್ರತಿಫಲನಗೊಳ್ಳುತ್ತದೆ. ಹೀಗೆ ಪ್ರತಿಫಲನಗೊಂಡ ಅಲೆಯನ್ನು ಗುರುತಿಸಲಾಗುತ್ತದೆ. ಜಲ ಮಾಧ್ಯಮದಲ್ಲಿ ಶಬ್ದದ ಅಲೆಯ ವೇಗ ನಿರ್ದಿಷ್ಟ. ಇದನ್ನು ಪಸರಿಸಿ ಶಬ್ದದ ಅಲೆಯ ಒಂದು ಸಂಪೂರ್ಣ ಪ್ರಯಾಣಕ್ಕೆ ತೆಗೆದುಕೊಂಡ ವೇಳೆಯ ಒಂದು ಅರ್ಧದಿಂದ ಗುಣಿಸಿದಾಗ ಅಲ್ಲಿನ ಆಳವನ್ನು ತಿಳಿಯಲಾಗುತ್ತದೆ. ಹೀಗೆ ಸಾಗರದಾದ್ಯಂತ ಆಳತೆಗಳನ್ನು ನಡೆಸಿ ಸಾಗರ ತಲ ನಕ್ಷೆಗಳನ್ನು ರಚಿಸಲಾಗುತ್ತದೆ.

ಈ ರೀತಿಯಲ್ಲಿ ಸಾಗರದಾದ್ಯಂತ ಆಳತೆಗಳನ್ನು ನಡೆಸಿ ಸಾಗರತಲ ನಕ್ಷೆಗಳನ್ನು ತಯಾರಿಸಲಾಗಿದೆ. ಇವುಗಳ ಪ್ರಕಾರ ಸಾಗರಗಳೊಳಗೆ ಅನೇಕ ಕಂದರಗಳೂ ಇವೆ; ಗಿರಿ ಶಿಖರ ಶ್ರೇಣಿಗಳೂ ಇವೆ.

ಸಾಗರದಲ್ಲಿನ ಕೆಲವು ಕಂದರಗಳು ನೆಲದ ಮೇಲಿರುವ ಅನೇಕ ಪರ್ವತಗಳ ಎತ್ತರಕ್ಕಿಂತಲೂ ಹೆಚ್ಚು ಆಳವಿರುವುದು ಕಂಡುಬಂದಿವೆ. ಪ್ರಪಂಚದಲ್ಲೇ ಅತಿ ಎತ್ತರ ಎನಿಸಿಕೊಂಡಿರುವ ಗೌರಿಶಂಕರ ಶಿಖರವನ್ನು ಕಿತ್ತು ಪೆಸಿಫಿಕ್ ಸಾಗರದಲ್ಲಿನ 35640 ಅಡಿ ಆಳದ ಮೇರಿಯಾನ ಕಂದರದೊಳಕ್ಕೆ ಇಳಿಸಿದರೆ ಶಿಖರವು ಮುಳುಗಿ ಅದರ ಮೇಲೆ ಒಂದು ಮೈಲಿ ಎತ್ತರದಷ್ಟು ನೀರು ನಿಲ್ಲಬಹುದು. ಫಿಲಿಪ್ಪೈನ್ಸ್ ದ್ವೀಪದ ಬಳಿಯಿರುವ ಫಿಲಿಪ್ಪೈನ್ಸ್ ಕಂದರವು 34578 ಅಡಿ ಆಳವಿರುತ್ತದೆ. ಇಷ್ಟೊಂದು ಆಳದ ಕಂದರಗಳಿರುವ ಸಾಗರಗಳ ವೈಶಾಲ್ಯತೆ ಎಷ್ಟಿದೆ ಎಂದರೆ ಇರುವ ನೆಲದ ಏಳೆಂಟರಷ್ಟು ಜಮೀನನ್ನು ಅವುಗಳಲ್ಲಿ ಅಳವಡಿಸಬಹುದು. ಅಥವಾ ಇರುವ ತಗ್ಗು ತಿಟ್ಟುಗಳನ್ನು ಸಮತಟ್ಟಾಗಿಸಿದರೆ ಭೂಮಿಯು ಎರಡು ಮೈಲಿಗಳಷ್ಟು ನೀರಿನಿಂದಾವೃತವಾಗಬಲ್ಲುದು.

ಬ್ಯಾತಿಸ್ಥಿಯರ್ ಮತ್ತಿತರ ಆಳಕ್ಕೆ ಮುಳುಗುವ ಉಪಕರಣಗಳ ಸಹಾಯದಿಂದ ಅಧ್ಯಯನ ನಡೆಸಿದಾಗ ಸಾಗರ ತಲವು ನೆಲದ ಮೇಲ್ಮೈ ಲಕ್ಷಣದಂತೆಯೇ ಸ್ಥಳದಿಂದ ಸ್ಥಳಕ್ಕೆ ಅನೇಕ ಏರುತಗ್ಗುಗಳಿಂದ ಕೂಡಿದ ಕಣಿವೆ, ಕಂದರ, ಶಿಖರಗಳಿಂದ ಕೂಡಿದೆಯೆಂಬುದು ಸ್ಪಷ್ಟವಾಯಿತು. ಇದರ ಪ್ರಕಾರ ಪ್ರತಿಸಾಗರವೂ ಸಾಮಾನ್ಯ ವಾಗಿ ನೆಲದಿಂದ ತಲದವರೆಗೆ ನಾಲ್ಕು ಭಾಗಗಳಿಂದ ಕೂಡಿದೆ: ನೆಲಮಟ್ಟದಿಂದ ನಿಧಾನ ಸಾಗುತ್ತಾ ಇಳಿಜಾರುವ ಕಾಂಟಿನೆಂಟಲ್ ಶೆಲ್ಫ್‌ಗಳು, ಒಮ್ಮೆಗೆ ಇಳಿಯುವ ಇಳುಕಲುಗಳು ಮತ್ತು ಸಾಗರದ ಪಾತಲಗಳು, ಹಾಗೂ ಗಿರಿಶ್ರೇಣಿಗಳು.

ಕಾಂಟಿನೆಂಟಲ್ ಶೆಲ್ಫ್‌ಗಳು ಕಡಿಮೆ ಆಳವಿದ್ದು ಮೀನುಗಾರಿಕೆ ಮುಂತಾದ ಮಾನವನ ಕಸುಬಿಗೆ ಅನುಕೂಲಿಯಾದ ಈ ಪ್ರದೇಶಗಳು ಮೊದಲಿಗೆ ಪರ್ಯಾಯವಾಗಿ ಕೆಲಕಾಲ ಸಮುದ್ರವಾಗಿಯೂ ಕೆಲಕಾಲ ನೆಲವಾಗಿಯೂ ಇರುತ್ತ ಈಗ ಸಮುದ್ರದ ಭಾಗಗಳಾಗಿವೆ. ಈ ಸಮುದ್ರಭಾಗವು ಕೆಲವು ಖಂಡಗಳ ತೀರದಲ್ಲಿ ಕೇವಲ ಹತ್ತುಮೈಲಿಗಳವರೆಗಿದ್ದು ಕೆಲವೆಡೆ 800 ಮೈಲಿಗಳವರೆಗೂ ಹರಡಿಕೊಂಡಿರುತ್ತದೆ.

ಕಾಂಟಿನೆಂಟಲ್ ಶೆಲ್ಫ್‌ಗಳು ಮುಂದೆ ಸರಿದಂತೆಲ್ಲಾ ಇದ್ದಕಿದ್ದಂತೆ ಮಾಯವಾಗಿ 8,000 ದಿಂದ 18,000 ಅಡಿಗಳವರೆಗಿನ ಕಂದರಗಳು ಕಾಣಿಸಿಕೊಳ್ಳುತ್ತವೆ. ಈ ಅಸಾಧಾರಣ ಇಳುಕಲುಗಳು ನಾಲ್ಕು, ಐದು ಮೈಲುಗಳವರೆಗೂ ಸಾಗಿರುವುದು ಕಂಡು ಬಂದಿದೆ. ಈ ಇಳುಕಲುಗಳ ಮೇಲ್ಮೈ ಕೆಲವೆಡೆ ಸಾಫಾಗಿ ಕೆಲವೆಡೆ ಬಿರುಕುಗಳಿಂದ ಕೂಡಿರುತ್ತದೆ. ಕೆಲವು ಭಾಗಗಳಲ್ಲಿ ಈ ಕಣಿವೆಗಳು ಹತ್ತಾರು ಮೈಲುಗಳವರೆಗೆ ಹರಡಿರುವುದೂ ಉಂಟು.

ಈ ರೀತಿಯ ಕಣಿವೆಗಳ ನಿರ್ಮಾಣಗಳಿಗೆ ಕಾರಣವನ್ನು ಸ್ಪಷ್ಟವಾಗಿ ತಿಳಿಯ ಲಾಗಿಲ್ಲವಾದರೂ ಸಾಗರ ಶಾಸ್ತ್ರಜ್ಞರು ಬಹುಶಃ ಈ ಪ್ರದೇಶವು ಸಮುದ್ರಮಟ್ಟದ ಲ್ಲಿದ್ದಾಗ ಹರಿದು ಬಂದ ನದಿಗಳಿಂದ ಉಂಟಾಗಿರಬಹುದೆಂದು ಊಹಿಸುತ್ತಾರೆ.

ಇಳುಕಲುಗಳು ಕೊನೆಮುಟ್ಟುವ ಸಾಗರತಲಗಳು ಮಾನವ ಪ್ರಪಂಚದಿಂದ ಬಹುದೂರ. ಇಲ್ಲಿ ಅಪಾರ ಕತ್ತಲು ಅತಿಯಾದ ಒತ್ತಡಗಳಿಂದ ಕೂಡಿರುತ್ತದೆ. ಇಲ್ಲಿ ನದಿಗಳು ತಂದ ಶಿಲಾಕಣಗಳು ಒಂದಕ್ಕೊಂದು ಅಂಟಿ ಒತ್ತಡದಿಂದಾಗಿ ಶಿಲೆಯಾಗು ತ್ತವೆ. ಪ್ರತಿನಿತ್ಯವೂ ಕೊನೆಯ ಪಕ್ಷ ಮೂರು ಬಿಲಿಯನ್ ಟನ್‌ಗಳಷ್ಟು ನೆಲದಮೇಲಿನ ಶಿಲಾಕಣಗಳು ಸಾಗರತಲವನ್ನು ಸೇರುತ್ತವೆಂದು ಅಂದಾಜಿಸಲಾಗಿದೆ. ಈ ಶಿಲಾಕಣ ಗಳೊಡನೆ ಸೇರಿದ ಜೀವಿತ ವಸ್ತುಗಳ ಉಳಿಕೆಗಳು ನಿರ್ಮಿತ ಶಿಲೆಯಲ್ಲಿ 'ಪಳೆಯುಳಿಕೆ' ಯಾಗಿ ಮಾರ್ಪಾಡಾಗುತ್ತವೆ.

ಈ ಸಾಗರತಳಗಳಲ್ಲಿ ಇದ್ದಕ್ಕಿದ್ದಂತೆ ಗಿರಿ ಪರ್ವತ ಶ್ರೇಣಿಗಳು ಪ್ರಾರಂಭವಾಗಿವೆ. ಈ ಪರ್ವತದ ಶಿಖರಗಳು ಸಮುದ್ರಮಟ್ಟವನ್ನೂ ಮೀರಿ ನಿಂತಿರುವುದು ಕೌತುಕಮಯ. ಇಂತಹ ಶಿಖರಗಳು ಶಿಥಿಲಗೊಂಡು ಇವುಗಳ ಶಿರಗಳು ದ್ವೀಪಗಳಾಗಿವೆ. ಇದಕ್ಕೆ ಉದಾಹರಣೆ ಅಜೊರ್ ಮತ್ತು ಅಸೆನ್‌ಷನ್ ದ್ವೀಪಗಳು. ಈ ಸಾಗರಾಂತರ ಪರ್ವತಗಳು ಸಾವಿರಾರು ಮೈಲುಗಳ ಉದ್ದವೂ ನೂರಾರು ಮೈಲುಗಳ ಅಗಲವೂ ಇರುತ್ತವೆ. ಪೆಸಿಫಿಕ್ ಸಾಗರದಲ್ಲಿರುವ ದ್ವೀಪಗಳು ಕಿರುಪರ್ವತಶ್ರೇಣಿಯೊಂದರ ಶಿಖರಗಳು. ವಿಶೇಷವಾಗಿ ಸಾಗರಾಂತರ ಶಿಖರಗಳು ಅಗ್ನಿಪರ್ವತಗಳ ಚಟುವಟಿಕೆ ಯಿಂದಾಗಿರುತ್ತವೆ.

ಬಹುವಾಗಿ ನೆಲದ ಮೇಲೆ ನಮಗೆ ಕಾಣಸಿಗುವ ಭೂವೈಜ್ಞಾನಿಕ ಸ್ತರಗಳೇ ಸಾಗರದಾಳದಲ್ಲಿಯೂ ಮುಂದುವರೆದಿರುತ್ತವೆ. ಆದರೆ ಕೆಲವೆಡೆ ಸಂಬಂಧವಿಲ್ಲದ ಸ್ತರಗಳು ವಿಸ್ತರಿಸಿರುವುದುಂಟು. ಸಾಗರದಾಳದ ಭೂವಿಜ್ಞಾನದಲ್ಲಿ ಹೆಚ್ಚಿನ ಸೋಜಿಗವೆನಿಸುವುದು ಮಹಾಕಂದರಗಳದು (canyons). ಇವುಗಳು ಕ್ರಮೇಣ ಆಳಕ್ಕೆ ಜರುಗದೆ ಇದ್ದಕಿದ್ದಂತೆ ಮಹಾ ಆಳವನ್ನು ಹೊಂದಿರುತ್ತವೆ. ಈ ಮಹಾ ಕಂದರಗಳ ಪಕ್ಕದಲ್ಲಿಯೇ ಸಮುದ್ರಮಟ್ಟಕ್ಕೂ ಎತ್ತರದ ಪರ್ವತಗಳಿರುವುದುಂಟು. ಇವುಗಳು ಸ್ತರಭಂಗಗಳಿಂದ ಉಂಟಾಗಿರಬಹುದಾಗಿದ್ದು ಒಂದಕ್ಕೊಂದು ಸಮತೋಲನ ಪಡೆ ಯಲು ಅನುಕೂಲಿಯಾಗಿರುತ್ತವೆ. ಈ ಮಹಾಕಂದರದಲ್ಲಿನ ಒತ್ತಡ ಅಪಾರ. ಒಂದು ಚದರ ಅಂಗುಲಕ್ಕೆ ಏಳರಿಂದ ಎಂಟು ಟನ್‌ಗಳಷ್ಟು. ಈ ಪ್ರದೇಶಗಳು ರಹಸ್ಯಮಯ. ಅನೇಕ ಸಂಪನ್ಮೂಲಗಳನ್ನು ಪಡೆಯಲು ಅನೇಕ ಪ್ರಯೋಗಗಳಿಗೆ ನಿವೇಶನವನ್ನಾಗಿಸಿ ಕೊಳ್ಳಲು ಸಾಗರಗಳು ಮಾನವನಿಗೆ ಬೇಕಾಗುತ್ತಿವೆ. ರಹಸ್ಯಗಳನ್ನೆಲ್ಲ ಶೋಧಿಸಲು ವಿಜ್ಞಾನಿಗಳು ಶ್ರಮಿಸುತ್ತಲೇ ಇದ್ದಾರೆ.

## 1. ಅರ್ಜುನವಾಡ ಶಿಲಾಶಾಸನ ಸಮೀಕ್ಷೆ–ಒಂದು ಪ್ರತಿಕ್ರಿಯೆ

ಮಹಾನುಭಾವ ಬಸವಣ್ಣನವರ ಜೀವನ ಚರಿತ್ರೆಯ ಮೇಲೆ ಹೊಸಬೆಳಕನ್ನು ಚೆಲ್ಲಿದ ಶಾಸನಗಳಲ್ಲಿ ಅರ್ಜುನವಾಡದ ಶಿಲಾಶಾಸನಕ್ಕೆ ಸದ್ಯ ಅಗ್ರಪಟ್ಟ ಸಲ್ಲುತ್ತದೆ. ಈ ಶಾಸನವನ್ನು ಅನೇಕ ವಿದ್ವಾಂಸರು ಪರೀಕ್ಷಿಸಿದ್ದಾರೆ. ಅದರಲ್ಲಿನ ಒಂದು ಪದ್ಯ ಯಾವುದು ಬಸವಣ್ಣನವರ ವಂಶಾವಳಿಯನ್ನು ತಿಳಿಸಿಕೊಡುತ್ತದೆಯೋ ಅದು ವಿಪುಲ ವಿಮರ್ಶೆಗೆ ಗುರಿಯಾಗಿದೆ. ಇದಕ್ಕೆ ಕಾರಣ ಶಾಸನದಲ್ಲಿ ಆ ಪದ್ಯದ ಒಂದು ಭಾಗದಲ್ಲಿ ಕಲ್ಲಿನ ಚಕಳಿಗಳು ಸಿಡಿದುಹೋದುದು. ಈ ಚಕಳಿಗಳಲ್ಲಿ ಒಂದು ಭಾಗ ಸ್ವಲ್ಪ ದೊಡ್ಡದಾಗಿದ್ದು ಮಿಕ್ಕವು ಸಣ್ಣಸಣ್ಣವಾಗಿದ್ದು ಊಹಾಪ್ರಪಂಚಕ್ಕೆಡೆ ಕೊಟ್ಟಿವೆ. ದೊಡ್ಡ ಚಕಳೆಯ ಸಿಡಿತದಿಂದ ಎರಡು ಅಕ್ಷರಗಳು ಶಾಸನದ ಪಂಕ್ತಿ 35ರಲ್ಲೂ ಎರಡು ಅಕ್ಷರಗಳ ಮೇಲ್ಭಾಗ ಶಾಸನದ ಪಂಕ್ತಿ 36ರಲ್ಲೂ ಲುಪ್ತವಾಗಿವೆ. ಈ ಲುಪ್ತವಾದ ಅಕ್ಷರಗಳಲ್ಲಿ 35ನೆಯ ಪಂಕ್ತಿಯ ಅಕ್ಷರಗಳನ್ನು ಏಳುಮಂದಿ ವಿದ್ವಾಂಸರು ಎಂಟು ಬಗೆಯಲ್ಲಿ ತುಂಬಲು ಪ್ರಯತ್ನಪಟ್ಟಿದ್ದಾರೆ.[1] ಒಂಬತ್ತನೆಯ ಪ್ರಯತ್ನವೊಂದು ಇತ್ತೀಚೆಗೆ "ಸಾಧನೆ" ಪತ್ರಿಕೆಯ "ಮಂಥನ"ದಲ್ಲಿ ಬಾಡಾಲ ರಾಮಯ್ಯನವರಿಂದ ನಡೆದಿದೆ.[2] ಶ್ರೀಯುತರ 'ಸಮೀಕ್ಷೆ'ಯನ್ನು ಪರೀಕ್ಷಿಸುವುದು ಸತ್ಯಸ್ಥಿತಿಯನ್ನು ಪ್ರದರ್ಶಿಸುವುದು ಈ ಪ್ರತಿಕ್ರಿಯೆಯ ಗುರಿ.

ಶ್ರೀ ರಾಮಯ್ಯನವರು ಶಾಸನದ ಚರಿತ್ರೆಯನ್ನಾಗಲಿ ಅದರ ವಿಷಯ ವನ್ನಾಗಲಿ ಸಾಕಷ್ಟು ಅಭ್ಯಾಸಮಾಡದೆಯೆ ತರಾತುರಿಯ ಮಂಡನೆಯೊಂದನ್ನು ಮಂಡಿಸಿದ್ದಾರೆಂದು ತೋರುತ್ತದೆ. ಇದಕ್ಕೆ ಕಾರಣಗಳು ಎರಡು :

1) ಆ ಶಾಸನದ ಚರಿತ್ರೆಯ ಸಂಬಂಧದಲ್ಲಿ ಶ್ರೀಯುತರು "ಇದನ್ನು ಮೊಟ್ಟ ಮೊದಲು ನೋಡಿದ ಕೀರ್ತಿ ಶ್ರೀ ಪಿ. ಜಿ. ಹಳಕಟ್ಟಿ ಅವರದು" ಎಂದಿದ್ದಾರೆ.[3] ಆದರೆ ಇದನ್ನು ಮೊದಲು ನೋಡಿದ ಕೀರ್ತಿ ದಿವಂಗತ ನಾ. ಶ್ರೀ. ರಾಜಪುರೋಹಿತ

---

1 ಶಾಸನಗಳಲ್ಲಿ ಶಿವಶರಣರು, ಪು. 59-60

2 'ಸಾಧನೆ' (ಬೆಂಗಳೂರು ವಿಶ್ವವಿದ್ಯಾಲಯದ ನಿಯತ ಕಾಲಿಕ–ತ್ರೈಮಾಸಿಕ) ಸಂಪುಟ-3, ಸಂಚಿಕೆ-I, ಪು. 173-175

3 ಅದೇ ಪು. 173

ರಿಗೆ ಸಲ್ಲುತ್ತದೆ.[4] ; ತರುವಾಯ ದಿ। ಮಧುರ ಚೆನ್ನರಿಗೂ ಡಾ। ಶಿ. ಚ. ನಂದೀಮಠ ರಿಗೂ ಅನಂತರದಲ್ಲಿ ಪೂಜ್ಯ ಪಿ. ಜಿ. ಹಳಕಟ್ಟಿಯವರಿಗೂ ಸಲ್ಲುತ್ತದೆ.

2) ತಮ್ಮ ವಾದಕ್ಕೆ ಸಮರ್ಥನೆಯನ್ನು ಈಯ್ಯಲು ಶ್ರೀಯುತರು ಶಾಸನದ ಫೋಟೋ ಒಂದನ್ನು ಲೇಖನದ ಜೊತೆಗೆ ಪ್ರಕಟಿಸಬೇಕಾಗಿತ್ತು. ವಾದಗ್ರಸ್ತ ವಿಷಯದ ಪರಿಶೀಲನೆಗೆ ಫೋಟೋ ಅತ್ಯವಶ್ಯ. ಅಂತೆಯೆ ಶಾಸನದ ವಾದಗ್ರಸ್ತ ಭಾಗದ ಫೋಟೊವನ್ನು ಈಗ ಈ ಪ್ರತಿಕ್ರಿಯೆಯ ಜೊತೆಗೆ ಕೊಟ್ಟಿದೆ. ಶ್ರೀ ರಾಮಯ್ಯನವರು ವಾದಗ್ರಸ್ತ ಪದ್ಯಭಾಗವನ್ನು ಕೆಳಗಿನಂತೆ ಇದೆಯೆಂದು ಬರೆದಿದ್ದಾರೆ :

> ಸಂಗನಬಸವನ ಅಘ್ರಿ–
> –ಗೈಕಂ ದೇವರಾಜ ಮುನಿಪನ ತನಯಂ ।
> ಜಂಗಮ ಪುರುಸಂ –ವರ
> ಸಂಗಂ ಪ್ರಿಯಸುತನೆನಿಪ್ಪ ಕಲಿದೇವರಸಂ ॥[5]

ನಮಗಾದರೊ ಅದು ಇಂತಿದೆ :

(ಮೂಲಶಾಸನ ಪಂಕ್ತಿ–35)...ಸಂಗನ ಬಸವನ **ಅಗ್ರ** × × **ಂಗೈಕಂ**

(ಶಾ.ಪ. 36) { ದೇವರಾಜ ಮುನಿಪನ ತನಯಂ ಜಂಗಮ **ಪರುಸಂ**
× ವರ

(ಶಾ.ಪ. 37) ಸಂಗಂ ಪ್ರಿಯಸುತನೆನಿಪ್ಪ ಕಲಿದೇವರಸಂ ॥...ಇತ್ಯಾದಿ.

ಪರೀಕ್ಷಿಸಬೇಕೆನ್ನುವವರು ಫೋಟೋದಲ್ಲಿ ನೋಡಬಹುದು (ಪಂಕ್ತಿ. 4 ಮತ್ತು 5)

ಶ್ರೀಯುತ ರಾಮಯ್ಯನವರ ವಾದವನ್ನು ಹೀಗೆ ವಿಶ್ಲೇಷಿಸಬಹುದು ;

1) 'ಅಘ್ರಿ' ಎಂದಿದೆ : ಅದನ್ನು 'ಅಂಘ್ರಿಯ' ಎಂದೋದಿಕೊಳ್ಳಬೇಕು.

2) 'ಅಘ್ರಿ' ದಲ್ಲಿನ 'ಅ' ದ ಮೇಲೆ ಚುಕ್ಕೆ ಇದೆ. ಇದನ್ನು ಬಿಂದು ಎಂದು ಪರಿಗಣಿಸಬೇಕು.


3) "ಲಿಂಗೈಕಂ" ಎಂದು ಓದಿದರೆ "ಅರ್ಥ ಮತ್ತು ಶಬ್ದಗಳು ಸರಿಹೊಂದು ವದಿಲ್ಲ."

4) 'ಗೈಕ'ದ ಪೂರ್ವದಲ್ಲಿ "ಛಾಯಾರೂಪವಾಗಿರುವ ವಟ್ರಸುಳಿಯಿಂದ ಕೂಡಿದ ಒಂದು ಅಕ್ಷರ ಇರಬೇಕು. ಅದು ಪ್ರಾಯಶಃ 'ಘ್ರಂ' ಎಂದು ನಾನು ಊಹಿಸಿದ್ದೇನೆ.''

---

4 a) ಎಂ. ಎಂ. ಕಲ್ಬುರ್ಗಿ, ಬಸವಣ್ಣನವರನ್ನು ಕುರಿತ ಶಾಸನಗಳು, ಪು. 41
b) ಅವರೇ. ಶಾಸನಗಳಲ್ಲಿ ಶಿವಶರಣರು, ಪು. 56
c) P.B. Desai, Basavesvara and His Times, P. 367

5 ಉಪರ್ಯೋಕ್ತ "ಸಾಧನೆ", ಪು. 174



ಅರ್ಜುನವಾಡ ಶಿಲಾಶಾಸನದ ವಾದಗ್ರಸ್ತ ಭಾಗ

5) 'ಅಂಘ್ರಿಯ ಭೃಂಗೈಕ'—ಇದರಿಂದ ಪಾದ (ಪದ್ಮ)ಗಳಲ್ಲಿ ಭೃಂಗೈಕನಾದ ದೇವರಾಜಮುನಿಯೊಬ್ಬನಿದ್ದನು ಎಂಬ ಅರ್ಥ ಸಿದ್ಧವಾಗುತ್ತದೆ. ದೇವರಾಜ ಮುನಿಪನು ಬಸವನಿಗೆ ಅಣ್ಣನಲ್ಲ. ಈ ಇಬ್ಬರಿಗೂ ರಕ್ತ ಸಂಬಂಧವಿಲ್ಲ.

ಈ ವಿಷಯಗಳನ್ನು ಈಗ ಮಥಿಸೋಣ, ಒರೆಗಲ್ಲಿಗೆ ತಿಕ್ಕೋಣ, ಚೊಕ್ಕವಾದ ವಿಷಯವನ್ನು ಗ್ರಹಿಸೋಣ :

1) ಶ್ರೀ ರಾಮಯ್ಯನವರು 'ಅಘ್ರ' ಎಂದಿದ್ದಾರೆ— ಇಲ್ಲಿ ನಿಜವಾಗಿಯೂ 'ಘ' ಎಂಬ ಮಹಾಪ್ರಾಣಾಕ್ಷರವಿಲ್ಲ. ಇದೇ ಶಾಸನದಲ್ಲಿ 'ಘ' ಮಹಾಪ್ರಾಣಾಕ್ಷರವು ಏಳನೆಯ ಪಂಕ್ತಿಯಲ್ಲಿ ಬಂದಿದೆ. 'ಗ'ದ ಕೆಳಭಾಗಕ್ಕೂ 'ಘ'ದ ಕೆಳಭಾಗಕ್ಕೂ ತುಂಬ ವ್ಯತ್ಯಾಸವಿದೆ.[6] ಶ್ರೀಯುತರು 'ಘ'ದ ತರುವಾಯ 'ಯ' ಇದ್ದಿತೆಂದು ಊಹಿಸಿದ್ದಾರೆ. ಆದರೆ ನಮ್ಮ ಪ್ರಕಾರ 'ಗ್ರ'ದ ಮುಂದೆ 'ಜ'ದ ಅಂಶ ಇನ್ನೂ ಇನಿತು ಉಳಿದಿದೆ. ಒತ್ತಕ್ಕರ ರೇಫೆಯ ಮುಂದೆ ಮೇಲ್ಬದಿಯಲ್ಲಿ 'ಜ'ದ ಹಿಂಬದಿಯ ಮೇಲ್ಭಾಗವಿದೆ. ಆದುದರಿಂದ 'ಯ' ಇದ್ದಿತೆಂಬ ಊಹೆ ಸಾಧುವಲ್ಲ.[7]

2) 'ಅ'ದ ಮೇಲಾಗಲಿ, ಮುಂದಾಗಲಿ ಬಿಂದು ಇಲ್ಲ. ಶ್ರೀಯುತರು ಹೇಳುವಂತೆ ಚುಕ್ಕಿಯೂ ಇಲ್ಲ.

3) 'ಲಿಂಗೈಕಂ'—ಇದು ಇದಕ್ಕೆ ಮೊದಲು ಇದೇ ಶಾಸನದ 9 ಮತ್ತು 10ನೆಯ ಸಾಲುಗಳಲ್ಲಿ ಬಂದಿದ್ದು ಸಾಧು ಬಳಕೆಯೆಂದೇ ತೋರುತ್ತದೆ. ಅದು 'ಲಿಂಗದಲ್ಲಿ ಐಕ್ಯವಾದ' ಎಂಬ ಸರಿಯಾದ ಅರ್ಥವನ್ನೇ ಕೊಡುತ್ತದೆ. ನೋಡಿ :

ಮಂಗಳಕೀರ್ತಿ ಪುರಾತನ
**ಜಂಗಮ ಲಿಂಗೈಕಭಕ್ತ** ನಿರ್ಭರ ಲೀಲಾ
ಸಂಗಂ ಸಂಗನ ಬಸವಂ
ಸಂಗತಿಯಂ ಮಾಳ್ಕೆ ಭಕ್ತಿಯೊಳುಗನವರತಂ ||[8]

ಆದುದರಿಂದ ರಾಮಯ್ಯನವರು ಇದನ್ನು ಗಮನಿಸಿಲ್ಲವೆಂದೇ ಹೇಳಬೇಕಾಗಿದೆ-ಅವರ ಆಕ್ಷೇಪಣೆಯನ್ನು ಮನದಂದರೆ.

4) ನಾಲ್ಕನೆಯದಾಗಿ ವಟ್ರಸುಳಿಯ ಪ್ರಸ್ತಾಪ. 'ಗೈಕಂ'ದ ಪೂರ್ವದಲ್ಲಿ ಒಂದು ಬಿಂದುವಿದೆ. ಅದರ ಕೆಳಗೆ ಕೆಳಗಿನ ಸಾಲಿನ 'ವ' ಅಕ್ಷರದ **ತಲೆಕಟ್ಟಿದೆ.**

---

6 Basavesvara and His Times, Plate xxii, Line No. 7

7 'ಘ್ರ' ಎಂದು ಸ್ವೀಕರಿಸಿದರೂ 'ಅಘ್ರಜ' ಎಂಬ ಅಪಶಬ್ದ ಸೃಷ್ಟಿಯಾಗುತ್ತದೆ. 'ಅಗ್ರಜ' ಇದರ ಅಪಭ್ರಂಶ ರೂಪವೇ 'ಅಘ್ರಜ'ವಾದುದರಿಂದ ಅಣ್ಣನೆಂಬ ಅರ್ಥಕ್ಕೆ ಚ್ಯುತಿಬರುವದಿಲ್ಲ. 'ಘ್ರ' ಎಂಬ ರೂಪವೇ ಇಲ್ಲ. ಇದು ನಮ್ಮ ನಿಲುವು

8 Basavesvara and His Times, p. 372, Plate xxii. Line 9 & 10

ಇದನ್ನು ಗಮನಿಸದೆಯೆ ಶ್ರೀ ರಾಮಯ್ಯನವರು ಇಲ್ಲಿ ‹ವಟ್ರಸುಳಿ' ಇದ್ದಿತೆಂದು ಊಹಿಸಿದ್ದಾರೆ. ನಮಗಾದರೊ ಈ ಶಾಸನದ ಕರ್ತೃ ಶಾಸನದಲ್ಲಿ ವಟ್ರಸುಳಿಯನ್ನು ಒಮ್ಮೆಯಾದರೂ ಬಳಸಿಲ್ಲ. ವಟ್ರಸುಳಿಯ ಸ್ಥಳದಲ್ಲಿ ರೇಫೆಯ (ರ) ಒತ್ತನ್ನೇ ಬಳಸಿದ್ದಾನೆ. ಆದುದರಿಂದ ‹ಭೃಂಗೈಕಂ' ಎಂಬ ಶಬ್ದವು ಶಾಸನದಲ್ಲಿ ಇದ್ದಿತ್ತೆಂದು ಹೇಳಲು ಆಧಾರ ಸಾಲದು. ಶಾಸನ ಕರ್ತೃ ‹ಭೃಂಗ' ಎಂದು ಬರೆಯದೆ ‹ಭ್ರಿಂಗ' ಎಂದು ಬರೆದಿರುತ್ತಿದ್ದ-ಯದ್ಯಪಿ ಹೀಗೆ ಬರೆದಿದ್ದರೆ.

5) 'ಅಂಘ್ರಿಯ ಭೃಂಗೈಕ'—ಇದು ಶ್ರೀ ರಾಮಯ್ಯನವರು ಹೇಳಿರುವ ಅರ್ಥವನ್ನು ಹೊಂದಿರಬೇಕಾದರೆ 'ಪದ್ಮ' ಎಂಬ ಶಬ್ದನ್ಯೂನತೆಯಿಂದ ಕೂಡಿದೆ. ಇಂಥ ನುಡಿಗಟ್ಟೂ ಬಳಕೆಯಲ್ಲಿ ಇಲ್ಲ. ಇದ್ದಂಥ ಪ್ರಯೋಗಗಳನ್ನು ಶ್ರೀಯುತರು ಒದಗಿಸಿಲ್ಲ. ಒಂದು ವೇಳೆ ಶಾಸನ ಕರ್ತೃ ಈ ಭಾವವನ್ನೆ ಬಳಸಿದ್ದರೆ ಸರಿಯಾದ ಶಬ್ದಗುಂಫನವನ್ನೆ ಬಳಸುತ್ತಿದ್ದ; ಏಕೆಂದರೆ ಎರಡು ಸಲ ಈ ಭಾವವನ್ನು ಆತನು ಬಳಸಿದ್ದಾನೆ:

ಅ) ತತ್ಪಾದಪದ್ಮೋಪಜೀವಿ.[9]

ಆ) ಚಾವುಂಡಂ ಪಾರ್ವತೀವಲ್ಲಭ ಚರಣಸರೋಜ ದ್ವಯಾಮೋದ ಭ್ರಿಂಗಂ.[10]

ಈ ವಿಷಯಗಳನ್ನು ಪರಿಶೀಲಿಸಿದ ನಂತರ ಶಾಸನದ ಕರ್ತೃ "ಅಂಘ್ರಿಯ ಭೃಂಗೈಕಂ" ಎಂಬ ರಾಮಯ್ಯನವರ ಊಹೆಯನ್ನು ಬಳಸಿದ್ದನೆಂದು ಹೇಳಲು ಕಿಂಚಿತ್ತೂ ಆಧಾರ ತೋರದು. ಅತಏವ ನಿಷ್ಪನ್ನವಾಗುವ ವಸ್ತುವೆಂದರೆ "ಅಗ್ರ [ಜಲಿ]ಂಗೈಕಂ" ಎಂಬುದೇ ಸರಿಯಾದ ನಿರೂಪಣೆ. ಈ ಶಾಸನ ಹಾಲಬಸವಿದೇವನ ಯತಿರಾಯತನಕ್ಕೆ ಮತ್ತು ಕವಿಳಾಸತೀರ್ಥಕ್ಕೆ ಮೆಚ್ಚಿ ಬಿಟ್ಟ ದತ್ತಿಯಾಗಿದೆ. ಈ ಹಾಲ ಬಸವಿದೇವನು ಬಸವರಾಜನನ್ವಯಕ್ಕೆ ಸಂಬಂಧ ಪಟ್ಟವನು. ಬಸವರಾಜನು ತರ್ದವಾಡಿ ಮಧ್ಯಗ್ರಾಮು ಬಾಗವಾಡಿ ಪುರವರಾಧೀಶ್ವರ **'ಮಾದಿರಾಜತನೂಜ'**. ಆತನು ‹ಸಂಗನ ಬಸವ' ಎಂದೂ ಪ್ರಸಿದ್ಧ. ಆತನ ಅಗ್ರಜ ದೇವರಾಜ. ದೇವರಾಜನ ತನಯ [ಕಾ]ವರಸ.[11] ಕಾವರಸನ ಪ್ರಿಯಸುತ ಕಲಿದೇವರಸ. ಕಲಿದೇವಮುನಿ-ಪನಾತ್ಮಜ ಸಲೆ ಮೂಜಗದೊಳಗೆ ಮೆಱೆವ ಮಾನವದೇವ ಅಶನ, ಬೆಸನ ಮತ್ತು ಅಧಿಕ ಛಲವಂತರನ್ನು ಗೆಲಿದ ವೀರಬ್ರತಿ ಹಾಲಬಸವಿದೇವ. ಇಲ್ಲಿ ಬರುವ ‹ತನೂಜ'

---

9 ಅದೇ, ಪುಟ—372, ಸಾಲು-24

10 ಅದೇ. ಸಾಲು-27

11 'ಕಾ' ಇದನ್ನು 'ಸೋ' ಎಂದು ಡಾ॥ ಕಲ್ಬುರ್ಗಿ, ಡಾ॥ ಪಿ. ಬಿ. ದೇಸಾಯಿ ಮತ್ತು ಶ್ರೀ ರಾಮಯ್ಯ ಇವರು ಸರಿಯೆನ್ನುತ್ತಾರೆ. ಈ ಸೂಚನೆ ಸೂಚಿಸಿದವರು ಡಾ॥ ದೇಸಾಯಿ ಅವರು. ಉಳಿದ ಅಕ್ಷರದ ಅಂಶವನ್ನು ಅವಲೋಕಿಸಿದರೆ 'ಕಾ'ಕ್ಕೇನೆ ಹೆಚ್ಚು ಸಾಧ್ಯತೆಯಿದೆ. 'ಸೋ' ಆಗಿದ್ದರೆ ಅದರ ಸ್ವರೂಪ 'ಸ'ಕ್ಕೆ ಹತ್ತಿರದ್ದಾಗುತ್ತಿತ್ತು. ಅದು ಹಾಗಿಲ್ಲ; ಪರೀಕ್ಷಿಸಿ

'ಸುತ' 'ಆತ್ಮಜ' ಮತ್ತು ಬಸವರಾಜನ ಅನ್ವಯುರುಮಪ್ಪ ಎಂಬ ಮಾತುಗಳನ್ನು ಗಣನೆಗೆ ತೆಗೆದುಕೊಂಡರೆ ಇಲ್ಲಿ ಬಸವರಾಜನ ವಂಶಚರಿತ್ರೆಯೆ ಬಂದಂತೆ ತೋರುತ್ತದೆ ವಿನಾ ಶಿಷ್ಯ ಪರಂಪರೆಯಲ್ಲ. ಬಸವರಾಜನು ಸ್ವತಃ ಮಠವೊಂದನ್ನು ಸ್ಥಾಪಿಸಿದುದಕ್ಕೆ, ದೀಕ್ಷೆಕೊಟ್ಟುದಕ್ಕೆ ಆಧಾರವಿಲ್ಲ. ದೀಕ್ಷೆಕೊಟ್ಟ—ಕೊಡುವ ಕೆಲಸವೆಲ್ಲವನ್ನು ನೆರವೇರಿಸಿದವರು ಶ್ರೀ ಚೆನ್ನಬಸವಣ್ಣ[12], ಶ್ರೀ ಅಲ್ಲಮಪ್ರಭು[13] ಮತ್ತು ಶ್ರೀ ಸಿದ್ಧರಾಮ[14] ಮೊದಲಾದವರು. ಆದುದರಿಂದ ಬಸವಣ್ಣನವರು ಇವರ ಹಾಗೆ ಗುರುಪೀಠವನ್ನು ಹೊಂದಿದ್ದರು ಎಂದು ಈಗ ಒಂದಾದರೂ ಸಮಕಾಲೀನ ಆಧಾರ ವಿಲ್ಲದೆ ಹೇಳುವುದು ಸಮಂಜಸವೆಂದು ತೋರುವುದಿಲ್ಲ. ಶಾಸನದಲ್ಲಿ ಹಾಲ ಬಸವಿದೇವ ಹಾಗೂ ಆತನ ತಂದೆ ಕಲಿದೇವ ಇವರ ವರ್ಣನೆ ವಿಶೇಷವಾಗಿದ್ದು ಇವರಿಗಿಂತ ಪೂರ್ವದವರು ಬಸವರಾಜನನ್ನು ಬಿಟ್ಟರೆ ಅಷ್ಟು ಪ್ರಸಿದ್ಧರಲ್ಲರೆಂದು ತೋರುತ್ತದೆ. ನಮಗೆ ತಿಳಿದಂತೆ ಶಾಸನದಿಂದ ಹೊರಡುವ ವಂಶಾವಳಿ :

ಮಾದಿರಾಜ
|
ದೇವರಾಜ — ಬಸವರಾಜ (ಶಾಸನಪಂಕ್ತಿ 9, 79)
|
[ಕಾ]ವರಸ
|
ಕಲಿದೇವರಸ
|
ಹಾಲಬಸವಿದೇವ

ಡಾ. ಕಲ್ಬುರ್ಗಿಯವರು ಕಲಿದೇವನನ್ನು ನೇರವಾಗಿ ದೇವರಾಜನ ತನಯನೆಂದು ಸ್ವೀಕರಿಸಿದ್ದಾರೆ. "ಯಾವ ವ್ಯಕ್ತಿಯೇ ಆಗಲಿ ತಾನು ತನ್ನ ತಂದೆಗೆ ಪ್ರೀತಿಯ ಮಗನು ಎಂದು ಹೇಳುವುದು ಕೃತ್ರಿಮವೆನಿಸುವುದರಿಂದ ಇಲ್ಲಿ 'ತನಯಂ' ಎಂದರೆ ನೇರವಾದ ಮಗನೆಂದೂ 'ಪ್ರಿಯಸುತಂ' ಎಂದರೆ ಶಿಷ್ಯನೆಂದೂ ಅರ್ಥಮಾಡಬೇಕು" ಎಂದಿದ್ದಾರೆ[15] ಕಲಿದೇವನೆ ಈ ಶಾಸನವನ್ನು ಬರೆಸಿದ್ದರೆ ಶ್ರೀಯುತರ ಮಾತಿಗೆ ಬೆಲೆ

---

12 ಅ) ಸಿದ್ಧರಾಮ ಚಾರಿತ್ರ ಸಂಗ್ರಹ, ಮುನ್ನುಡಿ (ಪ್ರೊ॥ ಡಿ. ಎಲ್. ಎನ್.)
ಆ) ಷಟ್ಸ್ಥಲ ಸಿದ್ಧಾಂತ

13 ಶೂನ್ಯಸಂಪಾದನೆ (ಪ್ರೊ॥ ಎಸ್. ಎಸ್. ಭೂಸನೂರುಮಠ)

14 ಸಿದ್ಧರಾಮ ಚಾರಿತ್ರ, ಶೂನ್ಯ ಸಂಪಾದನೆ, ಚೆನ್ನಬಸವ ಪುರಾಣ ಮೊದಲಾದ ಗ್ರಂಥ ಗಳನ್ನು ಅವಲೋಕಿಸಬಹುದು.

15 ಎಂ. ಎಂ. ಕಲ್ಬುರ್ಗಿ, ಅ) ಬಸವಣ್ಣನವರನ್ನು ಕುರಿತ ಶಾಸನಗಳು, ಪು. 52
ಆ) ಶಾಸನಗಳಲ್ಲಿ ಶಿವಶರಣರು, ಪು. 60–61

ಬರುತ್ತಿತ್ತು. ಶಾಸನವನ್ನು ಹಾಕಿಸಿದವರು ಬೇರೆಯವರು (ನಾಗರಸ ಮತ್ತು ಮುಂಮುರಿದಂಡಗಳು).[16] ಹಾಲಬಸವಿದೇವನನ್ನು ಅವರು ವರ್ಣಿಸುತ್ತ ಕಲಿದೇವನನ್ನೂ ವರ್ಣಿಸಿದ್ದಾರೆ. ಅವರು ಆತನನ್ನು ಕಾವರಸನ ಪ್ರಿಯಸುತನೆಂದು ಹೇಳಿದರೆ ಕಲಿದೇವನು ಹೇಳಿದಂತೆ ಆಗುತ್ತದೆಯೆ ? ಈ ಕಾರಣ, ಶಾಸನವನ್ನು ಎನ್. ಲಕ್ಷ್ಮೀನಾರಾಯಣರಾಯರು ಅತ್ಯಂತ ತೃಪ್ತಿಕರವಾಗಿ ಓದಿದ್ದಾರೆಂದು ಹೇಳಬಹುದಾಗಿದೆ.[17] ಪೂರ್ವಸೂರಿಗಳು ಸರಿಯಾಗಿಯೇ ಗ್ರಹಿಸಿದ್ದಾರೆ.

**ಸೀತಾರಾಮ ಜಾಗೀರದಾರ**

## 2. "ಪಂಪಭಾರತದ ಆಶೀಪದ್ಯ – ಒಂದು ಮರುವಿಚಾರ"

ಶ್ರೀಯನರಾತಿಸಾಧನಪಯೋನಿಧಿಯೊಳ್ ಪಡೆದುಂ ಧರಿತ್ರಿಯಂ
ಜೀಯನೆ ಬೇಡಿಕೊಳ್ಳದೆ ವಿರೋಧಿ ನರೇಂದ್ರರನೊತ್ತಿಕೊಂಡುಮಾ
ತ್ರೀಯ ಸುಪುಷ್ಪ ವೃಷ್ಟಿಯನೊಡಂಬಡೆ ತಾಳ್ದಿಯುಮಿಂತುದಾತ್ತನಾ
ರಾಯಣನಾದ ದೇವನೆಮಗೀಗರಿಕೇಸರಿ ಸೌಖ್ಯ ಕೋಟಿಯಂ ॥

ಎಂಬ ಪಂಪಭಾರತದ ಮಂಗಲಪದ್ಯದ 'ಸುಪುಷ್ಪ ವೃಷ್ಟಿ' ಪಾಠವನ್ನು ಕುರಿತು ಶ್ರೀ ಮುಳಿಯ, ಡಾ॥ ಡಿ. ಎಲ್. ಎನ್., ಡಾ॥ ಎಂ. ಎಂ. ಕಲಬುರ್ಗಿಯವರು ನೀಡಿದ ಹೇಳಿಕೆಗಳನ್ನು ಅಲ್ಲಗಳೆದು ಶ್ರೀ ಸೀತಾರಾಮ ಜಾಗೀರದಾರ ಅವರು ಬೇರೊಂದು ಅಭಿಪ್ರಾಯವನ್ನು ಮಂಡಿಸಿದ್ದಾರೆ. ಹೀಗೆ ಮಂಡಿಸುವಾಗ ಮೂವರ ಲೇಖನಗಳನ್ನೂ ಗಮನಿಸಿ, ಅದರಲ್ಲಿಯೂ ಕೊನೆಯ ಲೇಖನವಾಗಿರುವ ಕಾರಣ ಸ್ವಾಭಾವಿಕವಾಗಿ ಡಾ॥ ಕಲಬುರ್ಗಿಯವರ ಲೇಖನವನ್ನು ವಿಶೇಷ ಗಮನಿಸಿ ಕೆಲವು ಆಕ್ಷೇಪಣೆಗಳನ್ನು ಎತ್ತಿದ್ದಾರೆ. ಇಲ್ಲಿ ಕಲಬುರ್ಗಿಯವರ ಹೇಳಿಕೆಗಳನ್ನು ಹೇಗೆ ತಪ್ಪಾಗಿ ಗ್ರಹಿಸಿದ್ದಾರೆ, ತಾವು ಏನು ಹೊಸ ತಪ್ಪುಗಳನ್ನು ಮಾಡಿದ್ದಾರೆ ಎಂದು ಎರಡು ಸ್ತರಗಳಲ್ಲಿ ಉತ್ತರ ಕೊಡುವುದು ಈ ಲೇಖನದ ಉದ್ದೇಶ.

1. "ನಾರಾಯಣನದು 'ಪುಷ್ಪಪಟ್ಟ', ಅರಿಕೇಸರಿಯದು 'ಸುಪುಷ್ಪಪಟ್ಟ' ಎಂದು ಡಾ॥ ಡಿ. ಎಲ್. ಎನ್. ಅವರು 'ಸು' ಪ್ರತ್ಯಯದ ಮೇಲೆ ಅವಧಾರಣೆ ಕೊಡುತ್ತಾರೆ. ಆದರೆ 'ಸು' ಪ್ರತ್ಯಯದ ಮೂಲಕ 'ಉದಾತ್ತ' ಅರ್ಥ ಕಲ್ಪಿಸಲು

---

16 ಶಾಸನಪಂಕ್ತಿ – 76 ಮತ್ತು 80

17 a) Ep. Indica. Vol. XXI p 16
b) ಈ ಲೇಖನವನ್ನು ಬರೆಯುವಲ್ಲಿ ಡಾ॥ ಎಲ್. ಬಸವರಾಜು ಅವರಿಗೆ ವಿಶೇಷ ಋಣಿಯಾಗಿರುವೆ. ಶ್ರೀಯುತರಿಂದಲೇ ಶಾಸನದ ಪಡಿಯಚ್ಚು ಮತ್ತು ಫೋಟೋಗಳು ದೊರೆತಿವೆ ; ಅದಕ್ಕಾಗಿ ನನ್ನ ವಂದನೆಗಳು ಅವರಿಗೆ ಸಲ್ಲಬೇಕು

ಹೊರಟಿರಲಾರ ಪಂಪ" ಎಂದು ಡಾ॥ ಕಲಬುರ್ಗಿಯವರು ಡಾ॥ ಡಿ. ಎಲ್. ಎನ್. ಅವರ ಅಭಿಪ್ರಾಯದ ಬಗ್ಗೆ ಆಕ್ಷೇಪವೆತ್ತಿದ್ದರು.

"(ಈ) ಆಕ್ಷೇಪಣೆಯಲ್ಲಿ ಶ್ರೀಯುತರು ಡಾ॥ ಡಿ. ಎಲ್. ಎನ್. ಅವರು ಅರಿಕೇಸರಿಯ ಉದಾತ್ತತೆಯ ಬಗ್ಗೆ ಒಂದು 'ಚ' ಕಾರವನ್ನೂ ಬರೆಯದಿದ್ದರೂ ಬರೆದಿದ್ದಾರೆಂದು ಆರೋಪಿಸಿರುವುದು ತುಂಬ ಆಶ್ಚರ್ಯಕರ" ಎಂದು ಜಾಗೀರದಾರರು ಕಲಬುರ್ಗಿಯವರ ಪ್ರಾಮಾಣಿಕತೆಯನ್ನು ಪ್ರಶ್ನಿಸಿದ್ದಾರೆ. ಆದರೆ ಡಾ॥ ಡಿ. ಎಲ್. ಎನ್. ಅವರ "ಪ್ರಕೃತ ನಾರಾಯಣನು ಧರಿಸಿಕೊಂಡಿರುವುದು ಪುಷ್ಪಪಟ್ಟ, ಅರಿಕೇಸರಿ ಹಾಕಿಕೊಂಡಿರುವುದು ಸುಪುಷ್ಪಪಟ್ಟ. ಅದರಿಂದ ಅವನು ನಾರಾಯಣನಿಗಿಂತ ಮೇಲು" ಎಂಬ ಮಾತಿನಲ್ಲಿ ಉದಾತ್ತತೆಯ ಅಭಿಪ್ರಾಯ ಸ್ಪಷ್ಟವಾಗಿರುವುದರಿಂದ ಜಾಗೀರದಾರ ಅವರದು ಅರ್ಥವಿಲ್ಲದ ಆರೋಪವೆನಿಸುತ್ತದೆ.

2. "ನಾರಾಯಣನಿಗೆ ಸಂಬಂಧಿಸಿದ ಮೂರು ಸಂಗತಿಗಳು ಅವನಿಗಿಂತ ಅರಿಕೇಸರಿಯಲ್ಲಿ ಉದಾತ್ತವಾಗಿವೆಯೆಂದು ಶ್ಲೇಷದ ಮೂಲಕ ಸಾಧಿಸುತ್ತಾನೆ ಪಂಪ" ಎಂಬ ಡಾ॥ ಕಲಬುರ್ಗಿಯವರ ವಾಕ್ಯವನ್ನು ಗಮನಿಸಿ ಶ್ರೀ ಜಾಗೀರದಾರ ಅವರು "ಈ ಪದ್ಯದಲ್ಲಿ ಶ್ಲೇಷಾಲಂಕಾರವಿದೆಯೇ ?...... ನಮಗೆ ಇಲ್ಲಿ ಉಪಮಾನ (ನಾರಾಯಣ) ಉಪಮೇಯ (ಅರಿಕೇಸರಿ) ಗಳಲ್ಲಿ ಉಪಮೇಯವೇ ಉಪಮಾನಕ್ಕಿಂತ ಶ್ರೇಷ್ಠವೆಂಬುದು ಸ್ಫಟಿಕ ಶಲಾಕೆಯಷ್ಟು ಸ್ಪಷ್ಟವಿರುವುದರಿಂದ ಶ್ಲೇಷಾಲಂಕಾರವಲ್ಲ, ಇಲ್ಲಿನದು ವ್ಯತಿರೇಕಾಲಂಕಾರ" ಎಂದು ಆಕ್ಷೇಪವೆತ್ತಿದ್ದಾರೆ. ಆದರೆ ಕಲಬುರ್ಗಿಯವರು "ಉದಾತ್ತವಾಗಿವೆಯೆಂದು ಶ್ಲೇಷದ ಮೂಲಕ ಸಾಧಿಸುತ್ತಾನೆ" ಎಂದಾಗ ಇದು "ಶ್ಲೇಷಾಲಂಕಾರ" ಎಂದು ಹೇಳಿದ ಹಾಗಾಗಲಿಲ್ಲ, ಶ್ಲೇಷದ ಮೂಲಕ ಉದಾತ್ತತೆಯನ್ನು ಸಾಧಿಸುತ್ತಾನೆ ಎಂದು ಹೇಳಿದಂತಾಯಿತು. ಇದನ್ನೇ ಜಾಗೀರದಾರರು ಅಲಂಕಾರ ಪರಿಭಾಷೆಯಲ್ಲಿ "ವ್ಯತಿರೇಕಾಲಂಕಾರ" ಎಂದು ಕರೆದಿದ್ದಾರೆ ಅಷ್ಟೇ. ಮನೆಮಾತಾಗಿರುವ ಈ ಅಲಂಕಾರವನ್ನು ಹೊಸದಾಗಿ ತಿಳಿಸಿಕೊಡುತ್ತಿದ್ದೇನೆಯೆಂಬ ರೀತಿಯಲ್ಲಿ ಜಾಗೀರದಾರರು ಭಾಮಹ ಮೊದಲಾದವರಿಂದ ಸಾಕ್ಷಿ ಹೇಳಿಸಿದುದು ವ್ಯರ್ಥ ಪರಿಶ್ರಮವೆನಿಸುತ್ತದೆ.

3. 1. ಶ್ರೀಯನರಾತಿ ಸಾಧನ ಪಯೋನಿಧಿಯೊಳ್ ಪಡೆದುಂ...

2. ಧರಿತ್ರಿಯಂ ಜೀಯೆನೆ ಬೇಡಿಕೊಳ್ಳದೆ ವಿರೋಧಿ
ನರೇಂದ್ರರನೊತ್ತಿಕೊಂಡುಂ

3. ಆತ್ಮೀಯ ಸುಪುಷ್ಪವೃಷ್ಟಿಯುನೊಡಂಬಡೆ ತಾಳ್ದಿಯುಂ...

ಎಂಬ ಮೂರು ಸಮಾಂತರ ವಾಕ್ಯಗಳಲ್ಲಿ, ಒಂದನೆಯ ಮತ್ತು ಮೂರನೆಯ ವಾಕ್ಯಗಳಲ್ಲಿ ಒಂದೇ ರೀತಿಯ ಓಘವಿದ್ದರೆ, ಎರಡನೆಯದರಲ್ಲಿ ಮಾತ್ರ 'ಜೀಯೆನೆ

ಬೇಡಿಕೊಳ್ಳದೆ' ಎಂಬುದು ಹೆಚ್ಚಿಗೆ ಸೇರಿ ಈ ವಾಕ್ಯದ ಓಘ ಸ್ವಲ್ಪ ಬೇರೆಯಾಗಿದೆ ಎಂಬುದು ಎಂಥ ಸಾಮಾನ್ಯರಿಗೂ ಕಾಣುತ್ತದೆ. ಅಂದರೆ 1 ಮತ್ತು 3ನೆಯ ವಾಕ್ಯಗಳು ಅರಿಕೇಸರಿಯ ವೈಶಿಷ್ಟ್ಯಗಳನ್ನು ವ್ಯಕ್ತವಾಗಿ ನಾರಾಯಣನ ವೈಶಿಷ್ಟ್ಯಗಳನ್ನು ಅವ್ಯಕ್ತವಾಗಿ ಹೇಳಿದ್ದರೆ, ಎರಡನೆಯದರಲ್ಲಿ 'ಜೀಯನೆ ಬೇಡಿಕೊಳ್ಳದೆ' ಎಂಬ ಮಾತಿನ ಮೂಲಕ ನಾರಾಯಣ ಸಂಬಂಧಿಯಾದ (ವಾಮನಾವತಾರದಲ್ಲಿ) ಭೂಮಿಯನ್ನು ಬೇಡಿದ ಸಂಗತಿಯನ್ನು ವ್ಯಕ್ತವಾಗಿ, ಹೇಳಿದಂತಾಗಿ ಗೌಪ್ಯ ಹಾಳಾಗಿ ಇಲ್ಲಿ ಸ್ವಾರಸ್ಯಕ್ಕೆ ಚ್ಯುತಿ ಬಂದಿದೆ; ಅಂದರೆ ಧ್ವನಿಪೂರ್ಣವಾಗಬೇಕಿದ್ದ ಸಂಗತಿ ವಾಚ್ಯವಾಗಿಬಿಟ್ಟಿದೆಯೆಂದು ಡಾ॥ ಕಲಬುರ್ಗಿಯವರು ಹೇಳಿದ್ದರು; 'ಧ್ವನಿ' ಪದವನ್ನು ಪರಿಭಾಷೆಯಲ್ಲಿ ಬಳಸದೆ, ಅವರು 'ಅವ್ಯಕ್ತ' 'ಗೌಪ್ಯ' ಎಂಬಿವುಗಳಿಗೆ ಬದಲಾಗಿ ಬಳಸಿದ್ದರು. ಆದರೆ ಜಾಗೀರದಾರರು ಇಲ್ಲಿ 'ಧ್ವನಿ' ಪದವನ್ನು ಕಂಡ ಕೂಡಲೇ ಅದನ್ನು ಎಳೆದುಕೊಂಡುಹೋಗಿ ಪಾರಿಭಾಷಿಕವಾಗಿ ನಿಲ್ಲಿಸಿ, ಧ್ವನ್ಯಾಲೋಕ, ಭಾರತೀಯ ಕಾವ್ಯಮೀಮಾಂಸೆಗಳ ಸಾಕ್ಷಿ ಹೇಳಿಸುವ ಪ್ರಯತ್ನ ಮಾಡಿದ್ದಾರೆ. ಒಂದೇ ಪದ ಸಾಮಾನ್ಯಾರ್ಥದಲ್ಲಿಯೂ, ಪರಿಭಾಷಾರ್ಥದಲ್ಲಿಯೂ ವ್ಯವಹರಿಸ ಬಲ್ಲುದೆಂಬುದನ್ನು ಜಾಗೀರದಾರರು ಆತುರದಲ್ಲಿ ಗಮನಿಸದೇ ಹೋಗಿದ್ದಾರೆ.

4. 'ಸುಪುಷ್ಟ ದೃಷ್ಟಿ' ಎಂದು (ಪ) ಪ್ರತಿಯಲ್ಲಿ ಪಾಠಾಂತರವಿದೆ – ಎಂಬ ಮುಳಿಯ ಅವರ, ( ಪಾಠಾಂತರ 1—1 ಸುಪುಷ್ಟ ದೃಷ್ಟಿ (ಪ) ) — ಎಂಬ ಕಲಬುರ್ಗಿಯವರ ವಾಕ್ಯಗಳತ್ತ ಬೆರಳು ತೋರಿಸಿ ಈ ಉಭಯ ವಿದ್ವಾಂಸರು 'ಪ' ಎಂಬುದನ್ನು ಒಂದು ಹಸ್ತಪ್ರತಿಯೆಂದು ಭಾವಿಸಿದ್ದಾರೆ – ಎಂದು ಹೇಳಿದ್ದಾರೆ. ಜಾಗೀರದಾರರು. ಪಂಪನ ಬಗ್ಗೆ ಜೀವನವನ್ನೇ ಮುಡುಪು ಇಟ್ಟು 'ನಾಡೋಜ ಪಂಪ'ದಂಥ ಕೃತಿ ಬರೆದ ಮುಳಿಯ ಅವರು 'ಪ' ಪ್ರತಿಯನ್ನು ಹಸ್ತಪ್ರತಿಯೆಂದು ಭಾವಿಸಿದ್ದಾರೆಂದು ಹೇಳಿ, ಮುಳಿಯ ಅವರಿಗೆ ಪಂಪಭಾರತದ ಹಸ್ತಪ್ರತಿಯ ಬಗ್ಗೆ ಇದ್ದ ತಿಳುವಳಿಕೆಯನ್ನೇ ಪ್ರಶ್ನಿಸಿದ್ದಾರೆ. ಅವರು ಸಾಮಾನ್ಯಾರ್ಥದಲ್ಲಿ ಬಳಸಿದ 'ಪ್ರತಿ' ಪದವನ್ನು 'ಹಸ್ತಪ್ರತಿ' ಎಂದು ವಿಶೇಷಾರ್ಥದಲ್ಲಿ ಭಾವಿಸಿದುದು ದೊಡ್ಡವರಲ್ಲಿ ಇಲ್ಲದ ದೋಷ ಹುಡುಕಿ ಹೆಮ್ಮೆಪಟ್ಟುಕೊಳ್ಳುವ ಒಂದು ಲವಲವಿಕೆಯೆನಿಸುತ್ತದೆ. ಇನ್ನು ಡಾ॥ ಕಲಬುರ್ಗಿಯವರು ಮೈಸೂರು ವಿಶ್ವವಿದ್ಯಾನಿಲಯದ ಮುದ್ರಿತ ಪ್ರತಿಯ ಆದಿಯಲ್ಲಿ ಕೊಟ್ಟಿರುವ ಪರಿಷತ್ತಿನ ಊಹಿತ ಪಾಠವನ್ನು ಓದುಗರ ಗಮನಕ್ಕೆ ತಂದಿದ್ದಾರೆ ಅಷ್ಟೇ. ಆದರೆ 'ಪ' ಎಂಬುದು 'ಹಸ್ತಪ್ರತಿ' ಯೆಂದು ಎಲ್ಲಿಯೂ ಹೇಳಿಲ್ಲ. ಕಾರಣ ಉಭಯ ವಿದ್ವಾಂಸರ 'ಪ್ರತಿ' ಎಂಬ ಪದಕ್ಕೆ 'ಹಸ್ತಪ್ರತಿ' ಯೆಂದು ಶ್ರೀ ಜಾಗೀರದಾರರು ಎಳೆದು ಅರ್ಥ ಹಚ್ಚಿದುದೂ ಸೂಕ್ತವೆನಿಸದು.

ಇಲ್ಲಿಯವರೆಗೆ ಅನಾವಶ್ಯಕ ಆರೋಪಗಳನ್ನು ಹೊರಿಸಿ ಸಮಾಧಾನಪಟ್ಟುಕೊಂಡ ಶ್ರೀ ಜಾಗೀರದಾರರು ಮುಖ್ಯ ವಿಷಯವಾದ 'ಸುಪ್ರಷ್ಪ ವೃಷ್ಟಿ'ಯ ಬಗ್ಗೆ ಏನು ಹೇಳುತ್ತಾರೆ ನೋಡೋಣ :

ಶ್ರೀ ಮುಳಿಯ ಅವರು 'ಪುಷ್ಪವೃಷ್ಟಿ' ಎಂಬ ಮೂಲ ಪದವನ್ನಿಟ್ಟುಕೊಂಡು 'ಹೂಮಳೆ' ಎಂದು, ಡಾ॥ ಡಿ. ಎಲ್. ಎನ್. ಅವರು 'ಪುಷ್ಪಪಟ್ಟ' ಎಂಬ ಊಹಿತ ಪದವನ್ನಿಟ್ಟುಕೊಂಡು ಒಂದು ವಿಧವಾದ ಕಿರೀಟ ಎಂದು ಹೇಳಿದರೆ, ಡಾ॥ ಕಲಬುರ್ಗಿಯವರು 'ಪುಷ್ಪದೃಷ್ಟಿ' ಎಂಬ ಊಹಿತ ಪಾಠವನ್ನಿಟ್ಟುಕೊಂಡು 'ಕಮಲನೇತ್ರ' ಎಂಬ ಇನ್ನೊಂದು ಅರ್ಥವನ್ನು ಮಂಡಿಸಿದರು. ಈಗ ಜಾಗೀರದಾರರು 'ಪುಷ್ಪವೃಷ್ಟಿ' ಎಂಬ ಮೂಲ ಪಾಠವನ್ನಿಟ್ಟುಕೊಂಡು 'ಪುಷ್ಪನಾಣ್ಯವೃಷ್ಟಿ' ಎಂಬ ಅಭಿಪ್ರಾಯವನ್ನು ಮುಂದಿಟ್ಟಿದ್ದಾರೆ. ಈಗಿನವರೆಗೆ ಮೂರರ ಜೊತೆಗೆ ಇದೂ ಒಂದು ನಾಲ್ಕನೆಯ ಅಭಿಪ್ರಾಯ, ಒಂದು ಪ್ರಯತ್ನ ಎಂಬ ಬೆಲೆಯನ್ನು ಮಾತ್ರ ಇದಕ್ಕೆ ಕೊಡಬಹುದು. ಇನ್ನು ಈ ಅಭಿಪ್ರಾಯದ ಬಗೆಗಿನ ಕೆಲವು ಆಕ್ಷೇಪಣೆಗಳು:

1) ಪ್ರಾಚೀನ ಕರ್ನಾಟಕದಲ್ಲಿ ಬಳಕೆಯಲ್ಲಿದ್ದ ನಾಣ್ಯಗಳು : ಪಣ, ಹಾಗ, ಅಡ್ಡ, ದ್ರಮ್ಮ, ವೀಸ, ಬೇಳೆ, ಕಾಕಿಣಿ, ಧರಣ, ಗದ್ಯಾಣ, ಲೊಕ್ಕಿ ಗದ್ಯಾಣ, ಮೊಕ್ಕೆಯ ಗದ್ಯಾಣ, ಬೃಹತ್‌ಭೈರವ ಗದ್ಯಾಣ, ಆನೆಯ ಪೊನ್, ನವಿಲಚ್ಚಿನ ಪೊನ್, ನವಿಲ ಪೊನ್, ಇತ್ಯಾದಿ. ಪುಷ್ಪವೂ ಒಂದು ನಾಣ್ಯವೆಂದು ಶ್ರೀ ಜಾಗೀರದಾರರ ಅಭಿಪ್ರಾಯ. ಇವರಿಗೆ ಆಧಾರ ಸಾಲೊಟಗಿ ಶಾಸನದಲ್ಲಿಯ

ಶಾಲಾ ವಿದ್ಯಾರ್ಥಿ ಸಂಘಾಯ ಸುದ್ರುವ್ಯಾಣಿ ದ್ವಿಜಾತಿಭಿಃ ।
ಪಂಚ ಪುಷ್ಪಾಣಿ ದೇಯಾನಿ ವಿವಾಹೇಸತಿ ತಜ್ಜನೈಃ ॥

ಎಂಬ ಶ್ಲೋಕಕ್ಕೆ ಪ್ರೊ. ಎಫ್. ಕೀಲಹಾರ್ನ್ ಹಾಗೂ ಶ್ರೀ ಎಚ್. ಕೃಷ್ಣಶಾಸ್ತ್ರಿ ಅವರು ಬರೆದ, "The word Pushpa, a flower, apparently denotes here a coin", "The term Pushpa 'a flower' might refer to eertain early gold coin with floral reverse". ಮುಂತಾದ ವಿವರಣೆ. ಇದಲ್ಲದೆ ಡಿ. ಸಿ. ಸರ್ಕಾರ್ ಅವರ Indian Epigraphical Glossary ಗ್ರಂಥದ (ಪು. 267) "Pushpa=A coin having the shape or sign of flower" ಎಂಬ ಹೇಳಿಕೆಯನ್ನೂ ಶ್ರೀ ಜಾಗೀರದಾರರು ಉದ್ಧರಿಸಿದ್ದಾರೆ. ಆದರೆ ಸರ್ಕಾರ್ ಅವರೇ ತಮ್ಮ Indian Epigraphy ಗ್ರಂಥದಲ್ಲಿ (ಪು. 433) "The Brahmanas of Salotgi (Bijapur District) were asked to pay to the local school, for the maintenance of its students, 5 pushpas (literally 'flowers') of gold metal on the occasion of a marriage..." ಎಂದು ಹೇಳಿದ್ದಾರೆ. ಇದಲ್ಲದೆ, "The fact that the offering

of a lotus in favour of a diety…,appears to suggest that flower was not an ordinary one. It was probably made of gold or silver" ಎಂದೂ ಹೇಳಿದ್ದಾರೆ, E. I. xxx ದಲ್ಲಿ*. ಇವುಗಳನ್ನೆಲ್ಲ ಗಮನಿಸಿದರೆ ಸಾಲೊಟಗಿ ಶಾಸನದ 'ಪುಷ್ಪ' ಜಾಗೀರದಾರರು ವಿವರಿಸಿದಂತೆ ನಾಣ್ಯ ಎಂಬ ವಿಚಿತ್ರ ಅರ್ಥವನ್ನು ಕೊಡದೆ, ಬಂಗಾರದಿಂದ ತಯಾರಿಸಿದ ಹೂಗಳೆಂಬ ಅರ್ಥವನ್ನು ಕೊಡಬಹುದೆನಿಸುತ್ತದೆ. ದೇವರಿಗೆ ಬಂಗಾರದ ಹೂಗಳನ್ನು ಮಾಡಿಸಿ ಅರ್ಪಿಸುವ ಸಂಪ್ರದಾಯ ಇಂದಿಗೂ ಇದೆ. ಎರಡನೆಯದಾಗಿ ಸರ್ಕಾರ್ ಅವರು Indian Epigraphical Glossary ಗ್ರಂಥದಲ್ಲಿ (ಪು. 267) ಹೇಳಿದ a- haritaka-śāka-pushpa-grahana, 'flowers which the villagers (probably the florists) were obliged to supply to the King or landlord on occasions or to the touring officials' ಎಂಬ ವಾಕ್ಯವನ್ನು ನೆನೆದರೆ ಈಗಿನಂತೆ ಪ್ರಾಚೀನ ಕಾಲದಲ್ಲಿಯೂ ಕೆಲವು ಪ್ರಸಂಗಗಳಲ್ಲಿ ಹೂಗಳನ್ನು ಕೊಡುವ ಹಕ್ಕು ವಿಶಿಷ್ಟ ವ್ಯಕ್ತಿಗಳಿಗೆ, ವರ್ಗಕ್ಕೆ ಮೀಸಲಾಗಿದ್ದಿತು. ಉದಾ : "ಗೌಡರು ತಮ್ಮ…ತೋಟದಲೆರಡು ಗಿಡು…ಹೂವಂ ಕಾಯ…ದದೆ ಬದನೆಕಾಯಿ…ಹೀರೇ ಕಾಯುಯ್ದು ಹಾಗಲಕಾಯಿ ಹ…ಬಳದಕಾಯೊಂದು ಸೌತೆಯ ಕಾಯೆರಡು… ದುದಡೆವೊಬ್ಬಾಡಿಯ ನಿಭಗೆಯಲ್ಲಿ ಕು…ವೆಯ ಕುಂದಾ…ಕಲ್ಲನೆರೆದಾ ದೇವರ ಚಿತ್ರಕ್ಕಂ ಹಾಗ ಪವಿತ್ರಕ್ಕೆ ಹಾಗವಂ ವರಿಷಂ ಪ್ರತಿ…ಕುಡುವನ್ತಾಗಿಬಿಟ್ಟರು" ಎಂಬ ಶಾಸನದಲ್ಲಿಯ ಐದು ಹಾಗಲಕಾಯಿ, ಒಂದು ಸೌತೆಕಾಯಿ,…ಹೂವು ಎಂಬ ವಾಕ್ಯಗಳನ್ನು ನೋಡಿದರೆ ಸಾಲೊಟಗಿ ಶಾಸನದಲ್ಲಿಯ "ಪುಷ್ಪ" ಎಂಬುದು ನಾಣ್ಯ ಸೂಚಿಯಾಗಿರದೆ ಪುಷ್ಪಸೂಚಿಯಾಗಿರಬಹುದೆ? ಎಂದು ಸಂದೇಹ ಬರುತ್ತದೆ. ಮೂರನೆಯದಾಗಿ ಅರಿಕೇಸರಿಯ ರಾಜ್ಯದಲ್ಲಿ 'ಸುವರ್ಣ' ಹೆಸರಿನ ನಾಣ್ಯ ಚಲಾವಣೆ ಯಲ್ಲಿದ್ದಿತೇ? ಎಂಬ ಪ್ರಶ್ನೆಗೆ ಏನು ಉತ್ತರ? ಹೀಗಿರುವಾಗ ಜಾಗೀರದಾರರ ಅಭಿಪ್ರಾಯವನ್ನು ಒಪ್ಪುವುದು ತೀರ ಕಷ್ಟ.

2) ಮಂಗಲ ಪದ್ಯದಲ್ಲಿಯ 'ಉದಾತ್ತ' ಪದಕ್ಕೆ 'ಅಭಿಧಾನ ರತ್ನಮಾಲಾ' ಗ್ರಂಥದ ಆಧಾರದ ಮೇಲೆ 'ಉದಾರ' ಎಂಬ ಅರ್ಥ ಹಚ್ಚಿ ಶ್ರೀಯುತರು ಪದ್ಯದ ಒಟ್ಟು ಅರ್ಥವನ್ನು ಹೀಗೆ ಹೇಳಿದ್ದಾರೆ: "ನಾರಾಯಣನು ಹೊಂದಿದ ಶ್ರೀ (ಲಕ್ಷ್ಮೀ), ಧರಿತ್ರಿ ಮತ್ತು ಪುಷ್ಪವೃಷ್ಟಿ (=ಪುಷ್ಪದ ಅತಿಶಯತೆ ಎಂದರೆ ನಾರಾಯಣನಲ್ಲಿ ಹಲವು ಕಮಲಗಳು: ನಾಭಿಯಲ್ಲಿ ಕಮಲ, ನೇತ್ರ ಕಮಲ, ಭಾರ್ಯೆ ಕಮಲೆ (ಪತ್ನಿ ಲಕ್ಷ್ಮೀ, ಕಮಲ ಪುಷ್ಪ ಸಂಜಾತೆ) ಎಲ್ಲವೂ ಆತನೊಬ್ಬನ ಪಾಲಿಗೆ! ಅರಿಕೇಸರಿಯು ಹೊಂದಿದ ಶ್ರೀ (=ಸಂಪತ್ತು), ಧರಿತ್ರಿ ಮತ್ತು ಸುಪುಷ್ಪವೃಷ್ಟಿ

*'Terracotta Plaque'–D. C. Sircar (p. 86)

(ಒಳ್ಳೆಯ ಪುಷ್ಪವೆಂಬ ಆತ್ಮೀಯ ನಾಣ್ಯವೃಷ್ಟಿ) ಎಲ್ಲವನ್ನೂ ಆತನು ತಾನೂ ಭೋಗಿಸಿದುದಲ್ಲದೆ ಇತರ ಉಪಭೋಗಕ್ಕೆಂದು ಇನಿತು ದಾನವನ್ನೂ ಮಾಡಿ ಅಥವಾ ಕೊಟ್ಟು, ಸ್ವಾರ್ಥಿಯಾಗದೆ 'ಉದಾತ್ತನಾದ.' ಅರಿಕೇಸರಿಯು ಹೊಂದಿದ ಮೂರು ವಸ್ತುಗಳೂ ನಾರಾಯಣನು ಹೊಂದಿದ ಮೂರು ವಸ್ತುಗಳಿಗಿಂತ ಶ್ರೇಷ್ಠ. (ಶ್ರೀ ಸಾಮಾನ್ಯ ಸಮುದ್ರದಲ್ಲಿ ಹುಟ್ಟಿದವಳಲ್ಲ, ಸುಪುಷ್ಪವೃಷ್ಟಿ ಸಾಮಾನ್ಯ ಪುಷ್ಪ ವೃಷ್ಟಿಯಲ್ಲ). ಪ್ರತಿಯೊಂದು ದೃಷ್ಟಿಯಿಂದ ಉಪಮಾನಕ್ಕಿಂತ ಉಪಮೇಯವೇ ಹೆಚ್ಚು. (ಆದ್ದರಿಂದ ವ್ಯತಿರೇಕಾಲಂಕಾರ). ನೃಸಿಂಗ (ವಿಷ್ಣು) ಕೇವಲ ನಾರಾಯಣ; ಅರಿಕೇಸರಿ ಉದಾತ್ತ ನಾರಾಯಣ".

ಶ್ರೀಯುತರ ಪ್ರಕಾರ ಅರಿಕೇಸರಿ ಉದಾತ್ತ ನಾರಾಯಣನಾದುದು ದಾನ ನೀಡಿದುದರಿಂದ; ಆದರೆ ಪದ್ಯದ ಪ್ರಕಾರ ಶ್ರೀಯನ್ನು ವೈರಿಸೈನ್ಯಸಾಗರದಿಂದ ಪಡೆಯುವಲ್ಲಿ (ಪಡೆದುಂ), ಧರಿತ್ರಿಯನ್ನು ವಿರೋಧಿ ನರೇಂದ್ರರನ್ನು ಒತ್ತಿ ಪಡೆಯು ವಲ್ಲಿ (ಒತ್ತಿಕೊಂಡುಂ), ಆತ್ಮೀಯ ಸುಪುಷ್ಪ ದೃಷ್ಟಿಯನ್ನು ಒಡಂಬಡೆ ಪಡೆದುದರಲ್ಲಿ (ತಾಳ್ದಿಯುಂ) ಅರಿಕೇಸರಿ ಉದಾತ್ತನಾಗಿದ್ದಾನೆ ನಾರಾಯಣನಿಗಿಂತ. ನೀಡು–ಪಡೆ ಇವುಗಳಲ್ಲಿಯ ತೀರ ವಿರುದ್ಧ ಅರ್ಥವನ್ನು ಗಮನಿಸಿದರೆ ಜಾಗೀರದಾರರು ಮಾಡಿದ ಅರ್ಥ ಕವಿಗೆ ತೀರ ವಿರುದ್ಧವೆಂದು ಸ್ಪಷ್ಟವಾಗುತ್ತದೆ.

3) ಜಾಗೀರದಾರರು ತಮ್ಮ ಲೇಖನದುದ್ದಕ್ಕೂ 'ಜೀಯೆನೆ' ಎಂಬ ಪದ ವನ್ನು ಬಳಸದೆ 'ಜೀಯನೆ' ಎಂದು ಬಳಸುತ್ತ ಹೋಗಿದ್ದಾರೆ. ಇದನ್ನು ಜೀಯ+ನೆ ಅಥವಾ ಜೀ+ಅನೆ ಎಂದು ಬಿಡಿಸಿದರೂ ಅರ್ಥ ಅಸ್ಪಷ್ಟ. ಈ ಮೊದಲಿನ ವಿದ್ವಾಂಸರ ಲೇಖನಗಳಿಗೆ ಇಲ್ಲದ ಅರ್ಥ ಹಚ್ಚಲು ಹೆಣಗಿದ ಶ್ರೀ ಜಾಗೀರದಾರರು ಇದ್ದ ಪದವನ್ನು ತಪ್ಪಾಗಿ ಬಳಸುತ್ತ ಹೋದುದು ಕೇವಲ ಆಶ್ಚರ್ಯ.

**ಹೇಮಲತಾ ಪದಕಿ**

## ಸಂಪಾದಕೀಯ

---

**ಅಭಿನಂದನೆ**

ಕನ್ನಡದ ಸುಪ್ರಸಿದ್ಧ ಹಿರಿಯ ಕವಿ ಡಾ॥ ದ. ರಾ. ಬೇಂದ್ರೆಯವರಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ ಲಭಿಸಿದ್ದು ಕನ್ನಡಿಗರಿಗೆ ಹೆಮ್ಮೆಯ ಸಂಗತಿಯಾಗಿದೆ.

ಈ ಪ್ರಶಸ್ತಿ ಸಂದಿರುವುದು ಅವರ 'ನಾಕು ತಂತಿ' ಎಂಬ ಕವನ ಸಂಗ್ರಹಕ್ಕೆ. ವಾಸ್ತವವಾಗಿ 'ನಾಕು ತಂತಿ' ಯ ನಿಮಿತ್ತವಾಗಿ ಸಂದ ಈ ಪ್ರಶಸ್ತಿ, ಅವರ ಇಡೀ ಸಾಹಿತ್ತಿಕ ಸಾಧನೆಗೆ ಸಂದದ್ದು ಎಂದು ನಾವು ಭಾವಿಸಬೇಕು. ಏಕೆಂದರೆ ಬೇಂದ್ರೆಯವರು ಮಿಡಿದದ್ದು ಕೇವಲ 'ನಾಕು ತಂತಿ' ಯನ್ನಲ್ಲ ; ಅವರು ಕನ್ನಡ ಜನ ಮನದ ಸಾವಿರಾರು ತಂತಿಗಳನ್ನು ಮಿಡಿದಿದ್ದಾರೆ. ಜನದ ಆಡು ಮಾತನ್ನೆ ಹಾಡಿನ ಗಾದಿಗೆ ಏರಿಸಿದ್ದಾರೆ. ಪಟ್ಟ ಪಾಡುಗಳನ್ನು ಹುಟ್ಟು ಹಾಡನ್ನಾಗಿ ಮಾಡಿ ಬೆಂದೆದೆಗಳಿಗೆ ಹಣಿಸಿದ್ದಾರೆ. ಜೀವನ ಪ್ರೀತಿಯನ್ನು, ಜೀವನ ಶ್ರದ್ಧೆಯನ್ನು ಪ್ರಚೋದಿಸಿದ್ದಾರೆ. ಕನ್ನಡ ಭಾಷೆ–ಸಾಹಿತ್ಯದ ಎತ್ತರವನ್ನು ಹೆಚ್ಚಿಸಿದ್ದಾರೆ. ಕನ್ನಡದ ಸಾವಿರದ ಮನೆಗಳಲ್ಲಿ ಮನೆ ಮಾಡಿಕೊಂಡಿದ್ದಾರೆ.

ಭಾರತೀಯ ಜ್ಞಾನಪೀಠ ಪ್ರಶಸ್ತಿ ಪಡೆದ ಕವಿವರ್ಯ 'ಅಂಬಿಕಾತನಯದತ್ತ' ರನ್ನು 'ಸಾಧನೆ' ಯು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

**ಈ ಸಂಚಿಕೆಯ ಲೇಖಕರು**

| | |
|---|---|
| ಜಯಸುದರ್ಶನ | 769, 5ನೇ ಬ್ಲಾಕ್, ರಾಜಾಜಿನಗರ<br>ಬೆಂಗಳೂರು-560010 |
| ಹು. ಕಾ. ಜಯದೇವ | ಅಧ್ಯಾಪಕ, ಕನ್ನಡ ಅಧ್ಯಯನ ಕೇಂದ್ರ<br>ಬೆಂಗಳೂರು ವಿಶ್ವವಿದ್ಯಾಲಯ<br>ಜ್ಞಾನಭಾರತಿ, ಬೆಂಗಳೂರು-560056 |
| ಬಿ. ಜಿ. ಎಲ್. ಸ್ವಾಮಿ | ಪ್ರಧಾನ ಪ್ರೊಫೆಸರ್, ಸಸ್ಯಶಾಸ್ತ್ರ ವಿಭಾಗ<br>ಪ್ರೆಸಿಡೆನ್ಸಿ ಕಾಲೇಜು, ಮದ್ರಾಸ್-5 |
| ಮೇಗರವಳ್ಳಿ ರಮೇಶ್ | ಸ್ಟೇಟ್ ಬ್ಯಾಂಕ್ ಆಫ್ ಮೈಸೂರು<br>ಮೇಗರವಳ್ಳಿ, ತೀರ್ಥಹಳ್ಳಿ ತಾಲ್ಲೂಕ್<br>ಶಿವಮೊಗ್ಗ ಜಿಲ್ಲೆ |
| ಡಾ॥ ಎಂ. ಚಿದಾನಂದಮೂರ್ತಿ | ರೀಡರ್, ಕನ್ನಡ ಅಧ್ಯಯನ ಕೇಂದ್ರ<br>ಬೆಂಗಳೂರು ವಿಶ್ವವಿದ್ಯಾಲಯ<br>ಜ್ಞಾನಭಾರತಿ, ಬೆಂಗಳೂರು-560056 |
| ಎಸ್. ನಾರಾಯಣ ಮೂರ್ತಿ | ಚೀಫ್ ಜುಡಿಷಿಯಲ್ ಮ್ಯಾಜಿಸ್ಟ್ರೇಟ್<br>ಚಿತ್ರದುರ್ಗ |
| ಡಾ॥ ಎಸ್. ವಿದ್ಯಾಶಂಕರ | ಅಧ್ಯಾಪಕ, ಕನ್ನಡ ಅಧ್ಯಯನ ಕೇಂದ್ರ<br>ಬೆಂಗಳೂರು ವಿಶ್ವವಿದ್ಯಾಲಯ<br>ಜ್ಞಾನಭಾರತಿ, ಬೆಂಗಳೂರು-560056 |
| ಪಂಡಿತ್ ಎಸ್. ಭೀಮಪ್ಪ | ಉಪಾಧ್ಯಾಯ, ಶಿರಾಳಕೊಪ್ಪ<br>ಶಿವಮೊಗ್ಗ ಜಿಲ್ಲೆ |
| ಡಿ. ಟಿ. ನಂಜೇಗೌಡ | ಅಧ್ಯಾಪಕ, ಅರ್ಥಶಾಸ್ತ್ರ ವಿಭಾಗ<br>ಬೆಂಗಳೂರು ವಿಶ್ವವಿದ್ಯಾಲಯ<br>ಬೆಂಗಳೂರು-560009 |

**ವಿವರಗಳಿಗೆ ವ್ಯವಹರಿಸಿ:**

ನಿರ್ದೇಶಕರು
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560 056